ಪ್ರಬುದ್ಧ ಕರ್ಣಾಟಕ

ಸಂಪುಟ ೩೩—ಸಂಚಿಕೆ ೧

೧೨೭

ಖರ ಸಂವತ್ಸರ

ಚೈತ್ರ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೧

ವಿಷಯ	ಪುಟ

ಪ್ರಬುದ್ಧ ಕರ್ಣಾಟಕ

ಖರ ಸಂವತ್ಸರ | ೧೨೭ | ಚೈತ್ರ ಸಂಚಿಕೆ

ಅಪತ್ರಿಕಾ ವಾರ್ತೆ

ರವಿ ಮೂಡಿದನು ;
ಕವಿ ನೋಡಿದನು :
ಬ್ರಾಹ್ಮೀಘಟನೆಗೆ ಭಾವಸ್ಪಂದಿತೆಯಾದಳು ಸಹೃದಯೆ ಪೃಥಿವಿ !

ರವಿ ಮೂಡುತಿರೆ
ಕವಿ ನೋಡುತಿರೆ
ಕ್ರತುವಿಂದುಣ್ಮಿತು ಗಾಯತ್ರಿ,
ವಾಗ್ರಸರೂಪಿಣಿ ಸಾವಿತ್ರಿ :—
"ಓಂ ಭೂರ್ಭುವಸ್ಸುವಃ
ತತ್ಸವಿತುರ್ವರೇಣಿಯಂ
ಭರ್ಗೋ ದೇವಸ್ಯ ಧೀಮಹಿ
ಧಿಯೋ ಯೋ ನಃ ಪ್ರಚೋದಯಾತ್ !"
ಆಲಿಸಿ ರಸವಿದ್ಯುನ್ಮಯಿಯಾದಳ್ ಸಹೃದಯೆ ಪೃಥಿವಿ !

ರವಿ ಮೂಡಿದನು,
ಕವಿ ನೋಡಿದನು :
ಬಾನುಲಿಯೊರೆಯದ ಪತ್ರಿಕೆ ಬರೆಯದ
ರಾಷ್ಟ್ರಾಧ್ಯಕ್ಷರು ಗೋಷ್ಠಿಗೆ ಕರೆಯದ
ಆ ವನವಾಸೀ ವಾರ್ತೆ
ತಾನಾದುದು ದಿಕ್ಕರಿ ಕರ್ಣ ಸುವಾರ್ತೆ !
ನಂದನಸುಮ ಜಯಮಾಲೆಯನೆತ್ತಿತು ಐರಾವತ ಹಸ್ತಂ ;
ರಸರೋಮಾಂಚನ ತಟಿದಾಲಿಂಗನಕಾನಂದಿಸಿತೀ ವಿಶ್ವಸಮಸ್ತಂ !
ಅಂಬರ ಔಕಸ ಹಸ್ತನ್ಯಸ್ತಂ
ಕುಂಭ ಹಿರಣ್ಮಯಮಾ ಸೋಮಂ
ಕುಂಭಿನಿಗವತರಿಸಿತು ಸ್ವರ್ಧಾಮಂ !

ಆ ಋಷ್ಯನುಭವದಗ್ನಿಯ ಸೇತುವೆಯಿಂ
ಪರಿದಿಳಿತಂದುದು ಅಮೃತಂ ದೈವೀಚರಣಸಮೂಹಂ,
ಮೃಣ್ಮಯಿ ಪರಿವರ್ತನಕಾರಣ ಯೋಗಕ್ಷೇಮಂ,
ಅತಿಮಾನಸ ಋತಚಿನ್ಮಯ ದಿವ್ಯಪ್ರೇಮಂ !

ಕುವೆಂಪು

ಕನ್ನಡ ಧ್ವನ್ಯಾಲೋಕ

(ಕಳೆದ ಸಂಚಿಕೆಯಿಂದ ಮುಂದುವರಿದು ಮುಗಿದಿದೆ)

ಕಾರಿಕೆ

ಪ್ರಕಾರೋಽನ್ಯೋ ಗುಣೀಭೂತವ್ಯಂಗ್ಯಃ ಕಾವ್ಯಸ್ಯ ದೃಶ್ಯತೇ ।
ಯತ್ರ ವ್ಯಂಗ್ಯಾನ್ವಯೇ ವಾಚ್ಯಚಾರುತ್ವಂ ಸ್ಯಾತ್ ಪ್ರಕರ್ಷವತ್ ‖ ೩೪ ‖

ಕಾವ್ಯದಲ್ಲಿ 'ಗುಣೀಭೂತವ್ಯಂಗ್ಯ'ವೆಂಬ ಇನ್ನೊಂದು ಪ್ರಕಾರವನ್ನು ನೋಡಬಹುದು. ಅದರಲ್ಲಿ ವ್ಯಂಗ್ಯವಾದ ಅಂಶವು ಇರುವುದಾದರೂ ವಾಚ್ಯಾಂಶದ ಸೊಗಸೇ ಮಿಗಿಲಾಗಿರುತ್ತದೆ.

ವೃತ್ತಿ

ವ್ಯಂಗ್ಯಾರ್ಥವು ಲಲನೆಯರ ಲಾವಣ್ಯದಂತಿರುವುದೆಂದು ವಿವರಿಸಲಾಯಿತಷ್ಟೆ; ಅದು ಪ್ರಧಾನವಾಗಿರುವಾಗ 'ಧ್ವನಿ'ಯೆಂಬ ಹೆಸರು ಕಾವ್ಯಕ್ಕೆ ಬರುವುದೆಂದೂ ಹೇಳಲಾಯಿತು. ಹಾಗಿಲ್ಲದೆ ಅದು ಅಪ್ರಧಾನವಾಗಿ ಹೋಗಿ, ವಾಚ್ಯದ ಸೊಗಸೇ ಮಿಗಿಲಾಗಿರುವುದಾದರೆ 'ಗುಣೀಭೂತವ್ಯಂಗ್ಯ'ವೆಂಬ ಇನ್ನೊಂದು ಕಾವ್ಯದ ಪ್ರಕಾರವನ್ನು ಆಗ ಪರಿಗಣಿಸಬೇಕೆಂದು ಇಲ್ಲಿ ಹೇಳುತ್ತೇವೆ. ಕೆಳಗಿನ ಉದಾಹರಣೆಯಲ್ಲಿ ವ್ಯಂಗ್ಯಾರ್ಥವಾದ ವಸ್ತುವು ತಿರಸ್ಕೃತವಾಚ್ಯಗಳಾದ ಶಬ್ದಗಳಿಂದ ಧ್ವನಿತವಾಗಿದ್ದರೂ ವಾಚ್ಯವಾದ ವಾಕ್ಯಾರ್ಥಕ್ಕೆ ಅಪ್ರಧಾನವಾಗಿಬಿಟ್ಟಿರುವುದರಿಂದ 'ಗುಣೀಭೂತವ್ಯಂಗ್ಯ'ತ್ವವು ಬಂದಿದೆ:

ಲಾವಣ್ಯಸಿಂಧುರಪರೈವ ಹಿ ಕೇಯಮತ್ರ
ಯತ್ರೋತ್ಪಲಾನಿ ಶಶಿನಾ ಸಹ ಸಂಪ್ಲವಂತೇ |
ಉನ್ಮಜ್ಜತಿ ದ್ವಿರದಕುಂಭತಟೀ ಚ ಯತ್ರ
ಯತ್ರಾಪರೇ ಕದಲಿಕಾಂಡಮೃಣಾಲದಂಡಾಃ ||

ಆವುದರೊಳ್ ವರೋತ್ಪಲಗಳುಂ ಶಶಿಯೊಂದಿಗೆ ತೇಲುತಿರ್ಪ್ಪವಂ-
ತಾವುದರೊಳ್ ಮುಳುಂಗಿರುವುವಾನೆಯ ಕುಂಭತಟೀಪ್ರದೇಶಗಳ್ |
ತಾವರೆದಂಟುಮಂತೆ ಮಿಗೆ ಬಾಳೆಯ ಕಂಬಮುಮೆಲ್ಲಿ ಕಾಂಬವೋ,
ಭಾವಿಸಲಿಂತು ಬೇರೆಯೆನಿಪೀ ಚೆಲುವಂಬುಧಿಯೀಕೆಯೆಲ್ಲಿದಳ್ ‖

ತಿರಸ್ಕೃತವಾಚ್ಯವಲ್ಲದ ಶಬ್ದಗಳಿಂದ ಧ್ವನಿತವಾಗುವ ವ್ಯಂಗ್ಯಾರ್ಥವೂ ಒಮ್ಮೊಮ್ಮೆ ವಾಚ್ಯದ ಪ್ರಾಧಾನ್ಯದ, ಎಂದರೆ ಅದರ ಚಮತ್ಕಾರಾತಿಶಯದ, ದೃಷ್ಟಿಯಿಂದ ಅಪ್ರಧಾನವಾಗಬಹುದು; ಆಗಲೂ ಕಾವ್ಯವನ್ನು 'ಗುಣೀಭೂತವ್ಯಂಗ್ಯ'ವೆಂದೇ ತಿಳಿಯಬೇಕು. ಇದಕ್ಕೆ **'ಅನುರಾಗವತೀ ಸಂಧ್ಯಾ. . .'**[1] ಇವೇ ಮೊದಲಾದ ಉದಾಹರಣೆಗಳನ್ನೂ ಹಿಂದೆಯೇ ಕೊಟ್ಟಿದೆ. ಹಾಗೆಯೇ ವ್ಯಂಗ್ಯಾರ್ಥವನ್ನು ಕವಿಯು ವಾಚ್ಯವಾಗಿ ಶಬ್ದಗಳಿಂದಲೇ ಮತ್ತೆ ಹೇಳಿಬಿಟ್ಟರೂ ವ್ಯಂಗ್ಯಾರ್ಥಕ್ಕೆ ಅಪ್ರಧಾನತೆಯು ಬರುತ್ತದೆ. ಇದಕ್ಕೂ **'ಸಂಕೇತಕಾಲಮನಸಮ್ . . .'** ಇವೇ ಮುಂತಾದ ಉದಾಹರಣೆಗಳನ್ನು ಕೊಟ್ಟಾಗಿದೆ.[2] ವ್ಯಂಗ್ಯವಾದ ರಸಾದಿಗಳು ಅಪ್ರಧಾನವಾದಾಗ ರಸವದಲಂಕಾರ ಬರುವುದೆಂದೂ ತೋರಿಸಲಾಯಿತು.[3] ಹೀಗೆ ರಸಾದಿಗಳು ಮುಖ್ಯವಾದ ವಾಕ್ಯಾರ್ಥದ ಜತೆಯಲ್ಲಿ ಪಡೆಯುವ ಅಪ್ರಧಾನತೆಯನ್ನು ಮದುವಣಿಗನಾದ ಸೇವಕನ ಜತೆಯಲ್ಲಿ ಬರುತ್ತಿರುವ ರಾಜನ ಅಪ್ರಧಾನತೆಗೆ ಹೋಲಿಸಬಹುದು. ವ್ಯಂಗ್ಯವಾದ ಅಲಂಕಾರಗಳು ಅಪ್ರಧಾನವಾಗುವುದಕ್ಕೆ ದೀಪಕವೇ ಮೊದಲಾದ ಅಲಂಕಾರಗಳೇ ಉದಾಹರಣೆಗಳು.

ಹಾಗೆಯೇ—

ಕಾರಿಕೆ

ಪ್ರಸನ್ನಗಂಭೀರಪದಾಃ ಕಾವ್ಯಬಂಧಾಃ ಸುಖಾವಹಾಃ ।
ಯೇ ಚ ತೇಷು ಪ್ರಕಾರೋಽಯಮೇವಂ ಯೋಜ್ಯಃ ಸುಮೇಧಸಾ ॥ ೩೫ ॥

ತಿಳಿಯಾಗಿದ್ದರೂ ಆಳವಾದ (ಅರ್ಥವನ್ನು ಬೋಧಿಸುವ) ಪದಗಳಿಂದ ತುಂಬಿ ಆನಂದವನ್ನು ತರುವ ಕಾವ್ಯರಚನೆಗಳಲ್ಲಿಯೂ ಈ ಪ್ರಕಾರವನ್ನೇ ಬುದ್ಧಿವಂತರು ನಾವು ಹೇಳುವಂತೆ ಯೋಜಿಸಿಕೊಳ್ಳಬೇಕು.

ವೃತ್ತಿ

ಎಷ್ಟೋ ಕಾವ್ಯಬಂಧಗಳು ಅಪರಿಮಿತವಾದ ಸ್ವರೂಪದಿಂದ ಪ್ರಕಾಶಿಸುತ್ತಾ ರಮಣೀಯವೆನಿಸುವಂತೆಯೇ ಆನಂದವನ್ನೂ ಉಂಟುಮಾಡುವುವಲ್ಲವೆ? ಅವುಗಳಲ್ಲೆಲ್ಲ ಈ 'ಗುಣೀಭೂತವ್ಯಂಗ್ಯ'ವೆಂಬ ಕಾವ್ಯಪ್ರಕಾರವನ್ನೇ ಬುದ್ಧಿವಂತರು ಹೊಂದಿಸಿಕೊಳ್ಳಬೇಕು. ಉದಾಹರಣೆ:—

---

[1] ಪುಟ ೩೧ ನ್ನು ನೋಡಿ, **ಪ್ರಬುದ್ಧ ಕರ್ಣಾಟಕ,** ಸಂಪುಟ ೩೨. ಸಂಚಿಕೆ ೨.

[2] ಪುಟ ೧೯ ನ್ನು ನೋಡಿ, **ಪ್ರಬುದ್ಧ ಕರ್ಣಾಟಕ,** ಸಂಪುಟ ೩೨. ಸಂಚಿಕೆ ೩.

[3] ಎರಡನೆಯ ಉದ್ದ್ಯೋತದ ೫ ನೆಯ ಕಾರಿಕೆಯನ್ನೂ ವೃತ್ತಿಯನ್ನೂ ನೋಡಿ. ಪು. ೪೫-೪೯, **ಪ್ರಬುದ್ಧ ಕರ್ಣಾಟಕ,** ಸಂಪುಟ ೩೨. ಸಂಚಿಕೆ ೨.

ಲಚ್ಛೀ ದುಹಿದಾ ಜಾಮಾಉಓ ಹರೀ ತಂಸ ಘರಿಣಿಯಾ ಗಂಗಾ |
ಅಮಿಅಮಿಅಂಕಾ ಅ ಸುಅ ಅಹೋ ಕುಡುಂಬಂ ಮಹೋಅಹಿಣೋ ||

ಲಕುಮಿಯೆ ಮಗಳೆನಲಳಿಯನು ಹರಿಯು ;
ಮಡದಿಯೆ ನೋಡಲು ತಾ ಗಂಗೆ |
ಅಮೃತಮೃಗಾಂಕರೆ ಮಕ್ಕಳು ಇಬ್ಬರು ;
ಏನು ಕುಟುಂಬವೊ ಸಾಗರಗೆ ||

ಕಾರಿಕೆ

ವಾಚ್ಯಾಲಂಕಾರವರ್ಗೋಽಯಂ ವ್ಯಂಗ್ಯಾಂಶಾನುಗಮೇ ಸತಿ |
ಪ್ರಾಯೇಣೈವ ಪರಾಂ ಛಾಯಾಂ ಬಿಭ್ರಲ್ಲಕ್ಷ್ಯೇ ನಿರೀಕ್ಷ್ಯತೇ || ೩೬ ||

ವೃತ್ತಿ

ವ್ಯಂಗ್ಯಾಂಶದ ಸಂಪರ್ಕದಿಂದ ವಾಚ್ಯಾಲಂಕಾರವರ್ಗಕ್ಕೆಲ್ಲ ವಿಶೇಷವಾದ ಸೊಗಸು ಬರುವುದನ್ನು ಸಾಮಾನ್ಯವಾಗಿ ಎಲ್ಲ ಲಕ್ಷ್ಯಗಳಲ್ಲಿಯೂ ಕಾಣಬಹುದು.

ವ್ಯಂಗ್ಯಾಂಶವಾದ ಅಲಂಕಾರದ ಅಥವಾ ವಸ್ತುಮಾತ್ರದ ಸಂಪರ್ಕದಿಂದ ವಾಚ್ಯಾಲಂಕಾರಗಳಿಗೆ ವಿಶೇಷವಾದ ಸೊಗಸು ಬರುವುದೆಂಬುದನ್ನು ಹಿಂದಿನ ಲಕ್ಷಣಕಾರರು ಒಂದೊಂದುಕಡೆ ಮಾತ್ರ ತೋರಿಸಿದ್ದಾರೆ. ಉಳಿದ ಎಲ್ಲ ಕಡೆಗಳಲ್ಲಿಯೂ ಸಾಮಾನ್ಯವಾಗಿ ಈ ಸೊಗಸು ಇದ್ದೇ ಇರುವುದೆಂಬುದು ಲಕ್ಷ್ಯಗಳನ್ನು ಪರೀಕ್ಷಿಸಿದರೆ ಗೊತ್ತಾಗುತ್ತದೆ. ಹೇಗೆಂದರೆ—ದೀಪಕ, ಸಮಾಸೋಕ್ತಿ, ಇವೇ ಮೊದಲಾದುವುಗಳಂತೆಯೇ ಇತರ ಅಲಂಕಾರಗಳಲ್ಲಿಯೂ ವ್ಯಂಗ್ಯವಾದ ಅಲಂಕಾರಾಂಶದ ಇಲ್ಲವೆ ವ್ಯಂಗ್ಯವಾದ ವಸ್ತುವಿನ ಅಂಶದ ಸಂಪರ್ಕವು ಇದ್ದೇ ಇರುತ್ತದೆ. ಏಕೆಂದರೆ, ಎಲ್ಲಕ್ಕೂ ಮೊದಲಾಗಿ ಸಕಲ ಅಲಂಕಾರಗಳೂ ಅತಿಶಯೋಕ್ತಿಯನ್ನೊಳಗೊಳ್ಳುವುವೆಂದು ಸುಲಭವಾಗಿ ಸಾಧಿಸಬಹುದು. ಅತಿಶಯದ ಯೋಜನಾಮಾತ್ರದಿಂದಲೇ ಮಹಾಕವಿಗಳ ಕಾವ್ಯದಲ್ಲಿ ಹೊಸದೊಂದು ಸೊಗಸು ಬರುವುದೆಂದಮೇಲೆ, ನಿಜವಾಗಿಯೂ ಅದನ್ನು ಔಚಿತ್ಯವರಿತು ಪ್ರಯೋಗಿಸಿದಾಗ ಕಾವ್ಯದಲ್ಲಿ ಉತ್ಕರ್ಷವು ಬರದೆ ಹೋಗುವುದು ಹೇಗೆ ಸಾಧ್ಯ? ಭಾಮಹನು ಅತಿಶಯೋಕ್ತಿಗೆ ಹೇಳಿರುವ ಲಕ್ಷಣವಿದು—

'ಸೈಷಾ ಸರ್ವತ್ರ ವಕ್ರೋಕ್ತಿರನಯಾರ್ಥೋ ವಿಭಾವ್ಯತೇ |
ಯತ್ನೋಽಸ್ಯಾಂ ಕವಿನಾ ಕಾರ್ಯಃ ಕೋಽಲಂಕಾರೋಽನಯಾ ವಿನಾ ||'

ಇದೆ ದಲ್ ವಕ್ರೋಕ್ತಿಯೆನಿಪು-
ದಿದರಿಂದೆ ವಿಭಾವ್ಯಮಪ್ಪುದರ್ಥಮದೆಲ್ಲಂ |
ಪದೆಪಿಂ ಕಲ್ವುದು ಕವಿಯಿದ-
ನಿದು ಪೋಗಿರೆ ಮತ್ತೆ ಬೇರೆ ಭೂಷಣಮೊಳವೇ ||

ಇದಕ್ಕೆ ಈ ರೀತಿಯಾಗಿಯೇ ಅರ್ಥಮಾಡಿಕೊಳ್ಳಬೇಕು—'ಯಾವ ಅಲಂಕಾರದಲ್ಲಿ ಅತಿಶಯೋಕ್ತಿಯು ತುಂಬಿರುತ್ತದೋ ಆ ಅಲಂಕಾರದಲ್ಲಿ ಮಾತ್ರ ಕವಿಯ ಪ್ರತಿಭೆಯಿಂದ ಉಂಟಾದ ವಿಶೇಷ ಸೌಂದರ್ಯವು ಸೇರಿಕೊಳ್ಳುತ್ತದೆ. ಹಾಗಿಲ್ಲದ ಮಿಕ್ಕ ಕಡೆಗಳಲ್ಲಿ ಹೆಸರಿಗೆ ಮಾತ್ರ 'ಅಲಂಕಾರ'ವಿರುತ್ತದೆ; ಅಷ್ಟೆ. ಆದುದರಿಂದ ನಿಜವಾಗಿ ಎಲ್ಲ ಅಲಂಕಾರಗಳಿಗೂ ಅತಿಶಯೋಕ್ತಿಯೇ ಶರೀರವೆಂದು ಸ್ವೀಕರಿಸಬೇಕು. ಹೀಗೆ ಸ್ವೀಕರಿಸುವುದು ಯುಕ್ತವಾದಮೇಲೆ ಅವೆರಡಕ್ಕೂ ಅಭೇದವನ್ನೇ ಲಕ್ಷಣೆಯ ಮೂಲಕ ಹೇಳಬಹುದು. ಆದುದರಿಂದ ಅತಿಶಯೋಕ್ತಿಯೇ ಎಲ್ಲ ಅಲಂಕಾರಗಳೂ' ಎಂದು. ಈ ಅತಿಶಯೋಕ್ತಿಯು ಉಳಿದ ಅಲಂಕಾರಗಳೊಡನೆ ಸಂಕೀರ್ಣವಾಗುವುದು **ಎರಡು ಬಗೆ**ಗಳಲ್ಲಿ:—(೧) ವಾಚ್ಯತ್ವದಿಂದ ಮತ್ತು (೨) ವ್ಯಂಗ್ಯತ್ವದಿಂದ. ವ್ಯಂಗ್ಯತ್ವದಲ್ಲಿ ತಿರುಗಿಯೂ ಎರಡು ಭೇದಗಳಿರಬಹುದು—೧. ಪ್ರಧಾನತ್ವ ಮತ್ತು ೨. ಅಪ್ರಧಾನತ್ವ, ಎಂಬುದಾಗಿ. ಇವುಗಳಲ್ಲಿ ಮೊಟ್ಟಮೊದಲನೆಯ ಬಗೆಯು ವಾಚ್ಯಾಲಂಕಾರಗಳಿಗೆ ಅನ್ವಯಿಸುವುದು. ಎರಡನೆಯದು (ಎಂದರೆ ಎರಡನೆ ವಿಭಾಗದಲ್ಲಿ ಮೊದಲನೆಯದು) 'ಧ್ವನಿ'ಯಲ್ಲಿ ಅಂತರ್ಗತವಾಗುವುದು. ಮೂರನೆಯದು (=ಕಡೆಯದು) 'ಗುಣೀಭೂತವ್ಯಂಗ್ಯ'ವೆನಿಸುವುದು. ಈ 'ಗುಣೀಭೂತವ್ಯಂಗ್ಯ'ವೆಂಬ ಪ್ರಕಾರವು ಇತರ ಅಲಂಕಾರಗಳಲ್ಲಿಯೂ ಬರಬಹುದಾದರೂ, ಅವೆಲ್ಲವೂ ಒಟ್ಟಿಗೆ ಹೀಗೆ ಅದಕ್ಕೆ ವಿಷಯವಾಗುವುದಿಲ್ಲ. ಆದರೆ ಅತಿಶಯೋಕ್ತಿಯು ಮಾತ್ರ ಎಲ್ಲ ಅಲಂಕಾರಗಳಿಗೂ ವಿಷಯವಾಗುತ್ತದೆ. ಇದೇ ಅತಿಶಯೋಕ್ತಿಗೂ ಉಳಿದ ಅಲಂಕಾರಗಳಿಗೂ ಇರುವ ವಿಶೇಷ.

'ರೂಪಕ', 'ಉಪಮಾ', 'ತುಲ್ಯಯೋಗಿತಾ', 'ನಿದರ್ಶನಾ' ಇತ್ಯಾದಿ ಅಲಂಕಾರಗಳಲ್ಲಿ ಸೌಂದರ್ಯದ ಪ್ರತೀತಿಯು ಸಾದೃಶ್ಯದ ಮೂಲಕವಾಗಿ ಬರುತ್ತದೆ. ಈ ಸಾದೃಶ್ಯವು (ವಾಚ್ಯವಾಗಿರದೆ) ವ್ಯಂಗ್ಯವಾದ ಧರ್ಮಗಳಿಂದ ಕೂಡಿರುವುದರಿಂದಲೇ ಶೋಭಾತಿಶಯವು ಉಂಟಾಗುತ್ತದೆ. ಆದುದರಿಂದ ಸೌಂದರ್ಯಾತಿಶಯದಿಂದ ಕೂಡಿದ ಅಲಂಕಾರಗಳೆಲ್ಲ 'ಗುಣೀಭೂತವ್ಯಂಗ್ಯ'ದ ವ್ಯಾಪ್ತಿಗೇ ಒಳಪಡುತ್ತವೆ.

'ಸಮಾಸೋಕ್ತಿ', 'ಆಕ್ಷೇಪ', 'ಪರ್ಯಾಯೋಕ್ತ' ಇತ್ಯಾದಿ ಅಲಂಕಾರಗಳಲ್ಲಿ ವ್ಯಂಗ್ಯಾಂಶದ ಪ್ರತೀತಿಯಾದಲ್ಲದೆ ಸೌಂದರ್ಯವು ಪ್ರತೀತವಾಗಲಾರದೆಂದು ವ್ಯವಸ್ಥೆ ಮಾಡಿರುವುದರಿಂದ ಅವೂ 'ಗುಣೀಭೂತವ್ಯಂಗ್ಯ'ವೆನ್ನುವುದು ನಿರ್ವಿವಾದವೇ.

ಈ 'ಗುಣೀಭೂತವ್ಯಂಗ್ಯ'ದಲ್ಲಿ ಕೆಲವು ವಿಶಿಷ್ಟ ಅಲಂಕಾರಗಳು ವಿಶಿಷ್ಟ ಅಲಂಕಾರಗಳನ್ನು ಮಾತ್ರ ಗರ್ಭೀಕರಿಸುವುವೆಂಬ ನಿಯಮವೂ ಉಂಟು. 'ವ್ಯಾಜಸ್ತುತಿ'ಯಲ್ಲಿ 'ಪ್ರೇಯಸ್' ಅಲಂಕಾರಕ್ಕೆ ಮಾತ್ರ ಆಸ್ಪದವಿರಬೇಕು. ಹಾಗೆಯೇ ಅನೇಕ ಅಲಂಕಾರಗಳು ಒಂದೇ ವಿಶಿಷ್ಟ ಅಲಂಕಾರವನ್ನು ಮಾತ್ರ ಗರ್ಭೀಕರಿಸಬಹುದೆಂಬುದು ಇನ್ನೊಂದು ನಿಯಮ. ಉದಾಹರಣೆಗೆ 'ಸಸಂದೇಹ' ಮುಂತಾದ ಅಲಂಕಾರಗಳಲ್ಲಿ ಉಪಮಾಲಂಕಾರವು ಮಾತ್ರ ಧ್ವನಿತವಾಗುತ್ತದೆ. ಕೆಲವು ಅಲಂಕಾರಗಳು ಪರಸ್ಪರವಾಗಿ ಒಂದನ್ನೊಂದು ಧ್ವನಿಸಲೂ ಬಹುದು—ದೀಪಕ ಮತ್ತು ಉಪಮೆಗಳಂತೆ. ದೀಪಕಾಲಂಕಾರವು ಉಪಮೆಯನ್ನೊಳಗೊಳ್ಳುವುದೆಂಬುದು ಪ್ರಸಿದ್ಧವೇ ಆಗಿದೆ. ಹಾಗೆಯೇ ಉಪಮಾಲಂಕಾರವೂ ಒಮ್ಮೊಮ್ಮೆ ದೀಪಕಾಲಂಕಾರದ ಛಾಯೆಯನ್ನೊಳಗೊಳ್ಳಬಹುದು. ಇದಕ್ಕೆ 'ಮಾಲೋಪಮೆ'ಯೇ ಉದಾಹರಣೆ :—

ಪ್ರಭಾಮಹತ್ಯಾ ಶಿಖಯೇವ ದೀಪಃ
ತ್ರಿಮಾರ್ಗಯೇವ ತ್ರಿದಿವಸ್ಯ ಮಾರ್ಗಃ ।
ಸಂಸ್ಕಾರವತ್ಯೇವ ಗಿರಾ ಮನೀಷೀ
ತಯಾ ಸ ಪೂತಶ್ಚ ವಿಭೂಷಿತಶ್ಚ ॥[1]

ಸೊಡರವೊಲನೂನಕಾಂತಿಯ
ಕುಡಿಯಿಂದಂ ನಾಕದಂತೆ ಮಂದಾಕಿನಿಯಿಂ ।
ನುಡಿಜಾಣಿಂ ವಿಬುಧನವೋಲ್
ಪಡೆದಂ ಪೂತತೆಯನಂತೆ ಶೋಭೆಯನವಳಿಂ ॥

ಇವೇ ಮೊದಲಾದುವುಗಳಲ್ಲಿ ದೀಪಕಾಲಂಕಾರದ ಛಾಯೆಯು ಸ್ಫುಟವಾಗಿ ಕಾಣುತ್ತದೆ. ಈ ರೀತಿಯಾಗಿ, ಬೇರೆ ವ್ಯಂಗ್ಯಾಂಶದ ಸಂಸ್ಪರ್ಶದಿಂದ ಸೌಂದರ್ಯಾತಿಶಯವನ್ನು ಪಡೆಯುವ ರೂಪಕವೇ ಮೊದಲಾದ ಅಲಂಕಾರಗಳೆಲ್ಲವೂ 'ಗುಣೀಭೂತವ್ಯಂಗ್ಯ'ದ ಪ್ರಕಾರಗಳೇ ಆಗುತ್ತವೆ. ನಾವು ಮೇಲೆ ಹೇಳಿರುವ, ಮತ್ತು ಹೇಳದೆ ಇದ್ದರೂ ಅದೇ ಜಾತಿಗೆ ಸೇರುವ, ಅಲಂಕಾರಗಳೆಲ್ಲಕ್ಕೂ ಈ 'ಗುಣೀಭೂತ

[1] ಕುಮಾರಸಂಭವ, ೧. ೨೮.

ವ್ಯಂಗ್ಯ 'ತ್ವವು ಒಂದೇ ಸಮನಾಗಿ ಅನ್ವಯಿಸುತ್ತದೆ. ಅದರ ಲಕ್ಷಣವನ್ನು ಗ್ರಹಿಸಿದೊಡನೆಯೇ ಈ ಅಲಂಕಾರಗಳ ಸ್ವರೂಪವು ಸರಿಯಾಗಿ ತಿಳಿದುಹೋಗುತ್ತದೆ. ಅದಿಲ್ಲದೆ ಒಂದೊಂದರ ಸ್ವರೂಪ ವಿಶೇಷವನ್ನೂ ಹೇಳಿ ಮುಗಿಸುವೆವೆಂದು ಹೊರಟರೆ ತತ್ವವು ಸರಿಯಾಗಿ ತಿಳಿಯುವುದಿಲ್ಲ. ತತ್ವವು ತಿಳಿಯಬೇಕಾದರೆ ಎಲ್ಲಕ್ಕೂ ಅನ್ವಯಿಸುವ ಸಾಮಾನ್ಯಲಕ್ಷಣವಿಲ್ಲದೆ ಗತ್ಯಂತರವಿಲ್ಲ; ಅಲ್ಲದೆ ಪ್ರತಿಯೊಂದನ್ನೂ ಒಂದೊಂದಾಗಿ ಹೇಳಿ ವಿವರಿಸುವುದೂ ಶಕ್ಯವಲ್ಲದ ಕೆಲಸ; ಏಕೆಂದರೆ, ಹಾಗೆ ಮಾಡುವುದಕ್ಕೆ ಹೊರಟರೆ ಎಲ್ಲಿಗೂ ಕೊನೆಯೇ ಇರುವುದಿಲ್ಲ. ಮಾತಿನ ಪರಿಗಳು ಹೇಗೆ ಅನಂತವಾಗಿರುವುವೋ ಹಾಗೆಯೇ ಮಾತಿನ ಪ್ರಕಾರಗಳಾದ ಅಲಂಕಾರಗಳೂ ಅಪರಿಮಿತವಾಗಿಯೇ ಇರುವುವು. 'ಗುಣೀಭೂತ ವ್ಯಂಗ್ಯ'ಕ್ಕೆ ಮಾತ್ರ ಒಂದಲ್ಲದಿದ್ದರೆ ಇನ್ನೊಂದು ರೀತಿಯಿಂದ, ವ್ಯಂಗ್ಯಾಂತರಗಳ ದೃಷ್ಟಿಯಿಂದಲಾದರೂ, ವಿಷಯತ್ವವು ಇದ್ದೇ ಇರುತ್ತದೆ. ಆದುದರಿಂದ ಸಹೃದಯರು ಧ್ವನಿಯ ಈ ಎರಡನೆಯ ರೂಪಾಂತರ (=ಗುಣೀಭೂತವ್ಯಂಗ್ಯ)ವಾದರೂ ಮಹಾಕವಿಗಳ ಆದರಕ್ಕೆ ಪಾತ್ರವಾಗಿರುವುದೆಂಬುದನ್ನೂ ಅತಿರಮಣೀಯವಾದುದೆಂಬುದನ್ನೂ ಗಮನಿಸಬೇಕು. ಸಹೃದಯರಿಗೆ ಆನಂದವನ್ನುಂಟುಮಾಡುವಂತಹ ಕಾವ್ಯದಲ್ಲಿ ವ್ಯಂಗ್ಯಾರ್ಥದ ಸಂಪರ್ಕದಿಂದ ಅತಿಶಯವಾದ ಸೊಬಗು ಬರದೆಹೋಗುವ ಒಂದೇ ಒಂದು ಪ್ರಕಾರವಾದರೂ ಖಂಡಿತ ಸಿಕ್ಕಲಾರದು. ಇದೇ ಕಾವ್ಯದ ಪರಮರಹಸ್ಯವೆಂದು ಮತಿವಂತರು ತಿಳಿಯಬೇಕು.

ಕಾರಿಕೆ

ಮುಖ್ಯಾ ಮಹಾಕವಿಗಿರಾಮಲಂಕೃತಿಭೃತಾಮಪಿ ।
ಪ್ರತೀಯಮಾನಚ್ಛಾಯೈಷಾ ಭೂಷಾ ಲಜ್ಜೇವ ಯೋಷಿತಾಮ್ ॥ ೩೭ ॥

ನಾರಿಯರಿಗೆ ಬೇರೆ ಒಡವೆಗಳಿದ್ದರೂ ಸಹ ಲಜ್ಜೆಯು ಹೇಗೆ ಎಲ್ಲಕ್ಕಿಂತಲೂ ಮಿಗಿಲಾದ ಭೂಷಣವೋ, ಹಾಗೆಯೇ, ಮಹಾಕವಿಗಳ ಮಾತುಗಳಿಗೂ ಬೇರೆ ಅಲಂಕಾರಗಳಿದ್ದರೂ ಸಹ ಈ ವ್ಯಂಗ್ಯಾಂಶದ ಛಾಯೆಯೇ ಅತ್ಯುತ್ತಮವಾದ ಭೂಷಣ.

ವೃತ್ತಿ

ಚಿರಪರಿಚಿತವಾದ ಅರ್ಥದಲ್ಲಿಯೂ ಕೂಡ ನೂತನವಾದ ರಮಣೀಯತೆಯು ಬರುವುದಕ್ಕೆ ಈ ವ್ಯಂಗ್ಯಾಂಶದ ಛಾಯೆಯೇ ಕಾರಣ. ಉದಾಹರಣೆ:

ವ್ಯಂಗ್ಯ 'ತ್ವವು ಒಂದೇ ಸಮನಾಗಿ ಅನ್ವಯಿಸುತ್ತದೆ. ಅದರ ಲಕ್ಷಣವನ್ನು ಗ್ರಹಿಸಿ ದೊಡನೆಯೇ ಈ ಅಲಂಕಾರಗಳ ಸ್ವರೂಪವು ಸರಿಯಾಗಿ ತಿಳಿದುಹೋಗುತ್ತದೆ. ಅದಿಲ್ಲದೆ ಒಂದೊಂದರ ಸ್ವರೂಪ ವಿಶೇಷವನ್ನೂ ಹೇಳಿ ಮುಗಿಸುವೆವೆಂದು ಹೊರಟರೆ ತತ್ವವು ಸರಿಯಾಗಿ ತಿಳಿಯುವುದಿಲ್ಲ. ತತ್ವವು ತಿಳಿಯಬೇಕಾದರೆ ಎಲ್ಲಕ್ಕೂ ಅನ್ವಯಿಸುವ ಸಾಮಾನ್ಯಲಕ್ಷಣವಿಲ್ಲದೆ ಗತ್ಯಂತರವಿಲ್ಲ; ಅಲ್ಲದೆ ಪ್ರತಿಯೊಂದನ್ನೂ ಒಂದೊಂದಾಗಿ ಹೇಳಿ ವಿವರಿಸುವುದೂ ಶಕ್ಯವಲ್ಲದ ಕೆಲಸ; ಏಕೆಂದರೆ, ಹಾಗೆ ಮಾಡುವುದಕ್ಕೆ ಹೊರಟರೆ ಎಲ್ಲಿಗೂ ಕೊನೆಯೇ ಇರುವುದಿಲ್ಲ. ಮಾತಿನ ಪರಿಗಳು ಹೇಗೆ ಅನಂತವಾಗಿರುವುವೋ ಹಾಗೆಯೇ ಮಾತಿನ ಪ್ರಕಾರಗಳಾದ ಅಲಂಕಾರಗಳೂ ಅಪರಿಮಿತವಾಗಿಯೇ ಇರುವುವು. 'ಗುಣೀಭೂತ ವ್ಯಂಗ್ಯ'ಕ್ಕೆ ಮಾತ್ರ ಒಂದಲ್ಲ ದಿದ್ದರೆ ಇನ್ನೊಂದು ರೀತಿಯಿಂದ, ವ್ಯಂಗ್ಯಾಂತರಗಳ ದೃಷ್ಟಿಯಿಂದಲಾದರೂ, ವಿಷಯತ್ವವು ಇದ್ದೇ ಇರುತ್ತದೆ. ಆದುದರಿಂದ ಸಹೃದಯರು ಧ್ವನಿಯ ಈ ಎರಡನೆಯ ರೂಪಾಂತರ (=ಗುಣೀಭೂತವ್ಯಂಗ್ಯ)ವಾದರೂ ಮಹಾಕವಿಗಳ ಆದರಕ್ಕೆ ಪಾತ್ರವಾಗಿರುವುದೆಂಬುದನ್ನೂ ಅತಿರಮಣೀಯವಾದುದೆಂಬುದನ್ನೂ ಗಮನಿಸಬೇಕು. ಸಹೃದಯರಿಗೆ ಆನಂದವನ್ನುಂಟುಮಾಡುವಂತಹ ಕಾವ್ಯದಲ್ಲಿ ವ್ಯಂಗ್ಯಾರ್ಥದ ಸಂಪರ್ಕದಿಂದ ಅತಿಶಯವಾದ ಸೊಬಗು ಬರದೆಹೋಗುವ ಒಂದೇ ಒಂದು ಪ್ರಕಾರವಾದರೂ ಖಂಡಿತ ಸಿಕ್ಕಲಾರದು. ಇದೇ ಕಾವ್ಯದ ಪರಮರಹಸ್ಯವೆಂದು ಮತಿವಂತರು ತಿಳಿಯಬೇಕು.

ಕಾರಿಕೆ

ಮುಖ್ಯಾ ಮಹಾಕವಿಗಿರಾಮಲಂಕೃತಿಭೃತಾಮಪಿ |
ಪ್ರತೀಯಮಾನಚ್ಛಾಯೈಷಾ ಭೂಷಾ ಲಜ್ಜೇವ ಯೋಷಿತಾಮ್ ‖ ೩೭ ‖

ನಾರಿಯರಿಗೆ ಬೇರೆ ಒಡವೆಗಳಿದ್ದರೂ ಸಹ ಲಜ್ಜೆಯು ಹೇಗೆ ಎಲ್ಲಕ್ಕಿಂತಲೂ ಮಿಗಿಲಾದ ಭೂಷಣವೋ, ಹಾಗೆಯೇ, ಮಹಾಕವಿಗಳ ಮಾತುಗಳಿಗೂ ಬೇರೆ ಅಲಂಕಾರಗಳಿದ್ದರೂ ಸಹ ಈ ವ್ಯಂಗ್ಯಾಂಶದ ಛಾಯೆಯೇ ಅತ್ಯುತ್ತಮವಾದ ಭೂಷಣ.

ವೃತ್ತಿ

ಚಿರಪರಿಚಿತವಾದ ಅರ್ಥದಲ್ಲಿಯೂ ಕೂಡ ನೂತನವಾದ ರಮಣೀಯತೆಯು ಬರುವುದಕ್ಕೆ ಈ ವ್ಯಂಗ್ಯಾಂಶದ ಛಾಯೆಯೇ ಕಾರಣ. ಉದಾಹರಣೆ:

ವಿಸ್ರಂಭೋತ್ಥಾ ಮನ್ಮಥಾಜ್ಞಾವಿಧಾನೇ
ಯೇ ಮುಗ್ಧಾಕ್ಷ್ಯಾಃ ಕೇsಪಿ ಲೀಲಾವಿಲಾಸಾಃ |
ಅಕ್ಷುಣ್ಣಾಸ್ತೇ ಚೇತಸಾ ಕೇವಲೇನ
ಸ್ಥಿತ್ವೈಕಾನ್ತೇ ಸಂತತಂ ಭಾವನೀಯಾಃ ||

ಮದನಾದೇಶವಿಧಾನದ
ಪದಪಿಂ ಪೊರಮಟ್ಟ ಹಾವಲೀಲೆಗಳೆನಿತೋ |
ಸುದತಿಗೆ ನಿಚ್ಚಂ ಪೊಸವೆನಿ-
ಪುದರಿಂ ಮನಮೊಂದರಿಂದೆ ಚಾನಿಸವೇಳ್ಕುಂ ||

ಇಲ್ಲಿ 'ಕೇsಪಿ' (='ಎನಿತೋ') ಎಂಬ ಪದವು ವಾಚ್ಯವಾಗಿ ಅಸ್ಪಷ್ಟತೆಯನ್ನೇ ಹೇಳಿದರೂ, ವ್ಯಂಗ್ಯವಾಗಿ 'ಅಸಂತವಾಗಿದೆ'ಯೆಂಬರ್ಥವನ್ನು ಧ್ವನಿಸುವುದರಿಂದ, ಕಾವ್ಯಕ್ಕೆ ಬೇಕಾದಷ್ಟು ಸೊಗಸು ಬಂದಿದೆ.

ಕಾರಿಕೆ

ಅರ್ಥಾಂತರಗತಿಃ ಕಾಕ್ವಾ ಯಾ ಚೈಷಾ ಪರಿದೃಶ್ಯತೇ |
ಸಾ ವ್ಯಂಗ್ಯಸ್ಯ ಗುಣೀಭಾವೇ ಪ್ರಕಾರಮಿಮಮಾಶ್ರಿತಾ || ೩೮ ||

'ಕಾಕು' ಅಥವಾ ಧ್ವನಿವಿಕಾರದಿಂದ ಬೇರೆ ಅರ್ಥವು ತೋರುವುದುಂಟಷ್ಟೆ. ಅಲ್ಲಿ ವ್ಯಂಗ್ಯವು ಅಪ್ರಧಾನವೂ ಆಗಿದ್ದರೆ ಆಗ ಆ ಎರಡನೆಯ ಅರ್ಥದ ಪ್ರತೀತಿಯು ಈ ಕಾವ್ಯಪ್ರಕಾರದಲ್ಲಿಯೇ ಸೇರುತ್ತದೆ.

ವೃತ್ತಿ

ಎಷ್ಟೋ ಕಡೆ ಒಂದರ ಜತೆಗೆ ಮತ್ತೊಂದು ಅರ್ಥವು ಕಾಕುವಿನಿಂದ ಮೂಡುತ್ತಿರುತ್ತದೆ. ಅಲ್ಲಿ ವ್ಯಂಗ್ಯಾರ್ಥವು ಅಮುಖ್ಯವೆನಿಸುವಂತಿದ್ದರೆ, ಆಗ ಎರಡನೆಯ ಅರ್ಥದ ಪ್ರತೀತಿಯು ಈಗ ಹೇಳಿದ 'ಗುಣೀಭೂತವ್ಯಂಗ್ಯ'ವೆಂಬ ಕಾವ್ಯ-ಪ್ರಭೇದದಲ್ಲಿಯೇ ಸೇರುತ್ತದೆ. ಉದಾಹರಣೆ:—

. . . ಸ್ವಸ್ಥಾ ಭವನ್ತಿ ಮಯಿ ಜೀವತಿ ಧಾರ್ತರಾಷ್ಟ್ರಾಃ[1]

. . . ನಾನು ಜೀವಿಸಿರುವಾಗಲೇ ಧಾರ್ತರಾಷ್ಟ್ರರು ಸ್ವಸ್ಥವಾಗಿರುತ್ತಾರೆ! ಇನ್ನೊಂದು ಉದಾಹರಣೆ:—

ಆಮ ಅಸಇಓ ಓರಮ ಪಇವ್ವಏ ಣ ತುಏ ಮಲಿಣಿಅಂ ಸೀಲಮ್ |
ಕಿಂ ಉಣ ಜಣಸ್ಸ ಜಾಅ ವ್ವ ಚಂದಿಲಂ ತಂ ಣ ಕಾಮೇಮೋ ||

[1] ವೇಣೀಸಂಹಾರ ನಾಟಕ.

ಆಗಲಿ ಸುಳ್ಳೇ ! ನಿಲ್ಲಿಸು ಹದಿಬದೆ !
ನಿನ್ನಯ ಶೀಲಕೆ ಕೆಲುಬಿಲ್ಲ |
ಆದರೆ ಕಂಡರ ಹೆಂಡಿರ ಪರಿಯಲಿ
ನಾನಾ ನಾಪಿತಗೊಲಿದಿಲ್ಲ ||

ಇಲ್ಲೆಲ್ಲ, ವಿಶೇಷಾರ್ಥದ ಪ್ರತೀತಿಗೆ ಕೇವಲ ಕಾಕುವನ್ನಷ್ಟೆ ಕಾರಣವೆನ್ನಲಾಗದು. ಕಾಕುವು ಅರ್ಥದ ಸಾಮರ್ಥ್ಯದಿಂದ ಗಮ್ಯವಾಗುವುದೇ ಹೊರತು ನೇರವಾಗಿ ಪ್ರವರ್ತಿಸುವುದಿಲ್ಲ. ಆದುದರಿಂದ ಇಂತಹ ಕಾಕುವಿನ ಸಹಾಯದಿಂದ ಶಬ್ದಶಕ್ತಿಯೇ ಪ್ರವರ್ತಿಸುವುದೆಂದು ತಿಳಿಯಬೇಕು. (ಅರ್ಥದ ಸಾಮರ್ಥ್ಯವನ್ನು ಪರಿಗಣಿಸದೆ) ಸ್ವೇಚ್ಛೆಯಾಗಿ ನಾವು ಕಾಕುವನ್ನಾಶ್ರಯಿಸುವ ಕಡೆಗಳಲ್ಲೆಲ್ಲ ಈ ವಿಧವಾದ ವಿಶೇಷಾರ್ಥಪ್ರತೀತಿಯು ಬರುವುದು ಅಸಂಭವವೇ. ಹೀಗೆ ವಿಶೇಷಾರ್ಥವು ಕಾಕುವಿನ ಸಹಾಯದಿಂದೊಡಗೂಡಿದ ಶಬ್ದವ್ಯಾಪಾರನಿಷ್ಠವಾದರೂ ಅದು ಅರ್ಥದ ಸಾಮರ್ಥ್ಯದಿಂದ ಬರುವ ಕಾರಣ, ವ್ಯಂಗ್ಯವೇ. ಎಲ್ಲಿ ಅಭಿಧಾವ್ಯಾಪಾರವನ್ನು ಅನುಸರಿಸುತ್ತಿದ್ದರೂ ವ್ಯಂಗ್ಯಾರ್ಥವಿಶಿಷ್ಟವಾದ ವಾಚ್ಯಾರ್ಥಪ್ರತೀತಿಯು ಉಂಟಾಗುವುದೋ ಅಲ್ಲಿ ವ್ಯಂಗ್ಯವು ಗುಣೀಭೂತವಾಗುವ ಕಾರಣ, ಅಂತಹ ಕಾವ್ಯಕ್ಕೆ 'ಗುಣೀಭೂತವ್ಯಂಗ್ಯ'ವೆಂಬ ಹೆಸರು ಅನ್ವರ್ಥಕವಾಗುತ್ತದೆ. ಗುಣೀಭೂತವ್ಯಂಗ್ಯವೆಂದರೆ ಮತ್ತೇನೂ ಅಲ್ಲ ; ವಾಚ್ಯದೊಡನೆ ಸಂಪರ್ಕವನ್ನು ಹೊಂದಿದ ವ್ಯಂಗ್ಯವು ವಾಚ್ಯವನ್ನು ಬೋಧಿಸುವುದೇ.

ಕಾರಿಕೆ

ಪ್ರಭೇದಸ್ಯಾಸ್ಯ ವಿಷಯೋ ಯಶ್ಚ ಯುಕ್ತ್ಯಾ ಪ್ರತೀಯತೇ |
ವಿಧಾತವ್ಯಾ ಸಹೃದಯೈರ್ನ ತತ್ರ ಧ್ವನಿಯೋಜನಾ || ೩೯ ||

ಯಾವ ಲಕ್ಷ್ಯವು ಈ (ಕಾವ್ಯ) ಪ್ರಭೇದಕ್ಕೆ ಸೇರುವುದೆಂದು ಯುಕ್ತಿಯುಕ್ತವಾಗಿ ಕಾಣುತ್ತಿರುವುದೋ, ಅಲ್ಲಿಯೂ ಹೇಗಾದರೂ ಮಾಡಿ 'ಧ್ವನಿ'ಯಿರುವುದೆಂದು ತೋರಿಸುವುದಕ್ಕೆ ಸಹೃದಯರು ಹೊರಡಬಾರದು.

ವೃತ್ತಿ

ಒಮ್ಮೊಮ್ಮೆ 'ಧ್ವನಿ'ಯೂ 'ಗುಣೀಭೂತವ್ಯಂಗ್ಯ'ವೂ ಲಕ್ಷ್ಯಗಳಲ್ಲಿ ಸಂಕೀರ್ಣವಾಗಿಬಿಟ್ಟಿರುವುದುಂಟು. ಅಂತಹ ಸಂದರ್ಭದಲ್ಲಿ ಯಾವುದಕ್ಕೆ ಯಾವ ಹೆಸರನ್ನು ಕೊಡಲು ಯುಕ್ತಿಯ ಸಹಾಯವಿರುವುದೋ ಅದಕ್ಕೆ ಆ ಹೆಸರನ್ನೇ ಕೊಡಬೇಕು.

ಎಲ್ಲೆಡೆಗಳಲ್ಲಿಯೂ 'ಧ್ವನಿ'ಯ ಮೇಲೆ (ಅತಿಯಾದ) ವ್ಯಾಮೋಹವನ್ನಿಟ್ಟು ಕೊಳ್ಳಬಾರದು. ಉದಾಹರಣೆ :—

ಪತ್ಯುಃ ಶಿರಶ್ಚಂದ್ರಕಲಾಮನೇನ
ಸ್ಪೃಶೇತಿ ಸಖ್ಯಾ ಪರಿಹಾಸಪೂರ್ವಮ್ |
ಸಾ ರಂಜಯಿತ್ವಾ ಚರಣೌ ಕೃತಾಶೀ-
ರ್ಮಾಲ್ಯೇನ ತಾಂ ನಿರ್ವಚನಂ ಜಘಾನ ||[1]

ಇಂದಿದರಿಂದಿನಿಯನ ಶಿರ-
ದಿಂದುವನೊದೆಯೆಂದು ಹರಸಿ ನಗುತುಂ ಸಖಿ ತಾ- |
ನಂದಂಗೊಳಿಸಲ್ ಕಾಲ್ಗಳ-
ಸಂದವಳಂ ಮಾತನುಳಿದು ಸುಮದಿಂ ಪೊಯ್ದಳ್ ||

ಇನ್ನೊಂದು ಉದಾಹರಣೆ :—

ಪ್ರಯಚ್ಛತೋಚ್ಚೈಃ ಕುಸುಮಾನಿ ಮಾನಿನೀ
ವಿಪಕ್ಷಗೋತ್ರಂ ದಯಿತೇನ ಲಂಭಿತಾ |
ನ ಕಿಂಚಿದೂಚೇ ಚರಣೇನ ಕೇವಲಂ
ಲಿಲೇಖ ಬಾಷ್ಪಾಕುಲಲೋಚನಾ ಭುವಮ್ ||[2]

'ಇಗೊ ಹಿಡಿ' ಯೆನ್ನುತ ಹೂಗಳನಿನಿಯನು
ತನ್ನಯ ಕೈಯಲಿ ಕೊಡುವಾಗ |
ಅರಿಯದೆ ಸವತಿಯ ಹೆಸರನು ಹೇಳಲು
ಮಾನಿನಿ ಮುನಿದಳು ತಾನಾಗ |
ಮಾತನ್ನೇನೂ ನುಡಿಯಲೆ ಇಲ್ಲ ;
ಕಣ್ಣಲಿ ಮಿಡಿಯುತ ನೀರನ್ನು |
ತನ್ನಯ ಕಾಲಿನ ಬೆರಳುಗಳಿಂದ
ಸುಮ್ಮನೆ ಬರೆದಳು ನೆಲವನ್ನು ||

ಈ ಉದಾಹರಣೆಗಳಲ್ಲಿ 'ನಿರ್ವಚನಂ ಜಘಾನ' (=ಮಾತನುಳಿದು . . . ಪೊಯ್ದಳ್) ಮತ್ತು 'ನ ಕಿಂಚಿದೂಚೇ' (=ಏನನ್ನೂ ನುಡಿಯಲೆ ಇಲ್ಲ) ಎಂಬುದಾಗಿ ನಿಷೇಧದ ಮೂಲಕ ವ್ಯಂಗ್ಯಾರ್ಥವನ್ನು ವಾಚ್ಯವಾಗಿಯೂ ಹೇಳಿಬಿಟ್ಟಿರು

---

1 ಕುಮಾರಸಂಭವ, ೭. ೧೯.

2 ಕುಮಾರಸಂಭವ

ವುದರಿಂದ ವ್ಯಂಗ್ಯವು ಗುಣೀಭೂತವೇ ಆದರೂ ಸೊಗಸಾಗಿದೆ. ಹೀಗೆ ಯಾವ ವಕ್ರೋಕ್ತಿಯಿಂದಲೂ ವಾಚ್ಯವಾಗಿರದೆ, ವ್ಯಂಗ್ಯಾರ್ಥವು ತಾತ್ಪರ್ಯವಾಗಿ ತೋರುತ್ತಿದ್ದರೆ ಮಾತ್ರ ಅದಕ್ಕೆ ಪ್ರಾಧಾನ್ಯವು ಬರುತ್ತದೆ. ಇದಕ್ಕೆ 'ಏವಂ ವಾದಿನಿ ದೇವರ್ಷೌ . . .' ಇತ್ಯಾದಿಗಳೇ ಉದಾಹರಣೆಗಳು.[1] ಆದರೆ ಇಲ್ಲಿ ಭಂಗಿಯಿಂದ ವ್ಯಂಗ್ಯಾರ್ಥವು ವಾಚ್ಯವೂ ಆಗಿಬಿಟ್ಟಿರುವುದರಿಂದ ವಾಚ್ಯಕ್ಕೇ ಪ್ರಾಧಾನ್ಯ. ಆದುದರಿಂದ ಇದಕ್ಕೆ 'ಅನುರಣನರೂಪ-ವ್ಯಂಗ್ಯ-ಧ್ವನಿ'ಯೆಂಬ ಹೆಸರನ್ನು ಕೊಡಬಾರದು.

ಕಾರಿಕೆ

ಪ್ರಕಾರೋಽಯಂ ಗುಣೀಭೂತವ್ಯಂಗ್ಯೋಽಪಿ ಧ್ವನಿರೂಪತಾಮ್ |
ಧತ್ತೇ ರಸಾದಿತಾತ್ಪರ್ಯಪರ್ಯಾಲೋಚನಯಾ ಪುನಃ ‖ ೪೦ ‖

ರಸವೇ ಮೊದಲಾದುವುಗಳ ತಾತ್ಪರ್ಯವನ್ನು ಪರ್ಯಾಲೋಚಿಸಿದುದೇ ಆದರೆ ಈ 'ಗುಣೀಭೂತವ್ಯಂಗ್ಯ'ವೆಂಬ ಕಾವ್ಯ-ಪ್ರಕಾರವೂ ಮತ್ತೆ 'ಧ್ವನಿ'ಯ ರೂಪವನ್ನೇ ತಳೆಯುತ್ತದೆ.

ವೃತ್ತಿ

'ಗುಣೀಭೂತವ್ಯಂಗ್ಯ'ವೆಂಬ ಕಾವ್ಯಪ್ರಕಾರವೂ ರಸ, ಭಾವ, ಮೊದಲಾದುವುಗಳ ತಾತ್ಪರ್ಯವನ್ನೇ ಗಮನಿಸುವುದಾದರೆ 'ಧ್ವನಿ'ಯೇ ಆಗಿಬಿಡುತ್ತದೆ. ಇದಕ್ಕೆ ಇದೇ ಈಗ ಮೇಲೆ ಉದಾಹರಿಸಲಾದ ಎರಡು ಶ್ಲೋಕಗಳೇ ಉದಾಹರಣೆಗಳು. ಇನ್ನೂ ಒಂದು ಉದಾಹರಣೆ:—

ದುರಾರಾಧಾ ರಾಧಾ ಸುಭಗ ಯದನೇನಾಪಿ ಮೃಜತ-
ಸ್ತವೈತತ್ ಪ್ರಾಣೇಶಾಜಘನವಸನೇನಾಶ್ರು ಪತಿತಮ್ |
ಕಠೋರಂ ಸ್ತ್ರೀಚೇತಸ್ತದಲಮುಪಚಾರೈರ್ವಿರಮ ಹೇ
ಕ್ರಿಯಾತ್ ಕಲ್ಯಾಣಂ ವೋ ಹರಿರನುನಯೇಷ್ವೇವಮುದಿತಃ ||

ರಾಧೆಯಿವಳು ದುರಾರಾಧೆ, ನೀನೆ ನೋಡು ಸುಭಗನೆ ;
ನಿನ್ನ ಪ್ರಾಣಪ್ರಿಯಳ ಸೀರೆಸೆರಗಿನಿಂದೆ ತೊಡೆದರೂ,
ಕಣ್ಣನೀರು ಮಾತ್ರ ಬಿಡದೆ ಸುರಿಯುತಿರುವುದು !
ಹೆಣ್ಣಮನವೆ ಬಹಳ ಕಠಿನ ! ಸುಮ್ಮನೇಕುಪಚಾರವು ?
ನಿಲ್ಲಿಸೆಂಬ ಮಾತನಿಂತು ಕೋಪಶಮನಕಾಲದಿ
ಕೇಳಿ ಮುದಿತನಾದ ಹರಿಯು ಶುಭವನೆಮಗೆ ಮಾಡಲಿ ‖

---

[1] ಪುಟ ೧೮, ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೩.

ವಸ್ತುಸ್ಥಿತಿಯಿರುವುದು ಹೀಗೆ. 'ನ್ಯಕ್ಕಾರೋ ಹ್ಯಯಮೇವ . . .'[1] ಎಂಬ ಶ್ಲೋಕದಲ್ಲಿ ನಿರ್ದಿಷ್ಟಪದಗಳಿಗೆ ವ್ಯಂಗ್ಯಸಂಪರ್ಕವಿದ್ದರೂ ವಾಚ್ಯವನ್ನೇ ಅವು ಮುಖ್ಯವಾಗಿ ಬೋಧಿಸುತ್ತಿರುವ ಕಾರಣ, ಅವೂ ಗುಣೀಭೂತವ್ಯಂಗ್ಯಗಳೆನಿಸುವುದೇನೋ ಸರಿಯೆ. ಆದರೂ ಅವುಗಳಿಗೆ ವ್ಯಂಜಕತ್ವವನ್ನು ಹೇಳಲಾಯಿತಲ್ಲಾ !"— ಎಂದರೆ ಅದಕ್ಕೆ ವಾಕ್ಯದ ತಾತ್ಪರ್ಯವಾದ ರಸದ ಪರ್ಯಾಲೋಚನೆಯೇ ಕಾರಣ. ಆದರೆ ಆ ಪ್ರತ್ಯೇಕಪದಗಳಿಗೆ 'ಅರ್ಥಾಂತರಸಂಕ್ರಮಿತವಾಚ್ಯಧ್ವನಿ'ಯಿರುವುದೆಂದು ಭ್ರಮಿಸಬಾರದು. ಏಕೆಂದರೆ ಅವುಗಳಿಗೆ ವಾಚ್ಯಾರ್ಥವು ವಿವಕ್ಷಿತವೇ. ಅವುಗಳಲ್ಲಿ ನಿಜವಾಗಿಯೂ ವ್ಯಂಗ್ಯಾಂಶದ ಸಂಪರ್ಕವನ್ನುಳ್ಳ ವಾಚ್ಯಾರ್ಥವಿರುವುದಷ್ಟೇ ಹೊರತು, ವಾಚ್ಯಾರ್ಥವೇ ವ್ಯಂಗ್ಯರೂಪವಾಗಿ ಪರಿಣತವಾಗಿಬಿಟ್ಟಿಲ್ಲ. ಆದುದರಿಂದ ಅಲ್ಲಿ ವಾಕ್ಯವು 'ಧ್ವನಿ'; ಪದಗಳು ಮಾತ್ರ 'ಗುಣೀಭೂತವ್ಯಂಗ್ಯ'ಗಳು. ಅಷ್ಟೇ ಅಲ್ಲದೆ 'ಅಲಕ್ಷ್ಯಕ್ರಮ-ವ್ಯಂಗ್ಯ-ಧ್ವನಿ'ಗೆ ವ್ಯಂಜಕಗಳಾಗಬೇಕಾದರೆ 'ಗುಣೀಭೂತ ವ್ಯಂಗ್ಯ'ಗಳಾದ ಪದಗಳೇ ಬೇಕೆಂಬ ನಿಯಮವೇನೂ ಇಲ್ಲ. ಅರ್ಥಾಂತರಸಂಕ್ರಮಿತವಾಚ್ಯಧ್ವನಿಯೆಂಬ ಪ್ರಭೇದದಲ್ಲಿ ಸೇರುವ ಪದಗಳೂ ಆ ಕೆಲಸವನ್ನು ಮಾಡಬಹುದು. ಉದಾಹರಣೆಗೆ ಈ ಶ್ಲೋಕದಲ್ಲೇ ಬರುವ 'ರಾವಣ' ಎಂಬ ಅರ್ಥಾಂತರಸಂಕ್ರಮಿತವಾಚ್ಯಧ್ವನಿರೂಪವಾದ ಪದವನ್ನು ಹೇಳಬಹುದು. ಯಾವ ವಾಕ್ಯದಲ್ಲಿ ರಸಾದಿತಾತ್ಪರ್ಯವಿಲ್ಲವೋ ಅಲ್ಲಿ ಮಾತ್ರ ಗುಣೀಭೂತವ್ಯಂಗ್ಯವಾದ ಪದಗಳೇ ಬೇಕಾದಷ್ಟಿದ್ದರೂ ಒಟ್ಟು ವಾಕ್ಯಾರ್ಥವು 'ಗುಣೀಭೂತವ್ಯಂಗ್ಯ'ವೇ (ಆಗುವುದೇ ಹೊರತು ಮೇಲೆ ತೋರಿಸಿದಂತೆ 'ಧ್ವನಿ'ಯಾಗುವುದಿಲ್ಲ). ಉದಾಹರಣೆ :—

ರಾಜಾನಮಪಿ ಸೇವಂತೇ ವಿಷಮಪ್ಯುಪಭುಂಜತೇ |
ರಮಂತೇ ಚ ಸಹ ಸ್ತ್ರೀಭಿಃ ಕುಶಲಾಃ ಖಲು ಮಾನವಾಃ ||

ಸೇವಿಸುವರ್ ರಾಜನುಮಂ
ಸೇವಿಸುವರ್ ಗರಳಮನ್ನೆ ನಾರಿಯರೊಡನುಂ |
ಭಾವಿಸೆ ರಮಿಸುವರೆಂದೆನೆ
ಕೋವಿದರವರಲ್ತೆ ಬುವಿಯ ಮಾನಿಸರೆಲ್ಲರ್ ||

ಇದೇ ಮುಂತಾದ ಕಡೆಗಳಲ್ಲಿ, ವಾಚ್ಯವು ಪ್ರಧಾನವೇ? ವ್ಯಂಗ್ಯವು ಪ್ರಧಾನವೇ? ಎನ್ನುವ ಬಗೆಗೆ ವಿಶೇಷ ಲಕ್ಷ್ಯವನ್ನು ಕೊಡಬೇಕು. ಹಾಗೆ ಮಾಡುವುದರಿಂದ 'ಧ್ವನಿ', 'ಗುಣೀಭೂತವ್ಯಂಗ್ಯ' ಮತ್ತು 'ಅಲಂಕಾರಗಳು'—ಇವುಗಳ ವ್ಯಾಪ್ತಿಯು

---

[1] ಪುಟ ೨೮ ನ್ನು ನೋಡಿ. ಪ್ರಬುದ್ಧ ಕರ್ಣಾಟಕ, ಸಂಪುಟ ೩೨. ಸಂಚಿಕೆ ೪.

ಕಲಸಿಕೊಳ್ಳದೆ ಸರಿಯಾಗಿ ತಿಳಿಯುತ್ತದೆ. ಇಲ್ಲದೆ ಹೋದರೆ ಪ್ರಸಿದ್ಧವಾದ ಅಲಂಕಾರಗಳ ವಿಷಯದಲ್ಲೇ ಭ್ರಾಂತಿಗೆ ಮೊದಲಾಗುತ್ತದೆ. ಉದಾಹರಣೆ :—

ಲಾವಣ್ಯದ್ರವಿಣವ್ಯಯೋ ನ ಗಣಿತಃ ಕ್ಲೇಶೋ ಮಹಾನಾರ್ಜಿತಃ
ಸ್ವಚ್ಛಂದಂ ಚರತೋ ಜನಸ್ಯ ಹೃದಯೇ ಚಿಂತಾನಲೋ ದೀಪಿತಃ |
ಏಷಾಪಿ ಸ್ವಯಮೇವ ತುಲ್ಯರಮಣಾಭಾವಾದ್ ವರಾಕೀ ಹತಾ
ಕೋऽರ್ಥಶ್ಚೇತಸಿ ವೇಧಸಾ ವಿನಿಹಿತಸ್ತನ್ವ್ಯಾಸ್ತನುಂ ತನ್ವತಾ ||

ಲಾವಣ್ಯಧನವನ್ನು ಸೂರೆಗೊಟ್ಟೆಣಿಸದೆಯೆ
ಪಿರಿದಾದ ಶ್ರಮವನ್ನು ತಾನೆ ಕೈಕೊಂಡು |
ಸ್ವೇಚ್ಛೆಯಿಂ ಸುಖವಾಗಿ ತಾವಿದ್ದ ಜನಕೆಲ್ಲ
ಚಿಂತಾಗ್ನಿ ಹೊತ್ತಿಕೊಂಡುರಿವಂತೆ ಮಾಡಿ |
ಅರಿಯದೀಕೆಗು ಅಂತೆ ಯೋಗ್ಯವರನಿಲ್ಲದೆಯೆ
ಗೋಳಿನಲಿ ಬಾಳ್ವುದನು ಕಲ್ಪಿಸುತಲಿಂತು |
ಈ ಚೆಲುವೆಯಾ ತನುವ ನಿರ್ಮಿಸಿದ ಬೊಮ್ಮನಿಗೆ
ಮನದೊಳಾವುದ್ದೇಶವಿದ್ದಿತೋ ನಾನರಿಯೆ||

ಇಲ್ಲಿರುವ ಅಲಂಕಾರವು 'ವ್ಯಾಜಸ್ತುತಿ'ಯೆಂದು ಯಾರೋ ಒಬ್ಬರು ವ್ಯಾಖ್ಯಾನಮಾಡಿರುವರು. ಅದು ಸರಿಯಲ್ಲ. ಏಕೆಂದರೆ ಶ್ಲೋಕದ ತಾತ್ಪರ್ಯವು ಈ ಅಲಂಕಾರದಿಂದ ಬರುವ ಅರ್ಥದಲ್ಲಿ ಮಾತ್ರವೇ ಪರ್ಯವಸಾನಹೊಂದಿಬಿಟ್ಟರೆ ಅದು ಸರಿಯಾಗಿ ಹೊಂದಿಕೊಳ್ಳುವುದಿಲ್ಲ. ಇದು ಕಾಮಿಯೊಬ್ಬನ ಊಹಾಪೋಹವಲ್ಲದಿರುವುದೇ ಅದಕ್ಕೆ ಕಾರಣ. ಯಾವ ಕಾಮಿಯೂ ತನ್ನ ಪ್ರಣಯಿನಿಯ ವಿಷಯದಲ್ಲಿ 'ಈಕೆಯು ಯೋಗ್ಯನಾದ ವರನಿಲ್ಲದೆ ಶೋಚನೀಯಳಾಗಿರುವಳು' ಎಂದು ಹೇಳುವುದು ಅಸಂಭವ. ಅದೂ ಅಲ್ಲದೆ, ಇದನ್ನು ವಿರಕ್ತನೊಬ್ಬನ ಉಕ್ತಿ ವಿಕಲ್ಪವೆನ್ನುವುದೂ ಸಾಧ್ಯವಿಲ್ಲ. ಏಕೆಂದರೆ ಈ ಬಗೆಯಾದ ವಿಕಲ್ಪಗಳನ್ನು ದೂರ ಮಾಡುವುದೇ ಅವನ ಮುಖ್ಯಕೆಲಸವಾಗಿರಬೇಕಾಗುತ್ತದೆ. ಮತ್ತೇನೆಂದರೆ, ಈ ಶ್ಲೋಕಕ್ಕೆ ಆಕರವಾದ ಪ್ರಬಂಧವಾವುದೂ ಕೇಳಿಬರುವುದಿಲ್ಲ; ಅದು ಗೊತ್ತಾಗಿದ್ದಿದ್ದರೆ ಅಲ್ಲಿನ ಪ್ರಕರಣಕ್ಕೆ ಅನುಸಾರವಾಗಿ ಶ್ಲೋಕಕ್ಕೆ ಹೀಗಯೇ ಎಂದು ಅರ್ಥ ಮಾಡಬಹುದಾಗಿದ್ದಿತು. ಹೀಗಿರುವುದರಿಂದ, ಇದು ಅಪ್ರಸ್ತುತಪ್ರಶಂಸೆ. ಹಾಗೆ ತಿಳಿಯುವುದರಿಂದ ಶ್ಲೋಕದಲ್ಲಿ ವಾಚ್ಯವಾದ ಅರ್ಥವು ಇರುವುದರ ಜತೆಗೆ ಅದಕ್ಕೆ ಗುಣೀಭೂತವಾಗಿ ಬರುತ್ತಿರುವ ವ್ಯಂಗ್ಯಾರ್ಥವೂ ಸ್ಪಷ್ಟವಾಗುತ್ತದೆ. ಅಸಾಧಾರಣವಾದ ಗುಣಗಳು ತನ್ನಲ್ಲುಂಟೆಂಬ ಗರ್ವದಿಂದ ಬೀಗುತ್ತಿರುವವನೂ, ತನ್ನ ಮಹಿಮೆಯ

ಉತ್ಕರ್ಷದ ಫಲವಾಗಿ ಸಮಸ್ತ ಜನರಲ್ಲಿಯೂ ಮಾತ್ಸರ್ಯಜ್ವರವನ್ನು ಹುಟ್ಟಿಸಿದವನೂ ಆದವನೊಬ್ಬನು ತನ್ನ ವೈಶಿಷ್ಟ್ಯವನ್ನು ತಿಳಿದು ಕೊಂಡಾಡುವವರೊಬ್ಬರೂ ಇಲ್ಲದಿರುವುದನ್ನು ನೋಡಿ ಗೈಯುವ ಪ್ರಲಾಪವೇ ಇದು ಎಂಬುದೂ ವ್ಯಕ್ತವಾಗುತ್ತದೆ. ಅಷ್ಟೇ ಅಲ್ಲದೆ ಈ ಶ್ಲೋಕವು **ಧರ್ಮಕೀರ್ತಿ**ಯದೆಂಬ ಪ್ರಸಿದ್ಧಿಯೂ ಇದೆ. ಅವನದೇ ಇರಬೇಕೆಂಬ ಊಹೆಗೂ ಅವಕಾಶವಿದೆ. ಏಕೆಂದರೆ—

'ಅನಧ್ಯವಸಿತಾವಗಾಹನಮನಲ್ಪಧೀಶಕ್ತಿನಾ-
ಪ್ಯದೃಷ್ಟಪರಮಾರ್ಥತತ್ತ್ವಮಧಿಕಾಭಿಯೋಗೈರಪಿ |
ಮತಂ ಮಮ ಜಗತ್ಯಲಬ್ಧಸದೃಶಪ್ರತಿಗ್ರಾಹಕಂ
ಪ್ರಯಾಸ್ಯತಿ ಪಯೋನಿಧೇಃ ಪಯ ಇವ ಸ್ವದೇಹೇ ಜರಾಮ್ ||'

ಉರುವಿಖ್ಯಾತಕುಶಾಗ್ರಬುದ್ಧಿಯುತರುಂ ತಮ್ಮೆಲ್ಲ ಯತ್ನಂಗಳಿಂ
ಪರಮಾರ್ಥತ್ವಮಿದಿಂತಿದೆಂದು ತಿಳಿಯಲ್ಕಾರರ್ ಸ್ವಸಿದ್ಧಾಂತಮಂ |
ಭರದಿಂದೀಮತಮಿಂತುಟೆನ್ನಯೊಡಲೊಳ್ ಜೀರ್ಣತ್ವಮಂ ಪೊರ್ದುಗುಂ
ವರವಾರಾಶಿಯ ನೀರಿನಂತೆ ಸದೃಶರ್ ಸಂಗ್ರಾಹಕರ್ ಸಿಕ್ಕದೇ ||

ಎಂಬ ಅವನ ಈ ಶ್ಲೋಕದಲ್ಲಿಯೂ ಇದೇವಿಧವಾದ ಅಭಿಪ್ರಾಯವೇ ಸೂಚಿತವಾಗಿದೆ. ಅಪ್ರಸ್ತುತಪ್ರಶಂಸೆಯಲ್ಲಿ ವಾಚ್ಯವು ಮೂರೆರನಾದ 'ಬಂಧಚ್ಛಾಯೆ'ಯನ್ನು ತಳೆಯಬಹುದು: ೧. ವಿವಕ್ಷಿತತ್ವ, ೨. ಅವಿವಕ್ಷಿತತ್ವ ಮತ್ತು ೩. ವಿವಕ್ಷಿತಾವಿವಕ್ಷಿತತ್ವ, ಎಂಬುದಾಗಿ. ಇವುಗಳಲ್ಲಿ ಮೊದಲನೆಯದಾದ ವಿವಕ್ಷಿತತ್ವಕ್ಕೆ ಉದಾಹರಣೆ:

ಪರಾರ್ಥೇ ಯಃ ಪೀಡಾಮನುಭವತಿ ಭಂಗೇಽಪಿ ಮಧುರೋ. . .[1]

ಅಥವಾ ಇನ್ನೊಂದು ಉದಾಹರಣೆ:—[2]

ಅಮೀ ಯೇ ದೃಶ್ಯನ್ತೇ ನನು ಸುಭಗರೂಪಾಃ ಸಫಲತಾ
ಭವತ್ಯೇಷಾಂ ಯಸ್ಯ ಕ್ಷಣಮುಪಗತಾನಾಂ ವಿಷಯತಾಮ್ |
ನಿರಾಲೋಕೇ ಲೋಕೇ ಕಥಮಿದಮಹೋ ಚಕ್ಷುರಧುನಾ
ಸಮಂ ಜಾತಂ ಸರ್ವೈರ್ನ ಸಮಮಥವಾನ್ಯೈರವಯವೈಃ ||

ರಮಣೀಯ ರೂಪದಲಿ ಕಾಣುವಾ ವಸ್ತುಗಳು
ಕ್ಷಣಕಾಲ ಕಂಗಳಿಗೆ ಬಿದ್ದರವು ಸಫಲ |

---

[1] ಪುಟ ೩೮ ನ್ನು ನೋಡಿ, ಪ್ರಬುದ್ಧ ಕರ್ಣಾಟಕ, ಸಂಪುಟ ೩೨. ಸಂಚಿಕೆ ೨.

[2] ಈ ಶ್ಲೋಕವು ಆನಂದವರ್ಧನನೇ ಬರೆದುದು.

ಆದರೂ ಕಣ್ಣೊಂದೆ ತಾನು ಮಾಡುವುದೇನು
ಲೋಕದೊಳಗಾಲೋಕವೇ ಇರದೆ ಪೋಗೆ |
ಮಿಕ್ಕಂಗಗಳ ಜೋಡಿ ಕಣ್ಣೀಗಲಾಗಿಹುದು ;
ಅಲ್ಲ ; ಮಿಕ್ಕಂಗಗಳ ಜೋಡಿಯೂ ಅಲ್ಲ ||

ಮೇಲಿನ ಎರಡು ಶ್ಲೋಕಗಳಲ್ಲಿ ಬರುವ 'ಕಬ್ಬು' ಮತ್ತು 'ಕಣ್ಣು'ಗಳು ವಿವಕ್ಷಿತಸ್ವರೂಪಗಳೇ ಹೊರತು ಪ್ರಸ್ತುತಗಳಲ್ಲ. ಮಹಾಗುಣಪೂರ್ಣನಾದವನೊಬ್ಬನು ಅಜ್ಞರ ನಡುವೆ ಸಿಕ್ಕಿಕೊಂಡು, ಅವನಿಗೆ ಸಲ್ಲಬೇಕಾದ ಮರ್ಯಾದೆ ಸಿಕ್ಕದೆ ಹೋಗಿರುವಾಗ ಅವನ ಅವಸ್ಥೆಯನ್ನು ವರ್ಣಿಸುವುದೇ ಈ ಎರಡು ಶ್ಲೋಕಗಳಿಗೂ ಪ್ರಸ್ತುತವಾದ ವಿಷಯ.

ಅವಿವಕ್ಷಿತತ್ವಕ್ಕೆ ಉದಾಹರಣೆ :

'ಕಸ್ತ್ವಂ ಭೋಃ' 'ಕಥಯಾಮಿ ದೈವಹತಕಂ ಮಾಂ ವಿದ್ಧಿ ಶಾಖೋಟಕಂ'
'ವೈರಾಗ್ಯಾದಿವ ವಕ್ಷಿ' 'ಸಾಧು ವಿದಿತಂ' 'ಕಸ್ಮಾದ್' 'ಇದಂ ಕಥ್ಯತೇ |
ವಾಮೇನಾತ್ರ ವಟಸ್ತಮಧ್ವಗಜನಃ ಸರ್ವಾತ್ಮನಾ ಸೇವತೇ
ನ ಚ್ಛಾಯಾಪಿ ಪರೋಪಕಾರಕರಿಣೀ ಮಾರ್ಗಸ್ಥಿತಸ್ಯಾಪಿ ಮೇ' ||

'ನೀನಾರು ಹೇಳುವೆಯ ?' 'ಕೇಳಯ್ಯ ತಿಳಿಸುವೆನು—
'ವಿಧಿಹತಕ ನಾನೊಬ್ಬ ಶಾಖೋಟಕ !'[1]
'ವೈರಾಗ್ಯ ಬಂದಂತೆ ಮಾತನಾಡುವೆ ನೀನು !'
'ಸರಿಯಾಗಿ ನೀನರಿತೆ'; 'ಏಕೆ ಹೀಗೆ ?'
'ಹೇಳುವೆನು—ನೋಡಿಲ್ಲಿ ಎಡಕಿರುವ ವಟತರುವ-
ನದನು ಸೇವಿಸುತಿಹರು ಪಾಂಥರೆಲ್ಲ ;
ದಾರಿಯಲೆ ನಾನಿರುವೆನಾದರೂ ನೆರಳಿನ್ನ
ಪರರಿಗುಪಕಾರವನು ಮಾಡಲಿಲ್ಲ' ||

ಎಂದಿಗೂ ಮರವೊಂದರ ಸಂಗಡ ಪ್ರಶ್ನೋತ್ತರಗಳು ಸಂಭವವಲ್ಲವಾದುದರಿಂದ ಈ ಶ್ಲೋಕದ ವಾಚ್ಯಾರ್ಥವು ಅವಿವಕ್ಷಿತವಾಗಿದ್ದುಕೊಂಡೇ ಇರುವುದಲ್ಲದೆ ತಾತ್ಪರ್ಯರೂಪವಾದ ವಾಕ್ಯಾರ್ಥವು ಮಾತ್ರ ಸಂಪತ್ಸಮೃದ್ಧನಾದ ಸತ್ಪುರುಷನ ನೆರೆಯಲ್ಲಿರುವ ನಿರ್ಧನನೂ ಅಭಿಮಾನಿಯೂ ಆದವನೊಬ್ಬನ ಸಂಕಟವೆಂಬುದೂ ಗೊತ್ತಾಗುತ್ತದೆ.

---

[1] ಶಾಖೋಟಕ = ಭೂತಾವಾಸವಾದ ಮರ.

ವಿವಕ್ಷಿತಾವಿವಕ್ಷಿತತ್ವಕ್ಕೆ ಉದಾಹರಣೆ :—

ಉಪ್ಪ ಹಜಾಆಏ ಅಸೋಹಿಣೀಏ ಫಲಕುಸುಮಪತ್ತರಹಿಆಏ |
ವೇರೀಏ ವಇಂ ದೇನ್ತೋ ಪಾಮರ ಹಾ ಓಹಸಿಜ್ಜಿಹಸಿ ||

ನೀನುತ್ಪಥಸಂಜಾತೆಗ-
ನೂನಮಶೋಭನೆಗೆ ಸುಫಲಸುಮಪಲ್ಲವದಿಂ |
ಹೀನೆಗೆ ಬದರಿಗೆ ವೃತ್ತಿವಿ-
ಧಾನವ ಕಲ್ಪಿಸುತಲೆಗ್ಗ ಸಗೆಗೀಡಾದಯ್ ||

ಇಲ್ಲಿರುವ ವಾಚ್ಯಾರ್ಥವು (ಅಸಂಭವವಲ್ಲದಿದ್ದರೂ) ಅತ್ಯಂತ ಸಂಭವವೂ ಅಲ್ಲ. ಆದುದರಿಂದ ವಾಚ್ಯವ್ಯಂಗ್ಯಗಳ ನಡುವೆ ಪ್ರಧಾನವಾವುದು, ಅಪ್ರಧಾನ ವಾವುದು ಎಂಬುದನ್ನು ಪ್ರಯತ್ನಪೂರ್ವಕವಾಗಿ ಗಮನಿಸಬೇಕು.

ಕಾರಿಕೆ

ಪ್ರಧಾನಗುಣಭಾವಾಭ್ಯಾಂ ವ್ಯಂಗ್ಯಸ್ಯೈವಂ ವ್ಯವಸ್ಥಿತೇ |
ಕಾವ್ಯೇ ಉಭೇ ತತೋಽನ್ಯದ್ ಯತ್ ತಚ್ಚಿತ್ರಮಭಿಧೀಯತೇ || ೪೧ ||

ಚಿತ್ರಂ ಶಬ್ದಾರ್ಥಭೇದೇನ ದ್ವಿವಿಧಂ ತು ವ್ಯವಸ್ಥಿತಮ್ |
ತತ್ರ ಕಿಂಚಿಚ್ಛಬ್ದಚಿತ್ರಂ ವಾಚ್ಯಚಿತ್ರಮತಃಪರಮ್ || ೪೨ ||

ವ್ಯಂಗ್ಯಾರ್ಥದ ಪ್ರಾಧಾನ್ಯ ಮತ್ತು ಅಪ್ರಾಧಾನ್ಯ ಇವುಗಳ ಮೇಲಿಂದ ಈ ರೀತಿಯಾಗಿ ಎರಡು ಬಗೆಯ ಕಾವ್ಯಗಳನ್ನು ನಿರ್ಧರಿಸಲಾಗಿದೆ. ಇವೆರಡಕ್ಕಿಂತಲೂ ಬೇರೆಯಾದುದು 'ಚಿತ್ರ'ವೆನಿಸುತ್ತದೆ.

ಶಬ್ದ ಮತ್ತು ಅರ್ಥಗಳ ಭೇದದಿಂದ 'ಚಿತ್ರ'ವೂ ಎರಡು ಬಗೆಯಾಗಿರುತ್ತದೆ: ಕೆಲವು 'ಶಬ್ದಚಿತ್ರ'ಗಳಾದರೆ ಮಿಕ್ಕವು 'ಅರ್ಥ ಚಿತ್ರ'ಗಳು.

ವೃತ್ತಿ

ವ್ಯಂಗ್ಯಾರ್ಥವು ಪ್ರಧಾನವಾಗಿದ್ದರೆ 'ಧ್ವನಿ'ಯೆಂಬ ಕಾವ್ಯಪ್ರಕಾರವಾಗುತ್ತದೆ; ಅಪ್ರಧಾನವಾಗಿದ್ದರೆ 'ಗುಣೀಭೂತವ್ಯಂಗ್ಯ'ವೆಂಬ ಕಾವ್ಯಪ್ರಕಾರವಾಗುತ್ತದೆ. ಇವೆರಡಕ್ಕಿಂತಲೂ ಬೇರೆಯಾಗಿರುವ, ಎಂದರೆ ರಸಭಾವಾದಿತಾತ್ಪರ್ಯರಹಿತವೂ ವ್ಯಂಗ್ಯಾರ್ಥವಿಶೇಷಪ್ರಕಾಶನಶಕ್ತಿಶೂನ್ಯವೂ ಆಗಿರುವುದಲ್ಲದೆ ಕೇವಲ ವಾಚ್ಯವಾಚಕಗಳ ವೈಚಿತ್ರ್ಯದಿಂದ ಮಾತ್ರ ಕೂಡಿರುವ ಕಾರಣ ಬಣ್ಣಗಳಿಂದ ಬರೆದ ಚಿತ್ರದಂತೆ ಕಣ್ಣಿಗೆ ಡಬ್ಬಾಗಿ ಕಾಣುವಂತಹ, ಕಾವ್ಯವು 'ಚಿತ್ರ'ವೆಂಬ ಕಾವ್ಯ-

ಪ್ರಕಾರ. (ಉಳಿದ ಕಾವ್ಯಪ್ರಕಾರಗಳಂತೆ) ಅದು ಮುಖ್ಯವಾದ ಕಾವ್ಯವೇ ಅಲ್ಲ, ಕಾವ್ಯದ ಅನುಕರಣ ಮಾತ್ರ. ಅದರಲ್ಲಿ 'ಶಬ್ದಚಿತ್ರ'ವೆಂದರೆ ದುಷ್ಕರಯಮಕವೇ ಮೊದಲಾದ ಶಬ್ದಾಲಂಕಾರಗಳು. 'ಅರ್ಥಚಿತ್ರ'ವೆಂದರೆ ವ್ಯಂಗ್ಯಾರ್ಥದ ಸಂಸ್ಪರ್ಶವಿಲ್ಲದ ಮತ್ತು ರಸಾದಿತಾತ್ಪರ್ಯಶೂನ್ಯವಾದ 'ಉತ್ಪ್ರೇಕ್ಷೆ'ಯೇ ಮೊದಲಾದ ಅರ್ಥಾಲಂಕಾರಗಳು.

'ಈ 'ಚಿತ್ರ'ವೆನ್ನುವುದು ಯಾವುದು? ಎಲ್ಲಿ ವ್ಯಂಗ್ಯಾರ್ಥದ ಸ್ಪರ್ಶವೇ ಇಲ್ಲವೋ ಅದೇ ಚಿತ್ರ. ವ್ಯಂಗ್ಯಾರ್ಥವು ಮೂದೆರನಾಗಿರುವುದೆಂದು ಹಿಂದೆಯೇ ತೋರಿಸಲಾಗಿದೆ. ಈ ಮೂರರ ಪೈಕಿ, ಎಲ್ಲಿ ವ್ಯಂಗ್ಯವಾದ ವಸ್ತುವಾಗಲಿ ಅಲಂಕಾರಾಂತರವಾಗಲಿ ಇರುವುದಿಲ್ಲವೋ ಅದನ್ನು ಬೇಕಾದರೆ 'ಚಿತ್ರ'ಕ್ಕೆ ಲಕ್ಷ್ಯವೆಂದು ಹೇಳಿರಿ. ಆದರೆ ರಸಕ್ಕೆ ಲಕ್ಷ್ಯವೇ ಅಲ್ಲದ ಕಾವ್ಯಪ್ರಕಾರವಿರುವುದೇ ಅಸಂಭವ. ಏಕೆಂದರೆ ಕಾವ್ಯಕ್ಕೆ ಯಾವುದೇ ವಸ್ತುವಿನ ಸಂಸ್ಪರ್ಶವೂ ಇಲ್ಲವೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಜಗತ್ತಿನಲ್ಲಿರುವ ಸಕಲವಸ್ತುಗಳೂ ಒಂದಿಲ್ಲೊಂದು ರಸಕ್ಕೆ ವಿಭಾವರೂಪವಾದ ಆಶ್ರಯಗಳಾಗುತ್ತವೆ. ಚಿತ್ತವೃತ್ತಿವಿಶೇಷಗಳೇ ರಸಾದಿಗಳು. ಚಿತ್ತವೃತ್ತಿವಿಶೇಷವನ್ನು ಹುಟ್ಟಿಸದೆ ಇರುವ ಯಾವ ವಸ್ತುವು ತಾನೆ ಭೂಮಿಯ ಮೇಲಿದೆ? ಹಾಗೆ ಚಿತ್ತವೃತ್ತಿವಿಶೇಷಜನಕವಲ್ಲದಿದ್ದರೆ ವಸ್ತುವು ಕಾವ್ಯಕ್ಕೆ ಸಾಮಗ್ರಿಯೇ ಆಗಲಾರದು. ಕಾವ್ಯಕ್ಕೆ ವಿಷಯವಾಗಿಬಿಟ್ಟಮೇಲೆ ಅದನ್ನು 'ಚಿತ್ರ'ವೆನ್ನುವುದು ಹೇಗೆ?' ಎಂದು ಯಾರಾದರೂ ಆಕ್ಷೇಪಿಸಬಹುದು.

ಅದಕ್ಕೆ ಇದೇ ನಮ್ಮ ಉತ್ತರ: ಆಕ್ಷೇಪಣೆಯು ಸತ್ಯವೇ ಹೌದು. ರಸಾದಿಗಳ ಪ್ರತೀತಿಯು ಇಲ್ಲದೆಯೇ ಇರುವಂತಹ ಕಾವ್ಯಪ್ರಕಾರವು ಇಲ್ಲವೇ ಇಲ್ಲ. ಆದರೆ ಯಾವಾಗ ಕವಿಯು ರಸಭಾವಾದಿವಿವಕ್ಷಾಶೂನ್ಯನಾಗಿ ಶಬ್ದಾಲಂಕಾರವನ್ನಾಗಲಿ ಅರ್ಥಾಲಂಕಾರವನ್ನಾಗಲಿ (ಪ್ರಯತ್ನಪೂರ್ವಕವಾಗಿ) ತಂದುಹಾಕುತ್ತಾನೋ, ಆವಾಗ ಅವನ ಒಂದೇ ಉದ್ದೇಶವು ಅಲಂಕಾರಸಂಯೋಜನೆಯಾಗುವುದರಿಂದ ಅರ್ಥದಲ್ಲಿ ರಸಾದಿಗಳ ಶೂನ್ಯತೆಯೊದಗುವುದೆಂದು ನಾವು ಕಲ್ಪಿಸುತ್ತೇವೆ. ಕಾವ್ಯದಲ್ಲಿರುವ ಶಬ್ದಗಳ ಅರ್ಥಗಳೆಲ್ಲವೂ ಕವಿಯ ವಿವಕ್ಷೆಗೇ ಅಧೀನವಾಗಿರುತ್ತವೆ; ಕವಿಗೆ ವಿವಕ್ಷೆಯಿಲ್ಲದಿರುವಾಗಲೂ ಅರ್ಥದ ಸಾಮರ್ಥ್ಯದಿಂದಲೇ ಚಿತ್ರಕಾವ್ಯದಲ್ಲಿ ಕೂಡ ರಸಾದಿಪ್ರತೀತಿಯು ಬರಬಹುದು. ಆದರೆ ಅದು ಅತ್ಯಂತ ಸಣ್ಣಪ್ರಮಾಣದಲ್ಲಿರುತ್ತದೆ. ಈ ರೀತಿಯಿಂದಲೂ ಅದಕ್ಕೆ ನೀರಸತ್ವವನ್ನು ಕಲ್ಪಿಸುತ್ತೇವೆ. ಹೀಗೆ ಕಲ್ಪಿಸಿಕೊಳ್ಳುವುದರಿಂದಲೇ 'ಚಿತ್ರ'ವೆಂಬ ಒಂದು ಕಾವ್ಯಪ್ರಕಾರವನ್ನು ನಾವು ಇಲ್ಲಿ ನಿರೂಪಿಸುತ್ತಿರುವುದು. ಇದನ್ನೇ ಕೆಳಗಿನ ಶ್ಲೋಕಗಳು ಸಂಗ್ರಹಿಸುತ್ತವೆ:

ರಸಭಾವಾದಿವಿಷಯವಿವಕ್ಷಾವಿರಹೇ ಸತಿ ।
ಅಲಂಕಾರನಿಬಂಧೋ ಯಃ ಸ ಚಿತ್ರವಿಷಯೋ ಮತಃ ॥
ರಸಾದಿಷು ವಿವಕ್ಷಾ ತು ಸ್ಯಾತ್ತಾತ್ಪರ್ಯವತೀ ಯದಾ ।
ತದಾ ನಾಸ್ತ್ಯೇವ ತತ್ಕಾವ್ಯಂ ಧ್ವನೇರ್ಯತ್ತು ನ ಗೋಚರಃ ॥

ರಸಭಾವಾದಿಗಳ ವಿಷಯದಲ್ಲಿ ವಿವಕ್ಷೆಯು ಇಲ್ಲದಿರುವಾಗ ಅಲಂಕಾರಗಳ ಪ್ರಯೋಗವು ಕಂಡರೆ ಅದು 'ಚಿತ್ರ'ಕ್ಕೆ ಲಕ್ಷ್ಯ.

ರಸಾದಿಗಳಲ್ಲಿ ಮುಖ್ಯವಾದ ವಿವಕ್ಷೆಯಿರುವುದೇ ಆದರೆ ಆಗ 'ಧ್ವನಿ' ಯೆನಿಸದ ಕಾವ್ಯವೇ ಇಲ್ಲ.

ನಿರಂಕುಶರಾದ ಕವಿಗಳು ರಸಾದಿತಾತ್ಪರ್ಯವನ್ನು ಗಮನಿಸದೆಯೇ ಕಾವ್ಯ ರಚನೆಮಾಡಿರುವುದನ್ನು ನಾವು ಬಹಳವಾಗಿ ನೋಡಿರುವೆವಾದ ಕಾರಣ ಈ 'ಚಿತ್ರ' ವೆಂಬ ಕಾವ್ಯಪ್ರಕಾರವನ್ನೂ ಇಲ್ಲಿ ಪ್ರಸ್ತಾಪಿಸಬೇಕಾಯಿತು. ಆದರೆ ಇಂದಿನವರಾದ ನಮ್ಮ ನ್ಯಾಯವಾದ ಕಾವ್ಯನಿಯಮದ ವ್ಯವಸ್ಥೆಯನ್ನು ತೆಗೆದುಕೊಳ್ಳುವುದಾದರೆ, 'ಧ್ವನಿ'ಯನ್ನು ಬಿಟ್ಟು ಬೇರೆ ಕಾವ್ಯಪ್ರಕಾರವೇ ಇಲ್ಲ. ಏಕೆಂದರೆ ರಸಾದಿತಾತ್ಪರ್ಯವಿಲ್ಲದೆ ಹೋದಮೇಲೆ ಪರಿಪಾಕವನ್ನು ಹೊಂದಿದ ಕವಿಗಳು ಬರೆಯಲು ಹೊರಡುವುದೇ ಚೆನ್ನಲ್ಲ. ರಸಾದಿತಾತ್ಪರ್ಯವಿದ್ದುಬಿಟ್ಟರಂತೂ, ಭೂಮಿಯ ಮೇಲಿರುವ ಯಾವ ವಸ್ತುವನ್ನೇ ಆಗಲಿ ಅಭಿಮತರಸಕ್ಕೆ ಅಂಗವನ್ನಾಗಿ ಮಾಡಿಕೊಳ್ಳಬಹುದಷ್ಟೇ ಅಲ್ಲ; ಅದಕ್ಕೆ ಇನ್ನೂ ಹೆಚ್ಚಿನ ಅಪೂರ್ವಸೌಂದರ್ಯವನ್ನೂ ತರಬಹುದು. ಯಥೋಚಿತವಾಗಿ ರಸಭಾವಗಳ ಸ್ಪರ್ಶವನ್ನು ತರುವುದರಿಂದಲೂ, ಚೇತನವಸ್ತುಗಳ ಕ್ರಿಯೆಯನ್ನು ಆರೋಪಿಸುವುದರಿಂದಲೂ, ಯಾವ ಅಚೇತನವಾದ ವಸ್ತುವಿಗೂ ಕೂಡ ರಸಾಂಗತ್ವವನ್ನು ತರಬಹುದು. ಇದನ್ನೇ ಕೆಳಗಿನ ಪರಿಕರಶ್ಲೋಕಗಳು ವರ್ಣಿಸುತ್ತವೆ:

ಅಪಾರೇ ಕಾವ್ಯಸಂಸಾರೇ ಕವಿರೇವ ಪ್ರಜಾಪತಿಃ ।
ಯಥಾಸ್ಮೈ ರೋಚತೇ ವಿಶ್ವಂ ತಥೇದಂ ಪರಿವರ್ತತೇ ॥

ಶೃಂಗಾರೀ ಚೇತ್ ಕವಿಃ ಕಾವ್ಯೇ ಜಾತಂ ರಸಮಯಂ ಜಗತ್ ।
ಸ ಏವ ವೀತರಾಗಶ್ಚೇನ್ನೀರಸಂ ಸರ್ವಮೇವ ತತ್ ॥

ಭಾವಾನಚೇತನಾನಪಿ ಚೇತನವಚ್ಚೇತನಾನಚೇತನವತ್ ।
ವ್ಯವಹಾರಯತಿ ಯಥೇಷ್ಟಂ ಸುಕವಿಃ ಕಾವ್ಯೇ ಸ್ವತಂತ್ರತಯಾ ॥

ಅಪಾರವಾದ ಕಾವ್ಯಪ್ರಪಂಚದಲ್ಲಿ ಕವಿಯೇ ಬ್ರಹ್ಮ. ಇವನ ಇಷ್ಟದ ಪ್ರಕಾರ ಈ ಇಡಿಯ ವಿಶ್ವವೇ ಪರಿವೃತ್ತಿಯನ್ನು ಪಡೆಯುತ್ತದೆ.

ಕವಿಯು ಶೃಂಗಾರರಸಪೂರ್ಣನಾಗಿದ್ದರೆ ಜಗತ್ತೇ ಅವನ ಕಾವ್ಯದಲ್ಲಿ ರಸಮಯವಾಗುತ್ತದೆ. ಅದೇ ಅವನು ರಸಹೀನನಾದರೆ ಜಗತ್ತೆಲ್ಲವೂ ನೀರಸವಾಗುತ್ತದೆ.

ಅಚೇತನವಸ್ತುಗಳನ್ನು ಸಚೇತನಗಳಂತೆಯೂ ಸಚೇತನವಸ್ತುಗಳನ್ನು ಅಚೇತನಗಳಂತೆಯೂ ತನ್ನ ಇಷ್ಟಾನುಸಾರ ಮತ್ತು ಸ್ವತಂತ್ರವಾಗಿ ಸುಕವಿಯು ಕಾವ್ಯದಲ್ಲಿ ವರ್ಣಿಸುತ್ತಾನೆ.

ಹೀಗಿರುವುದರಿಂದ, ರಸತಾತ್ಪರ್ಯವುಳ್ಳ ಕವಿಯ ಇಷ್ಟಾನುಸಾರ ಅವನಿಗೆ ಬೇಕಾದ ರಸಕ್ಕೆ ಸರ್ವಥಾ ಅಂಗವಾಗದೆ ಹೋಗುವಂತಹ ವಸ್ತುವೇ ಭೂಮಿಯ ಮೇಲೆ ಇಲ್ಲ. ಹಾಗೆ ರಸಕ್ಕೆ ಅಂಗವಾದಮೇಲೆ ಸೌಂದರ್ಯಾತಿಶಯವನ್ನು ತಳೆಯದೆ ಇರುವುದೂ ಅಷ್ಟೇ ಅಸಂಭವ. ಇದೆಲ್ಲವನ್ನೂ ಮಹಾಕವಿಗಳ ಕಾವ್ಯದಲ್ಲಿ ನೋಡಬಹುದು. ನಾವೇ ಬರೆದಿರುವ ಕಾವ್ಯಪ್ರಬಂಧಗಳಲ್ಲಿಯೂ ಇದನ್ನು ಅಲ್ಲಲ್ಲಿ ತೋರಿಸಿಯೂ ಇದ್ದೇವೆ. ಇದನ್ನೊಪ್ಪಿದಮೇಲೆ, 'ಧ್ವನಿ' ಯ ಲಕ್ಷಣವನ್ನು ಮೀರುವಂತಹ ಯಾವ ಕಾವ್ಯಪ್ರಕಾರವೂ ಇರಲೇ ಆರದು. ಕವಿಗೆ ರಸತಾತ್ಪರ್ಯವಿದ್ದರೆ 'ಗುಣೀಭೂತವ್ಯಂಗ್ಯ'ವೆಂಬ ಕಾವ್ಯಪ್ರಕಾರವೂ ರಸ-ಧ್ವನಿಗೆ ಅಂಗವೇ ಆಗಿಬಿಡುವುದೆಂದು ಹಿಂದೆಯೇ ಹೇಳಲಾಯಿತು. ಅಷ್ಟೇ ಅಲ್ಲದೆ, ಚಾಟುಶ್ಲೋಕಗಳಲ್ಲಿಯೂ ದೇವತಾಸ್ತುತಿಗಳಲ್ಲಿಯೂ ರಸಾದಿಗಳು ವಾಚ್ಯಕ್ಕೆ ಅಂಗವಾಗಿರುವಂತೆಯೇ ಹೃದಯವನ್ನು ಸೂರೆಗೊಳ್ಳುವಂತಹ ಪ್ರಾಕೃತ ಗಾಥೆಗಳಲ್ಲಿ ಕೂಡ—ಇವುಗಳನ್ನು ಬರೆದವರು ಷಟ್‌ಪ್ರಜ್ಞರು[1] ಅಥವಾ ಅಪಾರವಾದ ಅನುಭವವುಳ್ಳವರು—ಒಮ್ಮೊಮ್ಮೆ ಗುಣೀಭೂತವ್ಯಂಗ್ಯವಾದ ವಾಚ್ಯಕ್ಕಿಂತಲೂ ರಸಾದಿಗಳೇ ಪ್ರಧಾನವಾಗಿಯೂ ಇರುತ್ತವೆ. ಇಂತಹ ಗುಣೀಭೂತವ್ಯಂಗ್ಯವೂ ಧ್ವನಿಯ ರೂಪಾಂತರವೇ ಎಂಬುದನ್ನು ಸಹ ಹಿಂದೆಯೇ ಹೇಳಲಾಯಿತು[2]. ಹೀಗೆ ಇಂದಿನ ನಮ್ಮ ಕವಿಕಾವ್ಯಲಕ್ಷಣವನ್ನು ಉಪದೇಶಮಾಡುವಾಗ ಇನ್ನೂ ಅಭ್ಯಾಸದ ಆರಂಭದೆಸೆಯಲ್ಲಿರುವವರಿಗೋಸ್ಕರ 'ಚಿತ್ರ' ವೆಂಬ ಹೆಸರನ್ನು ವ್ಯವಹರಿಸಿದರೂ, ಪರಿಣತಪ್ರಜ್ಞರಿಗೆ ಹೇಳುವಾಗ ಮಾತ್ರ ಮುಖ್ಯವಾಗಿ ಕಾವ್ಯವೆಂಬುದು 'ಧ್ವನಿ' ಯೊಂದೇ ಎಂಬುದು ತತ್ವ. ಇದನ್ನೇ ಸಂಗ್ರಹವಾಗಿ ಮುಂದೆ ಬರೆದ ಶ್ಲೋಕಗಳು ತಿಳಿಸುತ್ತವೆ :

---

[1] ಹೋಲಿಸಿರಿ—"ಧರ್ಮಾರ್ಥಕಾಮಮೋಕ್ಷೇಷು ಲೋಕತತ್ವಾರ್ಥಯೋರಪಿ |
ಷಟ್ಸು ಪ್ರಜ್ಞಾತು ಯಸ್ಯಾಸೌ ಷಟ್ಪ್ರಜ್ಞಃ ಪರಿಕೀರ್ತಿತಃ ||"

[2] ಹಿಂದೆ ಪುಟ ೧೨ ನ್ನು ನೋಡಿ

ಯಸ್ಮಿನ್ ರಸೋ ವಾ ಭಾವೋ ವಾ ತಾತ್ಪರ್ಯೇಣ ಪ್ರಕಾಶ್ಯತೇ ।
ಸಂವೃತ್ಯಾಭಿಹಿತಂ ವಸ್ತು ಯತ್ರಾಲಂಕಾರ ಏವ ವಾ ॥

ಕಾವ್ಯಾಧ್ವನಿ ಧ್ವನೇರ್ವ್ಯಂಗ್ಯಂ ಪ್ರಾಧಾನ್ಯೈಕನಿಬಂಧನಮ್ ।
ಸರ್ವತ್ರ ತತ್ರ ವಿಷಯೋ ಜ್ಞೇಯಃ ಸಹೃದಯೈರ್ಜನೈಃ ॥

ಕಾವ್ಯದಲ್ಲಿ ರಸವೋ ಭಾವವೋ ಮುಖ್ಯವಾಗಿ ಪ್ರತೀತವಾಗುತ್ತಿರುವುದೇ ಅಥವಾ ವಸ್ತುವೋ ಅಲಂಕಾರವೋ ಗೂಢವಾಗಿ ವಾಚ್ಯವಾಗಿರುವುದೇ ಇತ್ಯಾದಿಗಳನ್ನು ಇದು ಹೀಗೆಂದು ನಿರ್ಧರಿಸಬೇಕಾದರೆ ವ್ಯಂಗ್ಯವು ಪ್ರಧಾನವೇ ಅಲ್ಲವೆ ಎಂಬುದನ್ನು ಗಮನಿಸಬೇಕು. ಎಲ್ಲೆಲ್ಲಿ ವ್ಯಂಗ್ಯವು ಪ್ರಧಾನವಾಗಿರುವುದೋ ಅದೆಲ್ಲವೂ 'ಧ್ವನಿ'ಗೆ ಸೇರತಕ್ಕುದೇ ಎಂದು ಸಹೃದಯರು ತಿಳಿಯಬೇಕು.

ಕಾರಿಕೆ

ಸ ಗುಣೀಭೂತವ್ಯಂಗ್ಯೈಃ ಸಾಲಂಕಾರೈಃ ಸಹ ಪ್ರಭೇದೈಃ ಸ್ವೈಃ ।
ಸಂಕರಸಂಸೃಷ್ಟಿಭ್ಯಾಂ ಪುನರಪ್ಯುದ್ದ್ಯೋತತೇ ಬಹುಧಾ ॥ ೪೩ ॥

ಗುಣೀಭೂತವ್ಯಂಗ್ಯಗಳಿಂದಲೂ ಮತ್ತು ಅಲಂಕಾರಗಳಿಂದಲೂ ಒಡಗೂಡಿದ ಧ್ವನಿಯ ನಾನಾ ಸ್ವಪ್ರಭೇದಗಳು ಮತ್ತೆ 'ಸಂಕರ' ಮತ್ತು 'ಸಂಸೃಷ್ಟಿ'ಗಳಿಂದ ಬಹುಪ್ರಕಾರಗಳಾಗುತ್ತವೆ.

ವೃತ್ತಿ

ಈ ಧ್ವನಿಯ ಸ್ವಪ್ರಭೇದಗಳಿಗೂ ಗುಣೀಭೂತವ್ಯಂಗ್ಯಗಳಿಗೂ ವಾಚ್ಯಾಲಂಕಾರಗಳಿಗೂ 'ಸಂಕರ' 'ಸಂಸೃಷ್ಟಿ'ಗಳು ಎಷ್ಟೆಷ್ಟಾಗಬಹುದೆಂಬುದನ್ನು ಪರಿಗಣಿಸಿದರೆ, ಅನೇಕಾನೇಕಪ್ರಭೇದಗಳು ಬಂದು ಹೋಗುವುದನ್ನು ಲಕ್ಷ್ಯದಲ್ಲಿ ನೋಡಬಹುದು. ಹೇಗೆಂದರೆ, ಸ್ವಪ್ರಭೇದಸಂಕೀರ್ಣ ಮತ್ತು ಸ್ವಪ್ರಭೇದಸಂಸೃಷ್ಟ, ಗುಣೀಭೂತವ್ಯಂಗ್ಯಸಂಕೀರ್ಣ ಮತ್ತು ಗುಣೀಭೂತವ್ಯಂಗ್ಯಸಂಸೃಷ್ಟ, ವಾಚ್ಯಾಲಂಕಾರಾಂತರಸಂಕೀರ್ಣ ಮತ್ತು ವಾಚ್ಯಾಲಂಕಾರಾಂತರಸಂಸೃಷ್ಟ—ಈ ರೀತಿಯಾಗಿ ಧ್ವನಿಯು ಬಹುವಿಧವಾಗಿ ಪ್ರಕಾಶಿಸುತ್ತದೆ. (ಸಂಕರದಲ್ಲಿಯೂ ಬೇರೆ ಬೇರೆ ಬಗೆಗಳುಂಟು). ಸ್ವಪ್ರಭೇದಸಂಕರವು 'ಅನುಗ್ರಾಹ್ಯ-ಅನುಗ್ರಾಹಕ-ಭಾವ'ವಾಗಿರುವುದಕ್ಕೆ 'ಏವಂವಾದಿನಿ ದೇವರ್ಷೌ . . .'[1] ಮೊದಲಾದುವು ಉದಾಹರಣೆಗಳು. ಇಲ್ಲಿ 'ಅರ್ಥಶಕ್ತ್ಯುದ್ಭವ-ಅನುರಣನರೂಪ-ವ್ಯಂಗ್ಯ-ಧ್ವನಿ-'ಪ್ರಭೇದವು 'ಅಲಕ್ಷ್ಯಕ್ರಮ-ವ್ಯಂಗ್ಯ-

[1] ಪುಟ ೧೮ ನ್ನು ನೋಡಿ, **ಪ್ರಬುದ್ಧ ಕರ್ಣಾಟಕ**, ಸಂಪುಟ ೩೨, ಸಂಚಿಕೆ ೩.

ಧ್ವನಿ 'ಪ್ರಭೇದಕ್ಕೆ ಅನುಗ್ರಾಹಕವಾಗಿರುವುದನ್ನು ನೋಡಬಹುದು. ಇನ್ನು ಕೆಲವೆಡೆಗಳಲ್ಲಿ ಎರಡು ಪ್ರಭೇದಗಳ ಸಂದೇಹಸಂಕರವು ಬರಬಹುದು. ಉದಾಹರಣೆ :—

ಛಣಪಾಹುಣಿಆ ದೇಅರ ಏಸಾ ಜಾಆಏ ಕಿಂಪಿ ದೇ ಭಣಿದಾ |
ರುಅಇ ಪಡೋಹರವಲಹೀಘರಮ್ಮಿ ಅಣುಣಿಜ್ಜಉ ವರಾಈ ||

ಉತ್ಸವವಸರೆಗಳಿಗೆ ನೋಡಲೋಸುಗ ಬಂದ
ಈಕೆಗೇನನೊ ನಿನ್ನ ಮಡದಿ ಪೇಳೆ|
ಮೈದುನನೆ! ಮಿಡಿಯುವಳು ಕಣ್ಣೀರನೀ ಮುಗುದೆ
ನೀನವಳನನುನಯಿಸು ಶೂನ್ಯಗೃಹದೆ ||

ಇಲ್ಲಿ 'ಅನುನಯಿಸು' ಎಂಬ ಪದವನ್ನು ಅರ್ಥಾಂತರಸಂಕ್ರಮಿತವಾಚ್ಯವೆಂದಾಗಲಿ ಇಲ್ಲವೆ ವಿವಕ್ಷಿತಾನ್ಯಪರವಾಚ್ಯವೆಂದಾಗಲಿ, ಎರಡು ರೀತಿಯಿಂದಲೂ ಊಹಿಸಲವಕಾಶವಿದೆ. ಇವೆರಡರಲ್ಲಿ ಇದೊಂದೇ ಸರಿ ಎಂದು ನಿರ್ಣಯಿಸಲು ಯಾವ ಪ್ರಮಾಣವೂ ಇಲ್ಲ.

ಏಕವ್ಯಂಜಕಾನುಪ್ರವೇಶದಿಂದ ಅಲಕ್ಷ್ಯಕ್ರಮವ್ಯಂಗ್ಯದಲ್ಲಿ ಬರುವ ಸಂಕರವು ಉಳಿದ ಧ್ವನಿಪ್ರಭೇದಸಂಕರಗಳಿಗಿಂತಲೂ ಹೆಚ್ಚು ಕಡೆಗಳಲ್ಲಿ ಕಾಣುತ್ತದೆ. 'ಸ್ನಿಗ್ಧ ಶ್ಯಾಮಲ . . .'[1] ಮೊದಲಾದುವು ಉದಾಹರಣೆಗಳು. ಸ್ವಪ್ರಭೇದಸಂಸೃಷ್ಟಿಗೂ ಇದೇ ಉದಾಹರಣೆಯಾಗುತ್ತದೆ. ಇಲ್ಲಿ ಅರ್ಥಾಂತರಸಂಕ್ರಮಿತವಾಚ್ಯ ಮತ್ತು ಅತ್ಯಂತತಿರಸ್ಕೃತವಾಚ್ಯಗಳ ಸಂಸೃಷ್ಟಿಯನ್ನು ನೋಡಬಹುದು.[2] ಹಾಗೆಯೇ ಗುಣೀಭೂತವ್ಯಂಗ್ಯಗಳ ಸಾಂಕರ್ಯಕ್ಕೆ 'ನ್ಯಕ್ಕಾರೋ ಹ್ಯಯಮೇವ ಮೇ . . .'[3] ಮುಂತಾದುವು ಉದಾಹರಣೆಗಳು. ಇನ್ನೂ ಒಂದು ಉದಾಹರಣೆ :—

ಕರ್ತಾ ದ್ಯೂತಚ್ಛಲಾನಾಂ ಜತುಮಯಶರಣೋದ್ದೀಪನಃ ಸೋಽಭಿಮಾನೀ
ಕೃಷ್ಣಾಕೇಶೋತ್ತರೀಯವ್ಯಪನಯನಪಟುಃ ಪಾಂಡವಾ ಯಸ್ಯ ದಾಸಾಃ |
ರಾಜಾ ದುಃಶಾಸನಾದೇರ್ಗುರುರನುಜಶತಸ್ಯಾಂಗರಾಜಸ್ಯ ಮಿತ್ರಂ
ಕ್ವಾಸ್ತೇ ದುರ್ಯೋಧನೋಽಸೌ ಕಥಯತ ನ ರುಷಾ ದ್ರಷ್ಟುಮಭ್ಯಾಗತೌ ಸ್ವಃ ||

ಕೃತಕದ್ಯೂತೋದ್ಯುಕ್ತಂ
ಜತುಭವನವ ಜುರ್ಚಿದಾತನುದ್ಧತಗರ್ವಂ |

[1] ಪುಟ ೪೨ ನ್ನು ನೋಡಿ. ಪ್ರಬುದ್ಧ ಕರ್ಣಾಟಕ, ಸಂಪುಟ ೩೨. ಸಂಚಿಕೆ ೨.

[2] 'ಲಿಪ್ತ' ಮತ್ತು 'ಪಯೋದಸುಹೃದಾಮ್' ಎಂಬುವು ಅತ್ಯಂತತಿರಸ್ಕೃತವಾಚ್ಯಗಳು 'ರಾಮಃ' ಎಂಬುದು ಅರ್ಥಾಂತರಸಂಕ್ರಮಿತವಾಚ್ಯ.

[3] ಪುಟ ೨೮ ನ್ನು ನೋಡಿ. ಪ್ರಬುದ್ಧ ಕರ್ಣಾಟಕ, ಸಂಪುಟ ೩೨. ಸಂಚಿಕೆ ೩.

ಕ್ರತುಜಾಕಚಾಂಬರಹರೋ-
ತ್ಥಿತನಾವಂ ತೊಳ್ತದಾರ್ಗೆ ಪಾಂಡವರನಿಬರ್ ||

ಅನುಜರ್ಗಂ ಗುರು ದುಶ್ಶಾ-
ಸನಮುಖ್ಯರ್ಗ್ಗಾಳ್ದನಂಗಪಸಖಂ ದುರ್ಯೋ |
ಧನನೆಲ್ಲಿಹನದ ಪೇಳ್ವುದು
ಮುನಿಸಿಂ ಬಂದಿಲ್ಲ ನೋಡೆ ಬಂದಿಹೆವವನಂ ||[1]

ಇಲ್ಲಿ ವಾಕ್ಯದ ತಾತ್ಪರ್ಯಾರ್ಥವಾದ ಅಲಕ್ಷ್ಯಕ್ರಮವ್ಯಂಗ್ಯವು ಗುಣೀಭೂತ ವ್ಯಂಗ್ಯವಿಶಿಷ್ಟವಾದ ವಾಚ್ಯಾರ್ಥವನ್ನು ಬೋಧಿಸುವ ಪದಗಳೊಡನೆ ಸಂಕೀರ್ಣವಾಗಿದೆ. ಧ್ವನಿಯ ಒಂದು ಪ್ರಭೇದವು ಹೇಗೆ ಯಾವ ವಿರೋಧವೂ ಇಲ್ಲದೆ ತನ್ನ ಇನ್ನೊಂದು ಪ್ರಭೇದದೊಡನೆ ಸಂಕೀರ್ಣವಾಗಬಹುದೋ ಹಾಗೆಯೇ ಗುಣೀಭೂತ ವ್ಯಂಗ್ಯವು ಪದಗಳ ಅರ್ಥಕ್ಕೆ ಸಂಬಂಧಿಸುವಾಗ ವಾಕ್ಯಾರ್ಥಕ್ಕೆ ಸಂಬಂಧಿಸುವ ಧ್ವನಿಯೊಡನೆ ಸಂಕೀರ್ಣವಾದರೂ ವಿರೋಧವಿಲ್ಲ. ಧ್ವನಿಪ್ರಭೇದಗಳು ಪರಸ್ಪರ ಸಂಕೀರ್ಣವಾಗುವಾಗಲೂ ಪದಾರ್ಥ, ಮತ್ತು ವಾಕ್ಯಾರ್ಥಗಳೆಂಬ ಬೇರೆ ಬೇರೆ (ವ್ಯಂಜಕಗಳಾದ) ಆಶ್ರಯಗಳನ್ನು ಪಡೆದಿರುವುದರಿಂದ ವಿರೋಧಕ್ಕವಕಾಶವಿರುವುದಿಲ್ಲ. ಏಕವ್ಯಂಜಕಾನುಪ್ರವೇಶದಿಂದುಂಟಾಗುವ ಸಂಕರದಲ್ಲಿಯೂ ಕೂಡ (ವ್ಯಂಜಕದ ದೃಷ್ಟಿಯಿಂದ) ಪ್ರಾಧಾನ್ಯ-ಅಪ್ರಾಧಾನ್ಯಗಳಿಗೆ ವಿರೋಧ ಬರುವುದಾದರೂ ವ್ಯಂಗ್ಯಗಳ ದೃಷ್ಟಿಯಿಂದ ಯಾವ ವಿರೋಧವೂ ಬರುವುದಿಲ್ಲ.[2] ವಾಚ್ಯ-ವಾಚಕ-ಭಾವ ಸಂಬಂಧವನ್ನುಳ್ಳ ಅನೇಕ ವಸ್ತುಗಳು ಒಂದರೊಡನೊಂದು ಕಲೆಯುವಾಗ 'ಸಂಕರ', 'ಸಂಸೃಷ್ಟಿ' ಎಂಬ ಮಾತುಗಳು ಹೇಗೆ ಸಮಂಜಸವಾಗುವುವೋ ಹಾಗೆಯೇ ವ್ಯಂಗ್ಯ-ವ್ಯಂಜಕ-ಭಾವ ಸಂಬಂಧವನ್ನುಳ್ಳ ವಸ್ತುಗಳು ಕೂಡುವಾಗಲೂ ವಿರೋಧವಿಲ್ಲವೆಂದು ತಿಳಿಯಬೇಕು. ಎಲ್ಲಿ ಕೆಲವು ಪದಗಳು ಅವಿವಕ್ಷಿತವಾಚ್ಯಗಳಾಗಿಯೋ ಇಲ್ಲವೆ ಅನುರಣನರೂಪ-ವ್ಯಂಗ್ಯ ಬೋಧಕಗಳಾಗಿಯೋ ಇರುವುವೋ ಅಲ್ಲಿ 'ಧ್ವನಿ' ಮತ್ತು 'ಗುಣೀಭೂತವ್ಯಂಗ್ಯ'ಗಳಿಗೆ 'ಸಂಸೃಷ್ಟಿ'ಯುಂಟಾಗುತ್ತದೆ. ಉದಾಹರಣೆ:— 'ತೇಷಾಂ ಗೋಪವಧೂವಿಲಾಸಸುಹೃದಾಮ್ . . .'[3] ಇತ್ಯಾದಿ. ಇಲ್ಲಿ 'ವಿಲಾಸ

---

[1] ವೇಣೀಸಂಹಾರ v, ೨೬. ಪಂಡಿತ ಜಯರಾಯಾಚಾರ್ಯರ ಭಾಷಾಂತರ.

[2] ಪ್ರಧಾನವಾಗಿರುವ ವ್ಯಂಗ್ಯ ಒಂದಾದರೆ ಅಪ್ರಧಾನವಾಗಿರುವ ವ್ಯಂಗ್ಯವು ಮತ್ತೊಂದಾಗಿರುವುದೆಂದರ್ಥ. ಅದರಿಂದಲೇ ವ್ಯಂಗ್ಯಗಳ ದೃಷ್ಟಿಯಿಂದ ವಿರೋಧವಿಲ್ಲ.

[3] ಪುಟ ೪೯ನ್ನು ನೋಡಿ; **ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೨.**

ಸುಹೃದಾಂ' ಮತ್ತು 'ರಾಧಾರಹಃಸಾಕ್ಷಿಣಾಂ' ಎಂಬ ಪದಗಳೆರಡೂ ಧ್ವನಿಯ ಎರಡು ಪ್ರಭೇದಗಳು. 'ತೇ' ಮತ್ತು 'ಜಾನೇ' ಎಂಬೆರಡು ಪದಗಳೂ ಗುಣೀಭೂತವ್ಯಂಗ್ಯಗಳು. ವಾಚ್ಯಾಲಂಕಾರಗಳು ಕೂಡ ಅಲಕ್ಷ್ಯಕ್ರಮವ್ಯಂಗ್ಯದೊಡನೆ ಸಂಕೀರ್ಣವಾಗುವುದನ್ನು ರಸಮಯವಾದ ಮತ್ತು ರಸವದಲಂಕಾರಘಟಿತವಾದ ಕಾವ್ಯಗಳಲ್ಲೆಲ್ಲಾ ಸ್ಪಷ್ಟವಾಗಿ ನೋಡಬಹುದು.

ಇವಲ್ಲದೆ ಇವುಗಳ ಒಂದೊಂದು ಪ್ರಭೇದವೂ ಕೂಡ ಮತ್ತಾವುದಾದರೊಂದು ಪ್ರಭೇದದೊಡನೆ ಸಂಕೀರ್ಣವಾಗುವುದೂ ಸಂಭವವೆ. ಉದಾಹರಣೆಗೆ ಈ ಶ್ಲೋಕವನ್ನು ನೋಡಬಹುದು :[1]—

> ಯಾ ವ್ಯಾಪಾರವತೀ ರಸಾನ್ ರಸಯಿತುಂ ಕಾಚಿತ್ ಕವೀನಾಂ ನವಾ
> ದೃಷ್ಟಿರ್ಯಾ ಪರಿನಿಷ್ಠಿತಾರ್ಥವಿಷಯೋನ್ಮೇಷಾ ಚ ವೈಪಶ್ಚಿತೀ |
> ತೇ ದ್ವೇ ಅಪ್ಯವಲಂಬ್ಯ ವಿಶ್ವಮನಿಶಂ ನಿರ್ವರ್ಣಯಂತೋ ವಯಂ
> ಶ್ರಾಂತಾ ನೈವ ಚ ಲಬ್ಧಮಬ್ಧಿಶಯನ ! ತ್ವದ್ಭಕ್ತಿತುಲ್ಯಂ ಸುಖಮ್ ||

> ಆವುದು ಸಾಲ್ವುದೋ ರಸಗಳಂ ತಿಳಿಯಲ್ ಕವಿನಿಷ್ಠಮಾಗಿ ಮ-
> ತ್ತಾವುದು ಪಂಡಿತಸ್ಥಮೆನೆ ತಾಂ ಪರಮಾರ್ಥವನೆಲ್ಲ ತೋರ್ಪುದೋ |
> ಭಾವಿಸುತಾವಗಂ ನಿಖಿಲಲೋಕಮನಿರ್ದೆರನಾಗಿಯುಂ ಸುಖಾ-
> ಭಾವಮುದಾಯ್ತು ವಿಷ್ಣುವೆ! ಸದಾ ತವ ಭಕ್ತಿಗೆ ಕಾಣೆ ಸಾಮ್ಯಮಂ ||

ಇಲ್ಲಿ ವಿರೋಧಾಲಂಕಾರದೊಂದಿಗೆ ಅರ್ಥಾಂತರಸಂಕ್ರಮಿತವಾಚ್ಯವೆಂಬ ಧ್ವನಿಪ್ರಭೇದವು ಸಂಕೀರ್ಣವಾಗಿದೆ.

ವಾಚ್ಯಾಲಂಕಾರವು 'ಸಂಸೃಷ್ಟಿ'ಯನ್ನು ಪಡೆಯಬೇಕಾದರೆ ಪದಗಳ ಮೂಲಕವೇ; ಕೆಲವು ಪದಗಳು ವಾಚ್ಯಾಲಂಕಾರಗಳಿಂದ ಕೂಡಿರಬೇಕು; ಮತ್ತೆ ಕೆಲವು ಪದಗಳು ಧ್ವನಿಪ್ರಭೇದಗಳಿಂದ ಕೂಡಿರಬೇಕು. ಉದಾಹರಣೆ :—

> ದೀರ್ಘೀಕುರ್ವನ್ ಪಟು ಮದಕಲಂ ಕೂಜಿತಂ ಸಾರಸಾನಾಂ
> ಪ್ರತ್ಯೂಷೇಷು ಸ್ಫುಟಿತಕಮಲಾಮೋದಮೈತ್ರೀಕಷಾಯಃ |
> ಯತ್ರ ಸ್ತ್ರೀಣಾಂ ಹರತಿ ಸುರತಗ್ಲಾನಿಮಂಗಾನುಕೂಲಃ
> ಶಿಪ್ರಾವಾತಃ ಪ್ರಿಯತಮ ಇವ ಪ್ರಾರ್ಥನಾಚಾಟುಕಾರಃ ||[2]

> ಮತ್ತಹಂಸಗಳ ಮತ್ತಿನುಲಿವನೇ ಮತ್ತೆ ಎಳೆದು ಬಳಸಿ
> ಬೆಳಗಿನಲ್ಲಿ ಅರಳಿರುವ ತಾವರೆಯ ಕಂಪ ಕೆಳೆಯ ಬೆಳೆಸಿ |

---

[1] ಇದು ಆನಂದವರ್ಧನನೇ ರಚಿಸಿರುವ ಶ್ಲೋಕ.

[2] ಮೇಘದೂತ, ಪೂರ್ವಮೇಘ—೩೧.

ಸುಸಿಲಿನಲಸಿಕೆಯ ಕಳೆವುದಲ್ಲಿ ಶಿಪ್ರಾऽऽವಾತದಂತೆ
ಮಧುರವಾಗಿಯೇ ಚದುರನಾಡುತಿಹ ಬಲ್ಲ ನಲ್ಲನಂತೆ ||[1]

ಇಲ್ಲಿ 'ಮೈತ್ರೀ' ಎಂಬ ಪದದಲ್ಲಿ ಅವಿವಕ್ಷಿತವಾಚ್ಯಧ್ವನಿಯಿದೆ; ಮಿಕ್ಕ ಪದಗಳಲ್ಲಿ ಬೇರೆ ಅಲಂಕಾರಗಳಿವೆ.

ಒಂದು ಅಲಂಕಾರದಿಂದ ಸಂಸೃಷ್ಟವಾದ ಮತ್ತೊಂದು ಅಲಂಕಾರವು ಧ್ವನಿಯೊಡನೆ ಸಂಕೀರ್ಣವಾಗುವುದಕ್ಕೆ ಉದಾಹರಣೆ:—

ದಂತಕ್ಷತಾನಿ ಕರಜೈಶ್ಚ ವಿಪಾಟಿತಾನಿ
ಪ್ರೋದ್ಭಿನ್ನಸಾಂದ್ರಪುಲಕೇ ಭವತಃ ಶರೀರೇ |
ದತ್ತಾನಿ ರಕ್ತಮನಸಾ ಮೃಗರಾಜವಧ್ವಾ
ಜಾತಸ್ಪೃಹೈರ್ಮುನಿಭಿರಪ್ಯವಲೋಕಿತಾನಿ ||

ಮೃಗಪತಿಕಾಂತೆ ರಕ್ತಮನದಿಂ ನಿಜದಂತದ ಮುದ್ರೆಯಿತ್ತು ಕೈ-
ಯುಗುರ್ಗಳಿನಂತು ತೀವೆ ಸುನಖಕ್ಷತಮಂ ಭವದೀಯದೇಹದೊಳ್ |
ಮಿಗಿಲೆನಲ್ಕೆದೆ ತಾನೊಗೆದ ಪೊಂಪುಳಿಯಂ ಬಗೆದುಂಬಿ ನೋಡಿದರ್
ಮಿಗೆ ಮುನಿಪುಂಗವರ್ ಬಹುಲಲೋಭವಿಭಾವದಿನಂದು ನಿನ್ನಯಾ ||

ಇಲ್ಲಿ ಸಮಾಸೋಕ್ತಿಯಿಂದ ಸಂಸೃಷ್ಟವಾದ ವಿರೋಧಾಲಂಕಾರದೊಡನೆ ಅಲಕ್ಷ್ಯಕ್ರಮವ್ಯಂಗ್ಯವಾದ ಧ್ವನಿಯು ಸಂಕೀರ್ಣವಾಗಿದೆ. ಏಕೆಂದರೆ ಇಲ್ಲಿ ಮುಖ್ಯವಾಗಿರುವ ತಾತ್ಪರ್ಯಾರ್ಥವು ದಯಾವೀರವೆಂಬ ರಸ.

ಸಂಸೃಷ್ಟವಾದ ಅಲಂಕಾರಗಳಿಂದಲೇ ಸಂಸೃಷ್ಟವಾಗುವ ಧ್ವನಿಗೆ ಉದಾಹರಣೆ:—

ಅಹಿಣಅಪಓಅರಸಿಏಸು ಪಹಿಅಸಾಮಾಇಏಸು ದಿಅಹೇಸು |
ಸೋಹಇ ಪಸಾರಿಅಗಿಆಣಂ ಣಚ್ಚಿಅಂ ಮೋರಬಂದಾಣಂ ||

ನೂತ್ನಪಯೋದ ರಸಿತಗಳ್
ಪಾಂಥಜನಕೆ ಕಾರ್ಷ್ಣ್ಯಕಾರಿಗಳ್ ದಿನಗಳೆನಲ್ |

ಈ ಪೂರ್ವಾರ್ಧವನ್ನು ಹೀಗೂ ಅರ್ಥಮಾಡಬಹುದು:—

ಅಭಿನವಪ್ರಯೋಗರಸಿಕರ್
ಪಥಿಕಸಮಾಜಂಗಳಾಗೆ ಮತ್ತಾ ದಿನದೊಳ್ |

[1] ಶ್ರೀ ಅಂಬಿಕಾತನಯದತ್ತರ ಭಾಷಾಂತರ.

ಕೊರಲೆತ್ತಿದ ಸವಿಲುಗಳಾ
ವರನೃತ್ಯಮನೂನಶೋಭೆಯಿಂ ತಳೆದಿರ್ಕುಂ ||

ಇಲ್ಲಿ ಉಪಮೆ ಮತ್ತು ರೂಪಕಗಳಿಂದ ಶಬ್ದಶಕ್ತ್ಯುದ್ಭವ-ಅನುರಣನರೂಪ-ವ್ಯಂಗ್ಯ-ಧ್ವನಿಯು ಸಂಸೃಷ್ಟವಾಗಿದೆ.

ಕಾರಿಕೆ

ಏವಂ ಧ್ವನೇಃ ಪ್ರಭೇದಾಃ ಪ್ರಭೇದಭೇದಾಶ್ಚ ಕೇನ ಶಕ್ಯಂತೇ ।
ಸಂಖ್ಯಾತುಂ ದಿಙ್ಮಾತ್ರಂ ತೇಷಾಮಿದಮುಕ್ತಮಸ್ಮಾಭಿಃ ॥ ೪೪ ॥

ಹೀಗೆ 'ಧ್ವನಿ'ಯ ಎಲ್ಲ ಪ್ರಭೇದಗಳನ್ನೂ, ಮತ್ತೆ ಆ ಪ್ರಭೇದಗಳ ಎಲ್ಲ ಭೇದಗಳನ್ನೂ ಎಣಿಸಿ ಮುಗಿಸುವುದು ಯಾರಿಂದಾದೀತು ? ಆದುದರಿಂದ ನಾವು ಸೂಕ್ಷ್ಮವಾಗಿ ಕೆಲವನ್ನು ಮಾತ್ರ ಮೇಲೆ ಹೇಳಿದ್ದೇವೆ.

ವೃತ್ತಿ

ಧ್ವನಿಯ ಪ್ರಕಾರಗಳು ಅನಂತವಾಗಿರುವುದರಿಂದ ಸಹೃದಯರ ವ್ಯುತ್ಪತ್ತಿಗೋಸ್ಕರ ಅವುಗಳಲ್ಲಿ ಕೆಲವನ್ನು ಮಾತ್ರ ಹೇಳಿರುವೆವು.

ಕಾರಿಕೆ

ಇತ್ಯುಕ್ತಲಕ್ಷಣೋ ಯೋ ಧ್ವನಿರ್ವಿವೇಚ್ಯಃ ಪ್ರಯತ್ನತಃ ಸದ್ಭಿಃ ।
ಸತ್ಕಾವ್ಯಂ ಕರ್ತುಂ ವಾ ಜ್ಞಾತುಂ ವಾ ಸಮ್ಯಗಭಿಯುಕ್ತೈಃ ॥ ೪೫ ॥

ಇಲ್ಲಿಯವರೆಗೂ ಹೇಳಲಾದ ಧ್ವನಿಯ ಲಕ್ಷಣವನ್ನು ಒಳ್ಳೆಯ ಕಾವ್ಯಗಳನ್ನು ಬರೆಯುವ ಮತ್ತು ಒಳ್ಳೆಯ ಕಾವ್ಯಗಳನ್ನು ಅರಿಯುವ ಅಪೇಕ್ಷೆಯುಳ್ಳ ಮಹನೀಯರೆಲ್ಲರೂ ಪ್ರಯತ್ನಪೂರ್ವಕವಾಗಿ ಪರಾಮರ್ಶಿಸಬೇಕು.

ವೃತ್ತಿ

ಮೇಲೆ ಹೇಳಿದ ಧ್ವನಿತತ್ವವನ್ನು ಚೆನ್ನಾಗಿ ಗ್ರಹಿಸಿದ ಸತ್ಕವಿಗಳೂ ಸಹೃದಯರೂ ಕಾವ್ಯದ ವಿಷಯದಲ್ಲಿ ಹೆಚ್ಚಿನ ಪ್ರಕರ್ಷವನ್ನು ಪಡೆಯುತ್ತಾರೆ.

ಕಾರಿಕೆ

ಅಸ್ಫುಟಸ್ಫುರಿತಂ ಕಾವ್ಯತತ್ತ್ವಮೇತದ್ ಯಥೋದಿತಮ್ ।
ಅಶಕ್ನುವದ್ಭಿರ್ವ್ಯಾಕರ್ತುಂ ರೀತಯಃ ಸಂಪ್ರವರ್ತಿತಾಃ ॥ ೪೬ ॥

ಮೇಲೆ ಹೇಳಿದ ಕಾವ್ಯತತ್ತ್ವವು ಮಸಕುಮಸಕಾಗಿ ಹೊಳೆದರೂ, ಅದನ್ನು ಬಿಡಿಸಿ ವಿವರಿಸಲಾರದೆ ಹೋದ ಲಕ್ಷಣಕಾರರು 'ರೀತಿ'ಗಳನ್ನು ಪ್ರತಿಪಾದಿಸಿರುವರು.

ವೃತ್ತಿ

'ಧ್ವನಿ'ಯೆಂಬ ಹೆಸರನ್ನು ಕೊಟ್ಟು ನಾವು ನಿರ್ಣಯಿಸಿರುವ ಕಾವ್ಯತತ್ತ್ವವು ಹಿಂದಿನವರಿಗೆ ಮಸಕುಮಸಕಾಗಿ ಮಾತ್ರ ಹೊಳೆದುದರಿಂದ, ಅದನ್ನವರು ಸರಿಯಾಗಿ ಪ್ರತಿಪಾದಿಸಲಾರದೆ 'ವೈದರ್ಭೀ' 'ಗೌಡೀ' ಮತ್ತು 'ಪಾಂಚಾಲೀ' ಎಂಬ ರೀತಿಗಳನ್ನು ನಿರೂಪಿಸಿರುವರು. 'ರೀತಿ'ಯನ್ನು ಹೇಳುವ ಲಕ್ಷಣಕಾರರಿಗೆ ಯಾವ ಕಾವ್ಯತತ್ತ್ವವು ಅಸ್ಫುಟವಾಗಿ ಈಷನ್ಮಾತ್ರ ಸ್ಫುರಿಸಿದ್ದಿತೋ ಅದನ್ನೇ ಇಲ್ಲಿ ಬಹಳ ಸ್ಫುಟವಾಗಿ ತೋರಿಸಲಾಗಿದೆಯೆಂದಮೇಲೆ ಇನ್ನು ರೀತಿಲಕ್ಷಣದಿಂದ ಆಗಬೇಕಾದುದೇನೂ ಇಲ್ಲ.

ಕಾರಿಕೆ

ಶಬ್ದತತ್ತ್ವಾಶ್ರಯಾಃ ಕಾಶ್ಚಿದರ್ಥತತ್ತ್ವಯುಜೋಽಪರಾಃ ।
ವೃತ್ತಯೋಽಪಿ ಪ್ರಕಾಶಂತೇ ಜ್ಞಾತೇಽಸ್ಮಿನ್ ಕಾವ್ಯಲಕ್ಷಣೇ ॥ ೪೭ ॥

ಈ ಕಾವ್ಯಲಕ್ಷಣವನ್ನು ತಿಳಿದೊಡನೆಯೇ ಶಬ್ದತತ್ತ್ವವನ್ನಾಶ್ರಯಿಸುವ 'ವೃತ್ತಿ'ಗಳೂ ಹಾಗೆಯೇ ಅರ್ಥತತ್ತ್ವವನ್ನಾಶ್ರಯಿಸುವ ಮಿಕ್ಕ 'ವೃತ್ತಿ'ಗಳೂ ಸರಿಯಾಗಿ ತಿಳಿಯುತ್ತವೆ.

ವೃತ್ತಿ

ಈ ವ್ಯಂಗ್ಯ-ವ್ಯಂಜಕ-ಭಾವವಿವೇಚನಾತ್ಮಕವಾದ ಕಾವ್ಯಲಕ್ಷಣವನ್ನು ತಿಳಿಯುವುದರಿಂದ, ಶಬ್ದತತ್ತ್ವವನ್ನಾಶ್ರಯಿಸಿ ಬರುವ ಯಾವ ಪ್ರಸಿದ್ಧವಾದ 'ಉಪನಾಗರಿಕಾ' ಮೊದಲಾದ 'ವೃತ್ತಿ'ಗಳುಂಟೋ ಮತ್ತು ಅರ್ಥತತ್ತ್ವಕ್ಕೆ ಸಂಬಂಧಿಸಿದ 'ಕೈಶಿಕಿ'ಯೇ ಮೊದಲಾದ ಯಾವ ವೃತ್ತಿಗಳುಂಟೋ—ಅವೆಲ್ಲವೂ ಚೆನ್ನಾಗಿ ನಮ್ಮ ಅರಿವಿಗೆ ಬರುವುವು. ಈ ಕಾವ್ಯಲಕ್ಷಣವನ್ನು ತಿಳಿಯದವನಿಗೆ ಅವು ಅನುಭವಸಿದ್ಧವಾಗಲಾರವು ; ಮತ್ತು ನಾವು ಕಾಣದ ವಸ್ತುಗಳು ನಮ್ಮ ನಂಬಿಕೆಗೆ ಹೇಗೆ ಪಾತ್ರವಾಗಲಾರವೋ ಹಾಗೆಯೇ 'ವೃತ್ತಿ'ಗಳೂ ನಮ್ಮ ನಂಬಿಕೆಗೆ ಅರ್ಹಗಳೆನಿಸಲಾರವು.

ಧ್ವನಿಗೆ ಲಕ್ಷಣವನ್ನು ಯಾರೋ ಒಬ್ಬರು ಹೀಗೆಯೂ ಹೇಳಿದ್ದಾರೆ :—'ರತ್ನ ವಿಶೇಷಗಳಲ್ಲಿರುವ ಶ್ರೇಷ್ಠತಾಗುಣವು ಗೊತ್ತಾಗಬೇಕಾದರೆ ಯಾರೋ ಕೆಲವರು

ರತ್ನಪರೀಕ್ಷಕರಿಗೆ ಮಾತ್ರ. ಅದನ್ನು ಹೀಗೆಂದು ಅವರೂ ವಿವರಿಸಲಾಗದಿದ್ದರೂ, ರತ್ನದ ಸೌಂದರ್ಯವು ಮಾತ್ರ ಅವರಿಗೆ ಅನುಭವವಾಗುವುದಿಲ್ಲವೆ? ಹಾಗೆಯೇ ಕಾವ್ಯದ ಶಬ್ದ ಮತ್ತು ಅರ್ಥಗಳಲ್ಲಿಯೂ ಕೆಲವರು ವಿಮರ್ಶಕರಿಗೆ ಮಾತ್ರ ಗೋಚರವಾಗುವ, ಆದರೂ ಅನಿರ್ವಚನೀಯವಾದ, ರಮಣೀಯತೆಯು ಕಾಣುತ್ತದೆ. ಅಂತಹ ಕಾವ್ಯವನ್ನು 'ಧ್ವನಿ'ಯೆಂದು ಕರೆಯುತ್ತಾರೆ.' ಎಂದು, ಈ ಲಕ್ಷಣವು ಸರಿಯಲ್ಲವಾದಕಾರಣ ಸ್ವೀಕಾರಯೋಗ್ಯವಲ್ಲ. ಏಕೆಂದರೆ ಶಬ್ದಗಳಿಗೆ (ಶಬ್ದತಃ) ಇರುವ ವಿಶೇಷವೆಂದರೆ ಇಷ್ಟೆ: ೧. ಅಕ್ಲಿಷ್ಟತ್ವ ಮತ್ತು ೨. ಅಪ್ರಯುಕ್ತ-ಪ್ರಯೋಗ (= ಪುನರುಕ್ತಿದೋಷದ ಪರಿಹಾರ). ಶಬ್ದಗಳು ವಾಚಕಗಳೆನಿಸಿದಾಗ ಇರುವ ವಿಶೇಷವು ಇಷ್ಟು:—೧. ಪ್ರಸಾದಗುಣ ಮತ್ತು ೨. ವ್ಯಂಜಕತ್ವ. ಹಾಗೆಯೇ ಅರ್ಥಗಳಿಗಿರುವ ವಿಶೇಷಗಳಿವು: ೧. ಅರ್ಥಗಳು ಸ್ಫುಟವಾಗಿ ತೋರುವಿಕೆ ೨. ವ್ಯಂಗ್ಯಪರತ್ವ ಮತ್ತು ೩. ವ್ಯಂಗ್ಯವಿಶಿಷ್ಟತ್ವ. ಹೀಗೆ ಶಬ್ದ ಮತ್ತು ಅರ್ಥಗಳ ವಿಶೇಷವನ್ನು ನಿರ್ವಚನೆ ಮಾಡುವುದು ಸಾಧ್ಯವಷ್ಟೇ ಅಲ್ಲ; ಬೇಕಾದಷ್ಟು ಸಲ ನಿರ್ವಚನೆ ಮಾಡಿಯೂ ಆಗಿದೆ. ಈ ವಿಶೇಷಗಳಲ್ಲದೆ ಬೇರಾವುದೋ ಅನಿರ್ವಚನೀಯವಾದ ವಿಶೇಷವಿರುವುದೆನ್ನುವುದು ಅವಿವೇಕದ ಪರಮಾವಧಿಯೇ ಸರಿ. ಅಷ್ಟೇ ಅಲ್ಲದೆ, ಈ 'ಅನಾಖ್ಯೇಯತ್ವ'ವೆಂಬ ಮಾತಿಗೆ 'ಸಕಲಶಬ್ದಗಳಿಗೂ ನಿಲುಕದುದು' ಎಂಬರ್ಥವನ್ನು ಹೇಳುವುದಾದರೆ ಆ ಮಾತೇ ಅರ್ಥಹೀನವಾಗುತ್ತದೆ; ಏಕೆಂದರೆ, ಉಳಿದೆಲ್ಲ ಮಾತುಗಳನ್ನು ಬಿಟ್ಟರೂ, ಕೊನೆಗೆ ಅದಕ್ಕೆ 'ಅನಾಖ್ಯೇಯ'ವೆಂಬ ಮಾತಿನಿಂದಲೇ ನಾಮಕರಣವನ್ನು ಮಾಡಬೇಕಾಗುತ್ತದಲ್ಲವೆ?

ಪ್ರತಿವಾದಿಯು 'ಅನಾಖ್ಯೇಯತ್ವ'ವೆಂಬ ಮಾತಿಗೆ ಹೀಗೂ ಅರ್ಥವನ್ನು ಕಲ್ಪಿಸಬಹುದು:—'ಸಾಮಾನ್ಯ ಅಥವಾ ನಿರ್ವಿಕಲ್ಪಕಪ್ರತ್ಯಕ್ಷಕ್ಕೆ ಮಾತ್ರ ವಿಷಯವಾದದು; ಸವಿಕಲ್ಪಪ್ರತ್ಯಕ್ಷಕ್ಕೆ ಎಂದರೆ ಶಬ್ದಾದಿವಿಕಲ್ಪಗಳಿಗೆ ವಿಷಯವಲ್ಲದುದು' ಎಂದು. ಈ ಲಕ್ಷಣವು ಕೂಡ ರತ್ನವಿಶೇಷಗಳಿಗೆ ಅನ್ವಯಿಸಬಹುದೇ ಹೊರತು ಕಾವ್ಯವಿಶೇಷಗಳಿಗೆ ಅದೇ ರೀತಿಯಲ್ಲಿ ಅನ್ವಯಿಸಲಾರದು. ಏಕೆಂದರೆ ಕಾವ್ಯವಿಶೇಷಗಳನ್ನೆಲ್ಲ ಲಕ್ಷಣಕಾರರು ವಿವರವಾಗಿ ನಿರೂಪಿಸಿಟ್ಟಿದ್ದಾರೆ. ರತ್ನಗಳಿಗಾದರೋ ಹಾಗಿಲ್ಲ. ಅವುಗಳ ವಿಶೇಷಗಳನ್ನು ಹೀಗೆಂದು ನಿರ್ಣಯಿಸಿ ಬೆಲೆ ಕಟ್ಟುವುದಿಲ್ಲ; ಅದಕ್ಕೆ ಬದಲಾಗಿ ಅವುಗಳ ಸಾಮಾನ್ಯಜಾತಿಯು ಇಂತಹುದಿರಬೇಕೆಂದೂಹಿಸಿ ಬೆಲೆಕಟ್ಟುತ್ತಾರೆ. ಆದರೆ ಇವೆರಡಕ್ಕೂ ಒಂದಂಶದಲ್ಲಿ ಮಾತ್ರ ಸಾಮ್ಯವುಂಟು—ಕೆಲವರು ಮಾತ್ರ ಪರೀಕ್ಷಕರೇ ಅವುಗಳನ್ನು ಸರಿಯಾಗಿ ತಿಳಿಯಬಹುದು. ರತ್ನಪಡಿ ವ್ಯಾಪಾರಿಗಳು ಮಾತ್ರ ರತ್ನದ ತತ್ವವನ್ನು ತಿಳಿಯಬಲ್ಲರು;

ಸಹೃದಯರು ಮಾತ್ರ ಕಾವ್ಯಗಳ ರಸಜ್ಞರಾಗಬಲ್ಲರು. ಈ ಅಂಶದಲ್ಲಿ ಯಾರಿಗೂ ಭಿನ್ನಾಭಿಪ್ರಾಯವೇ ಇಲ್ಲ.

'ಅನಿರ್ದೇಶ್ಯತ್ವ'ವು ಸಕಲವಸ್ತುಗಳ ಲಕ್ಷಣಕ್ಕೂ ಅನ್ವಯಿಸುವುದೆಂಬುದು ಬೌದ್ಧರಲ್ಲಿ ಪ್ರಸಿದ್ಧವಾದ ಸಿದ್ಧಾಂತ. ಅದನ್ನು ಅವರ ಮತದ ಪರೀಕ್ಷೆಗೆಂದು ಹೊರಟ ನಮ್ಮ ಬೇರೆ ಗ್ರಂಥದಲ್ಲಿ[1] ನಿರೂಪಿಸುತ್ತೇವೆ. ಗ್ರಂಥಾಂತರಗಳ ಸುದ್ದಿಯು ಸ್ವಲ್ಪ ಬಂದರೂ ಸಹೃದಯರ ಮನಸ್ಸಿಗೆ ಬೇಸರವಾಗಬಹುದಾದ್ದರಿಂದ ಇಲ್ಲಿ ಅದನ್ನು ಬೆಳೆಸುವುದಿಲ್ಲ. ಬೌದ್ಧದರ್ಶನದಲ್ಲಿ ಕೂಡ 'ಪ್ರತ್ಯಕ್ಷ'ವೇ ಮೊದಲಾದವುಗಳಿಗೆ ಲಕ್ಷಣವನ್ನು ಹೇಳಿಲ್ಲವೆ? ಹಾಗೆಯೇ ಆದರೂ ನಮ್ಮ ಧ್ವನಿಯ ಲಕ್ಷಣವು ಸರಿಯೆಂದು ಹೇಳಬಹುದು. ಹೀಗೆ ಬೇರಾವ ಲಕ್ಷಣವೂ ಧ್ವನಿಗೆ ಅನ್ವಯಿಸದೆ ಇರುವುದರಿಂದ, ಅದಕ್ಕೆ ಬೇರಾವ ಲಕ್ಷಣವೂ ಮತ್ತೆಲ್ಲಿಯೂ ಕಾಣದೆ ಇರುವುದರಿಂದ, ಮತ್ತು ಅದು ಶಬ್ದಾರ್ಥಮಾತ್ರವಲ್ಲದುದರಿಂದ, ನಾವು ಹೇಳಿರುವ ಧ್ವನಿ ಲಕ್ಷಣವೇ ಸಾಧುವಾದುದು. ಇದನ್ನೇ ಕೆಳಗಿನ ಶ್ಲೋಕವು ಸಂಗ್ರಹವಾಗಿ ಹೇಳುತ್ತದೆ:—

ಸಂಗ್ರಹಶ್ಲೋಕ

ಅನಾಖ್ಯೇಯಾಂಶಭಾಸಿತ್ವಂ ನಿರ್ವಾಚ್ಯಾರ್ಥತಯಾ ಧ್ವನೇಃ ।
ನ ಲಕ್ಷಣಂ, ಲಕ್ಷಣಂ ತು ಸಾಧೀಯೋಽಸ್ಯ ಯಥೋದಿತಮ್ ॥

'ಅನಿರ್ವಚನೀಯವಾದ ಸ್ವರೂಪದಿಂದ ವೇದ್ಯವಾಗುತ್ತದೆ' ಎಂಬುದು ಧ್ವನಿಗೆ ಸರಿಯಾದ ಲಕ್ಷಣವಲ್ಲ; ಏಕೆಂದರೆ ಧ್ವನಿಯ ಸ್ವರೂಪವನ್ನು ನಿರ್ವಚನಮಾಡುವುದು ಸಾಧ್ಯ. ಮೊದಲಿನಿಂದಲೂ ನಾವು ಹೇಳಿರುವ ಲಕ್ಷಣವೇ ಧ್ವನಿಗೆ ಯೋಗ್ಯವಾದ ಲಕ್ಷಣ.

ಇಲ್ಲಿಗೆ ಶ್ರೀ ರಾಜಾನಕ-ಆನಂದವರ್ಧನಾಚಾರ್ಯ-ವಿರಚಿತವಾದ
'ಧ್ವನ್ಯಾಲೋಕ'ದಲ್ಲಿ ಮೂರನೆಯ ಉದ್ಯೋತದ ಕನ್ನಡ ಅನುವಾದವು ಮುಗಿದುದು.

---

[1] ಈ ಗ್ರಂಥದ ಹೆಸರು 'ಪ್ರಮಾಣವಿನಿಶ್ಚಯಟೀಕಾವಿವೃತಿ' ಅಥವಾ 'ಧರ್ಮೋತ್ತಮಾ' ಎಂದು ಅಭಿನವಗುಪ್ತಾಚಾರ್ಯರು 'ಲೋಚನ' ವೆಂಬ ತಮ್ಮ ಧ್ವನ್ಯಾಲೋಕದ ವ್ಯಾಖ್ಯಾನದಲ್ಲಿ ಬರೆದಿದ್ದಾರೆ. ಆದರೆ ದುರ್ದೈವದಿಂದ ಈ ಗ್ರಂಥವು ಈಗ ಉಪಲಬ್ಧವಿಲ್ಲ. 'ಪ್ರಮಾಣವಿನಿಶ್ಚಯ' ವೆಂಬ ಮೂಲ ಗ್ರಂಥವನ್ನು ಬರೆದವನು ಧರ್ಮಕೀರ್ತಿ (ಕಾಲ: ಸು. ಕ್ರಿ. ಶ. ೭ ನೆಯ ಶತಮಾನ). ಇವನ ಕೆಲವು ಪದ್ಯಗಳನ್ನು ಹಿಂದೆ ಕೊಟ್ಟ ಉದಾಹರಣೆಗಳಲ್ಲಿ ನೋಡಿ; ಪುಟ, ೧೫.

ನಾಲ್ಕನೆಯ ಉದ್ಯೋತ

ಭಿನ್ನಾಭಿಪ್ರಾಯಗಳನ್ನು ಖಂಡಿಸುವುದಕ್ಕೋಸ್ಕರ ಇಲ್ಲಿಯವರೆಗೂ 'ಧ್ವನಿ'ಯ ಸ್ವರೂಪವನ್ನು ವಿಸ್ತಾರವಾಗಿ ಪ್ರತಿಪಾದಿಸಲಾಯಿತು. ಈ ಪ್ರತಿಪಾದನೆಯಿಂದ ಬೇರೆ ಪ್ರಯೋಜನವೂ ಉಂಟೆಂದು ಈಗ ಹೇಳಲಾಗುತ್ತದೆ:—

ಕಾರಿಕೆ

ಧ್ವನೇರ್ಯಃ ಸಗುಣೀಭೂತವ್ಯಂಗ್ಯಸ್ಯಾಧ್ವಾ ಪ್ರದರ್ಶಿತಃ |
ಅನೇನಾನಂತ್ಯಮಾಯಾತಿ ಕವೀನಾಂ ಪ್ರತಿಭಾಗುಣಃ || ೧ ||

'ಧ್ವನಿ' ಮತ್ತು 'ಗುಣೀಭೂತವ್ಯಂಗ್ಯ,' ಇವುಗಳ ಸ್ವರೂಪವನ್ನು ಹಿಂದೆ ತೋರಿಸಲಾಯಿತಷ್ಟೆ! ಅದರ ಮೂಲಕ ಕವಿಗಳ ಪ್ರತಿಭಾಗುಣವು ಆನಂತ್ಯವನ್ನು ಪಡೆಯುತ್ತದೆ.

ವೃತ್ತಿ

ಇದುವರೆಗೆ ತೋರಿಸಲಾದ 'ಧ್ವನಿ' ಮತ್ತು 'ಗುಣೀಭೂತವ್ಯಂಗ್ಯ,' ಇವುಗಳ ಪ್ರಕ್ರಿಯೆಗೆ ಇನ್ನೂ ಒಂದು ಫಲವಿದೆ. ಅದೇ ಕವಿಪ್ರತಿಭೆಯ ಆನಂತ್ಯ. ಹೇಗೆಂದರೆ—

ಕಾರಿಕೆ

ಅತೋ ಹ್ಯನ್ಯತಮೇನಾಪಿ ಪ್ರಕಾರೇಣ ವಿಭೂಷಿತಾ |
ವಾಣೀ ನವತ್ವಮಾಯಾತಿ ಪೂರ್ವಾರ್ಥಾನ್ವಯವತ್ಯಪಿ || ೨ ||

ಆದುದರಿಂದಲೇ ಧ್ವನಿಯ ಯಾವುದಾದರೂ ಒಂದು ಪ್ರಕಾರದಿಂದ ಅಲಂಕೃತವಾದರೂ ಸಾಕು, ಪೂರ್ವಪರಿಚಿತವಾದ ವಾಣಿಯೂ ನೂತನತ್ವವನ್ನು ಪಡೆದುಬಿಡುತ್ತದೆ.

ವೃತ್ತಿ

ಆದುದರಿಂದಲೇ ಹಿಂದೆ ಹೇಳಲಾಗಿರುವ 'ಧ್ವನಿ'ಯ ಯಾವುದೋ ಒಂದೇ ಒಂದು ಪ್ರಭೇದದ ಸಂಪರ್ಕವೊದಗಿದಾಗಲೂ, ಪುರಾತನ ಕವಿಗಳು ಹೇಳಿದ ಅಭಿಪ್ರಾಯಗಳನ್ನೇ ಪ್ರತಿಬಿಂಬಿಸುವ ಮಾತೂ ಕೂಡ ನವತ್ವವನ್ನು ಪಡೆಯುತ್ತದೆ. ಉದಾಹರಣೆ:

ಮೊದಲು ಅವಿವಕ್ಷಿತವಾಚ್ಯ-ಧ್ವನಿಯ ಎರಡು ಪ್ರಕಾರಗಳ ಸಂಪರ್ಕದಿಂದ ಪ್ರಾಚೀನಾರ್ಥಗಳಿಗೂ ನೂತನತ್ವವು ಬರುವುದನ್ನು ಉದಾಹರಿಸಬಹುದು. ಇದು ತಿರಸ್ಕೃತ-ವಾಚ್ಯಧ್ವನಿಯಿಂದ ಶೋಭಿಸುವ ನೂತನ ಶ್ಲೋಕ :—

ಸ್ಮಿತಂ ಕಿಂಚಿನ್ಮುಗ್ಧಂ ತರಲಮಧುರೋ ದೃಷ್ಟಿವಿಭವಃ
ಪರಿಸ್ಪನ್ದೋ ವಾಚಾಮಭಿನವವಿಲಾಸೋಕ್ತಿಸರಸಃ |
ಗತಾನಾಮಾರಂಭಃ ಕಿಸಲಯಿತಲೀಲಾಪರಿಕರಃ
ಸ್ಪೃಶನ್ತ್ಯಾಸ್ತಾರುಣ್ಯಂ ಕಿಮಿವ ಹಿ ನ ರಮ್ಯಂ ಮೃಗದೃಶಃ ||

ದರಹಾಸಂ ಮಿಗೆ ಮುಗ್ಧಮಕ್ಷಿವಿಭವಂ ಚಾಂಚಲ್ಯಮಾಧುರ್ಯಸಂ-
ದರಮಾ ವಾಕ್ಪ್ರಸರಂ ನವೋದ್ಗತವಿಲಾಸೋಕ್ತಂಗಳಿಂ ಬಂಧುರಂ |
ವರಲೀಲಾಗಮನಂ ವಲಂ ಕಿಸಲಯಕ್ರೀಡಾಸಮಾಕರ್ಷಕಂ
ಹರಿಣೀನೇತ್ರೆಗೆ ರಮ್ಯಮಲ್ಲದುದದೇಂ ತಾರುಣ್ಯಮಂ ಮುಟ್ಟಿರಲ್ ||

ಇದೇ ಅಭಿಪ್ರಾಯವುಳ್ಳ ಪ್ರಾಚೀನ ಶ್ಲೋಕವಿದು :—

ಸವಿಭ್ರಮಸ್ಮಿತೋದ್ಭೇದಾ ಲೋಲಾಕ್ಷ್ಯಃ ಪ್ರಸ್ಖಲದ್ಗಿರಃ |
ನಿತಂಬಾಲಸಗಾಮಿನ್ಯಃ ಕಾಮಿನ್ಯಃ ಕಸ್ಯ ನ ಪ್ರಿಯಾಃ ||

ಸುಲಲಿತಮಂದಸ್ಮಿತೆಯರ್
ಸುಲೋಲಲೋಚನೆಯರಂತೆ ಚಟುಲಾಕ್ಷರೆಯರ್ |
ಚಲನಾಲಸೆಯರ್ ಪೊರವಾ-
ರ್ಗಳಿನೀ ಕಾಮಿನಿಯರಾರ ಸೋಲಿಸದಿರ್ಪರ್ ||

ಇದು ಅರ್ಥಾಂತರಸಂಕ್ರಮಿತವಾಚ್ಯಧ್ವನಿಯಿಂದ ಶೋಭಿಸುವ ನೂತನ ಶ್ಲೋಕ :—

ಯಃ ಪ್ರಥಮಃ ಪ್ರಥಮಃ ಸತು ತಥಾಹಿ ಹತಹಸ್ತೀ ಬಹಲಪಲಲಾಶೀ |
ಶ್ವಾಪದಗಣೇಷು ಸಿಂಹಃ ಸಿಂಹಃ ಕೇನಾಧರೀಕ್ರಿಯತೇ ||

ಮೊದಲನೆಯಂ ಮೊದಲನೆಯನೆ
ಮದೇಭಮಾಂಸಾಶನಕ್ಕೆ ಶ್ವಾಪದಗಣದೊಳ್ |
ಮುದದಿಂ ಪಾಯ್ವುದು ತಾನೊಂ-
ದದು ಸಿಂಗಂ ಸಿಂಗಮಾರ ಕೈಯೊಳ್ ಸೋಲ್ಗುಂ ||

ಇದು ಮೊದಲಿನಿಂದಲೂ ಇರುವ ಸಮಾನಾರ್ಥಕವಾದ ಶ್ಲೋಕ :—

ಸ್ವತೇಜಃಕ್ರೀತಮಹಿಮಾ ಕೇನಾನ್ಯೇನಾತಿಶಯ್ಯತೇ |
ಮಹದ್ಭಿರಪಿ ಮಾತಂಗೈಃ ಸಿಂಹಃ ಕೇನಾಭಿಭೂಯತೇ ||

ನಿಜತೇಜಲಬ್ಧಮಹಿಮಂ
ವಿಜಿತಂ ತಾನಪ್ಪನೆಂತು ಪರರಿಂ ಧರೆಯೊಳ್ |
ವಿಜಯಿಗಳಪ್ಪವೆ ಸುಮಹಾ-
ಗಜಗಳುಮಾ ಸಿಂಗದೊಡನೆ ಕಾದುವ ಪದದೊಳ್ ||

ಹೀಗೆಯೇ ವಿವಕ್ಷಿತಾನ್ಯಪರವಾಚ್ಯ-ಧ್ವನಿಯ ಪ್ರಕಾರಗಳ ಸಮಾವೇಶದಿಂದಲೂ ವಾಣಿಗೆ ನವತ್ವವು ಬರುತ್ತದೆ. ಇದು ಈಚಿನ ಶ್ಲೋಕ:

ನಿದ್ರಾಕೈತವಿನಃ ಪ್ರಿಯಸ್ಯ ವದನೇ ವಿನ್ಯಸ್ಯ ವಕ್ತ್ರಂ ವಧೂಃ
ಬೋಧತ್ರಾಸನಿರುದ್ಧಚುಂಬನರಸಾಪ್ಯಾಭೋಗಲೋಲಂ ಸ್ಥಿತಾ |
ವೈಲಕ್ಷ್ಯಾದ್ವಿಮುಖೀಭವೇದಿತಿ ಪುನಸ್ತಸ್ಯಾಪ್ಯನಾರಂಭಿಣಃ
ಸಾಕಾಂಕ್ಷಪ್ರತಿಪತ್ತಿ ನಾಮ ಹೃದಯಂ ಯಾತಂ ತು ಪಾರಂ ರತೇಃ ||

ನಿದ್ರಾಕೈತವಯುಕ್ತ ಕಾಂತಮುಖದೊಳ್ ತಾನಿಟ್ಟು ವಕ್ತ್ರಾಂತಮಂ
ನಿದ್ರಾಭಂಗಕೆ ನಾಣ್ಚಿ ಚುಂಬಿಸದೆಯುಂ ಮತ್ತಲ್ಲಿಯೇ ಲೋಲೆಯಾ- |
ಗಿರ್ದಾ ಕಾಂತೆಯನಂಜಿಸಲ್ ತಗದೆನುತ್ತುಂ ಕೆಮ್ಮನಿರ್ಪಾತನಾ
ಹೃದ್ರಂಗಾಂತದೊಳಾದುದಂದು ಪರಮಂ ಸೌಖ್ಯಂ ತದಾಕಾಂಕ್ಷೆಯಿಂ ||

ಇದು ಮೊದಲಿನಿಂದಲೂ ಇರುವ ಶ್ಲೋಕ:

ಶೂನ್ಯಂ ವಾಸಗೃಹಂ ವಿಲೋಕ್ಯ ಶಯನಾದುತ್ಥಾಯ ಕಿಂಚಿಚ್ಛನೈ—
ರ್ನಿದ್ರಾವ್ಯಾಜಮುಪಾಗತಸ್ಯ ಸುಚಿರಂ ನಿರ್ವರ್ಣ್ಯ ಪತ್ಯುರ್ಮುಖಮ್ |
ವಿಸ್ರಬ್ಧಂ ಪರಿಚುಂಬ್ಯ ಜಾತಪುಲಕಾಮಾಲೋಕ್ಯ ಗಂಡಸ್ಥಲೀಂ
ಲಜ್ಜಾನಮ್ರಮುಖೀ ಪ್ರಿಯೇಣ ಹಸತಾ ಬಾಲಾ ಚಿರಂ ಚುಂಬಿತಾ ||

ಸಖಿಯರ್ ಪೋದುದ ಕಂಡು ಪಾಸ ದೆಸೆಯಿಂ ಮೇಲೇಳುತೊಯ್ಯೊಯ್ಯನಾ
ಸುಖನಿದ್ರಾಗತನೆಂಬವೋಲ್ ಮಲಗಿದಾ ಪ್ರಾಣೇಶನಾ ವಕ್ತ್ರಮಂ |
ಸುಖದಿಂ ನೋಡುತೆ ಚುಂಬಿಸಲ್ ಕದಪಿನಾ ರೋಮಾಂಚಮಂ ಕಾಣುತುಂ
ಮುಖದೊಳ್ ನಾಣೊಗೆತಂದ ಬಾಲೆಯನವಂ ಕಾಂತಂ ಚಿರಂ ಚುಂಬಿಪಂ ||

ಹೀಗೆಯೇ 'ತರಂಗಭ್ರೂಭಂಗಾ . . .'[1] ಎಂಬ ಶ್ಲೋಕದಲ್ಲಿ 'ನಾನಾಭಂಗಿಭ್ರಮದ್ಭ್ರೂ:'[2] . . . ಮುಂತಾದ ಹಿಂದಿನ ಶ್ಲೋಕಗಳಲ್ಲಿಲ್ಲದಿರುವ ಸೊಗಸಿದೆ.

[1] ಪುಟ ೪೮ ನ್ನು ನೋಡಿ, ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೨.
[2] ಈ ಶ್ಲೋಕವು ಪೂರ್ಣವಾಗಿ ಸಿಕ್ಕಿಲ್ಲ.

ಕಾರಿಕೆ

ಯುಕ್ತ್ಯಾನಯಾನುಸರ್ತವ್ಯೋ ರಸಾದಿರ್ಬಹುವಿಸ್ತರಃ ।
ಮಿತೋಽಪ್ಯನಂತತಾಂ ಪ್ರಾಪ್ತಃ ಕಾವ್ಯಮಾರ್ಗೋ ಯದಾಶ್ರಯಾತ್ ॥ ೩॥

ಬಹು ವಿಸ್ತಾರವಾದ ರಸಾದಿಗಳಿಗೂ ಈ ಯುಕ್ತಿಯನ್ನೇ ಅನ್ವಯಿಸಿಕೊಳ್ಳ ಬೇಕು. ಪರಿಮಿತವಾದ ಕಾವ್ಯಮಾರ್ಗವೂ ಕೂಡ ಅನಂತವೆನಿಸಿರುವುದಕ್ಕೆ ರಸಾದಿ ಗಳ ಆಶ್ರಯವೇ ಕಾರಣ.

ವೃತ್ತಿ

ಪ್ರತ್ಯೇಕವಾಗಿ ಒಂದೊಂದರ ವಿಭಾವ, ಅನುಭಾವ, ಮುಂತಾದ ಪ್ರಭೇದಗಳ ನ್ನೆಲ್ಲ ಲೆಕ್ಕಮಾಡುತ್ತಾ ಹೊರಟರೆ ರಸ, ಭಾವ, ರಸಾಭಾಸ, ಭಾವಾಭಾಸ, ರಸಪ್ರಶ ಮನ, ಭಾವಪ್ರಶಮನ—ಇವುಗಳ ವ್ಯಾಪ್ತಿಯು ಅತ್ಯಂತ ವಿಸ್ತಾರವಾಗುವುದೆಂದು ಹಿಂದೆಯೇ ಹೇಳಿದೆ.[1] ಅದೆಲ್ಲಕ್ಕೂ ಮೇಲೆ ಹೇಳಿದ ಯುಕ್ತಿಯನ್ನು ಅನ್ವಯಿಸಿ ಕೊಳ್ಳಬೇಕು. ಸಾವಿರಗಟ್ಟಲೆ, ಅಲ್ಲ, ಅಸಂಖ್ಯ ಪುರಾತನ ಕವಿಗಳು ನಾನಾ ರೀತಿ ಯಿಂದಲೂ ಕಾವ್ಯಮಾರ್ಗವನ್ನು ಸವೆಸಿರುವ ಕಾರಣ, ಅದು ಈಗ ಪರಿಮಿತವಾಗಿರ ಬೇಕಾಗಿದ್ದರೂ ಹಾಗಿರದೆ ಎಂದಿನಂತೆ ಅನಂತವಾಗಿಯೇ ಉಳಿದಿರುವುದ್ಕೂ ಈ ರಸಾದಿಗಳ ಆಶ್ರಯವೇ ಕಾರಣ. ರಸಭಾವಾದಿಗಳಿಗೆ ಬೇರೆ ಬೇರೆ ವಿಭಾವ, ಅನು ಭಾವ, ವ್ಯಭಿಚಾರಿಭಾವಗಳ ಸಂಪರ್ಕದಿಂದ ನಿಜವಾಗಿಯೂ ಅಪರಿಮಿತತ್ವವುಂಟು. ಇವುಗಳಲ್ಲಿ ಒಂದೊಂದು ಪ್ರಭೇದವನ್ನು ದೃಷ್ಟಿಯಲ್ಲಿಟ್ಟು ಲೋಕವೃತ್ತವನ್ನು ಸುಕವಿಗಳು ವರ್ಣಿಸಿದರೂ ಅವರ ಇಚ್ಛಾನುಸಾರವಾಗಿ ಲೋಕದಲ್ಲೊಂದು ರೀತಿ ಯಲ್ಲಿರುವುದು ಕಾವ್ಯದಲ್ಲಿ ಬೇರೊಂದು ರೀತಿಯಾಗಿ ಮಾರ್ಪಡುತ್ತದೆ. 'ಚಿತ್ರ'ವನ್ನು ವಿಚಾರಮಾಡುವಾಗ ಇದನ್ನು ಹೇಳಿಯಾಗಿದೆ. ಇದನ್ನೇ ಕುರಿತು ಮಹಾಕವಿ ಯೊಬ್ಬನು ಗಾಥೆಯನ್ನೂ ಬರೆದಿರುವನು :—

ಅತಹಹ್ಮಿಏ ವಿ ತಹಸಂಠಿಏ ವ್ವ ಹಿಅಅಮ್ಮಿ ಜಾ ಣಿವೇಸೇಇ ।
ಅತ್ಥವಿಸೇಸೇ ಸಾ ಜಅಇ ವಿಕಡಕಇಗೋಅರಾ ವಾಣೀ ॥

ಆ ಪರಿ ತಾನಿಲ್ಲದಿರೆಯು-
ಮಾಪರಿಯಿರ್ಪಂತೆ ವಸ್ತುಜಾತಮನೆಲ್ಲಂ ।
ಸ್ಥಾಪಿಸಿ ಹೃದಯವ ಸೆಳೆವಾ-
ಲಾಪಂ ವಿಕಟಕವಿಸಿದ್ಧಮೆಸೆವುದು ಧರೆಯೊಳ್ ॥

---

[1] ಎರಡನೆಯ ಉದ್ದ್ಯೋತದ ೧೨ ನೆ ಕಾರಿಕೆಯನ್ನು ನೋಡಿ.

ಹೀಗೆ, ರಸಭಾವಾದಿಗಳ ಆಶ್ರಯದಿಂದ ಕಾವ್ಯಾರ್ಥಗಳಿಗೆ ಆನಂತ್ಯವು ಬರುವು ದೆಂಬುದನ್ನು ಚೆನ್ನಾಗಿ ಪ್ರತಿಪಾದಿಸಿದಂತಾಯಿತು. ಈಗ ಅದನ್ನೇ ದೃಷ್ಟಾಂತದ ಮೂಲಕ ಮತ್ತಷ್ಟು ಸ್ಪಷ್ಟಗೊಳಿಸಲು ಈ ಕಾರಿಕೆಯನ್ನು ಹೇಳಿದೆ :—

ಕಾರಿಕೆ

ದೃಷ್ಟಪೂರ್ವಾ ಅಪಿ ಹ್ಯರ್ಥಾಃ ಕಾವ್ಯೇ ರಸಪರಿಗ್ರಹಾತ್ ।
ಸರ್ವೇ ನವಾ ಇವಾಭಾಂತಿ ಮಧುಮಾಸ ಇವ ದ್ರುಮಾಃ ॥ ೪ ॥

ಪೂರ್ವಪರಿಚಿತವಾದ ಅರ್ಥಗಳೇ ಆದರೂ ರಸದ ಸಂಪರ್ಕ ಬಂದಾಗ ವಸಂತ ಮಾಸದಲ್ಲಿ ಕಂಗೊಳಿಸುವ ಮರಗಳಂತೆ ಎಲ್ಲವೂ ಹೊಸದಾಗಿಯೇ ಕಾಣುತ್ತವೆ.

(ಕೆಲವು ಉದಾಹರಣೆಗಳನ್ನು ನೋಡಬಹುದು :—)

'ಧರಣೀಧಾರಣಾಯಾಧುನಾ ತ್ವಂ ಶೇಷಃ . . .'[1] ಇತ್ಯಾದಿ ಪ್ರಯೋಗಗಳಲ್ಲಿ

ಶೇಷೋ ಹಿಮಗಿರಿಸ್ತ್ವಂ ಚ ಮಹಾಂತೋ ಗುರವಃ ಸ್ಥಿರಾಃ ।
ಯದಲಂಘಿತಮರ್ಯಾದಾಶ್ಚಲಂತೀಂ ಬಿಭ್ರತೇ ಭುವಮ್ ॥

ಮೇರೆಯ ಮೀರದೆ ಚಲಿಸುವ
ಧಾರಿಣಿಯಂ ಪೊತ್ತುಪೊರೆವ ಕಾರಣದಿಂದಂ ।
ಗೌರವ ಮಹಿಮಾ ಸ್ಥೈರ್ಯಾ—
ಧಾರರ್ ಶೇಷಂ ಹಿಮಾಚಲಂ ನೀನುಂ ದಲ್ ॥

ಎಂದಿವೇ ಮುಂತಾದ ಪ್ರಾಚೀನ ಶ್ಲೋಕಗಳಲ್ಲಿಲ್ಲದ ಹೊಸ ಸೌಂದರ್ಯವು ಬಂದಿರುವುದಕ್ಕೆ ವಿವಕ್ಷಿತಾನ್ಯಪರವಾಚ್ಯಧ್ವನಿಯು ಶಬ್ದಶಕ್ತ್ಯುದ್ಭವ-ಅನುರಣನ ರೂಪ-ವ್ಯಂಗ್ಯವೆಂಬ ಪ್ರಕಾರವನ್ನು ಆಶ್ರಯಿಸಿರುವುದೇ ಕಾರಣ. ಅದೇ ವಿವಕ್ಷಿ ತಾನ್ಯಪರವಾಚ್ಯವು ಅರ್ಥಶಕ್ತ್ಯುದ್ಭವ-ಅನುರಣನರೂಪ-ವ್ಯಂಗ್ಯವನ್ನು ಆಶ್ರಯಿಸಿ ದಾಗ ಬರುವ ಹೊಸ ಸೌಂದರ್ಯಕ್ಕೆ 'ಏವಂ ವಾದಿನಿ ದೇವರ್ಷೌ. . .'[2] ಎಂಬ ಶ್ಲೋಕವೇ ಉದಾಹರಣೆ. ಈ ಹೊಸ ಸೌಂದರ್ಯವಿಲ್ಲದ, ಆದರೆ ಅದೇ ಅಭಿಪ್ರಾಯ ಬೋಧಕವಾದ, ಬೇರೆ ಶ್ಲೋಕವು ಇದು :—

ಕೃತೇ ವರಕಥಾಲಾಪೇ ಕುಮಾರ್ಯಃ ಪುಲಕೋದ್ಗಮೈಃ ।
ಸೂಚಯನ್ತಿ ಸ್ಪೃಹಾಮನ್ತರ್ಲಜ್ಜಯಾವನತಾನನಾಃ ॥

---

[1] ಪುಟ ೩೮ ನ್ನು ನೋಡಿ, ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೩.

[2] ಪುಟ ೧೮ ನ್ನು ನೋಡಿ, ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೩.

ವರನ ವಿಚಾರದ ಮಾತಂ
ಪಿರಿಯರ್ ಪೇಳ್ವಾಗಲಾವಗಂ ಕನ್ನಿಕೆಯರ್ |
ಗುರುಲಜ್ಜಾನತವದನೆಯ-
ರುರೆ ಸೂಚಿಪರಲ್ತೆ ತಮ್ಮ ಮನದಿಂಗಿತಮಂ ||

ಹಾಗೆಯೇ ಅರ್ಥಶಕ್ತ್ಯುದ್ಭವ-ಅನುರಣನರೂಪ-ವ್ಯಂಗ್ಯದ ಶರೀರವು ಕವಿ ಪ್ರೌಢೋಕ್ತಿಯಿಂದ ನಿರ್ಮಿತವಾದಾಗ ಬರುವ ಹೊಸ ಚೆಲುವಿಗೆ ಉದಾಹರಣೆ :— ' ಸಜ್ಜೇಇ ಸುರಹಿಮಾಸೋ . . .'[1] ಎಂಬ ಶ್ಲೋಕ. ಈ ಹೊಸ ಚೆಲುವಿಲ್ಲದ ಅದೇ ಅರ್ಥದ ಶ್ಲೋಕವು ಕೆಳಗಿನದು :—

ಸುರಭಿಸಮಯೇ ಪ್ರವೃತ್ತೇ ಸಹಸಾ ಪ್ರಾದುರ್ಭವನ್ತಿ ರಮಣೀಯಾಃ |
ರಾಗವತಾಮುತ್ಕಲಿಕಾಃ ಸಹೈವ ಸಹಕಾರಕಲಿಕಾಭಿಃ ||

ಬರಲೊಡನೆ ಸುರಭಿಸಮಯಂ
ತುರಿತದಿನೈತರ್ಪುವಲ್ತೆ ದಾಂಗುಡಿಗಳ್ ಮಾ |
ಮರದೊಳ್ ಮೇಣೊಡನೆಯೆ ಸುರು-
ಚಿರಮೆನಿಪುತ್ಕಲಿಕೆಗಳ್ ವಿಲಾಸಿಯ ಮನದೊಳ್ ||

ಇದೇ ರೀತಿ ಅರ್ಥಶಕ್ತ್ಯುದ್ಭವ-ಅನುರಣನರೂಪ-ವ್ಯಂಗ್ಯದ ಶರೀರವು ಕವಿನಿಬದ್ಧಪ್ರೌಢೋಕ್ತಿಯಿಂದ ನಿರ್ಮಿತವಾದಾಗ ಬರುವ ಅಪೂರ್ವ ರಮಣೀಯತೆಗೆ ಉದಾಹರಣೆ :—' ವಾಣಿಅಅ ಹತ್ಥಿದಂತಾ . . .'[2] ಇತ್ಯಾದಿ ಪದ್ಯ. ಇದೇ ಅರ್ಥದ ಬೇರೆ ಪದ್ಯವು ಕೆಳಗಿನದು :—

ಕರಿಣೀವೇಹವ್ವಅರೋ ಮಹ ಪುತ್ತೋ ಎಕ್ಕಕಾಂಡವಿಣಿವಾಈ |
ಹಅಸೊಣ್ಹಾಏ ತಹ ಕಹೋ ಜಹ ಕಂಡಕರಂಡಅಂ ವಹಇ ||

ಸರಳೊಂದನೆ ಬಿಡುತದರಿಂ
ಕರಿಣೀವೈಧವ್ಯಕಾರಿಯಾದೆನ್ನ ಮಗಂ |
ದುರುಳೆಯಿನೀ ಸೊಸೆಯಿಂದಂ
ಸರಳ್ಗಳ ಸಂಪುಟವನಿಂದು ಪೊರುವಂತಾದಂ ||

ಹೀಗೆ ಧ್ವನಿಯು ಬೇರೆ ಬೇರೆ ವ್ಯಂಗ್ಯ-ಭೇದಗಳನ್ನು ಆಶ್ರಯಿಸುವುದರಿಂದ ಕಾವ್ಯಾರ್ಥದಲ್ಲಿ ನವತ್ವವು ಬರುವಂತೆಯೇ ಅದು ಬೇರೆ ಬೇರೆ ವ್ಯಂಜಕಭೇದಗಳ

---

[1] ಪುಟ ೨೧-೨೨ ನ್ನು ನೋಡಿ, ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೩.

[2] ಪುಟ ೪೯ ನ್ನು ನೋಡಿ, ಪ್ರಬುದ್ಧ ಕರ್ಣಾಟಕ, ಸಂಪುಟ ೩೨, ಸಂಚಿಕೆ ೩.

ನ್ನಾಶ್ರಯಿಸುವುದರಿಂದಲೂ ಬರುತ್ತದೆ. ಗ್ರಂಥವು ಅತಿವಿಸ್ತಾರವಾಗಿ ಬೆಳೆದೀತೆಂಬ ಭಯದಿಂದ ಅದನ್ನಿಲ್ಲಿ ಬರೆಯುವುದಿಲ್ಲ. ಸಹೃದಯರು ತಾವೇ ಊಹಿಸಿಕೊಳ್ಳಬೇಕು. ಎಷ್ಟೋಸಲ ಮತ್ತೆ ಮತ್ತೆ ಹೇಳಿಯಾಗಿದ್ದರೂ ಬಹಳ ಸಾರವಾದ ಅಂಶವಾದುದರಿಂದ, ಇದನ್ನು ಮತ್ತೊಮ್ಮೆ ಹೇಳಲಾಗುತ್ತದೆ :—

ಕಾರಿಕೆ

ವ್ಯಂಗ್ಯವ್ಯಂಜಕಭಾವೇಽಸ್ಮಿನ್ ವಿವಿಧೇ ಸಂಭವತ್ಯಪಿ ।
ರಸಾದಿಮಯ ಏಕಸ್ಮಿನ್ ಕವಿಃ ಸ್ಯಾದವಧಾನವಾನ್ ॥ ೫ ॥

ವ್ಯಂಗ್ಯ-ವ್ಯಂಜಕಭಾವವು ಬಗೆಬಗೆಯಾಗಿದ್ದರೂ ರಸಾದಿರೂಪವಾದ ಒಂದರಲ್ಲಿ ಮಾತ್ರ ಕವಿಯು ಗಮನ ಉಳ್ಳವನಾಗಿರಬೇಕು.

ವೃತ್ತಿ

ಕಾವ್ಯಾರ್ಥದ ಆನಂತ್ಯಕ್ಕೆ ಕಾರಣವಾದ ವ್ಯಂಗ್ಯ-ವ್ಯಂಜಕಭಾವವು ಎಷ್ಟೋ ಬಗೆಗಳಲ್ಲಿರಬಹುದು. ಆದರೂ ಅಪೂರ್ವರಮಣೀಯತೆಯನ್ನು ತನ್ನ ಮಾತಿಗೆ ಸಾಧಿಸಲೆಳಸುವ ಕವಿಯು ರಸಾದಿರೂಪವಾದ ವ್ಯಂಗ್ಯ-ವ್ಯಂಜಕಭಾವವೊಂದರಲ್ಲಿ ಮಾತ್ರ ಯತ್ನಪೂರ್ವಕವಾದ ಗಮನವನ್ನಿಡಬೇಕು. ವ್ಯಂಗ್ಯಗಳಾದ ರಸ, ಭಾವ, ರಸಾಭಾಸ, ಭಾವಾಭಾಸಗಳಲ್ಲಿಯೂ ಅವುಗಳಿಗೆ ಈಗಾಗಲೇ ಹೇಳಿರುವಂತೆ ವ್ಯಂಜಕಗಳಾದ ವರ್ಣ, ಪದ, ವಾಕ್ಯ, ರಚನಾ, ಪ್ರಬಂಧಗಳಲ್ಲಿಯೂ ಅವಹಿತಮನಸ್ಕನಾದ ಕವಿಗೆ ತನ್ನ ಕಾವ್ಯವೆಲ್ಲವೂ ಅಪೂರ್ವಸೌಂದರ್ಯಪೂರ್ಣವಾಗಿಯೇ ಪರಿಣಮಿಸುತ್ತದೆ. ಉದಾಹರಣೆಗೆ **ರಾಮಾಯಣ, ಮಹಾಭಾರತ,** ಮುಂತಾದುವುಗಳಲ್ಲಿ ಯುದ್ಧವೇ ಮೊದಲಾದ ಪ್ರಸಂಗಗಳು ಮತ್ತೆ ಮತ್ತೆ ಎಷ್ಟುಸಲ ವರ್ಣಿತವಾದರೂ ಅವುಗಳೆಲ್ಲ ಹೊಸದಾಗಿಯೇ ಕಾಣುತ್ತಿರುತ್ತವೆ. ಪ್ರಬಂಧಕ್ಕೆಲ್ಲ ಒಂದೇ ಪ್ರಧಾನರಸವನ್ನು ತರುವುದರಿಂದ ಅತಿಶಯವಾದ ಸಾರ್ಥಕತೆಯಂತೆ ಸೌಂದರ್ಯಾತಿಶಯವೂ ಬರುತ್ತದೆ. ಇದಕ್ಕೆ ಉದಾಹರಣೆಯಾವುದೆಂದರೆ, ರಾಮಾಯಣವೆಂದು ಬೇಕಾದರೂ ಹೇಳಬಹುದು, ಮಹಾಭಾರತವೆಂದು ಬೇಕಾದರೂ ಹೇಳಬಹುದು. ರಾಮಾಯಣದಲ್ಲಿ ಕರುಣರಸವು ಪ್ರಧಾನವೆಂಬುದನ್ನು ಆದಿಕವಿಯು 'ಶೋಕಃ ಶ್ಲೋಕತ್ವಮಾಗತಃ' ಎನ್ನುವಾಗ ತನ್ನ ಬಾಯಿಂದಲೇ ಹೇಳಿರುವನು. ಅಷ್ಟೇ ಅಲ್ಲದೆ ತನ್ನ ಪ್ರಬಂಧವನ್ನು ಸೀತೆಯ ಕೊನೆಯ ವಿಯೋಗದವರೆಗೆ ಮಾತ್ರ ರಚಿಸಿರುವುದರಿಂದ ಕರುಣರಸವನ್ನೇ ಅವನು ಕೊನೆಯವರೆಗೂ ಪೋಷಿಸಿರುವನೆಂಬುದೂ ಗೊತ್ತಾಗುತ್ತದೆ. ಮಹಾಭಾರತದಲ್ಲಿ ಕಾವ್ಯದ ಛಾಯೆಯಂತೆಯೇ ಶಾಸ್ತ್ರದ ಛಾಯೆಯೂ ಅನ್ವಯಿಸುತ್ತದೆ.

ಅಲ್ಲಿಯ ಸಮಾಪ್ತಿಯು ಕೂಡ ವೃಷ್ಣಿಪಾಂಡವರ ದುರಂತವೇ ಆಗಿರುವುದರಿಂದ ಮನಸ್ಸಿಗೆ ವಿಷಾದವನ್ನೇ ತರುತ್ತದೆ. ಈ ಬಗೆಯ ಸಮಾಪ್ತಿಯನ್ನು ತಂದಿರುವುದರಿಂದ, ಜನರಲ್ಲಿ ವೈರಾಗ್ಯವನ್ನು ಕಾವ್ಯದ ಮೂಲಕ ಬೋಧಿಸಬೇಕೆಂಬುದೇ ಮಹಾಮುನಿಯಾದ ವ್ಯಾಸನ ಮುಖ್ಯ ಉದ್ದೇಶವಾಗಿದ್ದಿರಬೇಕೆಂಬುದೂ, ಹಾಗೆಯೇ ಪುರುಷಾರ್ಥಗಳಲ್ಲೆಲ್ಲ ಮೋಕ್ಷವೇ ಮುಖ್ಯವೆಂಬುದನ್ನು ಮತ್ತು ರಸಗಳಲ್ಲಿ ಶಾಂತವೇ ಪ್ರಧಾನವೆಂಬುದನ್ನು ತೋರಿಸುವುದು ಅವನ ಗುರಿಯೆಂಬುದೂ, ಸೂಚಿತವಾಗುತ್ತದೆ. ಮಹಾಭಾರತದ ಕೆಲವು ವ್ಯಾಖ್ಯಾನಕಾರರೂ ಕೂಡ ಈ ವಿಷಯವನ್ನು ಸ್ವಲ್ಪಮಟ್ಟಿಗೆ ವಿವರಿಸಿದ್ದಾರೆ. ಅಷ್ಟೇಕೆ, ಆಳವಾದ ಅಜ್ಞಾನಾಂಧಕಾರದಲ್ಲಿ ಮುಳುಗಿಹೋದ ಲೋಕವನ್ನೆತ್ತಲು ಅತಿವಿಮಲವಾದ ಜ್ಞಾನಾಲೋಕವನ್ನಿತ್ತ ಆ ಲೋಕನಾಥನಾದ ಶ್ರೀ ವ್ಯಾಸನೇ ಮುಕ್ತಕಂಠದಿಂದ ಈ ವಿಷಯವನ್ನು

> ಯಥಾ ಯಥಾ ವಿಪರ್ಯೇತಿ ಲೋಕತಂತ್ರಮಸಾರವತ್ |
> ತಥಾ ತಥಾ ವಿರಾಗೋऽತ್ರ ಜಾಯತೇ ನಾತ್ರ ಸಂಶಯಃ ||

> ಎಂತೆಂತು ನರರ ತಂತ್ರಂ
> ಚಿಂತಿತವಿಪರೀತಮಾಗಿ ಪರಿವರ್ತಿಪುದಂ-|
> ತಂತದು ನಿಸ್ಸಾರಮೆನೆ ನಿ-
> ರಂತರನಿರ್ವೇದಮಿಲ್ಲಿ ಬರ್ಪುದು ಸಿದ್ಧಂ ||

ಎಂಬಿವೇ ಮೊದಲಾದ ಶ್ಲೋಕಗಳಿಂದ ಮತ್ತೆ ಮತ್ತೆ ಬಿಡಿಸಿ ಹೇಳಿದ್ದಾನೆ. ಆದುದರಿಂದ ರಸಗಳಲ್ಲಿ ಶಾಂತವು ಮುಖ್ಯ, ಉಳಿದುವು ಅಂಗಗಳು; ಪುರುಷಾರ್ಥಗಳಲ್ಲಿ ಮೋಕ್ಷವು ಮುಖ್ಯ, ಉಳಿದುವು ಅಂಗಗಳು—ಎಂಬುದೇ ಕವಿಗೆ ವಿವಕ್ಷಿತವೆಂಬ ಮಹಾಭಾರತದ ತಾತ್ಪರ್ಯವು ಸುವ್ಯಕ್ತವಾಗಿ ಕಾಣುತ್ತದೆ. ರಸಗಳಿಗೆ ಅಂಗಾಂಗಿಭಾವವು ಹೇಗೆ ಬರುವುದೆಂಬುದನ್ನು ಹಿಂದೆಯೇ ಪ್ರತಿಪಾದಿಸಲಾಗಿದೆ.

ಶರೀರದ ಪ್ರಯೋಜನವು ಪರಮಾರ್ಥತಃ ಅಂತರಾತ್ಮನಿಗೆ ಸಾಧಕವಾಗಿರುವುದೇ ಆದರೂ ಶರೀರದಲ್ಲಿಯೂ ಸ್ವತಃ ಸೌಂದರ್ಯವುಂಟೆಂದು ನಾವು ಗ್ರಹಿಸುವುದಿಲ್ಲವೆ? ಹಾಗೆಯೇ (ಪ್ರಧಾನರಸಕ್ಕೆ) ಸಾಧಕಮಾತ್ರಗಳಾದ ಉಳಿದ ಅಂಗರಸಗಳಿಗೂ (ಪ್ರಧಾನ ಪುರುಷಾರ್ಥಕ್ಕೆ) ಸಾಧಕಮಾತ್ರಗಳಾದ ಉಳಿದ ಗೌಣ ಪುರುಷಾರ್ಥಗಳಿಗೂ ಸ್ವತಃ ಸೌಂದರ್ಯವುಂಟೆಂದರೂ ತಪ್ಪಿಲ್ಲ.

ಈ ಸಂದರ್ಭದಲ್ಲಿ ಒಂದು ಪೂರ್ವಪಕ್ಷಕ್ಕವಕಾಶವಿದೆ:—'ಮಹಾಭಾರತದಲ್ಲಿ ಕವಿಗೆ ಎಷ್ಟು ವಿಷಯಗಳನ್ನು ಹೇಳಬೇಕೆಂಬ ವಿವಕ್ಷೆಯಿದ್ದಿತೋ ಅಷ್ಟನ್ನೂ ಆತನು

'ಅನುಕ್ರಮಣಿ 'ಯಲ್ಲಿ ಒಂದೊಂದಾಗಿ ಹೇಳಿ ಮುಗಿಸಿದ್ದಾನೆ. ಆದರೆ ಈ ಅಂಶವು ಮಾತ್ರ ಅಲ್ಲಿ ಕಾಣಿಸುವುದಿಲ್ಲ. ಅದಕ್ಕೆ ಬದಲಾಗಿ ಮಹಾಭಾರತವು ಸಕಲ ಪುರುಷಾರ್ಥಗಳ ಉಪದೇಶವನ್ನು ಕುರಿತಿರುವುದೆಂದೂ, ಸಕಲರಸಗಳನ್ನೂ ಒಳಗೊಂಡಿರುವುದೆಂದೂ ಆ ಪ್ರಕರಣದಲ್ಲಿ ಬಾಯಿಬಿಟ್ಟು ಹೇಳಲಾಗಿದೆ,' ಎಂದು. ಇದಕ್ಕೆ ಈಗ ಸಮಾಧಾನವನ್ನು ಹೇಳುತ್ತೇವೆ: ನೀವು ಹೇಳುವುದು ನಿಜ. ಶಾಂತರಸವೇ ಮಹಾಭಾರತದ ಪ್ರಧಾನರಸವೆಂದೂ ಮೋಕ್ಷವೇ ಪುರುಷಾರ್ಥಗಳಲ್ಲೆಲ್ಲ ಪ್ರಧಾನವಾದುದೆಂದೂ ವಾಚ್ಯವಾಗಿ ಅನುಕ್ರಮಣಿಯಲ್ಲೇನೂ ಹೇಳಿಲ್ಲ. ಅದರೆ

ಭಗವಾನ್ ವಾಸುದೇವಶ್ಚ ಕೀರ್ತ್ಯತೇऽತ್ರ ಸನಾತನಃ

ಆ ಸನಾತನನಾದ ಭಗವಂತ ತಾನೆನಿಪ |
ವಾಸುದೇವನನಿಲ್ಲಿ ಸುತಿಸುವೆವು ನಾವು ‖

ಎಂಬ ವಾಕ್ಯದಲ್ಲಿ ಅದು ವ್ಯಂಗ್ಯವಾಗಿ ಉಕ್ತವಾಗಿದೆ. ಇಲ್ಲಿ ವ್ಯಂಗ್ಯವಾಗಿರುವ ತಾತ್ಪರ್ಯಾರ್ಥವಿಷ್ಟು: ಮಹಾಭಾರತದಲ್ಲಿ ವರ್ಣಿಸಿರುವ ಪಾಂಡವಾದಿಗಳ ಕಥೆಗಳೆಲ್ಲವೂ ದುರಂತಕಥೆಗಳು (ಮೂಲ—'ಅವಸಾನವಿರಸ') ಮತ್ತು ಅಜ್ಞಾನ-ಪ್ರಪಂಚಸ್ವರೂಪಗಳು. ಆದರೆ ಪರಮಾರ್ಥಸತ್ಯಸ್ವರೂಪಿಯಾದ ಭಗವಾನ್ ವಾಸುದೇವನನ್ನೇ ನಾವಿಲ್ಲಿ ಸುತಿಸುತ್ತೇವೆ. ಆದುದರಿಂದ ಆ ಭಗವಂತನಾದ ಪರಮೇಶ್ವರನಲ್ಲಿ ಮಾತ್ರ ಭಕ್ತಿಭಾವನೆಯನ್ನು ಇಡಿ; ನಿಸ್ಸಾರವಾದ ಸಂಪತ್ತುಗಳಲ್ಲಿ ಆಸಕ್ತರಾಗಬೇಡಿ; ಹಾಗೆಯೇ ನಯ, ವಿನಯ, ಪರಾಕ್ರಮ ಇವೇ ಮೊದಲಾದ ಗುಣಗಳಲ್ಲಿ, ಕೇವಲ ಅವುಗಳಿಗಾಗಿಯೇ, ನಿಮ್ಮೆಲ್ಲ ಅಭಿನಿವೇಶವನ್ನೂ ಇಟ್ಟುಕೊಳ್ಳಬೇಡಿ' ಎಂದು. ಅಲ್ಲಿಯೇ ಮುಂದೆ ಕೂಡ 'ಸಂಸಾರದ ನಿಸ್ಸಾರತೆಯನ್ನು ನೋಡಿ' ಎಂಬ ಅರ್ಥವನ್ನು ಧ್ವನಿಸುವಂತಹ ಶಬ್ದವೇ ತನ್ನ ವ್ಯಂಜಕಶಕ್ತಿಯೊಡನೆ ಸ್ಫುಟವಾಗಿ ಭಾಸವಾಗುತ್ತದೆ. ಪಕ್ಕದಲ್ಲಿ ಬರುವ ಶ್ಲೋಕಗಳು ಕೂಡ, 'ಸ ಹಿ ಸತ್ಯಮ್ . . .' ಇತ್ಯಾದಿಗಳು, ಈ ವಿಧವಾದ ಅರ್ಥವೇ ಗರ್ಭೀಕೃತವಾಗಿರುವುದೆಂಬುದನ್ನು ತೋರಿಸುತ್ತವೆ.

ಮಹಾಭಾರತದ ಕಡೆಯಲ್ಲಿ ಹರಿವಂಶವರ್ಣನೆಯ ಮೂಲಕ ಪರಿಸಮಾಪ್ತಿಯನ್ನು ಮಾಡಿರುವುದರಿಂದಲೂ, ಕವಿವಿಧಾತನಾದ ಕೃಷ್ಣದ್ವೈಪಾಯನನು ಈ ನಿಗೂಢ ರಮಣೀಯಾರ್ಥವನ್ನೇ ಚೆನ್ನಾಗಿ ಸ್ಫುಟಗೊಳಿಸಿರುವನು. ಈ ಕಥೆಯಿಂದ ಸಂಸಾರಾತೀತವಾದ ತತ್ತ್ವಾಂತರದಲ್ಲಿ ಭಕ್ತ್ಯತಿಶಯವನ್ನು ಆತನು ಉಪದೇಶಿಸಿದಂತಾಗಿರುವುದಲ್ಲದೆ ಸಕಲ ಸಾಂಸಾರಿಕ ವ್ಯವಹಾರವನ್ನೂ ಒಟ್ಟಾಗಿಯೇ ಪೂರ್ವ

ಪಕ್ಷವಾಗಿ ಮಾಡಿಕೊಂಡಿರುವಂತೆಯೂ ಆಗಿದೆ. ಪುಣ್ಯತೀರ್ಥ, ತಪಸ್ಸು ಮುಂತಾದುವುಗಳ ಪ್ರಭಾವಾತಿಶಯವನ್ನು ವರ್ಣಿಸಿರುವುದು ಆ ಪರಬ್ರಹ್ಮವಸ್ತುವಿನ ಸಾಕ್ಷಾತ್ಕಾರಕ್ಕೆ ಸಾಧನಗಳೆಂಬ ದೃಷ್ಟಿಯಿಂದಲೇ; ಉಳಿದ ವಿಶಿಷ್ಟದೇವತೆಗಳ ಪ್ರಭಾವವನ್ನು ವರ್ಣಿಸಿರುವುದಾದರೂ ಆ ಪರಬ್ರಹ್ಮದ ವಿಭೂತಿಗಳೆಂಬ ಕಾರಣದಿಂದಲೇ. ಪಾಂಡವಾದಿಗಳ ಕಥೆಯ ವರ್ಣನೆಗೂ ಕೂಡ ವೈರಾಗ್ಯವನ್ನುಂಟುಮಾಡುವುದೇ ತಾತ್ಪರ್ಯ. ವೈರಾಗ್ಯವು ಮೋಕ್ಷಕ್ಕೆ ಕಾರಣ; ಮೋಕ್ಷವೇ ಭಗವಂತನ ಸಾಕ್ಷಾತ್ಕಾರಕ್ಕೆ ಸಾಧನವಾದುದರಿಂದ ಎಲ್ಲಕ್ಕಿಂತಲೂ ಮುಖ್ಯವೆಂದು ಗೀತೆಯೇ ಮೊದಲಾದ ಪ್ರಕರಣಗಳಲ್ಲಿ ತೋರಿಸಿದೆ. ಆದುದರಿಂದ ಪಾಂಡವಾದಿಗಳ ಕಥೆಯ ವರ್ಣನೆಯೂ ಪರಬ್ರಹ್ಮಪ್ರಾಪ್ತಿಗೆ (ಪರಂಪರೆಯಿಂದ) ಸಾಧಕವೇ ಆಗುತ್ತದೆ. (ನೇರವಾಗಿ ಪರಬ್ರಹ್ಮ ಎನ್ನದೆ) ಪ್ರಕಾರಾಂತರದಿಂದ 'ವಾಸುದೇವ' ಎಂದಿವೇ ಮುಂತಾದ ಶಬ್ದಗಳನ್ನು ಪ್ರಯೋಗಿಸಿದ್ದರೂ, ಅವುಗಳಿಗೆ ಅರ್ಥವು ಮಾತ್ರ ಅಪರಿಮಿತಶಕ್ತ್ಯಾಸ್ಪದನಾದ ಪರಬ್ರಹ್ಮವೆಂದೇ (ಹೊರತು ವಸುದೇವನ ಮಗನೆಂದಲ್ಲ). ಗೀತೆಯೇ ಮೊದಲಾದೆಡೆಗಳಲ್ಲಿ 'ವಾಸುದೇವ'ನೇ ಮೊದಲಾದ ಪದಗಳು ಪರಬ್ರಹ್ಮದ ಹೆಸರುಗಳೇ ಎಂಬುದೂ ಸ್ಪಷ್ಟವಾಗಿರುವ ಕಾರಣ, 'ವಾಸುದೇವ'ನೆಂದರೆ ಕೇವಲ ಮಧುರೆಯಲ್ಲಿ ಹುಟ್ಟಿದ ಒಬ್ಬ ವ್ಯಕ್ತಿಯೆಂದು ತಿಳಿಯಲಾಗದು; ಮಧುರೆಯಲ್ಲಿ ಹುಟ್ಟಿದುದರ ಜತೆಗೆ ಸಕಲಸ್ವರೂಪಗಳನ್ನೂ ಒಳಗೊಂಡ ಪರಮಾತ್ಮನೆಂದೇ ತಿಳಿಯಬೇಕು. 'ವಾಸುದೇವ' ಎಂಬ ಪದಕ್ಕೆ ಕೊಟ್ಟಿರುವ 'ಸನಾತನ' ಎಂಬ ವಿಶೇಷಣವೂ ಈ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತದೆ. ಅದೂ ಅಲ್ಲದೆ ರಾಮಾಯಣವೇ ಮೊದಲಾದುವುಗಳಲ್ಲಿ ಇದೇ ಹೆಸರು ಭಗವಂತನ ಬೇರೆ ಮೂರ್ತಿಯನ್ನು ಕೂಡ ಬೋಧಿಸುವುದನ್ನು ನೋಡಬಹುದು. ಈ ತತ್ವವನ್ನು ವೈಯಾಕರಣರೇ ನಿರ್ಣಯಿಸಿಬಿಟ್ಟಿರುವರು.[1]

ಹೀಗೆ ಅನುಕ್ರಮಣಿಯಲ್ಲಿ ನಿರ್ದಿಷ್ಟವಾಗಿರುವ ವಾಕ್ಯವು ಭಗವಂತನನ್ನು ಬಿಟ್ಟು ಉಳಿದುದೆಲ್ಲವೂ ಅನಿತ್ಯವೆಂದು ಹೇಳುತ್ತದೆ. ಇದರಿಂದ, ಶಾಸ್ತ್ರಮರ್ಯಾದೆಯ ಪ್ರಕಾರ ನೋಡುವುದಾದರೆ ಮೋಕ್ಷವೆಂಬ ಪುರುಷಾರ್ಥವೇ ಮಹಾಭಾರತದಲ್ಲಿ ಪ್ರಧಾನವಾದುದೆಂದು ವಿವಕ್ಷಿತವಾಗಿದೆಯೆಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಕಾವ್ಯಮರ್ಯಾದೆಯ ಪ್ರಕಾರ ನೋಡುವುದಾದರೆ ತೃಷ್ಣಾಕ್ಷಯಸುಖದ ಪರಿಪೋಷ

[1] 'ಶಬ್ದಗಳು ನಿತ್ಯಗಳೇ. ಕಾಕತಾಲೀಯ ನ್ಯಾಯದಿಂದ ಅವಕ್ಕೆ ವಿಭಿನ್ನಕಾಲಗಳಲ್ಲಿ ಸಂಕೇತವು ಬರುವುದೆಂಬ ವೈಯಾಕರಣರ ಪ್ರಕ್ರಿಯೆಯು 'ಋಷ್ಯನ್ಧಕವೃಷ್ಣಿಕುರುಭ್ಯಶ್ಚ' ಎಂಬ ಪಾಣಿನಿ ಸೂತ್ರವಿವರಣೆಯಲ್ಲಿ ಬರುತ್ತದೆ'.—ಅಭಿನವಗುಪ್ತರ ಲೋಚನ.

ರೂಪವಾದ ಶಾಂತರಸವೇ ಮಹಾಭಾರತದಲ್ಲಿ ಪ್ರಧಾನವಾದುದೆಂದು ವಿವಕ್ಷಿತವಾಗಿದೆಯೆಂಬುದು ವ್ಯಕ್ತವಾಗುತ್ತದೆ.

ಅತ್ಯಂತ ಸಾರಭೂತವಾದುದರಿಂದ ಈ ವಿಷಯವು ವ್ಯಂಗ್ಯವಾಗಿ ಪ್ರಕಾಶಿತವಾಗಿರುವುದೇ ಹೊರತು ವಾಚ್ಯವಾಗಿ ಅಲ್ಲ. ಸಾರಭೂತವಾದ ವಿಷಯಕ್ಕೆ ಸೌಂದರ್ಯವು ಬರುವುದು ಹೀಗೆ ವಾಚ್ಯವಲ್ಲದ ರೀತಿಯಿಂದ ಪ್ರಕಾಶಿತವಾದಾಗಲೇ. ಹೀಗೆ ಮನಸ್ಸಿಗೆ ಹೆಚ್ಚು ಬೇಕಾದುದನ್ನು ಶಬ್ದಗಳಿಂದ ನೇರವಾಗಿ ಹೇಳದೆ ವ್ಯಂಗ್ಯವಾಗಿಯೇ ಸೂಚಿಸಬೇಕೆಂಬ ಪ್ರಸಿದ್ಧ ಸಂಪ್ರದಾಯವು ವಿದಗ್ಧರ ವಿದ್ವದ್ಗೋಷ್ಠಿಗಳಲ್ಲಿ ಈಗಲೂ ಇದ್ದೇ ಇದೆ. ಆದುದರಿಂದ ಇಷ್ಟು ಸ್ಥಿರವಾದಂತಾಯಿತು: ಕಾವ್ಯದಲ್ಲಿ ಪ್ರಧಾನವಾದೊಂದು ರಸದ ಆಶ್ರಯವಿರುವಂತೆ ಮಾಡುವುದರಿಂದ ಹೊಸತನವು ಬರುವುದಲ್ಲದೆ ಹೆಚ್ಚಿನ ಸೌಂದರ್ಯವೂ ಬರುತ್ತದೆ. ಆದುದರಿಂದಲೇ ಬೇರೆ ಅಲಂಕಾರಗಳಿಲ್ಲದೆ ಹೋದರೂ ರಸಾನುಗುಣವಾದ ವಿಶಿಷ್ಟವಿಷಯಗಳನ್ನು ಸೇರಿಸಿಕೊಳ್ಳುವುದರಿಂದ ಅತಿಶಯವಾದ ಸೊಗಸು ಲಕ್ಷ್ಯಗಳಲ್ಲಿ ಬರುವುದನ್ನು ನೋಡಬಹುದು. ಉದಾಹರಣೆ:

ಮುನಿರ್ಜಯತಿ ಯೋಗೀಂದ್ರೋ ಮಹಾತ್ಮಾ ಕುಂಭಸಂಭವಃ |
ಯೇನೈಕಚುಲಕೇ ದೃಷ್ಟೌ ತೌ ದಿವ್ಯೌ ಮತ್ಸ್ಯಕಚ್ಛಪೌ ||

ಆವಂ ತನ್ನೊಂದು ಕರ್ಪುಡಿತೆಯೊ-
ಳಾವೆಯ ಮೀನ್ ಮೀನ ದಿವ್ಯರೂಪವನೆರಡಂ |
ಭಾವಿಸೆ ಕಂಡಂ ನೆಗಳ್ಗೆಂ
ಭೂವಿನುತಂ ಕುಂಭಸಂಭವಂ ಮುನಿವರ್ಯಂ ||

ಇದೇ ಮೊದಲಾದುವು. ಒಂದೇ ಸೇರೆಯಲ್ಲಿ ಮತ್ಸ್ಯಕೂರ್ಮಾವತಾರಗಳೆರಡನ್ನೂ ನೋಡಿದನೆಂದಿರುವುದು ಅಪೂರ್ವಸೌಂದರ್ಯಯುಕ್ತವಾಗಿರುವುದಕ್ಕೆ ಅದು ಅದ್ಭುತರಸಾನುಗುಣವಾಗಿರುವುದೇ ಕಾರಣ. ಒಂದು ಸೇರೆಯಲ್ಲಿ ಸಕಲ ಜಲಧಿಯೂ ಬಂದುಬಿಡುವುದು ಅದ್ಭುತವಾದರೂ ಈ ವಿಷಯವು ಪುರಾಣಪ್ರಸಿದ್ಧವಾಗಿರುವುದರಿಂದ ಅದರಲ್ಲಿ ಅಂತಹ ರಸಾನುಗುಣತ್ವವಿಲ್ಲ. ಇದಕ್ಕಿಂತಲೂ, ಅಲ್ಲಿ ಭಗವಂತನ ಮತ್ಸ್ಯಕೂರ್ಮಾವತಾರಗಳೆರಡನ್ನೂ ಕಂಡುದರ ವರ್ಣನೆಯು ಅದ್ಭುತರಸಕ್ಕೆ ಅತ್ಯಂತ ಅನುಗುಣವಾಗಿದೆ; ಈ ಅಂಶವು ಹಿಂದಿನವರಿಂದ ಹೇಳಲ್ಪಡದಿರುವುದೇ ಕಾರಣ. ಮತ್ತೆ ಮತ್ತೆ ಅನೇಕರು ಅದನ್ನೇ ಹೇಳಿಬಿಟ್ಟಮೇಲೆ, ಲೋಕಪ್ರಸಿದ್ಧಿಯಲ್ಲಿ ಅದ್ಭುತವೆನಿಸುವ ವಸ್ತುವೇ ಆದರೂ ಆಶ್ಚರ್ಯಕಾರಿಯಾಗುವುದಿಲ್ಲ. (ಆದುದರಿಂದ 'ಅಕ್ಷುಣ್ಣ'ವಾದ ವಸ್ತುವೇ ಚಮತ್ಕಾರಕ್ಕೆ ಕಾರಣ.) ಈ ಅಕ್ಷುಣ್ಣವಾದ ವಸ್ತುವು

ಅದ್ಭುತರಸಕ್ಕೆ ಮಾತ್ರ ಅನುಗುಣವಾಗುವುದೆಂದಲ್ಲ; ಉಳಿದ ರಸಗಳಿಗೂ ಅನುಗುಣವೇ ಆಗುತ್ತದೆ. ಉದಾಹರಣೆ:—

ಸಿಜ್ಜಇ ರೋಮಂಚಿಜ್ಜಇ ವೇವಇ ರಚ್ಛಾತುಲಗ್ಗಪಡಿಲಗ್ಗೋ |
ಸೋ ಪಾಸೋ ಅಜ್ಜವಿ ಸುಹಅ ತೀಇ ಜೇಣಾಸಿ ವೋಲೀಣೋ ||

ಬೆಮರ್ವಳದಿರ್ವಳ್ ಪುಲಕೋ-
ದ್ಗಮಮಂ ತಳೆವಳ್ ಶರೀರಪಾರ್ಶ್ವದೊಳಿಂದಾ- |
ಗಮಿಸುತ ಮಾರ್ಗದೆ ನಿನ್ನಂ |
ಗಮನದು ನಸುಸೋಂಕಿತೆಂದು ತಕ್ಕಡಿತುದಿಯಿಂ ||

ಈ ಗಾಥೆಯ ಅರ್ಥವನ್ನು ಪರ್ಯಾಲೋಚಿಸಿದರೆ ಯಾವ ರಸಪ್ರತೀತಿಯುಂಟಾಗುತ್ತದೋ ಅದು 'ನಿನ್ನನ್ನು ಮುಟ್ಟಿದ್ದರಿಂದ ಬೆವರುತ್ತಾಳೆ. . .' ಎಂದು ಮುಂತಾದ ವಾಕ್ಯದಿಂದ ಸ್ವಲ್ಪವಾಗಲಿ ಬರುವುದಿಲ್ಲ.

ಹೀಗೆ ಧ್ವನಿಪ್ರಭೇದಗಳ ಆಶ್ರಯದಿಂದ ಕಾವ್ಯಾರ್ಥಗಳಲ್ಲಿ ಹೇಗೆ ನೂತನತ್ವವು ಬರುವುದೆಂಬುದನ್ನು ಪ್ರತಿಪಾದಿಸಲಾಯಿತು. ಹಾಗೆಯೇ ಗುಣೀಭೂತವ್ಯಂಗ್ಯಗಳ ಎಂದರೆ ಮೂದೆರನ್ನಾದ (=ವಸ್ತು, ಅಲಂಕಾರ, ರಸ) ವ್ಯಂಗ್ಯಗಳು ವಾಚ್ಯಕ್ಕೆ ಗುಣೀಭೂತವಾಗುತ್ತಿರುವ ಪ್ರಕಾರಗಳ ಆಶ್ರಯದಿಂದಲೂ ಕಾವ್ಯವಸ್ತುಗಳಿಗೆ ನವತ್ವವು ಬಂದೇ ಬರುತ್ತದೆ. ಗ್ರಂಥವು ಬಹಳ ವಿಸ್ತಾರವಾಗುವುದೆಂದು ಅದನ್ನೆಲ್ಲ ಉದಾಹರಿಸಿಲ್ಲ. ಸಹೃದಯರು ತಾವೇ ಊಹಿಸಿಕೊಳ್ಳಬೇಕು.

ಕಾರಿಕೆ

ಧ್ವನೇರಿತ್ಥಂ ಗುಣೀಭೂತವ್ಯಂಗ್ಯಸ್ಯ ಚ ಸಮಾಶ್ರಯಾತ್ ।
ನ ಕಾವ್ಯಾರ್ಥವಿರಾಮೋಽಸ್ತಿ ಯದಿ ಸ್ಯಾತ್ ಪ್ರತಿಭಾಗುಣಃ ॥ ೬ ॥

ಹೀಗೆ, ಪ್ರತಿಭಾಗುಣವಿದ್ದುದೇ ಆದರೆ, 'ಧ್ವನಿ' ಮತ್ತು 'ಗುಣೀಭೂತವ್ಯಂಗ್ಯ'ಗಳನ್ನು ಆಶ್ರಯಿಸುವುದರಿಂದ ಕಾವ್ಯಾರ್ಥಕ್ಕೆ ಕೊನೆಯೇ ಇರುವುದಿಲ್ಲ.

ವೃತ್ತಿ

'ಪುರಾತನಕವಿಗಳ ಪ್ರಬಂಧಗಳಿದ್ದರೂ' ಎಂದು ಕಾರಿಕೆಯಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕು. 'ಪ್ರತಿಭಾಗುಣವಿದ್ದುದೇ ಆದರೆ' ಎನ್ನುವುದರಿಂದ, ಅದಿಲ್ಲದೆ ಹೋದರೆ ಕವಿಗೆ ಯಾವ ಕಾವ್ಯವಸ್ತುವೂ ಇಲ್ಲದೆಯೇ ಹೋಗುವುದೆಂದರ್ಥ. 'ಬಂಧಚ್ಛಾಯೆ' ಅಥವಾ ಶೈಲಿಯಿದ್ದರೆ ಪ್ರತಿಭೆಯ ಅಗತ್ಯವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ; ಏಕೆಂದರೆ 'ವ್ಯಂಗ್ಯ' ಮತ್ತು 'ಗುಣೀಭೂತವ್ಯಂಗ್ಯ'ಗಳೆಂಬ

ಎರಡು ಅರ್ಥಗಳಿಗೂ ಅನುರೂಪವಾಗಿರುವಂತಹ ಶಬ್ದರಚನೆಯನ್ನು ಮಾತ್ರ 'ಬಂಧಚ್ಛಾಯೆ'ಯೆನ್ನಬಹುದು. ಅರ್ಥದ ವಿಷಯದಲ್ಲಿ ಪ್ರತಿಭೆಯಿಲ್ಲದ ಮೇಲೆ ಇನ್ನು 'ಬಂಧಚ್ಛಾಯೆ'ಯು ಸರಿಯಾಗುವುದೆಂತು? ಒಂದು ವೇಳೆ ಅರ್ಥವಿಶೇಷಗಳ ಅಪೇಕ್ಷೆಯೇ ಇಲ್ಲದ ಅಕ್ಷರರಚನೆಯನ್ನೇ 'ಬಂಧಚ್ಛಾಯೆ' ಯೆನ್ನುವುದಾದರೆ ಇದು ಸಹೃದಯರಿಗೆ ಒಪ್ಪಿಗೆಯಾಗಲಾರದು. ಹೀಗಿರುವುದೇ ನಿಜವಾದ ಪಕ್ಷಕ್ಕೆ ಅರ್ಥದ ಅಪೇಕ್ಷೆಯೇ ಇಲ್ಲದ ಚತುರ ಮತ್ತು ಮಧುರ ರಚನೆಗೂ ಕೂಡ ಕಾವ್ಯವೆಂಬ ಹೆಸರು ಅನ್ವಯಿಸಬೇಕಾಗುತ್ತದೆ. ವಸ್ತುತಃ ಶಬ್ದ ಮತ್ತು ಅರ್ಥ ಇವೆರಡರ ಸಾಹಿತ್ಯದಿಂದಲೇ ಕಾವ್ಯವಾಗುವುದೆಂದಮೇಲೆ ಅಂತಹ ಕಡೆಗಳಲ್ಲಿ ಕಾವ್ಯದ ವ್ಯವಸ್ಥೆ ಹೇಗೆಂದು ಕೇಳಬಹುದು.[1] ಅದಕ್ಕೆ ಇಷ್ಟೇ ಉತ್ತರ: ಬೇರೆಯವರು ಬರೆದ ಅರ್ಥವನ್ನೇ ಒಬ್ಬನು ಬರೆದರೆ ಅದನ್ನು ಬೇರೆಯವನ ಕಾವ್ಯವೆಂದೇ ಹೇಗೆ ಪರಿಗಣಿಸುವೆವೋ ಹಾಗೆಯೇ ಅಂತಹ ಬಂಧಚ್ಛಾಯೆಯಿಂದ ಮಾತ್ರ ಕೂಡಿರುವ (ಎಂದರೆ ಸ್ವಂತವಾದ ಅರ್ಥನವತ್ವವಿಲ್ಲದ) ಕಾವ್ಯಸಂದರ್ಭಗಳನ್ನೂ ಅನ್ಯಕೃತವೆಂದೇ ಹೇಳಿಬಿಡಬಹುದು.

ಅರ್ಥಾನಂತ್ಯವು ಬರುವುದು ಕೇವಲ ವ್ಯಂಗ್ಯಾರ್ಥದಿಂದಲೇ ಇಲ್ಲ; ವಾಚ್ಯಾರ್ಥದಿಂದಲೂ ಬರಬಹುದೆಂದು ನಿರೂಪಿಸಲು ಕೆಳಗಿನ ಕಾರಿಕೆಯನ್ನು ಹೇಳಿದೆ:

ಕಾರಿಕೆ

ಅವಸ್ಥಾದೇಶಕಾಲಾದಿವಿಶೇಷೈರಪಿ ಜಾಯತೇ ।
ಆನಂತ್ಯಮೇವ ವಾಚ್ಯಸ್ಯ ಶುದ್ಧಸ್ಯಾಪಿ ಸ್ವಭಾವತಃ ॥ ೭ ॥

'ಅವಸ್ಥೆ', 'ದೇಶ', 'ಕಾಲ', ಇವೇ ಮೊದಲಾದ ವಿಶೇಷಗಳ ಫಲವಾಗಿ ಶುದ್ಧವಾದ ವಾಚ್ಯಕ್ಕೂ ಸ್ವಭಾವವಾಗಿಯೇ ಆನಂತ್ಯವು ಬರುತ್ತದೆ.

ವೃತ್ತಿ

'ಶುದ್ಧವಾದ', ಎಂದರೆ ವ್ಯಂಗ್ಯದ ಅಪೇಕ್ಷೆಯಿಲ್ಲದ, ವಾಚ್ಯಕ್ಕೂ, ಸ್ವಭಾವವಾಗಿಯೇ ಆನಂತ್ಯವು ಬರುವುದು. ಅವಸ್ಥಾಭೇದ, ದೇಶಭೇದ, ಕಾಲಭೇದ,—ಸ್ವರೂಪಭೇದ—ಇವುಗಳಿಂದ ಚೇತನ ಮತ್ತು ಅಚೇತನಗಳಾದ ವಾಚ್ಯಗಳಿಗೆಲ್ಲ ಆನಂತ್ಯವುಂಟಾಗುವುದು ಸ್ವಭಾವಜನ್ಯವಾಗಿಯೇ ಇದೆ. ಹೀಗೆ ಪ್ರಸಿದ್ಧವಾದ ಸ್ವಾಭಾವಿಕಭೇದಗಳನ್ನನುಸರಿಸಿ ಸ್ವಭಾವೋಕ್ತಿಯ ಮೂಲಕವೇ ವಾಚ್ಯಗಳನ್ನು ವರ್ಣಿಸಿದರೂ ವಾಕ್ಯಾರ್ಥವು ಕೊನೆಮೊದಲಿಲ್ಲದಂತಾಗುತ್ತದೆ. ಹೀಗೆ ಅವಸ್ಥಾ

---

[1] ಅರ್ಥದ ಅಪೇಕ್ಷೆಯೇ ಇಲ್ಲದ ಶಬ್ದವೇ ಅಸಂಭವವೆಂದು ಪೂರ್ವಪಕ್ಷಕಾರನ ವಾದ.

ಭೇದದಿಂದ ನವತ್ವವುಂಟಾಗುವುದಕ್ಕೆ ಉದಾಹರಣೆ:—**ಕುಮಾರಸಂಭವದಲ್ಲಿ** ಪಾರ್ವತೀದೇವಿಯ ರೂಪವರ್ಣನೆಯು **'ಸರ್ವೋಪಮಾದ್ರವ್ಯಸಮುಚ್ಚಯೇನ. . .'**[1] ಇತ್ಯಾದಿ ವಾಕ್ಯಗಳಿಂದಲೇ ಮುಗಿದಿದ್ದರೂ, ಮತ್ತೆ ಶಂಭುವಿನ ಕಣ್ಣಿಗೆ ಬೀಳುವ ಕಾಲದಲ್ಲಿ **'ವಸಂತಪುಷ್ಪಾಭರಣಂ . . .'**[2] ಇತ್ಯಾದಿ ಶ್ಲೋಕಗಳಲ್ಲಿ ಮನ್ಮಥೋಪಕರಣಭೂತವಾದ ಪ್ರಕಾರಾಂತರದಿಂದ ವರ್ಣಿತಳಾಗಿದ್ದಾಳೆ. ಮತ್ತೆ ವಿವಾಹಕಾಲದಲ್ಲಿ ಅಲಂಕಾರಗಳನ್ನು ಧರಿಸುವಾಗ **'ತಾಂ ಪ್ರಾಙ್ಮುಖೀಂ ತತ್ರ ನಿವೇಶ್ಯ ತನ್ವೀಮ್ . . .'**[3] ಇವೇ ಮುಂತಾದ ವಾಕ್ಯಗಳಿಂದ ಹೊಸ ರೀತಿಯಲ್ಲಿ ಆಕೆಯ ರೂಪಸೌಷ್ಠವವೇ ವರ್ಣಿತವಾಗಿದೆ. ಹೀಗೆ ಒಬ್ಬಳ ವರ್ಣನೆಯನ್ನೇ ಮತ್ತೆ ಮತ್ತೆ ಕವಿಯು ಬೇರೆ ಬೇರೆ ಪ್ರಕಾರಗಳಿಂದ ಮಾಡಿದ್ದರೂ ಅವು ಪುನರುಕ್ತವೆಂದಾಗಲಿ ಇಲ್ಲವೆ ನವನವಾರ್ಥನಿರ್ಭರವಲ್ಲವೆಂದಾಗಲಿ ಭಾಸವಾಗುವುದಿಲ್ಲ. ಇದನ್ನು **ವಿಷಮಬಾಣಲೀಲೆಯಲ್ಲಿ** ವಿವರಿಸಲಾಗಿದೆ:

> ಣ ಅ ತಾಣ ಘಡಇ ಓಹೀ ಣ ಅ ತೇ ದೀಸಂತಿ ಕಹ ವಿ ಪುನರುತ್ತಾ |
> ಜೇ ವಿಬ್ಭಮಾ ಪಿಆಣಂ ಅತ್ಥಾ ವಾ ಸುಕಇವಾಣೀಣಮ್ ||
>
> ಅವುಗಳ್ಗೆ ನಿತುಂ ಕಡೆಯಿರ-
> ದವುಗಳ್ ಪುನರುಕ್ತಮೆಂದು ತೋರವದೆಂದುಂ |
> ತವೆ ಸತಿಯರ ಬಿಂಕಂಗಳ್
> ಕವಿಗಳ ಸರಸೋಕ್ತಿನಿಷ್ಠನಾನಾರ್ಥಂಗಳ್ ||

ಅಚೇತನವಸ್ತುಗಳಿಗೆಲ್ಲ ಚೇತನಾತ್ಮಕವಾದ ಮತ್ತು ಅಭಿಮಾನಿದೇವತಾಸ್ವರೂಪವಾದ ರೂಪವನ್ನು ಕೊಡುವುದು ಅವಸ್ಥಾಭೇದದ ಎರಡನೆಯ ಪ್ರಕಾರ. ಹಿಮವಂತ, ಗಂಗೆ ಮುಂತಾದುವೇ ಉದಾಹರಣೆಗಳು. ಔಚಿತ್ಯದಿಂದ ಚೇತನಸ್ವಭಾವವನ್ನು ಅಚೇತನವಿಷಯದಲ್ಲಿಯೂ ಸಂಯೋಜಿಸಿಕೊಂಡಾಗ ಅಪೂರ್ವತೆಯು ಬರುತ್ತದೆ. ಉದಾಹರಣೆಗೆ **ಕುಮಾರಸಂಭವದಲ್ಲಿ** ಪರ್ವತರೂಪಿಯಾದ ಹಿಮವಂತನ ವರ್ಣನೆಯು ಬರುವಂತೆಯೇ ಮುಂದೆ ಸಪ್ತರ್ಷಿಗಳ ಪ್ರಿಯವಾಕ್ಯಗಳು ಬರುವ ಸಂದರ್ಭದಲ್ಲಿ ಚೇತನಸ್ವಭಾವವೂ ಆರೋಪಿತವಾಗಿರುವುದರಿಂದ ಅದು ಅಪೂರ್ವಕಾಂತಿಯಿಂದ ಶೋಭಿಸುತ್ತದೆ. ಇದು ಸತ್ಕವಿಗಳಲ್ಲೆಲ್ಲ ಪ್ರಸಿದ್ಧವಾಗಿರುವ ಮಾರ್ಗವೇ. ಈ ಮಾರ್ಗವನ್ನೇ ಕವಿಗಳ ವ್ಯುತ್ಪತ್ತಿಗಾಗಿ **ವಿಷಮಬಾಣಲೀಲೆಯಲ್ಲಿ** ವಿವರಿಸಿ

---

[1] ಸರ್ಗ ೧.

[2] ಸರ್ಗ ೩.

[3] ಸರ್ಗ ೭.

ತೋರಿಸಿದೆ. ಚೇತನಗಳಲ್ಲಿಯೂ ಬಾಲ್ಯವೇ ಮೊದಲಾದ ಅವಸ್ಥಾಭೇದದಿಂದ ನೂತನತ್ವವು ಬರುವುದೆಂಬುದೂ ಸತ್ಕವಿಗಳಲ್ಲಿ ಪ್ರಸಿದ್ಧವೇ ಆಗಿದೆ. ಒಮ್ಮೊಮ್ಮೆ ಚೇತನಗಳ ಅವಸ್ಥೆಯಲ್ಲಿ ಭೇದವಿರದಿದ್ದರೂ, ಒಂದೇ ಅವಸ್ಥೆಯ ಒಳಭೇದಗಳಿಂದಲೇ ನವತ್ವವು ಬಂದುಬಿಡುತ್ತದೆ. ಕುಸುಮಶರನ ಬಾಣಾಹತಿಗೊಳಗಾದ ಕನ್ನಿಕೆಯರಿಗೂ ಮಿಕ್ಕ ಕನ್ನಿಕೆಯರಿಗೂ ಇರುವ ವ್ಯತ್ಯಾಸವನ್ನೇ ಇದಕ್ಕೆ ಉದಾಹರಣೆಯಾಗಿ ಹೇಳಬಹುದು. ಅವರಲ್ಲಿಯೇ ವಿನೀತೆಯರಿಗೂ ಅವಿನೀತೆಯರಿಗೂ ಇರುವ ವ್ಯತ್ಯಾಸವು ಕೂಡ ಇದಕ್ಕೆ ಉದಾಹರಣೆ. ಅಚೇತನ ವಸ್ತುಗಳಿಗೂ ಆರಂಭವೇ ಮುಂತಾದ ಅವಸ್ಥಾಭೇದಗಳಲ್ಲಿ ಒಂದೊಂದರ ಸ್ವರೂಪವನ್ನು ವರ್ಣಿಸಿದರೂ ಆನಂತ್ಯವೇ ಬಂದು ಹೋಗುತ್ತದೆ. ಉದಾಹರಣೆ :—

ಹಂಸಾನಾಂ ನಿನದೇಷು ಯೈಃ ಕವಲಿತೈರಾಸಜ್ಯತೇ ಕೂಜತಾ-
  ಮನ್ಯಃ ಕೋಽಪಿ ಕಷಾಯಕಂಠಲುಠನಾದಾಘರ್ಘರೋ ವಿಭ್ರಮಃ |
ತೇ ಸಂಪ್ರತ್ಯಕಠೋರವಾರಣವಧೂದಂತಾಂಕುರಸ್ಪರ್ಧಿನೋ
  ನಿರ್ಯಾತಾಃ ಕಮಲಾಕರೇಷು ಬಿಸಿನೀಕಂದಾಗ್ರಿಮಗ್ರಂಥಯಃ ||

ಆವುವನುಂಡ ಹಂಸನಿನದಂಗಳೊಳಾವಗಮಿರ್ಪುದಂತು ಮ-
ತ್ತಾವುದೊ ನೂತ್ನಮಪ್ಪ ಮಧುರಸ್ವರಮುಣ್ಮೆ ಕಷಾಯಕಂಠದಾ- |
ರಾವಮವಿಂದು ಮತ್ತಕರಿಣೀವರದಂತಸಮಾನಕಾಂತಿಗಳ್
ತಾವರೆದಂಟುಗಳ್ ಭರದೆ ಪೋದುವಣಾಂ ಕಮಲಾಕರಂಗಳಿಂ ||

ಇದೇ ರೀತಿಯಾಗಿ ಉಳಿದೆಡೆಗಳಲ್ಲಿಯೂ ಊಹಿಸಿಕೊಳ್ಳಬೇಕು.

ಅಚೇತನಗಳಿಗಾದರೋ ದೇಶಭೇದದಿಂದಲೂ ಬಹುತ್ವವು ಬರುವುದು. ಬೇರೆ ಬೇರೆ ದಿಕ್ಕುಗಳಲ್ಲಿಯೂ ದೇಶಗಳಲ್ಲಿಯೂ ಸಂಚರಿಸುವ ಮತ್ತು ನೀರು, ಹೂವು ಮೊದಲಾದುವುಗಳ ಮೇಲೆ ಬೀಸಿಕೊಂಡು ಬರುವ ಗಾಳಿಗಳಿಗೆ ಪರಸ್ಪರ ವ್ಯತ್ಯಾಸವಿರುವುದು ಪ್ರಸಿದ್ಧವಾಗಿಯೇ ಇದೆ. ಮನುಷ್ಯ, ಪಶು, ಪಕ್ಷಿ, ಮುಂತಾದ ಚೇತನಗಳಿಗೂ ಕೂಡ ಕ್ರಮವಾಗಿ ಹಳ್ಳಿ, ಕಾಡು, ನೀರು, ಮೊದಲಾದ ಬೇರೆ ಬೇರೆ ಸನ್ನಿವೇಶಗಳಲ್ಲಿ ಬೆಳೆಯುವುದರ ಫಲವಾಗಿ ಪರಸ್ಪರ ವ್ಯತ್ಯಾಸವು ಅಧಿಕವಾಗಿ ಬರುವುದನ್ನು ಎಲ್ಲರೂ ನೋಡುತ್ತೇವೆ. ಅದನ್ನು ಸೂಕ್ಷ್ಮವಾಗಿ ನೋಡಿ ಇರುವುದಕ್ಕನುಸಾರವಾಗಿ ಎಷ್ಟರಮಟ್ಟಿಗೆ ವರ್ಣಿಸಿದರೆ ಅಷ್ಟರ ಮಟ್ಟಿಗೆ ಆನಂತ್ಯವು ಬರುತ್ತದೆ. ಉದಾಹರಣೆಗೆ— ಬೇರೆ ಬೇರೆ ಪ್ರಾಂತ ಮತ್ತು ದೇಶಗಳಲ್ಲಿರುವ ಮನುಷ್ಯರ, ಅದರಲ್ಲಿಯೂ ಹೆಂಗಸರ, ನಡೆನುಡಿಗಳಲ್ಲಿ ಎಷ್ಟೆಷ್ಟು ಅಂತರವಿರುವುದೆಂಬುದರ ಕೊನೆಯನ್ನು ಕಾಣಲು ಯಾರಿಗೆ

ತಾನೆ ಸಾಧ್ಯ? ಇವೆಲ್ಲವನ್ನೂ ತಮ್ಮ ಪ್ರತಿಭೆಗೆ ಅನುಸಾರವಾಗಿ ಸುಕವಿಗಳು ಉಪಯೋಗಿಸಿಕೊಳ್ಳುತ್ತಾರೆ.

ಈ ಬಹುತ್ವವು ಕಾಲಭೇದದಿಂದಲೂ ಬರುತ್ತದೆ. ಉದಾಹರಣೆಗೆ ದಿಕ್ಕು, ಆಕಾಶ, ಜಲ, ಮುಂತಾದ ಅಚೇತನಗಳಿಗೆ ಋತುಭೇದದಿಂದ ಭಿನ್ನತ್ವವು ಬರುವುದು. ಕಾಲವಿಶೇಷವನ್ನಾಶ್ರಯಿಸುವ ಉತ್ಕಂಠೆಯೇ ಮೊದಲಾದುವು ಚೇತನಗಳಿಗೂ ಪ್ರಸಿದ್ಧವಾಗಿಯೇ ಇದೆ. ಜಗತ್ತಿನಲ್ಲಿರುವ ಸಕಲವಸ್ತುಗಳನ್ನೂ ಸ್ವರೂಪಭೇದವನ್ನಾಶ್ರಯಿಸಿ ವರ್ಣಿಸುವುದಂತೂ ಸುಪ್ರಸಿದ್ಧವೇ. (ಈ ಒಂದೊಂದರ ಸಹಜವಾದ ಅಂತರವನ್ನೂ) ಇದ್ದುದನ್ನಿದ್ದಂತೆ ವರ್ಣಿಸಿಬಿಟ್ಟರೇಯೆ ಕಾವ್ಯಾರ್ಥವು ಆನಂತ್ಯವನ್ನು ಪಡೆದುಬಿಡುತ್ತದೆ.

ಕೆಲವರು ಇದಕ್ಕೆ ಹೀಗೆ ಆಕ್ಷೇಪಿಸಬಹುದು :—'ವಸ್ತುಗಳು ಸಾಮಾನ್ಯ (=universal) ರೀತಿಯಿಂದ ವಾಚ್ಯಗಳಾಗುತ್ತವೆಯೇ ಹೊರತು ವಿಶೇಷ (=particular) ರೂಪದಿಂದಲ್ಲ. ಕವಿಗಳು ತಾವು ಅನುಭವಿಸಿರುವ ಸುಖಾದಿಗಳ ಮತ್ತು ಅವುಗಳ ಕಾರಣಗಳ ಸ್ವರೂಪವನ್ನು ಅನ್ಯತ್ರ ಆರೋಪಿಸಿ, ಸ್ವಾನುಭವ ಪರಾನುಭವಗಳೆರಡಕ್ಕೂ ಸಾಮಾನ್ಯವಾದ ಸ್ವರೂಪವೇ ಅದೆಂದು ವರ್ಣಿಸುತ್ತಾರೆ. ಅಷ್ಟೇ ಹೊರತು ಯೋಗಿಗಳಂತೆ ಅವರೇನೂ ಭೂತಭವಿಷ್ಯದ್ವರ್ತಮಾನಗಳಲ್ಲಿನ ಅಪರಿಚಿತ ವಸ್ತುಗಳೆಲ್ಲವನ್ನು ಪ್ರತ್ಯಕ್ಷವಾಗಿ ನೋಡುವುದಿಲ್ಲ. ಈ ಅನುಭವವಿಷಯಗಳ ಸಾಮಾನ್ಯಾನುಭವವು ಎಲ್ಲ ಗ್ರಾಹಕರಿಗೂ ಸಾಧಾರಣವಾದುದರಿಂದಲೂ ಪರಿಮಿತವಾದುದರಿಂದಲೂ ಪುರಾತನರ ಅನುಭವಕ್ಕೆ ಗೋಚರವಾಗಿದ್ದಿರಬೇಕು ; ಎಂದ ಮೇಲೆ ಇನ್ನು ಹೊಸದಾದ ಅನುಭವಕ್ಕೆ ಅವುಗಳು ವಿಷಯವಾಗುವುದೆಂತು ? ಆದುದರಿಂದ ಅಂದಿನ ಆ ಅನುಭವಪ್ರಕಾರದ ವಿಶೇಷಗಳೇ ಇಂದಿನವರಿಗೆ ಅಭಿನವವೆನಿಸುವಂತೆ ಕಂಡರೆ ಅದು ಇಂದಿನವರ ಭ್ರಮೆ ಮಾತ್ರ. ಇರುವ ನೂತನತೆಯೆಲ್ಲವೂ ಹೇಳುವ ರೀತಿಯಲ್ಲಿ ಮಾತ್ರ ಇರಬಹುದು, ಅಷ್ಟೆ,' ಎಂದು.

ಇದಕ್ಕೆ ಈಗ ಸಮಾಧಾನವನ್ನು ಹೇಳುತ್ತೇವೆ :—ಸಾಮಾನ್ಯಮಾತ್ರದ ಆಶ್ರಯದಿಂದ ಕಾವ್ಯವು ಪ್ರವರ್ತಿಸುವುದೆಂದೂ, ಅದು ಪರಿಮಿತವಾದ ಕಾರಣ, ಮೊದಲೇ ಗೋಚರವಾಗಿಬಿಟ್ಟಿರುವುದೆಂದೂ, ಆದುದರಿಂದ ಕಾವ್ಯವಸ್ತುಗಳಿಗೆ ನವತ್ವವಿರಲಾರದೆಂದೂ ಹೇಳುವುದು ಸರಿಯಲ್ಲ. ಏಕೆಂದರೆ ಸಾಮಾನ್ಯಮಾತ್ರವನ್ನು ಆಶ್ರಯಿಸಿಯೇ ಕಾವ್ಯವು ಪ್ರವರ್ತಿಸುವುದು ನಿಜವಾದರೆ, ಮಹಾಕವಿಗಳು ಬರೆದ ಕಾವ್ಯಾರ್ಥಗಳಲ್ಲಿರುವ ಅತಿಶಯವು ಏತರಿಂದಾದುದು ? ಅಷ್ಟೇ ಅಲ್ಲದೆ ವಾಲ್ಮೀಕಿಯೊಬ್ಬನ ಹೊರತಾಗಿ ಮಿಕ್ಕ ಯಾರಿಗೂ ಕವಿಯೆಂಬ ಹೆಸರು ಕೂಡ ಸಲ್ಲಲಾರದು ;

ಏಕೆಂದರೆ, ಸಾಮಾನ್ಯವನ್ನು ಬಿಟ್ಟು ಬೇರೆ ಕಾವ್ಯಾರ್ಥವೇ ಇಲ್ಲವೆಂದು ನೀವೇ ಹೇಳಿದಂತಾಗಿರುವುದು ; ಮತ್ತು ಸಾಮಾನ್ಯವನ್ನು ಆದಿಕವಿಯೇ ಸಮಗ್ರವಾಗಿ ವರ್ಣಿಸಿಬಿಟ್ಟಿರುವನು. ಒಂದುವೇಳೆ ಉಕ್ತಿವೈಚಿತ್ರ್ಯವನ್ನು ಗಮನಿಸಿದರೆ ಈ ತೊಂದರೆ ಬರುವುದಿಲ್ಲವೆನ್ನಬಹುದು. ಅದಕ್ಕೆ ನಾವು ಪ್ರತಿಯಾಗಿ ಕೇಳಬೇಕಾಗುತ್ತದೆ—'ಈ ಉಕ್ತಿವೈಚಿತ್ರ್ಯವೆಂದರೆ ಯಾವುದು ?', ಎಂದು. 'ಉಕ್ತಿ'ಯೆಂದರೆ ಅರ್ಥವಿಶೇಷವನ್ನು ಬೋಧಿಸುವ ವಚನ, ಎಂದಿಷ್ಟೆ ಅರ್ಥ. ಅದರ ವೈಚಿತ್ರ್ಯವಿರುವಾಗ ಅರ್ಥದ ವೈಚಿತ್ರ್ಯವಿಲ್ಲದೆ ಹೋಗುವುದು ಹೇಗೆ ? ಏಕೆಂದರೆ ಶಬ್ದಾರ್ಥಗಳ ಸಂಬಂಧವು ಅವಿನಾಭಾವಸಂಬಂಧ. ಕಾವ್ಯದಲ್ಲಿ ಭಾಸವಾಗುವ ಅರ್ಥಗಳ ಸ್ವರೂಪವು ಗೃಹೀತವಾಗುವುದು ಕೂಡ ಶಬ್ದಸ್ವರೂಪವು ಗೃಹೀತವಾಗುವ ಸಾಧನಗಳಿಂದಲೇ ಹೊರತು ಬೇರೆ ಸಾಧನಗಳಿಂದಲ್ಲ. ಆದುದರಿಂದ ಅರ್ಥವೈಚಿತ್ರ್ಯದಲ್ಲಿ ಅವನಿಗೆ ಇಷ್ಟವಿರಲಿ, ಇಲ್ಲದಿರಲಿ, ಉಕ್ತಿವೈಚಿತ್ರ್ಯವನ್ನೊಪ್ಪುವವನು ಅದನ್ನೂ ಅನಿವಾರ್ಯವಾಗಿ ಒಪ್ಪಲೇಬೇಕಾಗುತ್ತದೆ. ಇದನ್ನೇ ಸಂಕ್ಷೇಪವಾಗಿ ಕೆಳಗಿನ ಶ್ಲೋಕದಲ್ಲಿ ಹೇಳಿದೆ :

> ವಾಲ್ಮೀಕಿವ್ಯತಿರಿಕ್ತಸ್ಯ ಯದ್ಯೇಕಸ್ಯಾಪಿ ಕಸ್ಯಚಿತ್ ।
> ಇಷ್ಯತೇ ಪ್ರತಿಭಾರ್ಥೇಷು ತತ್ತದಾನಂತ್ಯಮಕ್ಷಯಮ್ ॥

ವಾಲ್ಮೀಕಿಯನ್ನು ಬಿಟ್ಟರೆ ಇನ್ನೊಬ್ಬನ ಕಾವ್ಯದಲ್ಲಿಯಾಗಲಿ ಪ್ರತಿಭೆಯುಂಟೆಂದು ಹೇಳಬಯಸುವುದಾದರೆ ಆಗ ಪ್ರತಿಭೆಯ ಆನಂತ್ಯವು ಅಕ್ಷಯವೆನಿಸುವುದರಲ್ಲಿ ಸಂದೇಹವಿಲ್ಲ. ಅದೂ ಅಲ್ಲದೆ 'ಉಕ್ತಿವೈಚಿತ್ರ್ಯವು ಕಾವ್ಯದ ನವತ್ವಕ್ಕೆ ನಿಯಾಮಕ' ಎಂದು ಪೂರ್ವಪಕ್ಷಕಾರರು ಹೇಳುವ ಮಾತೂ ನಮ್ಮ ಪಕ್ಷಕ್ಕೇ ಪುಷ್ಟಿಯನ್ನೀಯುತ್ತದೆ. ಏಕೆಂದರೆ ಕಾವ್ಯಾರ್ಥಗಳ ಆನಂತ್ಯ ಮತ್ತು ಭೇದಗಳಿಗೆ ಕಾರಣವೆಂದು ನಾವು ಇದುವರೆಗೆ ಎಷ್ಟು ಪ್ರಕಾರಗಳನ್ನು ತೋರಿಸಿರುವೆವೋ ಅವೆಲ್ಲವೂ ಮತ್ತೆ ಉಕ್ತಿವೈಚಿತ್ರ್ಯದಿಂದ ಕೂಡಿ ದ್ವಿಗುಣತ್ವವನ್ನು ಪಡೆಯುತ್ತವೆ. ಉಪಮೆ, ಶ್ಲೇಷ, ಮೊದಲಾದ ಪ್ರಸಿದ್ಧ ಅಲಂಕಾರಗಳ ವರ್ಗವೇ, ಉಕ್ತಿವೈಚಿತ್ರ್ಯದಿಂದ ಪ್ರಯುಕ್ತವಾದಾಗ, ನಿರವಧಿಕವಾಗುವುದಲ್ಲದೆ ನೂರಾರು ಶಾಖೆಗಳನ್ನೂ ಪಡೆಯುತ್ತದೆ. ಉಕ್ತಿಯೂ ಭಾಷೆಯಿಂದ ಭಾಷೆಗೆ ಭಿನ್ನವಾಗುವುದರಿಂದ, ಯಾವುದಾದರೊಂದು ಭಾಷೆಯಲ್ಲಿ ಬರುವ ಅರ್ಥವೈಚಿತ್ರ್ಯವನ್ನು ದೃಷ್ಟಿಯಲ್ಲಿಟ್ಟು ಬರೆಯುವುದೂ ಕಾವ್ಯಾರ್ಥಗಳಿಗೆ ಆನಂತ್ಯವನ್ನು ತರುತ್ತದೆ. ಉದಾಹರಣೆಗೆ ಈ ಶ್ಲೋಕ[1]ವನ್ನು ನೋಡಿ :—

[1] ಇದು ಆನಂದವರ್ಧನನೇ ಬರೆದ ಶ್ಲೋಕ.

ಮಹಮಹ ಇತ್ತಿ ಭಣಂತಉ ವಜ್ಜದಿ ಕಾಲೋ ಜಣಸ್ಸ |
ತೋಇ ಣ ದೇಉ ಜಣದ್ದಣ ಗೋಅರೀ ಭೋದಿ ಮಣಸೋ ||

ಎನಗೆನಗೆಂದೇ ಜಪಿಸುತ
ಜನಗಳ ಕಾಲಮೆಲ್ಲ ಕಳೆಯುತಲಿರ್ದುಂ |
ಮನಗಳೊಳವರ್ಗೆ ಕಾಣಂ
ಜನಾರ್ದನನೆನಿಪ್ಪ ದೇವನಾ ಮಧುಮಥನಂ ||

(ಮೂಲದಲ್ಲಿರುವ 'ಮಹಮಹ' ಎಂಬ ಶಬ್ದಕ್ಕೆ 'ಎನಗೆನಗೆ' ಎಂಬರ್ಥವಿರುವಂತೆ ಸೈಂಧವಭಾಷೆಯಲ್ಲಿ 'ಮಧುಮಥನ' ಎಂಬರ್ಥವೂ ಇದೆ.)[1]

ಹೀಗೆ ಯಾವ ಯಾವ ರೀತಿಯಿಂದ ನೋಡಲಿ ಕಾವ್ಯಾರ್ಥಗಳಿಗೆ ಕೊನೆಯೇ ಕಾಣುವುದಿಲ್ಲ. ಆದರೂ ಇಷ್ಟನ್ನು ಹೇಳುತ್ತೇವೆ—

ಕಾರಿಕೆ

ಅವಸ್ಥಾದಿವಿಭಿನ್ನಾನಾಂ ವಾಚ್ಯಾನಾಂ ವಿನಿಬಂಧನಮ್ |
ಭೂಮ್ನೈವ ದೃಶ್ಯತೇ ಲಕ್ಷ್ಯೇ ತತ್ತು ಭಾತಿ ರಸಾಶ್ರಯಾತ್ || ೮ ||

ಅವಸ್ಥಾದಿಗಳಿಂದ ವಿಭಿನ್ನವಾಗುವ ಅರ್ಥಗಳನ್ನಳವಡಿಸಿಕೊಂಡು ಬರೆದಿರುವುದು ಲಕ್ಷ್ಯಗಳಲ್ಲಿ ಹೇರಳವಾಗಿ ಕಾಣಿಸುತ್ತದೆ. ಆದರೆ ಅದು ಶೋಭಿಸುವುದು ಮಾತ್ರ ರಸದ ಆಶ್ರಯದಿಂದಲೇ.

ವೃತ್ತಿ

ಅವಸ್ಥಾದಿಗಳನ್ನು ಹಿಂದೆಯೇ ತೋರಿಸಲಾಯಿತು. ಲಕ್ಷ್ಯಗಳಲ್ಲಿ ಹೇರಳವಾಗಿರುವುದರಿಂದ ಅದನ್ನು ಯಾರೂ ಇಲ್ಲವೆನ್ನುವಂತಿಲ್ಲ. ಈಗ ಸತ್ಕವಿಗಳ ಉಪದೇಶಕ್ಕಾಗಿ ಇದನ್ನೇ ಸಂಕ್ಷೇಪವಾಗಿ ಹೇಳಲಾಗುತ್ತದೆ:—

ಕಾರಿಕೆ

ರಸಭಾವಾದಿಸಂಬದ್ಧಾ ಯದ್ಯೌಚಿತ್ಯಾನುಸಾರಿಣೀ |
ಅನ್ವೀಯತೇ ವಸ್ತುಗತಿರ್ದೇಶಕಾಲಾದಿಭೇದಿನೀ || ೯ ||

ರಸ, ಭಾವ, ಮುಂತಾದುವುಗಳ ಸಂಪರ್ಕವಿರುವಂತೆಯೂ, ಔಚಿತ್ಯಕ್ಕೆ ಅನುಸಾರವಾಗಿರುವಂತೆಯೂ, ಮತ್ತು ದೇಶ, ಕಾಲ, ಮುಂತಾದ ಭೇದಗಳನ್ನೊಳಗೊಳ್ಳುವಂತೆಯೂ ವಸ್ತುಗತಿಯನ್ನು ಸಂಯೋಜಿಸಿದುದೇ ಆದರೆ—

[1] ಅಭಿನವಗುಪ್ತರ ಲೋಚನವನ್ನು ನೋಡಿ.

ವೃತ್ತಿ

—ಪರಿಮಿತವಾದ ಪ್ರತಿಭೆಯುಳ್ಳ ಮಿಕ್ಕ ಕವಿಗಳು ಯಾವ ಲೆಕ್ಕ—

ಕಾರಿಕೆ

ವಾಚಸ್ಪತಿಸಹಸ್ರಾಣಾಂ ಸಹಸ್ರೈರಪಿ ಯತ್ನತಃ ।
ನಿಬದ್ಧಾಪಿ ಕ್ಷಯಂ ನೈತಿ ಪ್ರಕೃತಿರ್ಜಗತಾಮಿವ ॥ ೧೦ ॥

ಸಹಸ್ರಸಹಸ್ರ ಬೃಹಸ್ಪತಿಗಳು ತಮ್ಮೆಲ್ಲ ಯತ್ನದಿಂದ ಒಟ್ಟಿಗೆ ಬರೆದರೂ ಅದು ಕುಗ್ಗುವುದಿಲ್ಲ—ಜಗತ್ತುಗಳಿಗೆಲ್ಲ ಅನಾದಿಕಾರಣವಾದ ಪ್ರಕೃತಿಯು ಹೇಗೆ (ತನ್ನ ವಸ್ತುವೈಚಿತ್ರ್ಯದಲ್ಲಿ) ಕ್ಷೀಣತ್ವವನ್ನು ಪಡೆಯುವುದಿಲ್ಲವೋ ಹಾಗೆಯೇ.

ವೃತ್ತಿ

ಕಳೆದ ಅನೇಕ ಯುಗಯುಗಾಂತರಗಳಿಂದ ವಸ್ತುವೈಚಿತ್ರ್ಯವನ್ನು ಪ್ರಕಟಿಸುತ್ತಿದ್ದರೂ ಜಗತ್ಕಾರಣವಾದ ಪ್ರಕೃತಿಯು ಹೇಗೆ ಇಂದಿಗೂ ಹೊಸ ಪದಾರ್ಥಗಳ ನಿರ್ಮಾಣಶಕ್ತಿಯಲ್ಲಿ ಕುಗ್ಗಿದೆಯೆಂದು ಹೇಳುವುದು ಸಾಧ್ಯವಿಲ್ಲವೋ ಹಾಗೆಯೇ ಕಾವ್ಯಸ್ಥಿತಿಯು ಕೂಡ ಅನಂತಸಂಖ್ಯೆಯ ಕವಿಬುದ್ಧಿಗಳಿಂದ ಉಪಭುಕ್ತವಾಗಿದ್ದರೂ ಇಂದಿಗೂ ಪರಿಕ್ಷೀಣವಾಗಿಲ್ಲ; ಅದಕ್ಕೆ ಬದಲು ಮತ್ತೂ ಹೊಸ ಹೊಸದಾದ ಕೃತಿನಿರ್ಮಾಣಗಳಿಂದ ಬೆಳೆಯುತ್ತಿದೆ. ಹೀಗಿದ್ದರೂ—

ಕಾರಿಕೆ

ಸಂವಾದಾಸ್ತು ಭವಂತ್ಯೇವ ಬಾಹುಲ್ಯೇನ ಸುಮೇಧಸಾಮ್ ।
ನೈಕರೂಪತಯಾ ಸರ್ವೇ ತೇ ಮಂತವ್ಯಾ ವಿಪಶ್ಚಿತಾ ॥ ೧೧ ॥

ಬುದ್ಧಿವಂತರಲ್ಲಿ ಸಮಾನಾಭಿಪ್ರಾಯಗಳು ಬೇಕಾದಷ್ಟು ಬಂದೇ ಬರುತ್ತವೆ. ಆದರೆ ವಿದ್ವಾಂಸನಾದವನು ಅವೆಲ್ಲವೂ ಒಂದೇ ಎಂದು ತಿಳಿಯಬಾರದು.

ವೃತ್ತಿ

'ಮೇಧಾವಿಗಳ ಆಲೋಚನೆಗಳು ಒಂದಕ್ಕೊಂದು ಸಮಾನವಾಗಿರುವುವೆಂಬುದು ನಿಜವೇ' ಎಂಬುದು ಕಾರಿಕೆಯ ಪೂರ್ವಾರ್ಧದ ಅರ್ಥ. ಉತ್ತರಾರ್ಧದ ವಿವರಣೆ ಹೇಗೆಂದರೆ—

ಕಾರಿಕೆ

ಸಂವಾದೋ ಹ್ಯನ್ಯಸಾದೃಶ್ಯಂ ತತ್ಪುನಃ ಪ್ರತಿಬಿಂಬವತ್ ।
ಆಲೇಖ್ಯಾಕಾರವತ್ ತುಲ್ಯದೇಹಿವಚ್ಚ ಶರೀರಿಣಾಮ್ ॥ ೧೨ ॥

ಹೀಗಿರುವ ಅನ್ಯಸಾದೃಶ್ಯವನ್ನೇ 'ಸಂವಾದ'ವೆನ್ನುತ್ತೇವೆ. ಅದು ಜೀವಿಗಳ ಪ್ರತಿಬಿಂಬದಂತಿರಬಹುದು, ಇಲ್ಲವೆ ಜೀವಿಗಳ ಚಿತ್ರಲೇಖದಂತಿರಬಹುದು, ಅಥವಾ ಜೀವಿಗಳ ಸಮಾನರೂಪದ ಬೇರೆ ಜೀವಿಗಳಂತಿರಬಹುದು.

ವೃತ್ತಿ

ಒಂದು ಕಾವ್ಯಾರ್ಥಕ್ಕೂ ಇನ್ನೊಂದು ಕಾವ್ಯವಸ್ತುವಿಗೂ ಇರುವ ಸಾದೃಶ್ಯವನ್ನೇ ಸಂವಾದವೆನ್ನುತ್ತೇವೆ. ಅದು ಮೂರು ಬಗೆಯೆಂದು ನಿರ್ಣಯಿಸಲಾಗಿದೆ— ದೇಹಿಗಳ ಪ್ರತಿಬಿಂಬದಂತೆ, ಇಲ್ಲವೆ ಚಿತ್ರದ ಆಕಾರದಂತೆ, ಅಥವಾ ಸಮಾನವಾದ ಬೇರೆ ದೇಹಿಗಳಂತೆ, ಎಂಬುದಾಗಿ. ಒಂದು ಕಾವ್ಯವಸ್ತುವಿಗೂ ಮತ್ತೊಂದು ಕಾವ್ಯವಸ್ತುವಿಗೂ ಇರುವ ಸಾದೃಶ್ಯವು ಪ್ರತಿಬಿಂಬದಂತೆ ಅಥವಾ ಚಿತ್ರದಂತೆ ಅಥವಾ ಸಮಾನವಾದ ಬೇರೆ ಆಕೃತಿಯಂತೆ ಇರುತ್ತದೆ.

ಕಾರಿಕೆ

ತತ್ರ ಪೂರ್ವಮನನ್ಯಾತ್ಮ ತುಚ್ಛಾತ್ಮ ತದನಂತರಮ್ ।
ತೃತೀಯಂ ತು ಪ್ರಸಿದ್ಧಾತ್ಮ ನಾನ್ಯಸಾಮ್ಯಂ ತ್ಯಜೇತ್ಕವಿಃ ॥ ೧೩ ॥

ಇವುಗಳಲ್ಲಿ ಮೊದಲನೆಯ ಬಗೆಯ ಸಾದೃಶ್ಯವು ಅಭಿನ್ನಾತ್ಮ ; ಎರಡನೆಯದು ಶೂನ್ಯಾತ್ಮ ; ಮೂರನೆಯದು ಮಾತ್ರ ಪ್ರಸಿದ್ಧವಾದ ಆತ್ಮವುಳ್ಳುದು. ಇಂತಹ ಅನ್ಯಸಾಮ್ಯವನ್ನು ಕವಿಯು ತ್ಯಜಿಸಬಾರದು.

ವೃತ್ತಿ

ಇವುಗಳಲ್ಲಿ ಪ್ರತಿಬಿಂಬದಂತಿರುವ ಮೊದಲನೆಯ ಕಾವ್ಯವಸ್ತುವನ್ನು ಬುದ್ಧಿವಂತನು ಬಿಟ್ಟುಬಿಡಬೇಕು ; ಏಕೆಂದರೆ ಅದಕ್ಕೆ ತನ್ನದೇ ಆದ ಒಂದು ಶರೀರವೇ ಇರುವುದಿಲ್ಲ. ಎರಡನೆಯ ಬಗೆಯದಾದ ಚಿತ್ರಲೇಖದಂತಹ ಅನ್ಯಸಾದೃಶ್ಯಕ್ಕೆ ಒಂದು ಶರೀರವಿದ್ದರೂ ಅದರ ಆತ್ಮವು ಶೂನ್ಯವಾದುದರಿಂದ ಅದನ್ನೂ ತ್ಯಜಿಸಬೇಕು. ಮೂರನೆಯದಾದ ಸಂವಾದಕ್ಕೂ ಸ್ವತಂತ್ರವಾದ ರಮಣೀಯ ಶರೀರವೊಂದು ಇನ್ನೊಂದರಂತೆಯೇ ಇರುವುದೆಂದುಕೊಂಡು ಕವಿಯು ಇದನ್ನೂ ತ್ಯಜಿಸಬಾರದು. ಏಕೆಂದರೆ ಒಬ್ಬ ವ್ಯಕ್ತಿಯು ಇನ್ನೊಬ್ಬನಂತೆ ಇದ್ದರೂ, ಇಬ್ಬರೂ ಒಬ್ಬರೇ ಎಂದು ಯಾರೂ ಹೇಳಲಾರರು ; (ಏಕೆಂದರೆ ಇಬ್ಬರ ಆತ್ಮಗಳೂ ಬೇರೆಬೇರೆಯಾಗಿರುತ್ತವೆ).

ಇದನ್ನೇ ಸಕಾರಣವಾಗಿ ಮುಂದಿನ ಕಾರಿಕೆಯಲ್ಲಿ ವಿವರಿಸಿದೆ:—

ಕಾರಿಕೆ

ಆತ್ಮನೋಽನ್ಯಸ್ಯ ಸದ್ಭಾವೇ ಪೂರ್ವಸ್ಥಿತ್ಯನುಯಾಯ್ಯಪಿ।
ವಸ್ತು ಭಾತಿತರಾಂ ತನ್ವ್ಯಾಃ ಶಶಿಚ್ಛಾಯಮಿವಾನನಮ್ ॥ ೧೪ ॥

ಕಾವ್ಯವಸ್ತುವಿಗೆ ತನ್ನದೇ ಆದ ಬೇರೊಂದು ಆತ್ಮವಿದ್ದಲ್ಲಿ, ಪೂರ್ವವಸ್ತುವಿನ ಸಾಮ್ಯವಿದ್ದರೂ ಕೂಡ ಸುಂದರವಾಗಿಯೇ ಕಾಣಿಸುತ್ತದೆ—ಚಂದ್ರನ ಸಾಮ್ಯವಿರುವ ಚೆಲುವೆಯ ಮುಖವು ಮನೋಹರವಾಗಿ ಕಾಣಿಸುವಂತೆಯೇ.

ವೃತ್ತಿ

ಸಾರಭೂತವಾದ ಧ್ವನಿತತ್ವವೆಂಬ ಆತ್ಮವು ಕಾವ್ಯವಸ್ತುವಿನಲ್ಲಿರುವುದಾದರೆ ಅದರಲ್ಲಿ ಪೂರ್ವವಸ್ತುಸಾಮ್ಯವಿದ್ದರೂ ಮತ್ತಷ್ಟು ಸುಂದರವೇ ಆಗುತ್ತದೆ. ಹಿಂದಿನ ರಮಣೀಯತೆಯ ಛಾಯೆಯು ಈಗಿನ ವಸ್ತುಶರೀರಕ್ಕೂ ಆವರಿಸಿಕೊಳ್ಳುವುದರಿಂದ ಇದು ಮತ್ತೂ ಶೋಭಿಸುತ್ತದೆಂದರ್ಥ. ಎಂದಿಗೂ ಪುನರುಕ್ತವೆಂದು ತೋರುವುದಿಲ್ಲ—ಚೆಲುವೆಯ ಚಂದ್ರಸದೃಶವದನದಂತೆ.

ಹೀಗೆ, ವಾಕ್ಯಸಮುದಾಯಗಳ ಅರ್ಥಗಳಲ್ಲಿ ಬರುವ ಅನ್ಯಸಾಮ್ಯಗಳು ಬೇರೆ ಬೇರೆ ವಿಧವಾಗಿರುತ್ತವೆ; ಒಂದೊಂದಕ್ಕೂ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ಇದುವರೆಗೂ ಹೇಳಲಾಯಿತು. ಆದರೆ ಪದಗಳ ಅರ್ಥಗಳಲ್ಲಿ ಬರುವ ವಸ್ತುಸಾದೃಶ್ಯಗಳಿಗೆ ದೋಷವೇ ಇಲ್ಲವೆಂದು ಪ್ರತಿಪಾದಿಸುವುದಕ್ಕಾಗಿ ಮುಂದಿನ ಕಾರಿಕೆಯನ್ನು ಹೇಳಿದೆ:—

ಕಾರಿಕೆ

ಅಕ್ಷರಾದಿರಚನೇವ ಯೋಜ್ಯತೇ
ಯತ್ರವಸ್ತುರಚನಾ ಪುರಾತನೀ।
ನೂತನೇ ಸ್ಫುರತಿ ಕಾವ್ಯವಸ್ತುನಿ
ವ್ಯಕ್ತಮೇವ ಖಲು ಸಾ ನ ದುಷ್ಯತಿ ॥ ೧೫ ॥

ಪುರಾತನವಾದ ವಸ್ತುರಚನೆಯು ಅಕ್ಷರವೇ ಮೊದಲಾದುವುಗಳ ರಚನೆಯಂತೆ ಮಾತ್ರ ಘಟಿತವಾಗಿದ್ದು, ಅಲ್ಲಿ ನೂತನವಾದ ಕಾವ್ಯವಸ್ತುವೂ ಸ್ಫುರಿಸುತ್ತಿದ್ದರೆ, ಅದರಲ್ಲಿ ಯಾವ ದೋಷವೂ ಇಲ್ಲವೆನ್ನುವುದು ವ್ಯಕ್ತವಾಗಿಯೇ ಇದೆ.

ವೃತ್ತಿ

ಹಿಂದೆಂದೂ ಇಲ್ಲದ ಅಕ್ಷರಗಳನ್ನೂ ಪದಗಳನ್ನೂ ನಿರ್ಮಿಸುವುದು ಬೃಹಸ್ಪತಿಗೂ ಸಾಧ್ಯವಾಗಲಾರದು. ಹಿಂದಿದ್ದಂತೆಯೇ ಅವುಗಳನ್ನು ಉಪಯೋಗಿಸಿಕೊಳ್ಳುವುದರಿಂದ ಕಾವ್ಯದ ನವತ್ವಕ್ಕೆ ಯಾವ ಕುಂದೂ ಬರುವುದಿಲ್ಲ.

ಶ್ಲಿಷ್ಟಾರ್ಥಗಳನ್ನುಳ್ಳ ಪದಸ್ವರೂಪಗಳಿಗೂ ಈ ಮಾತೇ ಅನ್ವಯಿಸುತ್ತದೆ. ಆದುದರಿಂದ—

ಕಾರಿಕೆ

ಯದಪಿ ತದಪಿ ರಮ್ಯಂ ಯತ್ರ ಲೋಕಸ್ಯ ಕಿಂಚಿತ್
ಸ್ಫುರಿತಮಿದಮಿತೀಯಂ ಬುದ್ಧಿರಭ್ಯುಜ್ಜಿಹೀತೇ ।
ಅನುಗತಮಪಿ ಪೂರ್ವಚ್ಛಾಯಯಾ ವಸ್ತು ತಾದೃಕ್
ಸುಕವಿರುಪನಿಬಧ್ನನ್ ನಿಂದ್ಯತಾಂ ನೋಪಯಾತಿ ॥ ೧೬ ॥

ಭೂಮಿಯ ಮೇಲೆ ಯಾವ ವಸ್ತುವೇ ಆಗಲಿ, ಅದು ಪುರಾತನವಸ್ತು ಸಾಮ್ಯವನ್ನು ಹೊಂದಿದ್ದರೂ ಹೊಂದಿರಲಿ, 'ಇದು ರಮ್ಯವಾದ ವಾಗ್ವಿಲಾಸ' ಎಂಬ ಬುದ್ಧಿಯು ಅದರಿಂದ ಲೋಕಕ್ಕೆ ಬರುತ್ತಿದ್ದರೆ, ಅಂತಹುದನ್ನು ವರ್ಣಿಸುವ ಕವಿಯು ಎಂದಿಗೂ ನಿಂದೆಗೆ ಪಾತ್ರನಾಗುವುದಿಲ್ಲ.

ವೃತ್ತಿ

"ಲೋಕಸ್ಯ . . . ಬುದ್ಧಿರಭ್ಯುಜ್ಜಿಹೀತೇ" ಎಂಬುದಕ್ಕೆ "'ಇದು ಅಪೂರ್ವವಾದ ಸ್ಫುರಣೆ' ಎಂಬ ಮನಸ್ಸಿನ ಚಮತ್ಕೃತಿಯು ಸಹೃದಯರಲ್ಲಿ ಹುಟ್ಟುತ್ತಿದ್ದರೆ" ಎಂದರ್ಥ. ಅಂತಹ ಕಾವ್ಯವಸ್ತುವು ಪೂರ್ವಸಾಮ್ಯದಿಂದ ಕೂಡಿದ್ದರೂ, ವಿವಕ್ಷಿತವಾದ ವ್ಯಂಗ್ಯ-ಮತ್ತು ವಾಚ್ಯಾರ್ಥಗಳನ್ನು ಬೋಧಿಸುವಂತಹ ಶಬ್ದಗಳ ಸಂಘಟನೆಯಿಂದ ಅದಕ್ಕೆ ಬಂಧಚ್ಛಾಯೆಯನ್ನು ಬೀರಿದರೆ ಸುಕವಿಯು ಎಂದೂ ನಿಂದೆಗೆ ಪಾತ್ರನಾಗುವುದಿಲ್ಲ. ಆದುದರಿಂದ ಇಷ್ಟು ಮಾತ್ರ ನಿರ್ವಿವಾದ:—

ಕಾರಿಕೆ

ಪ್ರತಾಯಂತಾಂ ವಾಚೋ ನಿಮಿತವಿವಿಧಾರ್ಥಾಮೃತರಸಾ
ನ ಸಾದಃ[1] ಕರ್ತವ್ಯಃ ಕವಿಭಿರನವದ್ಯೇ ಸ್ವವಿಷಯೇ ।
ಪರಸ್ವಾದಾನೇಚ್ಛಾವಿರತಮನಸೋ ವಸ್ತು ಸುಕವೇಃ
ಸರಸ್ವತ್ಯೇವೈಷಾ ಘಟಯತಿ ಯಥೇಷ್ಟಂ ಭಗವತೀ ॥ ೧೭ ॥

[1] 'ವಾದಃ' ಎಂಬ ಪಾಠಾಂತರವೂ ಉಂಟು.

ವಿಧವಿಧವಾದ ಅರ್ಥಗಳ ಅಮೃತರಸದಿಂದ ತುಂಬಿತುಳುಕುವ ಮಾತುಗಳನ್ನು ಬೇಕಾದಂತೆ ವಿಸ್ತರಿಸಿರಿ! ನಿರ್ದುಷ್ಟವಾದ ತಮ್ಮ ಉದ್ಯೋಗದಲ್ಲಿ ಕವಿಗಳು ಸ್ವಲ್ಪವೂ ವಿಷಾದಿಸಬೇಕಾಗಿಲ್ಲ! ಪರರ ಸ್ವತ್ತನ್ನು ಕೊಳ್ಳಲು ಮನಸ್ಸಿಲ್ಲದ ಸುಕವಿಗೆ ಬೇಕಾದಂತಹ ವಸ್ತುವನ್ನು ಭಗವತಿಯಾದ ಸರಸ್ವತೀದೇವಿಯೇ ತಂದೊದಗಿಸುತ್ತಾಳೆ!

ವೃತ್ತಿ

ಹೊಸದಾದ ಕಾವ್ಯಾರ್ಥಗಳು ಇಂದೂ ಇದ್ದೇ ಇವೆ. ಪರರು ಹೇಳಿಬಿಟ್ಟಿರುವ ಅರ್ಥವನ್ನೇ ಮತ್ತೆ ಹೇಳಿದರೆ ಕವಿಯ ಗುಣವೇನು ಕಂಡಿತೆಂದು ಯೋಚಿಸುವ ಕಾರಣವಿಲ್ಲ. ಪರರ ಸ್ವತ್ತನ್ನು ಅಪಹರಿಸುವ ಮನಸ್ಸಿಲ್ಲದ ಸುಕವಿಗೆ ಸರಸ್ವತೀ ದೇವಿಯೇ ಅವನ ಇಷ್ಟಾನುಸಾರ ವಸ್ತುಗಳನ್ನು ತಂದೊದಗಿಸುತ್ತಾಳೆ. ಪೂರ್ವಜನ್ಮಗಳ ಪುಣ್ಯಪರಿಪಾಕದಿಂದಲೂ ಈಗಿನ ಅಭ್ಯಾಸಾತಿಶಯದಿಂದಲೂ ಕವಿತ್ವದಲ್ಲಿ ಪ್ರವೃತ್ತಿಯುಂಟಾಗುವ ಪುಣ್ಯಶಾಲಿಗಳು ಪರರ ಅರ್ಥಗಳಲ್ಲಿ ನಿಸ್ಪೃಹರಾಗಿಯೇ ಇರುತ್ತಾರೆ. ಅವರಿಗೆ ತಾವು ಕಷ್ಟಪಡುವ ಉಪಯೋಗವೇ ಇರುವುದಿಲ್ಲ; ಏಕೆಂದರೆ ಭಗವತಿಯಾದ ಸರಸ್ವತಿಯೇ ಅವರಿಗೆ ಬೇಕುಬೇಕಾದ ಅರ್ಥವನ್ನೆಲ್ಲ ತಾನೇ ಕರುಣಿಸುತ್ತಾಳೆ. ವಸ್ತುತಃ ಇದೇ ಮಹಾಕವಿಗಳ ಮಹಾಕವಿತ್ವ!

ಇತ್ಯಕ್ಲಿಷ್ಟರಸಾಶ್ರಯೋಚಿತಗುಣಾಲಂಕಾರಶೋಭಾಭೃತೋ
ಯಸ್ಮಾದ್ವಸ್ತು ಸಮೀಹಿತಂ ಸುಕೃತಿಭಿಃ ಸರ್ವಂ ಸಮಾಸಾದ್ಯತೇ।
ಕಾವ್ಯಾಖ್ಯೇಽಖಿಲಸೌಖ್ಯಧಾಮ್ನಿ ವಿಬುಧೋದ್ಯಾನೇ ಧ್ವನಿರ್ದರ್ಶಿತಃ
ಸೋಽಯಂ ಕಲ್ಪತರೂಪಮಾನಮಹಿಮಾ ಭೋಗ್ಯೋಽಸ್ತು ಭವ್ಯಾತ್ಮನಾಮ್ ॥

ಇಂತಕ್ಲಿಷ್ಟರಸಾಶ್ರಯೋಚಿತಗುಣಾಲಂಕಾರಶೋಭಾವಹಂ
ಸ್ವಾಂತಾಂತರ್ಗತಸರ್ವವಸ್ತುನಿಕರಪ್ರೋನ್ಮೇಷಸಂಪಾದಕಂ।
ಸಂತೋಷಾಕರದೊಳ್ ಬುಧಾಳಿವನದೊಳ್ ಕಾವ್ಯಾಖ್ಯದೊಳ್ ಕಲ್ಪಭೂ-
ಜಂ ತಾನೀ ಧ್ವನಿಯೆಂದು ಪೇಳ್ದವದು ಮೇಣ್ ತೋಷಿಕ್ಕೆ ಭವ್ಯಾತ್ಮರಂ ॥

ಸತ್ಕಾವ್ಯತತ್ತ್ವನಯವರ್ತ್ಮಚಿರಪ್ರಸುಪ್ತ-
ಕಲ್ಪಂ ಮನಸ್ಸು ಪರಿಪಕ್ವಧಿಯಾಂ ಯದಾಸೀತ್।
ತದ್ವ್ಯಾಕರೋತ್ಸಹೃದಯೋದಯಲಾಭಹೇತೋ-
ರಾನಂದವರ್ಧನ ಇತಿ ಪ್ರಥಿತಾಭಿಧಾನಃ ॥

ಪರಿಪಕ್ವಬುದ್ಧಿಯುತರಿಗು-
ಮರಿಯಲ್ ನೆರೆಯದೆಯೆ ಕಂಡರುಂ ಕಾಣದವೋಲ್ |
ಮರೆಯಾಗಿರ್ದಾ ಕಾವ್ಯದ
ವರತತ್ವಮನಿಂತು ಪೇಳ್ದನಾನಂದಾಖ್ಯಂ ||

ಇಲ್ಲಿಗೆ ಶ್ರೀ ರಾಜಾನಕ-ಆನಂದವರ್ಧನಾಚಾರ್ಯ-ವಿರಚಿತವಾದ
'ಧ್ವನ್ಯಾಲೋಕ'ದಲ್ಲಿ ನಾಲ್ಕನೆಯ ಉದ್ದ್ಯೋತದ ಕನ್ನಡ ಅನುವಾದವು ಮುಗಿದುದು.

ಅನುವಾದಕನ ಸಮಾಪ್ತಿವಾಕ್ಯ

ಮುನ್ನಿಂ ಸಕ್ಕದನುಡಿಯೊಳ್ |
ಸನ್ನಿದಮಾಗಿರ್ದುಮಿನ್ನೆಗಂ ಕನ್ನಡದೊಳ್ |
ಸನ್ನಿದಮಲ್ತೆನಲೊರೆದಂ
ಕನ್ನಡದೊಳ್ ಕೃಷ್ಣಮೂರ್ತಿ ಧ್ವನಿದೀಪಿಕೆಯಂ ||

ಗುರುಗಳ ಕರುಣಾಬಲದಿಂ
ಸುರುಚಿರಮೆನಿಸಲ್ 'ಪ್ರಬುದ್ಧಕರ್ಣಾಟಕ'ದೊಳ್ |
ಪೊರಮಟ್ಟೀ ಧ್ವನಿತತ್ವಂ
ಮೆರೆಗನವರತಂ ಪ್ರಬುದ್ಧಕರ್ಣಾಟಕದೊಳ್ ||

ಡಾ || ಕೆ. ಕೃಷ್ಣಮೂರ್ತಿ

(ಸಂಪೂರ್ಣಂ)

ಕನ್ನಡಿಗನಿಗೆ

ಕೊನರಿಸಿದೆ ನುಡಿಯ ಚಿದ್‌ಕೀರ್ತಿಲತೆ ಈಜಿಪ್ತ[1]
ಮೇಣಿತರ ನಾಡಿನೊಳು ನೀನಂದೆ ಹಿಂದೆ!
ಇಂತಾದೆಯಿಂದೇಕೆ? ನಾಡನೇಕೀಕರಿಸ-
ಲೊಲ್ಲದೆಯೆ ನಿನ್ನ ಕುಲಪೆರ್ಮೆಯನೆ ಕೊಂದೆ?

ಹೆತ್ತೊಡಲ ಋಣವನ್ನೆ ಮರೆತೆಯೇಕೈ ನಾಡ
ನಲ್ಗುವರ! ನಿನ್ನಿಂದ ನಿನ್ನಬ್ಬೆವಧೆಯೆ?
ಕನ್ನಡವೆ ಉಸಿರೆಂದು ತಾಯೆ ಅಸು ಎನುತಂದು
ಸಾಧಿಸಿದ ನಿನಗಿಂತು ಘಾತುಕದ ಎದೆಯೆ?

ಕಾವ್ಯದಾ ಜೀವವಿದು ಕಬ್ಬಿಗರ ಭಾವವಿದು
ಕನ್ನಡವೆ, ಮೇಣಲ್ತೆ ಎಮ್ಮೆಲ್ಲರುಸಿರು!
ಏಕೆ, ಮೋನವನಾಂತೆ? ತೊದಲಿತೇನಾ ಜಿಹ್ವೆ
ಕನ್ನಡವ ಮರೆತುದಕೆ ಕಟ್ಟಿತೇನುಸಿರು!

ಹೇ ನುಡಿಯ ನಲ್ಗುವರ! ಮರುಳು ನೀನಾಗದಿರು
ಕನ್ನಡವೆ ಸೊಗಬಾಸೆ ಇದ ನಚ್ಚು—"ನನ್ನಿ!"
ನಿನ್ನ ಸಿರ—ನುಡಿಯಿದನೆ ಮರೆತೆಯೋ ಎಚ್ಚರಿರು!
ಶ್ವಾನದೊಲು ನಿನ್ನ ಬಾಳಾದಪುದು ಸೊನ್ನಿ!

ತಪ್ಪನೊಪ್ಪಬ್ಬೆಯಿಂ ಕ್ಷಮೆಯುಂಟು! 'ಅವಳ ಗುಡಿ'
ಯೇಳಿಗೆಗೆ ದುಡಿಯಲ್ಕೆ ನೀನೊಲವು ತೀವಿ!
ಹೆತ್ತೊಡಲೆ ಮುನಿಯುವುದೆ ಕಂದನೊಳು? ಓ ಬೀರ
ಹರಸುವಳೊ ಎಮ್ಮಬ್ಬೆ ನೀ ದುಡಿಯಲೋವಿ!

ಛಿದ್ರಿಸಿಹ ನುಡಿಯಬ್ಬೆದೇಗುಲವನೊಂದುಗೈ,
ತಾಯಿಗೊಂದಾಗರವ ನಿರ್ಮಿಸೈ ಕಲಿಯೆ
ಹೊತ್ತಿಸೈ ನುಡಿಯ ನಂದಾದೀಪವನು ರಕ್ತ
ತೈಲದಿಂದದುವೊಂದೆ ಪಥ ಮಾತೆಯೊಲಿಸೆ!

ಜಿ. ಎಸ್. ಸಿದ್ಧಲಿಂಗಯ್ಯ (ವಿದ್ಯಾರ್ಥಿ)

---

[1] ನಮ್ಮ ನುಡಿ ಕ್ರಿಸ್ತಶಕದ ಆರಂಭದಲ್ಲಿಯೇ ಕೆಲವು ಹೊರದೇಶಗಳಲ್ಲೂ ಪ್ರಚಾರದಲ್ಲಿತ್ತೆಂಬುದು "ಪೈ" ಮೊದಲಾದವರ ಸಂಶೋಧನೆಗಳಿಂದ ಸ್ಥಿರವಾಗಿದೆ.

ಹಣತೆ

ಜೀವನರಂಗದಲ್ಲಿ ಇದೋ ಹಗಲೆಂದರೆ ಮುಂದಿನ ಹೆಜ್ಜೆಗೇ ಇರುಳು. ಇರುಳಿನಲ್ಲೂ ಆನಂದವಿಲ್ಲದಿಲ್ಲ. ಕೋಟಿ ತಾರೆಗಳ ಮುಗುಳು ಹಗಲಿನಲ್ಲಿ ತೆರೆಯಮರೆಗೆ· ಹಾಗೆಯೇ ಹುಣ್ಣಿಮೆಯ ಚಂದಿರನ ಹಾಲ್ಬೆಳಕು. ಇರುಳಿನಲ್ಲಿನ ಆನಂದ ಹಗಲಿನಲ್ಲಿ ಇಲ್ಲವೇ ಇಲ್ಲ! ಇನ್ನು ಹಗಲು ; ಎಲ್ಲೆಡೆಯೂ ಪ್ರಕಾಶ. ಪ್ರಪ್ರಕಾಶದಲ್ಲಿನ ಆನಂದದ ಬಣ್ಣಗಳನ್ನು ಯಾರುತಾನೇ ಕಣ್ಣಿದ್ದೂ ಕಾಣರು ? ಅದೋ ? ಹಗಲು ಇರುಳಿಗೆ ಎಡೆಗೊಡುವುದರಲ್ಲಿಯೂ ಆನಂದವನ್ನು ಕಾಣುವೆ. ಇದೇ ಸಮಯದಲ್ಲಿ ಇಡೀ ಜಗತ್ತೇ ಮೈಮರೆಯಬಹುದು ; ಸುಖದ ತೋಳ್ಸೆರೆಯಲ್ಲಿಯೇ ತಲ್ಲೀನವಾಗಬಹುದು !

ಇನ್ನು ನಿನ್ನ ವಾಸದ ಮನೆಗೆ, ನಿನ್ನ ಜೀವನರಂಗಕ್ಕೇ ಇರುಳು ಇಳಿಯುವುದು ! ಇದೋ ಹಣತೆ ! ! ಚಾಂದೇವಿಯ ತುರುಬಿನಿಂದ ಬೆಳ್ಳಿಯನ್ನು ತಂದಿಟ್ಟುಕೊಂಡಂತೆ. ಅಲ್ಲವೇನು ? ! ಆದರೆ ಬತ್ತಿಗೆ ಎಣ್ಣೆಯನ್ನು ಉಣಿಸಿ ತಣಿಸಿ ಜತನದಿಂದ ಕಾಪಾಡಿಕೊಳ್ಳುವುದು ನಿನ್ನ ಮೇಲಿನ ಭಾರ. ಮೈಮರೆತರೆ ಮೃತ್ಯು ಸತ್ಯ. ತಪ್ಪು ನನ್ನದಲ್ಲ ; ದೇವನದಲ್ಲ ; ಪ್ರಕೃತಿಯದೂ ಅಲ್ಲ ; ನಿನ್ನದೇ ಅದು !

ಎಲ್ಲ ಕಾರ್ಯವನ್ನೂ ಬೆಳಕಿನಲ್ಲೇ ಮಾಡಬೇಕು. ಅದಕ್ಕಾಗಿಯೇ ಹಣತೆ ! ಆ ಬೆಳಕು ! ಅಷ್ಟನ್ನು ಕಾಪಾಡಿಕೊಳ್ಳದವರಿಗೆ ಸುತ್ತೆಲ್ಲ ಕತ್ತಲು. ಆದ್ದರಿಂದಲೇ ಕರ್ತವ್ಯವನ್ನು ಮರೆಯಬೇಡ. ಮರೆತು ಮಣಿಯಬೇಕಾಗುತ್ತದೆ. ಮೃತ್ಯುವಿನಲ್ಲಿ ಮರೆ ಹೊಕ್ಕರೂ ಪ್ರಯೋಜನವಾಗಲಾರದು.

* * * *

ಹೌದು, ಹೊಗೆಯ ಬಂಡಿ ! ಅದೇ ಅವನಿಗೆ ಜೀವನದಾತ. ನಿತ್ಯವೂ ನೇಸರುದಯಕ್ಕೆ ಮುಂಚೆಯೇ ನಸುಕಿನಲ್ಲಿಯೇ ಎಚ್ಚರಾಗಬೇಕು. ಗುಡಿಸಲಿನ ಮುಂದೆಯೇ ಇರುವ ನಿಲ್ದಾಣಕ್ಕೆ ಓಡಬೇಕು ! ಆರುಘಂಟೆಗೆ ಸರಿಯಾಗಿ ಕೈಮರ ಬಾಗಿ ಆಹ್ವಾನಿಸುವುದು. ರೈಲು ಬಂದು ನಿಲ್ಲುವುದು. ಇನ್ನು ಏರಬೇಕು ! ಬಾಗಿಲ ಬಳಿಯೇ ನಿಂತು ರೈಲು ನಿಲ್ದಾಣವನ್ನು ಬಿಡುತ್ತಲೇ ಹಾಡಲು ತೊಡಗಬೇಕು ! ಬೇಡ ಬೇಕು ! ಸಂಜೆಗೆ ಬರುವ ರೈಲಿನಲ್ಲಿ ಮತ್ತೆ ಅದೇ ನಿಲ್ದಾಣದಲ್ಲಿ ಇಳಿದು ಸಾಗಬೇಕು ! ಸುಸ್ತಾಗಿ ಗುಡಿಸಲು ಸೇರಬೇಕು ! ಇಷ್ಟೇ ಅವನ ನಿತ್ಯನಿಯಮ. ಅವನೇ ಮರಿಯಪ್ಪ ! ಮರಿಗ ! ! . . . ! ಎಲ್ಲರೂ ತಿಳಿದಂತೆ ಅವನ ತಾಯಿ-ನಂಜಿ-ಕರೆಯುತ್ತಿದ್ದುದೇ 'ಮರಿ' ಎಂದು.

ನಂಜಿ ನಮ್ಮ ಮನೆಯ ಕೆಲಸಗಾತಿ. ಎಂಟು ವರ್ಷಗಳ ಹಿಂದೆಯೇ ಅವಳ ಗಂಡ ತೀರಿಕೊಂಡಿದ್ದನು. ಅಂದಿನಿಂದಲೂ ಆ ತಾಯಿಮಕ್ಕಳು ನಮ್ಮ ಮನೆಯಲ್ಲಿಯೇ ಇರುತ್ತಾರೆ. ಮರಿಯು ಹೊಲದಲ್ಲಿ ಕೆಲಸಮಾಡುತ್ತಾನೆ. ದನಕರುಗಳನ್ನೂ ನೋಡಿಕೊಳ್ಳುತ್ತಾನೆ. ಇಬ್ಬರಿಗೂ ಊಟ ಉಡಿಗೆಗೆ ನಾನೇ ಹೊಣೆ.

ನಮ್ಮ ಹೊಲವೆಲ್ಲಾ ಆ ಬೆಟ್ಟಗುಡ್ಡಗಳ ಪಕ್ಕದಲ್ಲೇ ಇದೆ. ಆದರೆ ಪೈರಿಗಿರುವ ಗಂಡಾಂತರವೆಂದರೆ ಕಾಡುಹಂದಿಗಳಿಂದ. ಅಟ್ಟಣೆ ಹಾಕಿ ಕಣ್ಣಿಟ್ಟು ನಿದ್ರೆಬಿಟ್ಟು ಕಾವಲುಮಾಡಬೇಕು. ಅಂದರೇನೇ ಅರ್ಧಬೆಳೆ ಮನೆಗೆ ಬಂದೀತು!

ನಮ್ಮ ಊರಿನ ಬೇಟೆಗಾರರೆಲ್ಲಾ ಹೇಮಂತ ಋತುವಿನ ಮೊದಲದಿವಸಗಳಲ್ಲಿಯೇ ಭರ್ಜಿ ಕಂದಲುಗಳನ್ನು ಹಿಡಿದು, ಬಲೆಯನ್ನು ದೊಣ್ಣೆಯ ತುದಿಗೆ ಕಟ್ಟಿ ಹೆಗಲ ಮೇಲಿಟ್ಟು ಹುರುಪಿನಿಂದ ಶಿಳ್ಳೆಹಾಕುತ್ತಾ ಸಾಗುತ್ತಾರೆ. ಬೇಟೆ ನಾಯಿಗಳ ತಂಡವೇ ಅವರನ್ನು ಹಿಂಬಾಲಿಸಿರುತ್ತದೆ. ಗುರಿಕಾರ ಮಾದ ಹೆಗಲಮೇಲೆ ಕೋವಿಯಿಟ್ಟು ಕೊಂಡು ಮಾರ್ಗದರ್ಶಕನಾಗಿ ಠೀವಿಯಿಂದ ಮುಂದೆ ಮುಂದೆ ಸಾಗಿರುತ್ತಾನೆ.

ಅವರನ್ನು ನೋಡಿದಾಗಲೆಲ್ಲಾ 'ನಾನೂ ಬೇಟೆಯಾಡೇನು!' ಎಂದುಕೊಂಡಿರುತ್ತೇನೆ. ಒಂದು ತೋಟಾಕೋವಿಯ ಲೈಸೆನ್ಸ್ ಕೂಡ ಪಡೆದಿರುತ್ತೇನೆ. ಆದರೂ ಹಂದಿಯ ಹುಟ್ಟೋ ಅಡಗಿರುವುದಿಲ್ಲ. ಪೈರಿಗೆ ಆಪತ್ತೂ ಕಡಿಮೆಯಿರುವುದಿಲ್ಲ. ಆ ನಾಡ-ಬೇಟೆಗಾರರ ಬೇಟೆಯೆಲ್ಲಾ ವರ್ಷಕ್ಕೆ ಹಲವೇ ಹಂದಿಗಳು. ಉಳಿದುವೆಲ್ಲಾ ಮೊಲ, ಇಲಿಗಳು.

ಅಂದು ಇದ್ದಕ್ಕಿದ್ದಂತೆಯೇ ಪಕ್ಕದ ಮನೆಯಾಳು-ನಿಂಗನು-ಧಾವಿಸಿ ಬಂದು ನಿಂತನು. ಅವನ ಎದೆ ನಾಲ್ಕು ನಿಮಿಷಗಳ ನಂತರವೂ ಉಬ್ಬಿ ಉಬ್ಬಿ ಇಳಿಯುತ್ತಿದ್ದಿತು.

'. . . ಸಾಮಿ . . . ನಿಮ್ಮ . . . ಮ . . . ರೀ . . . ಗೇ . . . ಹಂದಿ ಹೊಡೀತ್ರ ಹೊಲ್ತಾವ . . .' ನಂಜಿ ಅಂಗಳದಲ್ಲಿಯೇ ಅಕ್ಕಿಯನ್ನು ಶುದ್ಧಮಾಡುತ್ತಿದ್ದಳು. '. . . ಹಾ . . . ಏನಪ್ಪ . . .' ಎಂದಳು.

'. . . ಮರೀಗ . . . ಹಂದೀ ಹೊಡೀತು ಹೊಲ್ತಾವ . . .'

'. . . ಅಯ್ಯೋ . . .'

ಎಂದು ಚೀರಿದವಳೇ ಕೈಲಿದ್ದ ಮೊರವನ್ನು ಹಾಗೆಯೇ ಬಿಟ್ಟು ಎದ್ದು ಓಡಿದಳು. ನಾನೂ ಹಿಂದೆಯೇ ನಡೆದೆನು.

ನಾನು ಹೊಲದ ಬಳಿ ಹೋಗಿ ನೋಡುವ ವೇಳೆಗೆ ಹಂದಿ ಸತ್ತುಬಿದ್ದಿತ್ತು. ಭರ್ಜಿಯೊಂದು ಅದರ ಹೃದಯವನ್ನೇ ಭೇದಿಸಿಕೊಂಡು ಹೋಗಿದ್ದಿತು. ಆ ತಾಯಿ

ಪ್ರಜ್ಞೆಯಿಲ್ಲದ ಮಗನ ತಲೆಯನ್ನು ತೊಡೆಯಮೇಲೇರಿಸಿಕೊಂಡು ಅವನ ಎದೆಯಲ್ಲಿ ಮೊಗವಿರಿಸಿ 'ಅಯ್ಯೋ ಕಂದಾ! . . . ಕಂದಾ! . . .' ಎಂದು ಚೀರುತ್ತಿದ್ದಳು. ಗುರಿಕಾರ ಮಾದ, ಸಿದ್ದರು ತಲೆಬಾಗಿ ನಿಂತಿದ್ದರು. ಮಾದನ ಬಂದೂಕವು ಅವನ ಪಕ್ಕದಲ್ಲೇ ನೆಲದಮೇಲೆ ಮಲಗಿದ್ದಿತು.

ಮರಿ ಎಂದಿನಂತೆ ಹೊಲದ ಬದುವಿನಲ್ಲಿ ಎತ್ತುಗಳನ್ನು ಬಿಟ್ಟು ಏನೋ ಕುರುಕು ಪದ ಹಾಡುತ್ತಾ ಕುಳಿತಿದ್ದನಂತೆ. ಮಾದನು ಹಾರಿಸಿದ ಗುಂಡಿನಿಂದ ಗಾಯ ಹೊಂದಿದ ಹಂದಿ ನುಗ್ಗಿತಂತೆ. ಗುರಿಕಾರ ಸಿದ್ದನೂ ಅದರ ಬೆನ್ನೇರಿ ಬಂದನಂತೆ. ಬಹಳ ಹತ್ತಿರಲೇ ಬಂದಾಗ ಮರಿ ಹಂದಿಯನ್ನು ನೋಡಿ ಏಳಲು ಪ್ರಯತ್ನಿಸಿದನಂತೆ. ಹಂದಿಯು ಹಾರಿ ಅವನ ಬಲತೋಳನ್ನೇ ಜಬ್ಬಿಬಿಟ್ಟಿತಂತೆ. ಸಿದ್ದನ ಭರ್ಜಿಯು ಸಿದ್ಧವಾಗಿರದಿದ್ದರೆ ಮರಿಯು ರುಂಡವನ್ನೇ ಹಿಂಡಿಬಿಡುತ್ತಿದ್ದಿತಂತೆ.

ಆಸ್ಪತ್ರೆಯಲ್ಲಿಯೇ ಅವನ ಬಲಗೈ ತೆಗೆದುಹಾಕಿದರು. ಇಲ್ಲದಿದ್ದರೆ ಗಾಯವೇ ಮಾಯುತ್ತಿರಲಿಲ್ಲವಂತೆ. ಕೈ ಎಲುಬುಗಳು ಮೂರುನಾಲ್ಕು ಕಡೆ ತುಂಡಾಗಿದ್ದುವಂತೆ.

ಹೊಲ ಮನೆಯ ಕೆಲಸಗಳಿಗಾಗಿ ಬೇರೊಬ್ಬ ಆಳನ್ನು ಕರೆತರಲೇಬೇಕಾಯಿತು. ತಿಮ್ಮನನ್ನು ಕರೆಯಿಸಿಕೊಂಡು ಆಳುತನಕ್ಕೆ ಇರಿಸಿಕೊಳ್ಳಲು ಪ್ರಯಾಸವೇನೂ ಆಗಲಿಲ್ಲ. ಹೇಗೂ ಮರಿಯ ಕೈಗಾಯ ಮಾಯಲು ಮೂರು ತಿಂಗಳು ಬೇಕಾಯಿತು. ತಾಯಿಯ ಜೊತೆಯಲ್ಲಿದ್ದು ಹೇಳಿದಷ್ಟು ಕೆಲಸಮಾಡಿಕೊಂಡಿರತೊಡಗಿದನು. ರಾತ್ರಿಯ ವೇಳೆಗೆ ಮಲಗಿಕೊಳ್ಳಲು ತಾಯಿಯೊಡನೆಯೇ ಗುಡಿಸಲಿಗೆ ಹೋಗಿಬಿಡುತ್ತಿದ್ದನು.

'ಮರಿಯ ಭವಿಷ್ಯವೇನು?' ಎಂಬ ಪ್ರಶ್ನೆ ಮನದಲ್ಲಿ ಮೂಡಿದುದುಂಟು. ಸಮಂಜಸ ಉತ್ತರ ದೊರಕದೇಹೋದುದೂ ಉಂಟು. ವಾರವೊಂದು ಹೇಗೊ ಕಳೆದಿದ್ದಿತು. ಅಂದು ನನ್ನ ಲಲಿತ ಕೇಳಿಯೇ ಕೇಳಿದಳು.

'—ನಿಮ್ಮ . . . ಮರಿಗನಿಗೆ . . . ಹಿಟ್ಟೊಂದು ದಂಡ . . . ಎಂದು ಸಾವಿತ್ರಮ್ಮ ಕೇಳಿದರು. . .'

'. . . ಯಾವಾಗ . . . ? . . .'

'. . . ಸಂಜೆ ನಮ್ಮ ಬಾವಿಗೆ . . . ನೀರಿಗೆ ಬಂದಿದ್ದಾಗ . . .'

'. . . ಅನ್ನುವವರು ಅನ್ನಲಂತೆ! . . .'

'. . . ಜವಾಬ್ದಾರಿಕೆ ಹೆಮ್ಮೆಯೆನ್ನುವುದಿಲ್ಲವೇ ? . . .'

'. . . ಲಲಿತ ನಿನಗಿನ್ನೂ ತಿಳಿಯದು . . . ಇಲ್ಲಿಯ ಜನರು ಏನಾದರೂ ಅನ್ನುವರು . . . ಅವರಂತೆ ಮಾಡಹೋದರೆ ಗತಿಗೆಟ್ಟು . . . ಹಾಳು ಬಾವಿಗೆ

ಬೀಳಬೇಕಾದೀತು . . . ಪಾಪ ! ನಮ್ಮನ್ನೇ ನಂಬಿದ್ದುದಕ್ಕಲ್ಲವೇ ಮರೀಗೆ . . . ಹೀಗಾದುದು ! . . . ಇನ್ನು ಅವನನ್ನು ಮನೆ ಬಿಡಿಸಿದರೆ ಏನುಮಾಡಬೇಕು ? . . . ಹೇಳು . . .'

'. . . ಏನುಮಾಡಬೇಕು ! . . . ಬೇರೆ ಜೀವನೋಪಾಯ ಹುಡುಕಬೇಕು ! . . .'

'. . . ಸರಿ. . . ಇನ್ನೇನಾದರೂ ಇದ್ದೀತೆ. . . ಎಂದು ನಾನೂ ಯೋಚಿಸಿದ್ದೇನೆ. . . ಇನ್ನೂ ಅದೇ ಚಿಂತೆ ಕೊರೆಯುತ್ತಿದೆ. . . ಮರಿಗೆ. . . ಆಸ್ತಿ ಪಾಸ್ತಿ. . . ಇಲ್ಲ. . . ಇದ್ದುದೆಲ್ಲಾ. . . ದಾಯಾದಿಗಳ ಪಾಲು. . . ಕುಳಿತು ತಿನ್ನುವಂತಿಲ್ಲ. . . ದುಡಿಯಲು . . . ದೈವ ಬಂದು ಕೈಮಾಡಿತು . . . ಉಳಿದಿರುವುದೊಂದೇ ದಾರಿ. . . ಭಿಕ್ಷೆ ಬೇಡಿ. . .'

'. . . ಛೆ. . . ಪಾಪ. . .'

ಎನ್ನುತ್ತಲೇ ಹತ್ತಿರಕ್ಕೆ ಜರುಗಿದಳು. ಅವಳ ಸ್ಥಿತಿ ನನ್ನ ಅರಿವಿಗೆ ತಾಕದೇ ಹೋಗಲಿಲ್ಲ. ಕೈನೀಡಿ ಹತ್ತಿರಕ್ಕೆ ಸೆಳೆದುಕೊಂಡೆನು. ಮತ್ತೇನೂ ನುಡಿಯಬೇಕೆನ್ನಿಸಲಿಲ್ಲ. ಒಮ್ಮೆಗೆ ನನ್ನ ಲಲಿತಳ ತಲೆಯ ಕುರುಳು ನನ್ನ ಕೆನ್ನೆಯನ್ನು ಸವರಿತು.

೨

ಮತ್ತೆ ಹದಿನೈದು ದಿವಸಗಳು ತಡೆಯಲೂ ಇಲ್ಲ. ಮರಿಯಲ್ಲಿ ತಾನೇ ತಾನಾಗಿ ಬದಲಾವಣೆಯೊಂದು ಕಾಣತೊಡಗಿತು. ಅಂದು ಅಂಚೆಯ ಡಬ್ಬಕ್ಕೆ ಪತ್ರವೊಂದನ್ನು ಹಾಕಿ ಬರಬೇಕಿದ್ದಿತು. 'ಮರಿ . . . ಮರಿ . . .' ಎಂದು ಎರಡು ಬಾರಿ ಕೂಗಿದರೂ ಉತ್ತರ ಬರಲಿಲ್ಲ. ಕೊಠಡಿಯಿಂದ ಹೊರಗೆ ಬಂದು ನೋಡಿದೆ. ಬಾವಿಯ ಬಳಿ ಮುಸುರೆ ತಿಕ್ಕುತ್ತಿದ್ದ ನಂಜಿಯ ಬಳಿಗೂ ಹೋಗಿ ಕೇಳಿದೆ. '. . . ಮರಿ . . . ಎಲ್ಲಿ ?' ಎಂದು.

'. . . ಎಲ್ಲೋ. . . ಕಾನೆ ಬುದ್ದಿ. . . ಜಗತೀ. . . ಮೇಗೆ ಕುಂತಿದ್ದನ. . .' ಎಂದಳು. ಹಿಂತಿರುಗಿಬಂದು ಜಗಲಿಯ ಮೇಲೆಯೂ ನೋಡಿದೆ. ಆದರೆ ಮರಿ. . .? . . . ಎಲ್ಲಿಗೋ ಬೇಸರಿಕೆಯನ್ನು ಕಳೆದುಕೊಳ್ಳಲು ಹೋಗಿರಬೇಕೆಂದುಕೊಂಡು ನಾನೇ ಅಂಚೆ ಕಛೇರಿಯ ಕಡೆ ನಡೆದೆ.

ಮರಿ ಮತ್ತೆ ಮನೆಗೆ ಬಂದಿದ್ದಾಗ ಮಧ್ಯಾಹ್ನ ಮೂರುಗಂಟೆಯಾಗಿತ್ತು. ಏತಕ್ಕಾಗಿಯೋ, ಏನೋ, 'ಎಲ್ಲಿಗೆ ಹೋಗಿದ್ದೆ'ಯೆಂದು ಕೇಳಲು ಮನ ಒಪ್ಪಲಿಲ್ಲ.

ಮರಿ ಮನೆಯಲ್ಲಿಯೇ ಏನು ಹೇಳುವರೋ ಎಂದು ಕಾದು ಕುಳಿತಿರುವುದು ತಪ್ಪಿಹೋಯಿತು. ಯಾರೋ ಆಗಿಂದಾಗ್ಗೆ ಬಂದು ಕರೆದೊಯ್ಯತೊಡಗಿದ್ದರು. ಒಮ್ಮೆ ಹೊರಟನೆಂದರೆ ಒಂದೆರಡು ಘಂಟೆಗಳ ನಂತರವೇ ಹಿಂತಿರುಗಿ ಬರುತ್ತಿದ್ದನು.

ಅಂದು ರಾತ್ರೆ ಊಟಕ್ಕೆಂದು ಕುಳಿತಾಗಲೇ ಕೇಳಿದಳು ಲಲಿತ. '... ಮರಿಯೇನು... ಹೊತ್ತಿಗೊತ್ತಿಗೆ... ಊಟಕ್ಕೆ ಬರುತ್ತಿಲ್ಲ... ಏನಾದರೂ ಕೆಲಸಕ್ಕೆಂದು ಕೂಗಿದರೆ ಇರುವುದೇ ಇಲ್ಲ... ನೀವಾದರೂ ಕೇಳಬಾರದೇ ? ...'

'... ನಂಜಿಯನ್ನು ಕೇಳಿದೆಯೇನು...? ...'

'... ಅದು ಯಾರೋ ಜೊತೆಗಾರನಂತೆ... ಅವನ ಗುಡಿಸಲ ಹತ್ತಿರ... ಅಲ್ಲೇ ಊಟ ಮಾಡ್ತಾನಂತೆ...'

'... ಹಾಗಿದ್ದರೆ... ಸರಿ ...'

ಲಲಿತಳೇನೋ ಮರುನುಡಿಯಲಿಲ್ಲ. ಆದರೆ ಅವಳಿಗೆ ಸಮಾಧಾನವಾಯಿತೋ ಇಲ್ಲವೋ ಹೇಳಲಾರೆ.

ಒಂದು ವಾರವೂ ಕಳೆಯಲಿಲ್ಲ. ತನ್ನ ಅಣ್ಣನ ಮಗನಿಗೆ ಜುಟ್ಟುಬಿಡಿಸುವ ಹಬ್ಬದ ನೆವ ದೊರಕಿ ಲಲಿತ ತೌರುಮನೆಯನ್ನು ಸೇರಿದಳು. ಮೂವರಿಗೆ ಸಾಕಷ್ಟು ದಿನಸಿ ಮತ್ತು ಇತರ ಪದಾರ್ಥಗಳನ್ನು ಕೊಟ್ಟು ನಂಜಿಯೇ ಅಡಿಗೆ ಮಾಡುವಂತೆ ಹೇಳಿದೆ. ನನಗೆ ಮಾತ್ರ ಅಗ್ಗಿಷ್ಟಿಕೆಯಮೇಲೆ ಅಡಿಗೆಮಾಡಿಕೊಳ್ಳತೊಡಗಿದೆ.

ಒಂದು ತಿಂಗಳು ಹೇಗೊ ಕಳೆಯಿತು. ಅಂದು ರಾಯಚೂರು ತಿಮ್ಮಯ್ಯನಿಂದ ಬರಬೇಕಾಗಿದ್ದ ಹಣದ ಲೆಖ್ಖಾಚಾರವನ್ನು ಪರಿಶೀಲಿಸುತ್ತಲೇ ಕುಳಿತಿದ್ದೆನು. ಒಮ್ಮೆ ತಿರುಗಿನೋಡಿದಾಗ ನಂಜಿ ಬಾಗಿಲಿನಲ್ಲೇ ನಿಂತಿದ್ದಳು. ಅವಳ ಮೊಗವನ್ನು ನೋಡುತ್ತಲೇ ಲೇಖನಿಯನ್ನು ಮೇಜದಮೇಲಿರಿಸಬೇಕೆನ್ನಿಸಿತು.

'... ಮ ... ರೀ ... ಯ ...'

ಏಕೋ ಅವಳ ಗಂಟಲು ಒತ್ತಿಬಂದಿದ್ದಿತು. ನಯನಗಳಲ್ಲಿ ನೀರಿನ ತೆರೆ ಸರಿದು ನಿಂತಿದ್ದುವು. ಆಗಲೇ ಸುಕ್ಕುಸುಕ್ಕಾಗಿದ್ದ ಆ ತಾಯಿಯ ಮೊಗದಲ್ಲಿನ ಕಣ್ಣುಗಳ ಕೆಳಬದಿಗೆ ನೀಳವಾದ ಕಪ್ಪುಗೆರೆ ಮೂಡಿ ಕಾಣತೊಡಗಿತ್ತು. ಒಂದೆರಡು ನಿಮಿಷಗಳು ಮೌನವಾಗಿಯೇ ಕಳೆದುವು. ಸೆರಗಿನಿಂದ ಕಣ್ಣನ್ನು ಒರೆಸಿಕೊಂಡಳು.

'... ನೀ ... ವಾದ್ರೂ ... ವಸಿ ಹೇಳ್ರಿ ... ಮರೀಗೆ ...'

'... ಯಾಕೆ ... ನಂಜೀ ... ಏನಾಯಿತು ...? ...'

'... ಅವ... ಭಿಕ್ಷೆ... ಯೆತ್ತಾಕಂತ... ಹೋಯ್ತಾನ್ರಿ... ಹೇಳಿದ್ರೂ... ಕೇಳಕ್ಕಿಲ್ರಿ... ನಿಮ್ಮ... ಮನೆಯಾಗೇ... ಹೇಳಿದೋಟು... ಮಾಡಿಕೊಂಡು ಇದ್ರಿ... ಆಗದಾ...'

'... ನಾನು... ಅವನ್ನ... ಈಚೆಗೆ... ಕಂಡೇಇಲ್ವಲ್ಲ... ಹೆಂಗೆ ಹೇಳಲಿ...? '

'. . . ಹೊತ್ತೀನೆ. . . ಎದ್ದು. . . ರೈಲಿಗೆ ಹೋಯ್ತಾನ. . . ಸಂದೀಕೆ ಸಾಮಿ ಮುಣುಗಿದ ಮೇಗೆ ಬತ್ತಾನೆ. . .'

'. . . ಆಗಲಿ. . . ಹೇಳ್ತೀನೆ. . .' ಎಂದೆ.

ನಂಜಿಗೆ ಸ್ವಲ್ಪ ಸಮಾಧಾನವಾಗಿರಬೇಕು. ಅಂತೆಯೇ ಮೌನವಾಗಿ ನಡೆದಳು. ಆದರೆ ಮೂರು ನಾಲ್ಕು ದಿವಸಗಳು ಕಳೆದರೂ ಮರಿಯನ್ನು ಕಾಣಲು ಅವಕಾಶವೇ ದೊರಕಲಿಲ್ಲ.

ಮತ್ತೊಂದು ವಾರ ಕಳೆಯಿತು. ಬೆಂಗಳೂರಿಗೆ ಹೋಗಿಬರಬೇಕಾಗಿ ಬಂದಿತ್ತು. ನಿತ್ಯವೂ ನಮ್ಮ ಮನೆಯಲ್ಲಿಯೇ ಮಲಗಿಕೊಳ್ಳುತ್ತಿದ್ದ ತಿಮ್ಮನಿಗೆ ಎಚ್ಚರಿಕೆಯಿಂದಿರುವಂತೆ ಹೇಳಿ ಹೊರಟೆ.

ನಾಲ್ಕು ದಿವಸಗಳನಂತರ ಬಂದಾಗ ತಿಮ್ಮ ಮನೆಯ ಬಾಗಿಲಿಗೆ ಹಾಕಿದ್ದ ಬೀಗವನ್ನು ತೆಗೆಯುತ್ತಲೇ ಹೇಳಿದನು. '. . . ಸಂಜಿ. . . ತೀರಿಕೊಂಡ್ಲು. . .'

'. . . ಯಾವಾಗ. . . ? . . . ಏನಾಗಿದ್ದಿತು ? . . .'

'. . . ಮೊನ್ನೆ ಆಯ್ತಾರ. . . ರಾತ್ರಿಗೇನೇ. . . ನೆನ್ನೆ ಈಟೊತ್ತಿಗೆ. . . ಒಪ್ಪವಾಯ್ತುರ. . . ಇಪ್ಪತ್ತು ದಪ. . . ವಾಂತಿಯಾಯ್ತುಂತರ. . . ತೀರಿಕೊಂಡ್ಲು . . .'

ಬಾಗಿಲನ್ನು ಹಿಂದಕ್ಕೆ ತೆರೆದನು. ಒಳಕ್ಕೆ ಕೈಚೀಲವನ್ನೆಸೆದು ಕೋಟು ಟೋಪಿಗಳನ್ನು ತಿಮ್ಮನ ಕೈಗಿತ್ತು ಹೊರ ಹೊರಟೆ.

ನಂಜಿಯ ಜೋಪಡಿಯ ಮುಂದೆ ನಿಂತಾಗ ಅದರ ಬಿದಿರು ತಟ್ಟಿಯ ಬಾಗಿಲು ಮುಚ್ಚಿದ್ದಿತು. ಹಾಗೆಯೇ ನಿಧಾನವಾಗಿ ಹಿಂತಿರುಗಿದೆ. ಹತ್ತಿರದ ಗುಡಿಸಲಿನ ಬಳಿಯಿದ್ದ ಹೆಂಗಸೊಬ್ಬಳು ನುಡಿದುದು ಕೇಳಿಸಿತು '. . . ನಂಜವ್ವನ. . . ಈವತ್ತು . . . ನೋಡಾಕೆ. . . ಬಂದವ್ರು. . . ಅಯ್ಯಾರು. . . ಅವಳು ದೇವರ ಪಾದ ಸೇರಿ ಮೂರು ದಿನವಾದಮೇಗೆ. . .'

ಅತ್ತ ತಿರುಗಿ ನೋಡಲೂ ಧೈರ್ಯವಾಗಲಿಲ್ಲ. ನೇರವಾಗಿ ಮನೆಯ ದಾರಿ ಹಿಡಿದು ನಡೆದೆ.

ಕಾಗದ ಕಂಡಕೂಡಲೇ ಬರುವುದೆಂದು ಬರೆದು ಲಲಿತಳನ್ನು ಬರಮಾಡಿಕೊಂಡೆ. ನಂಜಿ ತೀರಿಕೊಂಡ ವಿಚಾರ ಕೇಳುತ್ತಲೇ ಅವಳ ಮನವೂ ನೋವುಕಂಡಿತು. ಎರಡು ವರ್ಷಗಳಿಂದಲೂ ಅವಳು ನಂಜಿಯನ್ನು ಬಲ್ಲಳು. 'ಮತ್ತೊಬ್ಬಳು' ಹೆಣ್ಣಾಳನ್ನು ಇರಿಸಿಕೊಳ್ಳುವೆಯೇನು ?. . .' ಎಂದು ಕೇಳಿದಾಗ '. . . ನಂಜಿಯಂತಹ. . . ಹೆಂಗಸು. . . ದೊರಕಬೇಕಲ್ಲ. . . ಆ ಕೆಲಸ. . . ನಾನೇ ಮಾಡಿಕೊಳ್ಳುವೆನು. . . ಇನ್ನು ಬೇರೆ. . . ಕರೆಸಬೇಡಿರಿ. . .' ಎಂದಳು.

ಆದರೆ ಮತ್ತೆ ಕೇಳಿದಳು '. . . ಮರಿ. . . ಏನುಮಾಡಿಕೊಂಡಿದ್ದಾನೆ. . . ? . .' ಎಂದು.

'. . . ರೈಲಿನಲ್ಲಿ ಭಿಕ್ಷೆ ಬೇಡುತ್ತಾನಂತೆ. . .'

'. . . ಅದೇಕೆ. . . ಹಾಗಾದನು ? . . .'

'. . . ಯಾಕೆಂದರೆ ! . . . ಯಾರದೋ. . . ಜೊತೆಯಿರಬೇಕು. . . ನಂಜಿಯೇ ಅಂದು ಹೇಳಿದ್ದಳು. . . ರೈಲಿನಲ್ಲಿ ಭಿಕ್ಷೆ ಬೇಡುವುದಾದರೆ. . . ಅವನಿಗೇನೂ. . . ತೊಂದರೆಯಿರಲಾರದು. . . ನಿತ್ಯವೂ ಒಂದೆರಡು ರೂಪಾಯಿಯಾದರೂ ಸಿಗುತ್ತದೆ. . . ಅವನ ಜೀವನಕ್ಕೂ ತೊಂದರೆಯಿರಲಾರದು. . .'

ಲಲಿತಳು ಮತ್ತೇನೂ ಕೇಳಲಿಲ್ಲ. ಮೌನವಾಗಿ ಮಂಚದಬಳಿಗೆ ಹೋಗಿ ಹಾಸಿಗೆಯಲ್ಲಿ ಮಲಗಿಕೊಂಡಳು.

ನಾನು ಮತ್ತೆ ಮರಿಯನ್ನು ಕಂಡುದೆಂದರೆ ರೈಲಿನಲ್ಲಿಯೇ ಬೆಂಗಳೂರಿಗೆ ಹೋಗುವಾಗ್ಗೆ. ಆಗಲೇ ಎಣಿಕೆಮಾಡಿ ನೋಡಿದೆನು. ಅವನ ತಾಯಿ ತೀರಿಕೊಂಡು ಮೂರು ತಿಂಗಳಾಗಿ ಎರಡು ವಾರಗಳು ಕಳೆದಿದ್ದುವು. ಮರಿ ನಾನು ಕುಳಿತಿದ್ದ ಡಬ್ಬಿಗೇ ಹತ್ತಿದ್ದನು. ಗಾಡಿಯು ನಿಲ್ದಾಣವನ್ನು ದಾಟುತ್ತಿದ್ದಂತೆಯೇ ಹಾಡತೊಡಗಿದ್ದನು :—

ಭುವಿಯೆ ಒಂದು ಹೊಗೆಯಗಾಡಿ |
ಏರುವರು ಇಳಿಯುವರು ಎಲ್ಲಾ || ಪ ||

ಐದು ನುಡಿಗಳ ಆ ಹಾಡು ಭಾವಪೂರಿತವಾಗಿಯೇ ಇದ್ದಿತು. ಏರುದನಿಯಲ್ಲಿ ರಾಗರಾಗವಾಗಿ ಹಾಡಿದ್ದನು. ' ಎಂತಹ ಮಧುರ ಕಂಠ . . .' ಎಂದುಕೊಳ್ಳದಿರಲಾಗಲಿಲ್ಲ. ನನ್ನ ಇದುರಿನಲ್ಲಿಯೇ ಕುಳಿತಿದ್ದ ಹಿರಿಯರೊಬ್ಬರು ತಲೆದೂಗುತ್ತಾ ಕೇಳುತ್ತಿದ್ದರು.

' ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದಾ. . .' ಎಂದು ಇನ್ನೊಂದು ಹಾಡನ್ನು ಹಾಡುತ್ತಲೇ ಕೈಯನ್ನು ಮುಂದೆ ನೀಡಿ ನನ್ನ ಮುಂದೆಯೇ ಸಾಗಿದನು. ನಾನೂ ಜೇಬಿನಿಂದ ಒಂದು ನಾಣ್ಯವನ್ನು ತೆಗೆದುಹಾಕಿದೆನು. ಹಲವರು ಒಂದಾಣೆಯೋ ಎರಡಾಣೆಯೋ ಹಾಕಿ ಮೂರುಕಾಸೋ ಆರುಕಾಸೋ ಬಿಟ್ಟು ಉಳಿದ ಚಿಲ್ಲರೆ ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದರು. ಅದಾವುದರ ಕಡೆಗೂ ಅವನ ಗಮನವಿರಲಿಲ್ಲ. ಹಾಡುತ್ತಲೇ ಸಾಗಿದ್ದನು. ಒಂದು ಸುತ್ತು ಬರುತ್ತಲೇ ಮೊದಲು ನಿಂತು ಹಾಡುತ್ತಿದ್ದ ಸ್ಥಳಕ್ಕೆ ಹೋಗಿ ಕೈಯಲ್ಲಿದ್ದ ದುಡ್ಡನ್ನೆಲ್ಲಾ ಜೇಬಿಗೆ ಸುರಿದುಕೊಂಡು ಕುಳಿತನು. ಮುಂದಿನ ನಿಲ್ದಾಣ ಬಂದು ರೈಲು ನಿಲ್ಲುತ್ತಲೇ ಇಳಿದು ಹೋಗಿಬಿಟ್ಟನು

ನಾನು ಅಂದಿನ ಸಂಜೆಗೇ ಹಿಂತಿರುಗಿ ಬರಬೇಕಿದ್ದಿತು. ಮರಿಯ ಹಾಡನ್ನು ಮತ್ತೊಮ್ಮೆ ಕೇಳುವ ಸುಯೋಗವೂ ದೊರಕಿತು. ಅದೇ ಭಾವಪೂರ್ಣ ಗಾನ! ಅದೇ ಮಧುರ ಕಂಠ! ಸಂಗೀತಗಾರರು ಏನೆನ್ನುವರೋ ಹೇಳಲಾರೆ. ನನ್ನ ಮನ ವೇನೋ ತೃಪ್ತಿಹೊಂದಿತು.

ಭುವಿಯೆ ಒಂದು ಹೊಗೆಯಗಾಡಿ |
ಏರುವರು ಇಳಿಯುವರು ಎಲ್ಲಾ || ಪ ||

ಮಡದಿಯೆಂಬರು, ಮಕ್ಕಳೆಂಬರು,
ಬಂಧುಬಳಗಗಳೆಂಬರು,
ನೇಹವೆಂಬರು, ಮೋಹವೆಂಬರು,
ಪ್ರೇಮದೊಲವೆಂದೆಂಬರು.
ಆದರೆಲ್ಲರು ಏರುವರು ಇಳಿಯುವರು ಇಲ್ಲೀ || ೧ ||

ನಾನು ಬೇರೆಂದು, ನೀನುಬೇರೆಂದು,
ಎನ್ನುಸಿರದೆನ್ನುವರು,
ನನ್ನದೆನ್ನುವರು, ನಿನ್ನದೆನ್ನುವರು,
ಹೋರಾಡಿ ಮೆರೆಯುವರು,
ಯಾರು ಏರಿದರೇನು ಇಳಿಯಲೇ ಬೇಕಿಲ್ಲೀ || ೨ ||

ಸಿರಿಯ ದೊರೆಯೆಂದು, ಕಡುಬಡವನೆಂದು,
ಕೀಳುಮೇಲೆನ್ನುವರು,
ನಾಕ ನನಗೆಂದು, ನರಕ ನಿನಗೆಂದು,
ಅಳಿವುಉಳಿವೆನ್ನುವರು,
ಏರಿಳಿತದಲಿ ಅಳಿವು ಉಳಿವಿಹುದು ಇಲ್ಲೀ || ೩ ||

ದೂರ ದೂರೆಂದು, ಸನಿಹವೇ ಎಂದು,
ಬಂದಿತೆನ್ನೂರೆಂದು,
ನೆನ್ನೆ ಕಳೆದಿದೆ, ಇಂದು ಸಂದಿದೆ,
ನಾಳೆ ಬಹುದೂ ಎಂದು,
ನಿತ್ಯದಲು ಏರುವರು ಇಳಿಯುವರು ಎಲ್ಲಾ || ೪ ||

ಇಂದು ನೆನ್ನೆಯ ನಾಳೆಯಾ ಮೋಹ,
ಬಾರದೆಂದಿಗು ಹಿಂದೆ,
ಜಗದ ಪಿತನಡಿಗಳಿಗೆ ಸಿರಬಾಗಿ,
ತನುಮನಧನವನಿರಿಸಿ,
ಏರಿಳಿದು ಪೋಗಿಂದು,
ಬಯಸದಿರು ಮರಳೀ . . . || ೫ ||

ಭಾವದ ಅಮಲಿನಲ್ಲಿ ಮೈಮರೆತಿದ್ದು ರೈಲು ಮುಂದಿನ ನಿಲ್ದಾಣಕ್ಕೆ ತಲುಪಿದ್ದು ದೂ ತಿಳಿಯದೆ, ಕೈಯಲ್ಲಿ ಬಿಚ್ಚಿ ಹಿಡಿದಿದ್ದ 'ಹಿಂದು' ಪತ್ರಿಕೆಯಲ್ಲಿ ಶೂನ್ಯದೃಷ್ಟಿಯಿಟ್ಟು ಕುಳಿತಿದ್ದೆನು. ಮರಿ ಯಾವಾಗಲೋ ಇಳಿದುಹೋಗಿದ್ದನು. ಸಂಜೆಯು ಹೇಳಿದುದು ನೆನಪಾಗಿ, ಹೇಗಿದ್ದರೂ ನಮ್ಮೂರ ನಿಲ್ದಾಣದಲ್ಲಿಯೇ ಇಳಿದು, ಮನೆಗೆ ಹೋಗುವ ಮುನ್ನವೇ ಕಂಡು ನುಡಿಸಿದರಾಯಿತೆಂದು ಸಮಾಧಾನ ತಂದುಕೊಂಡು ಕುಳಿತೆ.

ನಮ್ಮೂರ ನಿಲ್ದಾಣವೂ ಬಂದಿತು. ಇಳಿದು ನಿಂತು ನೋಡಿದೆ. ಮರಿಯಾಗಲೇ ನಿಲ್ದಾಣದ ಅಂಚಿನಕಡೆ ನಡೆದಿದ್ದನು. ನಾನೂ ಹಿಂಬಾಲಿಸಿ ನಡೆದೆ. ನಿಲ್ದಾಣದ ಅಂಚಿಗೆ ಸಾಲಾಗಿ ನಿಲ್ಲಿಸಿದ್ದ ಮರದ ಪಟ್ಟಿಗಳನ್ನು ದಾಟಿದೆ. ಮರಿಯಾಗಲೇ ಅಡ್ಡ ಸಿಕ್ಕಿದ ದಾರಿಯನ್ನು ದಾಟಿ ಬುಗುರಿಯ ಮರದ ಬಳಿ ಹೋಗುತ್ತಿದ್ದ. ಇನ್ನೇನು ಅವನ ಗುಡಿಸಲು ಸಮೀಪವೇ! 'ಮರಿ' ಎಂದು ಕೂಗಿದೆ. ಬಾಗಿಲಿನ ಮುಂದೆಯೇ ತಿರುಗಿನೋಡಿದ. ಹಾಗೆಯೇ ನಾಚಿ ನಿಂತು ನುಡಿದ '. . . ಏನು ಸ್ವಾಮಿ . . .' ಎಂದು.

ನಾನೂ ಮುಂದೆ ಹೋಗಿ ದಾರಿಯ ಅಂಚಿನಮೇಲೆ ನಿಂತುಕೊಂಡೆ. ಹಾಗೆಯೇ ಹೇಳಿದೆ.

'. . . ನೋಡು ನಿಮ್ಮಪ್ಪನ ಲೆಖ್ಖಾಚಾರವಾಗಬೇಕು. . . . ಪುರಸತ್ತು ಮಾಡಿಕೊಂಡು ಬರ್‍ತೀಯಾ . . .' ಆ ವೇಳೆಗೆ ಸರಿಯಾಗಿ ಗುಡಿಸಲಿನ ಬಿದಿರುತಟ್ಟಿಯ ಬಾಗಿಲು ಪೂರ್ತಾ ತೆರೆಯಿತು. ಹೆಂಗಸೊಬ್ಬಳು ಅಲ್ಲಿಯೇ ಹೊಸ್ತಿಲಿನಿಂದ ಒಳಕ್ಕೇ ನಿಂತಳು.

'. . . ಹೂ ಬತ್ತೀನಿ ಸ್ವಾಮಿ . . . ನಾಳೀಕೆಯ . . .'

'. . . ಹಾಗೆಯೇ . . . ಮಾಡು . . .'

ಎಂದು ನುಡಿದವನೇ ಮನೆಯಕಡೆ ತಿರುಗಿದೆ. ನಾಲ್ಕಾರು ಹೆಜ್ಜೆ ಮುಂದಿಡುತ್ತಲೇ ಹಿಂದಿರುಗಿ ನೋಡಿದೆ.

ಆ ಹೆಂಗಸು ಮಡಿಲು ತೆರೆದು ಹಿಡಿದಿದ್ದಳು. ಮರಿ ಜೇಬಿನಿಂದ ದುಡ್ಡು ತೆಗೆದು ತೆಗೆದು ಸುರಿಯುತ್ತಿದ್ದ. ಹಾಗೆಯೇ ಅವಳ ಭುಜದ ಮೇಲೆ ಕೈಯಿಟ್ಟು ಒಳಕ್ಕೆ ಹೋದ.

ನಾನೂ ಮುಂದೆ ನಡೆದೆ. ಹೊಸ ಯೋಚನೆಯೊಂದು ಮೂಡಿತು. 'ಯಾರು ಆ ಹೆಂಗಸು? . . . ಎಲ್ಲೋ ನೋಡಿದಂತಿದೆ! . . . ಇಲ್ಲಿಗೆ ಹೇಗೆ ಬಂದಳು? . . . ಮರಿಗೆ ಇನ್ನೂ ಮದುವೆಯಾಗಿಲ್ಲ! . . . ಆದರೆ ಆಕೆ ಯಾರು? . . . ಅವನಲ್ಲಿ ಎಷ್ಟು ಸಲಿಗೆ! . . . ಮರಿ ದುರಾಚಾರಿಯಾದನೇನು? . . . ಇರಲಾರದೇಕೆ . . .?

. . . ಛೆ . . . ಬರಿಯ ಕಲ್ಪನೆಯೇ ಸತ್ಯವಿರಲಾರದು ! . . .' ಬಗೆಹರಿಯದಿದ್ದರೂ ದಾರಿ ಸಾಗಿದ್ದಿತು. ಮನೆಯೂ ಹತ್ತಿರವೇ ಕಾಣುತ್ತಿದ್ದಿತು.

ಲಲಿತಳೇಕೋ ಸಪ್ಪೆಮೋರೆ ಮಾಡಿಕೊಂಡು ಕುಳಿತಿದ್ದಳು. '. . . ತಲೆ ನೋವು . . .' ಎಂದು ಕೇಳಿ ಅವಳಿಗೆ ಯಾವವಿಚಾರವನ್ನೂ ತಿಳುಹಿಸಲಿಲ್ಲ. ಅವಳ ತಲೆಯ ನೋವನ್ನು ಹೆಚ್ಚಿಸುವುದಾದೀತೆಂದು ಮೌನವಾಗಿಯೇ ಇದ್ದೆನು.

ಮರುದಿವಸ ಬೆಳಗಿನಲ್ಲೇ ಮರಿಯು ಬರಬಹುದೆಂದು ಕಾದು ಕುಳಿತೆನು. ಆದರೆ ಅವನು ಗಂಟೆ ಎಂಟಾದರೂ ಬಾರದಿದ್ದುದನ್ನು ಕಂಡು ಹೊಲಗಳ ಕಡೆ ಹೋಗಿ ಸುತ್ತಾಡಿ ಬಂದೆನು.

ರಾತ್ರಿ ೮.೩೦ ಘಂಟೆಯಾಗಿದ್ದಿತು. ಲಲಿತಳು ಮೈಯಲ್ಲಿ ಸ್ವಸ್ಥವಿಲ್ಲವೆಂದು ಆಗಲೇ ಮಲಗಿ ನಿದ್ರೆಹೋಗಿದ್ದಳು. ಹಿಂದಿನ ದಿವಸವೇ ಬೆಂಗಳೂರಿನಿಂದ ತಂದಿದ್ದ ಹೊಸಕಾದಂಬರಿ 'ಅರಗಿನ ಮನೆ'ಯನ್ನು ಓದುತ್ತಾ ಕುಳಿತಿದ್ದೆ. ಆಳುಮಗ ಬಂದು ಹೇಳಿದ '. . . ಮರಿಯ . . . ಬಂದವನೆ . . .' ಎಂದು.

ಅಂಗಳಕ್ಕೆ ಹೋಗಿ ಚಾಪೆಯಮೇಲೆ ಕುಳಿತೆ. ಮರಿಯನೂ ಬಂದು ದೂರದಲ್ಲೇ ಕುಳಿತ. ಅವನ ತಾಯಿಯೇ ಮಾಡಿಸಿಕೊಟ್ಟಿದ್ದ ಕಡಕುಗಳು ಅವನ ಕಿವಿಗಳಲ್ಲಿ ಹೊಳೆಯುತ್ತಿದ್ದುವು. ತಲೆಯ ಕೂದಲನ್ನು ಹಿಂದಕ್ಕೆ ಬಾಚುವ ಅಭ್ಯಾಸ ವಿಟ್ಟಿರಬೇಕೆನಿಸಿತು. ಆ ಯೆಣ್ಣೆಗೂಡಿದ್ದ ತಲೆಗೂದಲುಗಳಮೇಲೆ ದೀಪದ ಬೆಳಕು ಮಿಂಚುತ್ತಿದ್ದಿತು. ಸ್ವಲ್ಪ ಕಾಲ ಕಳೆದಮೇಲೆ ನಾನೇ ಮಾತನಾಡಿದೆ.

'. . . ನಿಮ್ಮ ತಾಯಿ ಕೆಲಸಮಾಡಿದ ಹಣ ಇನ್ನೂ ಉಳಿದಿದೆ . . .'

'. . . ಎಷ್ಟು ಕೊಡಬೇಕು . . . ? . . .'

'. . . ಎಷ್ಟಿಲ್ಲ . . . ಮೂರು ತಿಂಗಳ ಹಣ ನಾನೇ ಕೊಡಬೇಕು . . . ಎಪ್ಪತ್ತು ರೂಪಾಯಿಗಳು ಮಾತ್ರ . . .'

ಮರಿ ಮೌನವಾಗಿಯೇ ಕುಳಿತ. ಏನೋ ಯೋಚನೆಯಲ್ಲಿದ್ದಂತಿದ್ದಿತು. ಸ್ವಲ್ಪ ಕಾಲ ಕಳೆದನಂತರವೇ ಕೇಳಿದೆ—

'. . . ನಿನಗೆ . . . ಮದುವೆ ಯಾವಾಗ ಆಯ್ತು ಮರಿಯ . . . ? . . .'

ಕೂಡಲೇ ಉತ್ತರಿಸಲಿಲ್ಲ. ತಲೆ ತಗ್ಗಿಸಿ ಕುಳಿತ. ಎರಡು ನಿಮಿಷ ಕಳೆದ ನಂತರವೇ ನುಡಿಯು ಕೇಳಿಬಂದಿತು.

'. . . ಇಲ್ಲರ . . . ಇನ್ನೂ . . . ಮದುವೆ ಇಲ್ಲ . . .'

'. . . ನಿಮ್ಮ ತಾಯಿಯ ಸೋದರಸಂಬಂಧದಲ್ಲಿ ಹೆಣ್ಣೊಂದು ಇದೆಯೆಂದು ಕೇಳಿದ್ದೆ . . . ನಿಮ್ಮವ್ವನೇ ಹೇಳಿದ್ದಳು . . .'

ಮರಿ ತಲೆ ತಗ್ಗಿಸಿಯೇ ಕುಳಿತಿದ್ದ. ಬಹುಶಃ ಅವನ ನಯನಗಳು ತೇವವಾಗಿರಬೇಕು.

'. . . ನಿಮ್ಮವ್ವನ ಅಣ್ಣ . . . ಮೇದೂರಿನವರು . . . ಮಾತುಕೊಟ್ಟಿದ್ದರಂತೆ . . .' ಕೂಡಲೇ ಮರಿ ತಲೆಯೆತ್ತಿ ನೋಡಿದ. ಆ ನಯನಗಳು ಮಿಂಚುತ್ತಿದ್ದುವು. ಕೋಪ ಹೊಮ್ಮಿದಂತೆ ಕಂಡಿತು.

'. . . ಆ ಅವ್ವ ವಾಂತಿ-ಭೇದಿಗೆ ಬಲಿಯಾದಮೇಗೆ ಆ ಮಾತೂ ಆವಳ ಹಿಂದೆಯೇ . . . ಸುಡುಗಾಡಿಗೆ ಹೋತು . . . ಇನ್ನ್ಯಾಕ . . .'

ಒಂದು ನಿಮಿಷ ಸುಮ್ಮನಿದ್ದು ಮತ್ತೆ ಅಂದ. '. . . ಅಲ್ಲ . . . ಸ್ವಾಮಿ . . . ನಾ ಕೈಯಿಲ್ಲದವ . . . ಇನ್ನು ಹತ್ತಾರು ಜನದ್ಹಂಗ ದುಡಿದು ಬಾಳೇನ? . . . ಹೋಗಲೀಂದ್ರೆ ನಮ್ಮಪ್ಪ-ಅವ್ವ ಏನಾದ್ರೂ ಗಂಟು ಕೊಟ್ಟವ್ರ . . . ಕುಂತಕೊಂಡು ಉಣ್ಣನಾ ಅನ್ನಕ್ಕೆ . . . ಇನ್ನ್ಯಾಕ . . . ಯಾವ . . . ಸುಖಕ ಕೊಟ್ಟಾರು . . . ಹೆಣ್ಣನ . . . ? . . .'

ಅವನ ಕಣ್ಣುಗಳಿಂದ ದಪ್ಪ ಹನಿಗಳೆರಡು ಉದುರಿದುವು. ಅಷ್ಟೊಂದು ನುಡಿಸಿದುದಕ್ಕೆ ನನಗೇ ನಾಚಿಕೆಯಾಯಿತು; ವ್ಯಥೆಯಾಯಿತು. ಮನಸ್ಸಿನ ಪ್ರಶ್ನೆಗೆ ಉತ್ತರ ಪಡೆಯುವ ಕುತೂಹಲವಿರಲಿ, ಧೈರ್ಯ ಕೂಡ ಹುದುಗಿಹೋಯಿತು. ಸಮಸ್ಯೆ, ಸಮಸ್ಯೆಯಾಗಿಯೇ ಉಳಿದಿರಲಿ ಎನ್ನಿಸಿತು. ನಾನೇ ಮಾತು ಬದಲಿಸಿದೆ.

'. . . ಹೋಗಲಿ ಬಿಡು . . . ಈ ರೂಪಾಯಿಗಳನ್ನು ನಿನಗೆ ಬೇಕಾದಂದು ಕೊಂಡುಹೋಗು.' ಮರಿ ಏನೊಂದೂ ನುಡಿಯಲಿಲ್ಲ. ಮೌನವಾಗಿಯೇ ಕುಳಿತ. ನಾನೇ ಮತ್ತೆ ಹೇಳಿದೆ.

'. . . ಊಟವಾಗಿದೆಯೇನು ? . . .'

'. . . ಹೂ . . . ಆಗದೆ . . .'

'. . . ನಾನಿನ್ನೂ ಊಟಮಾಡಿಲ್ಲ . . .' ಎಂದು ಎದ್ದುನಿಂತೇ ನುಡಿದೆ. 'ಆ ಹಣ . . . ನಿನಗೆ ಯಾವಾಗ್ಗೆ ಬೇಕಾದರೂ ಸರಿ . . . ತೆಗೆದುಕೊಂಡು ಹೋಗು. . .'

'. . . ಹಂಗೇ ಆಗ್ಲಿ ಸ್ವಾಮಿ . . . ಬತ್ತೀನಿ . . .' ಎನ್ನುತ್ತಲೇ ಎದ್ದು ನಿಂತು ನಿಧಾನವಾಗಿ ಹೊರಹೊರಟ.

೩

ನಾನು ತಿರುಗಾಡಿಬರಲಿಕ್ಕೆಂದು ಹೊರಟು ಅನೇಕಬಾರಿ ರೈಲು ನಿಲ್ದಾಣದ ಮುಂದಿನ ಹಾದಿಯಲ್ಲೇ, ಮರಿಯ ಮನೆಯ ಮುಂದೆಯೇ ಸಾಗಿಹೋಗಿರುತ್ತೇನೆ.

ಎರಡುಬಾರಿ ಅದೇ ಹೆಂಗಸು ಹೂದಂಡೆಯನ್ನು ಮುಡಿದು ಬಾಗಿಲಿನಲ್ಲಿಯೇ ಕುಳಿತು ಎಲೆ ಅಡಿಕೆ ಸವಿಯುತ್ತಾ ಇದ್ದುದನ್ನು ನೋಡಿರುತ್ತೇನೆ. ಅವಳ ಅಗಲವಾದ ಕಣ್ಣುಗಳು ದುಂಬಿಯನ್ನು ಕೂಡಿಸಿಕೊಂಡು ಅರಳಿದ ಹೂವನ್ನು ನೆನಪಿಗೆ ತರುತ್ತಿದ್ದುವು. ಆದರೆ ಅವಳನ್ನು ದಿಟ್ಟಿಸಿ ನೋಡುವ ಧೈರ್ಯ ಮಾತ್ರ ನನ್ನದಾಗುತ್ತಿರಲಿಲ್ಲ. ನಾಚಿಕೆಯಿಂದ ತಲೆತಗ್ಗಿಸಿ ಮುಂದೆ ಹೋಗಿಬಿಡುತ್ತಿದ್ದೆ.

ಊರಾಚೆಯ ತೋಪಿನ ಪಕ್ಕಕ್ಕೆ ಬಂದಾಗ ಸಂಧ್ಯೆಯ ಮೈಸವರಿ ಸುಗಂಧದ ಹೊರೆಹೊತ್ತು ಸುಯ್‌ಗುಟ್ಟಿ ಸುಳಿವ ತಂಗಾಳಿ ಮೈತೀಡುವವರೆಗೂ ತಲೆಯೆತ್ತಿ ನೋಡಲಾಗುತ್ತಿರಲಿಲ್ಲ. ಹಾಗೆಯೇ ಮುಂದೆ ಮುಂದೆ ಹೋಗಿ ದಾರಿಯ ಪಕ್ಕದಲ್ಲೇ ನಿಂತಿರುವ ಎತ್ತರವಾದ ಬಂಡೆಯ ಮೇಲೆ ಮೈಚಾಚಿ ಪಡುವಲಿನಲ್ಲಿ ನೇಸರಿನ ರಾಗರಂಜಿತ ಕಿರಣಗಳು ಹೊಮ್ಮಿ ಹರಡಿ, ಬಾನ ಅಡಿಯ ಮೋಡಗಳು ಓಕುಳಿಯನ್ನೆರಚಿಕೊಂಡು ಮೆರೆಯುವ ನೋಟ ನೋಡುತ್ತಾ ಮೈಮರೆಯುತ್ತಿದ್ದೆನು.

ಹಿಂದಿರುಗುವ ವೇಳೆಗೆ ತಿಳಿಗತ್ತಲಾಗುತ್ತಿತ್ತು. ಮರಿಯ ಮನೆಯ ಮುಂದೆ ಬರುವವೇಳೆಗೆ ಆ ಬಿದಿರು ತಟ್ಟಿಯ ಬಾಗಿಲಿನ ಕಂಡಿಗಳಿಂದ ದೀಪದ ತುಣುಕು ಮಿಣುಕು ಬೆಳಕು ಹಿಣುಕುತ್ತಿದ್ದಿತು. ಹಾಗೆಯೇ ಮುಂದೆ ಸಾಗುತ್ತಿದ್ದೆನು.

ಅಂದು ಶನಿವಾರ. ಹೊಸವಿಚಾರವೊಂದು ಮೈತಾಳಿತು. 'ಆ ಹೆಂಗಸಿಗೆ ವಯಸ್ಸಾಗಿದೆ . . .! ಮರಿಗಿಂತಲೂ ಹೆಚ್ಚು! . . . ಇದಂತೂ ಖಂಡಿತ . . . ಇವಳೇಕೆ ಬಂದಳಿಲ್ಲಿ? . . . ಏಕೆ ಬಂದಳೋ! ಏನೋ! . . .' ಉತ್ತರವಿಲ್ಲದೆಯೇ ಮುಂದೆ ಸಾಗುತ್ತಿದ್ದೆನು. '. . . ಲಲಿತಳಿಗೆ ಇದೆಲ್ಲ ಅನುಭವ ವರ್ಣಿಸಿದರೆ! . . . ತಪ್ಪು ತಿಳಿದುಕೊಳ್ಳದೇ ಇರುವಳೇನು? . . . ಅವಳ ಮನಸ್ಸಿಗೂ ಸಂಶಯ ಪಿಶಾಚಿಯ ಪರಿಚಯ ಮಾಡಿಕೊಡದಿರುವುದೇ ಮೇಲು!' ಎನ್ನಿಸಿತು. ಮನೆಯನ್ನು ಸೇರಿದರೂ ಲಲಿತಳಿಗೆ ಯಾವ ವಿಚಾರವನ್ನೂ ತಿಳುಹಿಸದೇ ಇದ್ದುಬಿಟ್ಟೆ.

ಆಗಲೇ ಶ್ರಾವಣ ಬಂದಿದ್ದಿತು. 'ಹಬ್ಬಸಾಲು . . . ಲಲಿತಳು ಇಲ್ಲಿ ಒಬ್ಬಳೇ. . !' ಎಂದು ಹೇಳಿ ಅವಳ ಅಣ್ಣ ಬಂದು ತೌರಿಗೆ ಕರೆದೊಯ್ದರು. ಹೊಲಗದ್ದೆಗಳಿಗೆ ಗಮನಕೊಡಬೇಕಿದ್ದ ಕಾರಣ ನಾನು ಮನೆಯಲ್ಲಿಯೇ ಉಳಿದುಕೊಂಡೆ.

ಅಂದು ಆಗತಾನೆ ಊಟಮಾಡಿ ಜಗಲಿಯ ತುದಿಗೆ ನಿಂತು ಕೈತೊಳೆದಿದ್ದೆ. ಮತ್ತೆ ಮನೆಯೊಳಕ್ಕೆ ಹೋಗುವುದಕ್ಕೆ ಮುಂಚೆ ಬೀದಿಯ ಕಡೆಗೆ ಹೊರಳಿ ನೋಡಿದೆ. ನನ್ನ ಕಡೆಗೇ ಯಾರೋ ಬರುತಿದ್ದಂತೆ ತಾರೆಯ ತಿಳಿಬೆಳಕಿನಲ್ಲಿ ಆಕಾರ ಮಾತ್ರ ಮೂಡಿ ಕಾಣಿಸಿಕೊಂಡಿತು. ಆ ಆಕಾರ ಸುಮಾರುಹತ್ತಿರಕ್ಕೆ ಬರುತ್ತಿದ್ದಂತೆಯೇ ಕೇಳಿದೆ '. . . ಯಾರು? . . .' ಎಂದು.

'. . . ನಾನು . . . ಮರಿಯ. . .'

'. . . ಬಾ ಒಳಕ್ಕೆ. . .' ಎನ್ನುತ್ತಲೇ ಹಿಂತಿರುಗಿ ಮನೆಯೊಳಕ್ಕೆ ನಡೆದೆ. ಮರಿಯೂ ಹಿಂಬಾಲಿಸಿದ.

ಕೈ ಒರೆಸಿಕೊಂಡು ಆರಾಮಕುರ್ಚಿಯಲ್ಲಿ ಕುಳಿತೆನು. ಮರಿ ಬಂದವನು ಎದುರಿನಲ್ಲಿಯೇ ಗೋಡೆಯೊರಗಿ ಕುಳಿತ.

'. . . ಏನು. . . ಮರಿ. . . ಬಂದೆ. . .'

'. . . ಏನಿಲ್ಲ. . . ಸುಮ್ಕೆ. . .'

ನಸುನಗೆಯ ಅಲೆಯೊಂದು ಅವನ ತುಟಿಗಳ ಮೇಲೆ ಮೂಡಿ ಮರೆಯಾಯಿತು. ಒಂದೆರಡು ನಿಮಿಷಗಳನಂತರವೇ ನುಡಿದ.

'. . . ಹಣ. . . ಬೇಕಿತ್ರ. . . ಅದ್ಕೇ ಬಂದನ. . .'

'. . . ಸರಿ. . . ಕೊಂಡು ಹೋಗು. . .'

ಕೂಡಲೇ ಎದ್ದು ಹೋಗಿ ಪಕ್ಕದ ಕೊಠಡಿಯಲ್ಲೇ ಇದ್ದ ಬೀರುವಿನ ಬಾಗಿಲು ತೆರೆದು ನಿಂತೆ. ಮರಿಯ ದನಿ ಮತ್ತೆ ಕೇಳಿಬಂದಿತು.

'. . . ನನಗೆ. . . ಇನ್ನಿಷ್ಟು ಹೆಚ್ಚಿಗೆ ಹಣ. . .'

ಹಾಗೆಯೇ ಹೊರಗೆ ಬಂದು ನಿಂತೆ. ಮರಿ ತಲೆ ತಗ್ಗಿಸಿ ಕುಳಿತಿದ್ದ. ಮತ್ತೆ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ ಕೇಳಿದೆ.

'. . . ಈಗೇನು ಮರಿ. . . ಅಂತಹ ಅವಶ್ಯಕತೆ. . .'

'. . . ಮುಂದಿನವಾರ . . . ನನ್ನ ಮದುವೆಯಾಗಬೇಕೈತೆ. . .'

ಆಶ್ಚರ್ಯ, ಕುತೂಹಲಗಳ ಹೊಯ್ಲಿನಿಂದ ಚೇತರಿಸಿಕೊಂಡು ಕೇಳಿದೆ.

'. . . ಯಾವ ಊರು. . . ಸಂಬಂಧ. . .'

ಕೂಡಲೇ ಉತ್ತರ ಬರಲಿಲ್ಲ. ನಿಧಾನವಾಗಿ ಹೇಳಿದ '. . . ಇಲ್ಲಿಗೆ. . . ಎಂಟು ಹತ್ತು ಮೈಲಿ ದೂರದಲ್ಲೈತೆ. . . ಪಾವನಪುರ. . . ಅವಳಿಗೂ ದಿಕ್ಕಿಲ್ಲರ. . . ಕೂಲಿ ನಾಲಿ ಮಾಡ್ತಿದ್ಲು. . . ಯಾರೋ ದೂರದ ನೆಂಟರಮನೆಯಾಗಿದ್ಲು. . .'

'. . . ಹೆಸರೇನು ? . . .'

'. . . ಚಿನ್ನಮ್ಮ. . .'

ನಾಚಿಕೆಯ ಭಾರಕ್ಕೆ ಅವನ ತಲೆ ಮತ್ತಷ್ಟು ಬಾಗಿಹೋಯಿತು. ಹಾಗೆಯೇ ಎರಡು ನಿಮಿಷ ಜಾರಿತು.

'. . . ಎಷ್ಟು ಹಣ ಬೇಕು ? . . .'

'. . . ಒಂದು ನೂರು. . . ಸಾಕ್ರ್ರಿ. . . ಉಳಿದ ಹಣ ಸಂತಾವೇ ಆದೆ. . . ಆರುತಿಂಗಳಾಗೇ ತೀರಿಸ್ತೇನ್ರಿ. . .'

ಸ್ವಲ್ಪ ಹಿಂದು ಮುಂದು ನೋಡುವಂತೆಯೇ ಆಯಿತು. ಹೆಚ್ಚಿಗೆ ಹಣ ಕೊಡ ಬೇಕು! ಯಾವ ಆಧಾರದಮೇಲೆ ಕೊಡಬೇಕು? ಮನದಲ್ಲಿ ಗುಣಿತದ ಹಿಮ್ಮೇಳ ವಿದ್ದರೂ ಕೇಳಿದೆ.

'. . . ಯಾವಾಗ. . . ಮದುವೆ. . . ?. . .'

'. . . ಮುಂದಿನ. . . ಬೇಸ್ತಾರ. . . ಇಲ್ಲಿಗೆ ಒಂಭತ್ತು ದಿನಕೆ. . . ಇದೇ . . . ಊರನಾಗೇಯ. . . ದಾರೀ. . . ಹಟ್ಟೀಗೆ ನೀವೂ ಬರಬೇಕ್ರಿ. . .'

'. . . ಹೂ. . .' ಎಂದು ಎದ್ದು ಕೊಠಡಿಗೆ ಹೋಗಿ ಹಣವನ್ನು ತಂದಿತ್ತೆ. ಮನಸ್ಸು ಸ್ವಲ್ಪ ಕೊರಯುತ್ತಲೇ ಇತ್ತು. ಆದರೂ ಕಾರ್ಯ ಮಿಂಚಿಹೋಗಿದ್ದಿತು. ಮರಿಯಾಗಲೇ ಹಣವನ್ನು ತೆಗೆದು ಜೇಬಿಗಿರಿಸಿದ್ದ.

'. . . ನೀವೂ. . . ಅಮ್ಮಾವ್ರೂ. . . ಖಂಡಿತ ಬರಬೇಕ್ರಿ. . .'

'. . . ಅಮ್ಮಾವ್ರು ಊರಿನಾಗೇ ಇಲ್ಲವಲ್ಲೋ!. . .'

'. . . ನೀವಾದ್ರೂ ಬರಬೇಕ್ರಿ. . .'

ನಾನು ಏನೊಂದೂ ನುಡಿಯದೇ ಕುಳಿತೆ. ಮರಿ ಎದ್ದುನಿಂತು '. . . ನಾನು ಬತ್ತೀನ್ರಿ. . .' ಎಂದ. ಕತ್ತೆತ್ತಿನೋಡಿದೆ. ಮರಿಯ ಹೃತ್ಕಮಲ ಹಿಗ್ಗುತಿದೆ ಯೆನ್ನಿಸಿತು. ಆನಂದದ ಅಮಲಿನಿಂದು ಮೈಮರೆತಂತೆಯೇ ಹೆಜ್ಜೆಹಾಕ ತೊಡಗಿದ.

ಹಾಸಿಗೆಯಲ್ಲಿ ಹೊರಳಿದಾಗಲೂ ಮನಸ್ಸಿನಲ್ಲಿ ಗುಣಾಕಾರ ಸಾಗತೊಡಗಿ ದ್ದಿತ್ತು. 'ಪ್ರಾಮಿಸರೀ ನೋಟಾದರೂ ಪಡೆಯಬಹುದಿತ್ತಲ್ಲ!. . . ಏಕೆ?. . . ಎಲ್ಲಿಹೋದಾನು! ಪಾಪ, ಹಣವನ್ನು ಕೊಡದೆ ಕದ್ದಾನೇ ?. . . ಎಂಟುವರ್ಷಕಾಲ . . . ಮನೆಯಲ್ಲಿದ್ದವನು. . . ಒಂದುಬಾರಿಯೂ ಸುಳ್ಳುಹೇಳಿದವನಲ್ಲ . . . ಕಳ್ಳತನ ಮಾಡಿದವನಲ್ಲ. . .! . . . ಛೆ. . . ಏನೇನು ಹುಚ್ಚುಕಲ್ಪನೆ!!' ಎಂದುಕೊಂಡು ಕಣ್ಣು ಮುಚ್ಚಿದೆ.

ಆದರೆ ಅಷ್ಟಕ್ಕೆ ಸುಮ್ಮನಾಗಲಿಲ್ಲ. ಮರುದಿವಸವೇ ಲಲಿತಳಿಗೆ ನಡೆದ ಸಂಗತಿಯ ನ್ನೆಲ್ಲಾ ಪತ್ರದ ಮೂಲಕ ತಿಳುಹಿಸಿದೆ.

'ಏನು . . . ಜಾಣತನವಿದೂಂದ್ರೆ . . . ಬಿಕಾರಿಗೆ ಸಾಲಕೊಟ್ಟು . . . ಬರುತ್ತೇಂತ ಬರೆದಿದ್ದೀರಲ್ಲಾ . . . ಎರಡು ತುಳಸೀದಳವನ್ನು ಇಟ್ಟುಕೊಡ ಬೇಕಿತ್ತು. . .' ಎಂದೇ ಉತ್ತರ ಬಂದಿತು.

'. . . ಏನು ಮಹಾ. . . ಒಂದು ನೂರು ಸಹಾ ಇಲ್ಲ. ಅವನ ಪ್ರತಿದಿವಸದ ಆದಾಯ ನಿನಗೇನು ಗೊತ್ತು. . . ನಿತ್ಯವೂ ಎಂಟಾಣೆ ಕೂಡಿಟ್ಟರೆ. . . ಎರಡು ತಿಂಗಳಿನಲ್ಲೇ ಸಾಲ ತೀರಿಸಿ. . . ಬಿಟ್ಟಾನು! ಎಂದು ಮಾತು ಹಾರಿಸಿ ಉತ್ತರ ವಿತ್ತೆ.

ಲಲಿತಳಿಂದ ಮಾರುತ್ತರವೇನೂ ಬರಲಿಲ್ಲ. ನನ್ನ ಮನಸ್ಸೂ ಸ್ವಲ್ಪ ಹಗುರವಾಯಿತು. ಮರಿಯನ ಮದುವೆಯ ದಿವಸ ಬಂದೇ ಬಂದಿತು. ಅಂದು ಸಂಜೆಗೇ ಅವನ ಮನೆಯ ಕಡೆ ಹೋದೆ. ಮನೆಯ ಕದ ಅರ್ಧ ತೆರೆದಿತ್ತು. ಮನೆಯ ಮುಂದೆ ಚಪ್ಪರವೂ ಇರಲಿಲ್ಲ! ಜನರ ಸುಳಿವೂ ಇರಲಿಲ್ಲ! ಹಾದಿಯ ಪಕ್ಕಕ್ಕೆ ನಿಂತು 'ಮರಿಯಾ' ಎಂದು ಕೂಗಿದೆ. 'ಅವರಿಲ್ಲ. . .' ಎಂದು ಒಳಗಿನಿಂದ ದನಿಯೊಂದು ಕೇಳಿಬಂದಿತು.

ಹಾಗೆಯೇ ಹಿಂತಿರುಗಿ ಹಾದಿಯಲ್ಲಿಯೇ ಮುಂದೆ ನಡೆದೆ. ತೋಪನ್ನು ಇನ್ನೂ ದಾಟಿರಲಿಲ್ಲ. ಮರಿ ಎದುರಿನಲ್ಲಿಯೇ ಬರುತ್ತಿದ್ದ. ಕೈಯಲ್ಲಿ ಹಿಡಿದಿದ್ದ ಸೀಸೆಯಲ್ಲಿ ಹೆಂಡವಿತ್ತು. ಕೈ ತಿರುವುತ್ತಾ ತೂರಾಡುತ್ತಾ, ತೇಗುತ್ತ ಬರುತ್ತಿದ್ದ. ಮೂಗು ಬಿರಿಯುವಂತಹ ವಾಸನೆಯಲ್ಲಿಯೇ ಮುಳುಗಿದ್ದ. ಮಾತನಾಡಿಸದೇ ಸುಮ್ಮನೇ ಮುಂದೆ ಹೋಗುವುದೆಂದು ನಡೆದೆ. ಆದರೆ ಅವನೇ ನುಡಿದ.

'. . . ನಮ್ಮಪ್ಪ. . . ನನ್ನೊಡಯ. . . ನಿನ್ನ ಪಾದಕೆ ನೂರುಬಾರಿ ಬೀಳ್ತೀನ . . . ನೀ ಮಾತ್ರ. . . ಚಪ್ಪರದ ಹಟ್ಟಿಗೆ. . . ಬರನೇ ಬೇಕು. . .' ಎಂದವನು ಹಾದಿಯಲ್ಲಿಯೇ ಮಲಗಿದ. ಮತ್ತೆ ಅಂದನು '. . . ನಾಳೆ ಬೇಸ್ತಾರಕೆಯ. . . ಮದುವೆ. . . ನಿನಗೆ ನೂರುಬಾರಿ. . . ಬೀಳ್ತೀನಿ ಪಾದಕೆ. . .' ಎಂದು.

ನಾನು ಪಕ್ಕಕ್ಕೆ ಸರಿದು ಮುಂದೆ ಹೋಗಿಬಿಟ್ಟೆ. ಅವನು ತಲೆಯೆತ್ತುವ ವೇಳೆಗೆ ಬಹಳ ದೂರ ಹೋಗಿದ್ದೆನೆನ್ನಬೇಕು. ನಮ್ಮ ಮನೆಯಲ್ಲಿದ್ದಾಗ ಮರಿ ಕುಡಿಯುವುದನ್ನು ಕಂಡಿರಲಿಲ್ಲ. ಯಾರಿಂದಲೂ ದೂರು ಸಹ ಕೇಳಿರಲಿಲ್ಲ. ಆದರೆ ಇಂದು!!! . . . ಇವನೇಕೆ ಹೀಗಾದನೋ ತಿಳಿಯಲಿಲ್ಲ.

ಹಿಂದಿರುಗಿ ಬರುವ ವೇಳೆಗೆ ಕತ್ತಲಾಗಿದ್ದಿತು. ಮರಿಯ ಗುಡಿಸಲಿನ ಮುಂದೆ ಬಂದಾಗ ಒಳಗೆ ದೀಪದ ಬೆಳಕಿದ್ದಿತು. ಮೌನವಾಗಿಯೇ ಮನೆಯ ಕಡೆ ಸಾಗಿದೆ. ಮರಿ ಕೊಡಬೇಕಾದ ಹಣಕ್ಕೆ ತಿಲಾಂಜಲಿಯನ್ನೀಯುವುದೇ ಮೇಲೆಂದುಕೊಳ್ಳುತ್ತಾ ಮನೆಯನ್ನು ಸೇರಿದೆ. ಲಲಿತಳು ನನಗಿಂತಲೂ ಬುದ್ಧಿವಂತಳೆಂದು ನನ್ನ ಮನ ಅಂದೇ ನುಡಿಯಿತು.

ಏನಾದರೂ ಮರಿಯನ್ನು ಮತ್ತೊಮ್ಮೆ ಕಂಡು ಕೇಳೆಂಬ ಆಸೆಮಾತ್ರ ಮೂಡದೇಹೋಗಲಿಲ್ಲ. ಹಣಕ್ಕೆ ಹೆಣವೂ ಬಾಯಿಬಿಡುವುದೆಂದಮೇಲೆ ನನ್ನ ಪುನರಾಲೋಚನೆಯಲ್ಲಿ ತಪ್ಪೂ ಕಾಣಲಿಲ್ಲ.

ಒಂದು, ಎರಡು, ಮೂರು ವಾರಗಳೂ ಕಳೆದುವು. ಆದರೂ ಮರಿಯನ್ನು ಕಾಣಲಿಲ್ಲ. ಅದೇ ಗುಡಿಸಲಿನ ಬಾಗಿಲಲ್ಲಿ ನಿಂತು ಎರಡು ಮೂರು ದಿವಸ ವಿಚಾರಿಸಿದೆ. 'ಅವರಿಲ್ಲಾ . . .' ಎಂದೇ ಉತ್ತರ ಬಂದಿತು.

ಅಂದು ಭಾನುವಾರ ಮತ್ತೊಮ್ಮೆ ಅದೇ ಬಾಗಿಲಿನಲ್ಲಿ ನಿಂತು ಕೂಗಿದೆ. '. . . ಬತ್ತಾರೆ . . . ಎಲ್ಲೋ . . . ಹೋಗವ್ರೆ . . .' ಎಂದು ಉತ್ತರ ಬಂದಿತು.

ಸುತ್ತೆಲ್ಲ ಕತ್ತಲು ಮುಸುಗಿದ್ದಿತು. ಎದೆ ನಡುಗುವಂತೆ ತಂಗಾಳಿ ಮೈತೀಡ ತೊಡಗಿದ್ದಿತು. ಆದರೆ ಗುಡಿಸಲೊಳಗೆ ತಿಳಿಬೆಳಕು ನಿಶ್ಚಲವಾಗಿದ್ದಿತು. ಹೇಗೂ ಹೊರಟುಹೋಗಬೇಕೆನಿಸಿದ್ದಿತು. ಇನ್ನೊಂದು ವಿಚಾರವನ್ನಾದರೂ ತಿಳಿಯಬಹುದೆಂದು ಕೇಳಿದೆ. 'ಎಲ್ಲಿಗೆ ಹೋಗಿದ್ದಾನೆ . . . ?' ಎಂದು. ಉತ್ತರದ ಬದಲು ಬಾಗಿಲೇ ತೆರೆಯಿತು. ಜೊತೆಯಲ್ಲೇ ಯಾವುದೋ ಕೈಬಳೆಯ ಸದ್ದು ಕೇಳಿಸಿತು. ಒಂದು ಹೆಜ್ಜೆ ಹಿಂದಿರಿಸಿದೆ. ಅಷ್ಟರಲ್ಲೇ ಇನಿದನಿ ಕೇಳಿಬಂದಿತು.

'. . . ಬನ್ನಿ . . . ಕುಂತಕೋಳಿ . . . ಬತ್ತಾರೆ . . .'

ನಡುಮನೆ ಚೊಕ್ಕಟವಾಗಿದ್ದಂತೆ ಕಾಣಿಸಿತು. ಅಲ್ಲಿಯೇ ಹಾಸಿದ್ದ ಪುಟ್ಟ ಚಾಪೆಯೂ ಕಾಣಿಸಿತು. ಎದುರಿನಲ್ಲೇ ಇದ್ದ ವೋಟುಗೋಡೆಯ ಮೇಲೆ ಹಣತೆಯೊಂದು ಕುಳಿತು ಬೆಳಕು ಚೆಲ್ಲಿದ್ದಿತು. ಬಾಗಿಲಿನ ಪಕ್ಕಕ್ಕೆ ನಿಂತು ಆಕೆ ಮತ್ತೆ ಅಂದಳು.

'. . . ಇನ್ನೇನು ಬತ್ತಾರೆ . . . ಬನ್ನಿ ಕುಂತಕೋಳಿ . . .'

ಇಲ್ಲ. ಇಲ್ಲಿಯೇ ಇರುತ್ತೇನೆ—ಎನ್ನಬೇಕೆಂದುಕೊಂಡೆನಾದರೂ ಬಾಯಿಬಿಡಲಿಲ್ಲ. ಮೌನವಾಗಿ ಒಳಗೆ ಹೋಗಿ ಚಾಪೆಯಮೇಲೆಯೇ ಕುಳಿತೆ. ಆಕೆಯೂ ಜರುಗಿ ಹೋಗಿ ವೋಟುಗೋಡೆಯ ಹಿಂಬದಿಗೆ ಕುಳಿತಳು. ಹಾಗೆಯೇ ಹಣತೆಯ ಬತ್ತಿಯನ್ನು ಅದರಲ್ಲೇ ಇದ್ದ ಕಡ್ಡಿಯಿಂದ ನೂಕಿ ದೀಪದ ಕುಡಿಯನ್ನು ದೊಡ್ಡದು ಮಾಡಿದಳು.

ಆ ಹಣತೆಯ ಬೆಳಕಿನಲ್ಲಿ ಅವಳ ಮೊಗ ಅಂದದ ಕಳೆಗೂಡಿದ್ದಿತು. ಮೂಗುಬೊಟ್ಟು ಮತ್ತು ಕಿವಿಯಲ್ಲಿನ ಓಲೆಗಳು ಥಳಥಳೆಂದು ಹೊಳೆದುವು. ಅವಳ ತುಟಿಗಳ ಕೆಂಪಿನಲ್ಲೂ ಬೆಳಕು ಕುಣಿದಿತ್ತು. ಎಳಸಾಗಿ ಬಾಗಿದ್ದ ಹುಬ್ಬುಗಳ ನಡುವೆ ಕುಂಕುಮದ ಸಣ್ಣಬೊಟ್ಟಿದ್ದಿತು. ಕ್ಷಣವೊಂದರಲ್ಲಿ ನನ್ನ ಕಣ್ಣು ಕಂಡ ರೂಪದ ರೇಖೆಗಳೇ ಇಷ್ಟು. ಬೀದಿಯ ಕಡೆಗೇ ನೋಡುತ್ತಾ ಕುಳಿತೆ. ಮರಿ ಬರುವನು ;

ಬಂದನೆಂದೇ ಎಣಿಸುವುದರಲ್ಲಿ ಹೇಗೂ ಸ್ವಲ್ಪಹೊತ್ತು ಕಳೆದಿದ್ದಿತು. ಅದೇ ಹೆಂಗಸಿನ ಇಂಪುದನಿ ಮತ್ತೆ ಕೇಳಿಬಂದಿತು.

'. . . ನಿಮ್ಮ . . . ಪಾದ ಧೂಳಿಯಿಂದ . . . ನಮ್ಮ ಮನೆ . . . ಪಾವನಾತ . . .'

'. . . ಅಯ್ಯೋ . . . ಏನು ಮಹಾ . . . ನಾನೇನು . . . ಮಹಾತ್ಮನೇನು . . . ? . . .' ಎಂದೆ.

ಅದೇ ವೇಳೆಗೆ ಹೊರಗಡೆ ಏನೋ ಸದ್ದಾದಂತಾಯಿತು. ಆದರೆ ಮತ್ತೆ ಕೇಳಿಬರಲಿಲ್ಲ; ಹೇಗೂ ಮೊದಲಿನಂತೆಯೇ ಕುಳಿತಿದ್ದೆನು.

'. . . ಅವರು . . . ಬರೋತನಕ . . . ತಾಂಬೂಲ ಹಾಕ್ಕೊಂಡೀರೇನು ? . . .' ಅಚ್ಚರಿಯಾಯಿತು. ಒಂದು ವಿಚಾರದ ನೆನಪೂ ಆಯಿತು. ವಿಸ್ಮಯದಿಂದಲೇ ಆಕಡೆ ತಿರುಗಿದೆ. ಮರದ ತಟ್ಟೆಯಲ್ಲಿ ಎಲೆ ಅಡಿಕೆ ಸುಣ್ಣವಿರಿಸಿ ಮುಂದೆ ಬಾಗಿ ನನ್ನ ಮುಂದೆ ಇರಿಸಿದಳು. ಮತ್ತೆ ಮೊದಲಿನಂತೆಯೇ ಕುಳಿತಳು. ಅದರಲ್ಲಿ ಒಂದೇ ಚೂರು ಅಡಿಕೆಯನ್ನು ಮಾತ್ರ ತೆಗೆದುಕೊಂಡು ಬಾಯಿಗಿಕ್ಕಿಕೊಂಡೆ. ನಾನು ಮತ್ತೆ ಸುಮ್ಮನೆ ಕುಳಿತುದನ್ನು ಕಂಡು ನುಡಿದಿರಬೇಕು—

'. . . ಮನೆಯಾಗೆ . . . ಹೆಂಗಸರು ಮಡಿಸಿಕೊಟ್ಟ ಅಭ್ಯಾಸವೇನೋ . . .' ಕೂಡಲೇ ಮುಂಬರಿದು ಬಂದು ತಟ್ಟೆಗೆ ಕೈಯಿಟ್ಟಂತಾಯಿತು. '. . . ಬೇಡ . . . ನನಗೀಗ ಬೇಡ . . .' ಎನ್ನುತ್ತಲೇ ತಿರುಗಿನೋಡಿದೆ. ಅವಳ ಸೆರಗು ಜಾರಿ ಓರೆಯಾಗಿ ಉಬ್ಬಿದೆದೆ ಕಾಣುತ್ತಿದ್ದಿತು. ಸೆರಗನ್ನು ಸರಿಪಡಿಸಿಕೊಳ್ಳದೆಯೇ ಕುಳಿತಿದ್ದಳು. ಅವಳು ತಟ್ಟೆಯನ್ನೇ ನೋಡುತ್ತಿದ್ದರೂ ಆ ಕಂಗಳಲ್ಲಾಗಲೇ ದುಷ್ಟ ಬೆಳಕು ಮೈಚಾಚಿದ್ದಿತು. ಅವಳ ಬಲಕಿವಿಯ ಕೆಳಭಾಗಕ್ಕೆ ಕಪ್ಪು ಮಚ್ಚೆಯೊಂದು ಸ್ಪಷ್ಟವಾಗಿ ಕಂಡಿತು.

ನನ್ನ ಮೈ ಒಮ್ಮೆಗೇ 'ಜುಂ' ಎಂದಿತು. ಇಷ್ಟು ಹತ್ತಿರದಲ್ಲಿ ನಾನೆಂದೂ ನೋಡಿರಲಿಲ್ಲ. ಅವಳ ದನಿಯ ಗುರುತುಹತ್ತಿರಲಿಲ್ಲ. ಈಗ ಮಾತ್ರ, ಅವಳೇ ಹೌದು! . . . ಶಿವರಾಮಯ್ಯನವರ ಮನೆಯಲ್ಲಿ ರಂಪ ನಡೆಯಿಸಿದಾಕೆ! ಅವರ ಮಗ ದೇಶಾಂತರ ಅಲೆಯಲು ಕಾರಣಳಾದ ಆಕೆ! . . . ಅದೆಲ್ಲಾ ಅವಳ ಮೇಲಿನ ದೂರು! ಅನೇಕ ಜನರು ಆಡಿಕೊಳ್ಳುವುದು! . . .' ಎಂದುಕೊಳ್ಳದಿರಲಾಗಲಿಲ್ಲ.

ಕೂಡಲೇ ಜೇತರಿಸಿಕೊಂಡು ಎದ್ದು ಹೊರಟೆ. ಬೀದಿಗೆ ಧಾವಿಸಿದೆ. ಅವಳು ಮತ್ತೇನೋ ಅಂದುದು ಕೇಳಿಸಲಿಲ್ಲ. ಅಲ್ಲಿಯೇ ಪಕ್ಕದಲ್ಲಿ ಯಾರೋ ಹೊರಳುತ್ತಿದ್ದರು. ಹೆಂಡದ ಗಬ್ಬುನಾತ ಮೊಗಕ್ಕೆ ಅಡರಿತು. ಕಣ್ಣುಗಳನ್ನೂ ಮುಚ್ಚಿ

ಕೊಳ್ಳುವಂತಾಯಿತು. ಆ ಇರುಳಿನಲ್ಲಿ, ತಾರೆಗಳ ತಿಳಿಬೆಳಕಿನಲ್ಲಿ ಆ ವ್ಯಕ್ತಿ ಯಾರೆಂಬುದನ್ನು ನೋಡಿ ಅರಿಯಲಾಗಲಿಲ್ಲ. ಓಡಿಯೇ ಓಡಿದೆ!

ಮರಿಯನ್ನು ಕಾಣಲು ಇನ್ನುಳಿದುದು ಒಂದೇ ಒಂದು ಅವಕಾಶ. ರೈಲಿನಲ್ಲಿಯೇ ಅವನನ್ನು ಕಾಣಬೇಕು. ಹಣವನ್ನು ಹಿಂದಕ್ಕೆ ಪಡೆಯುವ ಯೋಚನೆಯ ಜೊತೆಗೆ ಮತ್ತೊಂದು ಜೋಡಿಯಾಯಿತು. ಮರಿಯನ್ನು ಬೆಲೆವೆಣ್ಣಿನ ಬಲೆಯಿಂದ ತಪ್ಪಿಸಬೇಕು!—ಅದಕ್ಕಾಗಿಯೇ ಬೆಳಗಿನ ಆರು ಘಂಟೆಯ ವೇಳೆಗೇ ನಿಲ್ದಾಣಕ್ಕೆ ಹೋಗಿ ನೋಡಿದೆ. ಎರಡು ದಿವಸಗಳು ಕಾದರೂ, ಮರಿ ರೈಲು ಹೊರಡುವ ವೇಳೆಗೆ ಸರಿಯಾಗಿ ಬಂದು ಕೂಡಲೇ ಯಾವುದೋ ಡಬ್ಬಕ್ಕೆ ಸೇರಿಬಿಡುತ್ತಿದ್ದನಾದ ಕಾರಣ ವ್ಯರ್ಥವಾಯಿತು. ಪರಿಚಯದ ಜನಗಳು ಬೇರೆ ಮಾತಿಗೆ ನಿಲ್ಲುತ್ತಿದ್ದರಾದ ಕಾರಣ ಮತ್ತೊಂದು ದಿವಸವೂ ಗೊಂದಲದಲ್ಲಿ ಸಿಕ್ಕಿಬಿದ್ದೆ. ಮರಿಯನ್ನು ಕಾಣಲು ಆಗಲೇ ಇಲ್ಲ.

ಮತ್ತೊಂದು ಬಾರಿ ಬೆಂಗಳೂರಿಗೆ ಹೋಗಬೇಕಾದಾಗ ರೈಲಿನಲ್ಲಿಯೇ ಮರಿಯನ್ನು ಕಾಣಲು ಅವಕಾಶ ದೊರಕಿತು. ಹಿಂದಿನ ಎಲ್ಲ ಘಟನೆಗಳ ನೆನಪು ಇಲ್ಲದಿರಲಿಲ್ಲ. ಬಾಯಿಬಿಟ್ಟು ಕೇಳಲು ಏಕೋ ಮನಸ್ಸು ಹಿಂಜರಿಯತೊಡಗಿದ್ದಿತು. ಆದರೂ ಧೈರ್ಯಮಾಡಿ ಕೇಳಿದೆ.

'. . . ಮರಿ . . . ಹಣವನ್ನೇನುಮಾಡಿದೆ? . . .'

'. . . ಹಂಗೇ . . . ಐತೆ . . ಸ್ವಾಮಿ . . .'

ಅವನ ಮುಖಭಾವವನ್ನು ನೋಡಿದ್ದರೆ ಯಾರಾದರೂ ಒಪ್ಪುತ್ತಿದ್ದರು—ಅದು ಹುಸಿಯಲ್ಲ; ಅವನ ಹೃದಯದಿಂದಲೇ ಬಂದ ನುಡಿಯೇ ಅಹುದೆಂದು—

'. . . ಮದುವೆಯೇಕೆ . . . ನಿಂತಿತು? . . .'

'. . . ಈ ಬಾರಿ . . . ನನಗ . . . ಯೋಗ ಕಡಮಿಯಂತರ . . . ಹೆಣ್ಣಿಗೆ ಹುಸಾರು . . . ತಪ್ಪಿತರ . . .'

'. . . ಹಾಗಾದರೆ ಯಾವಾಗ ಮದುವೆ . . . ಹೆಣ್ಣು ಕಾದಿರುತ್ತಾಳೆಯೇ? . . .'

'. . . ಹೆಣ್ಣು ಎಲ್ಲಿಹೋದಾಳು! . . . ಬರೋ ವೈಸಾಕದಾಗೆ ಆಗ್ಬೋದಂತರ . . . ಗೊತ್ತಾಗಯ್ತ್ರ . . .'

'. . . ಆದರೆ . . .'

ಮುಂದೆ ನುಡಿಯಲಾಗಲಿಲ್ಲ. ಆ ಜನಗಳೆಲ್ಲರ ಮುಂದೆ. ಆ ಪ್ರಶ್ನೆಯನ್ನು ಕೇಳಿಬಿಡಬಾರದೆನ್ನಿಸಿತು. ಮರಿ ನನ್ನ ಮೊಗವನ್ನೇ ನೋಡುತ್ತಾ ಕುಳಿತ.

'... ನಾಳೆ ರಾತ್ರಿಗೆ ... ನಮ್ಮ ಮನೆಯವರೆಗೂ ಬಂದುಹೋಗುವೆಯಾ ...? ...'

'... ಬತ್ತೀನಂತೆ ... ಅಡ್ಕೇನು ...' ಎಂದ.

ಪತ್ರಿಕೆಯನ್ನು ತೆರೆದು ಓದತೊಡಗಿದೆ. 'ಮನುಜ ಶರೀರವಿದೇನು ಸುಖಾ ‖' ಎಂಬ ಕೀರ್ತನೆಯನ್ನು ಹಾಡಿದ. ಮತ್ತೊಂದು ಹಿಂದಿಯ ಹಾಡು. ಆದರೇಕೋ ನನ್ನ ಮನಸಕ್ಕೆ ರಂಜನೆಯಾಗಲಿಲ್ಲ. ಹೇಗೂ ಎರಡಾಣೆಯ ಬಿಲ್ಲೆಯೊಂದನ್ನು ಅವನ ಕೈಲಿಡದಿರಲಿಲ್ಲ.

ಊಟಮಾಡಿ ಆರಾಮಕುರ್ಚಿಯ ಮೇಲೆ, ಮರಿಯು ಬರುವನೆಂಪೇ ಕಾದು ಕುಳಿತಿದ್ದೆನು. ಆಗಲೇ ೮-೩೦ ಘಂಟೆ ಯಾಗಿದ್ದಿತು. ಮರಿ ಬಂದವನು ಎದುರಿನಲ್ಲಿಯೇ ಕುಳಿತ.

'... ಊಟವಾಯಿತೇ ಮರಿ ...'

'... ಹೂ ... ಆಗದೆ ...'

ಸ್ವಲ್ಪಕಾಲ ಮೌನವಾಗಿಯೇ ಕಳೆಯಿತು. ಮರಿಯ ಮೊಗವನ್ನೇ ನೋಡಿದೆ. ಅಲ್ಲಿ ಶಾಂತತೆಯೊಂದೇ ನೆಲೆಯಾಗಿದ್ದಿತು.

'... ಮರಿ ... ನಿನ್ನ ನಡತೆ ನನಗೆ ಸರಿಬರಲಿಲ್ಲ ... ನೀನು ಹೀಗಾಗುವಿಯೆಂದು ... ನಾನು ನಂಬಿರಲಿಲ್ಲ. ...'

ಮರಿ ತಲೆ ತಗ್ಗಿಸಿಯೇ ಕುಳಿತಿದ್ದನಾದರೂ ಅವನ ಮೊಗದ ಕಳೆ ಬದಲಾಗಿದೆಯೆನಿಸಿತು.

'... ನಿಮ್ಮವ್ವನೇ ಹೇಳಿದ್ದಳು ... ಮರಿ ಕೆಟ್ಟೋಯ್ತಾನೆ ... ಸಂಗ ಸರಿಯಿಲ್ಲ ... ಎಂದು. ...'

ಮರಿ ಪ್ರತಿಭಟಿಸಲಿಲ್ಲ. ತಲೆಯೆತ್ತಿ ನೋಡಿದನಾದರೂ ಮೆಲ್ಲಗೇ ನುಡಿದ.

'... ನಾನಾದ್ರೂ ... ಅಂತದೇನ್ಮಾಡಿವ್ನಿ ...'

'... ನಿನ್ನ ಮನೆಯಾಗಿರೋ ಹೆಂಗಸು ಯಾರು? ... ಪಾವನಪುರದ ಸೂಳೆಯಲ್ಲವೇನು ...? ...'

ನಯನಗಳು ತೀವವಾದುದಕ್ಕೆ ಕುರುಹಾಗಿ ಮಿಂಚಿದುವು. ಮೆಲ್ಲಗೆ ತಲೆಯನ್ನು ತಗ್ಗಿಸಿ ಹೇಳತೊಡಗಿದ.

'... ಅವಳು ... ಸೂಳೆಯೇ ಹೌದು ... ನಮ್ಮವ್ವ ತೀರಿಕೊಂಡಮ್ಯಾಗೆ ದಿಕ್ಕಿಲ್ಲದ್ಹಂಗಾದೆ ... ಆಗ ನೆಂಟರಿಷ್ಟರಾರೂ ಬರಲಿಲ್ಲರ ... ಚೆನ್ನಿಗನೆಂತ ಇದ್ದಾನ ... ಅವನೂ ರೈಲಿನಾಗೆ ಭಿಕ್ಷೆಬೇಡ್ತಾನ ... ಅವನೆ ... ಚೆನ್ನಿಯ

ಮನೆಗೆ ನನ್ನನ್ನು ಒಯ್ದನ . . . ಇಬ್ಬರೂ ಅಡಿಗೆ ಮಾಡ್ಕೋಂತಿದ್ವಿ . . . ಚೆನ್ನಿಗ ನನ್ನ ಬಂಧು ಬಳಗ ಎಲ್ಲಾ ಆಗಿದ್ನ. . . ಆದರೆ ಚಿನ್ನಿ ನನ್ನಮೇಗೆ ಆದರ ತೋರಿದ್ಲ . . . ಒಂದು ತಿಂಗಳ ಹೇಗೂ ಕಳಿತರ. . . ಅವತ್ತು . . . ಚೆನ್ನೀ ಮನೆಯಾಗೇ ಹೊಡೆದಾಡಕ್ಕೆ ನಿಂತನ ಚೆನ್ನಿಗ . . . ಚಿನ್ನಿಯಿಲ್ಲದಿದ್ದರೆ ನನ್ನ ತಲೆಯೇ ಅವನ ದೊಣ್ಣೆಗೆ ಗುರಿಯಾಗಬೇಕಿತ್ತರ . . . ಅವಳೇ ಬಂದು ನನ್ನ ಮುಂದೆ ನಿಲ್ಲುತ್ತಲೇ ಚೆನ್ನಿಗ ದೋಣ್ಣೆ ಕೆಳೀಕೆ ಮಡಗದ್ನ. . . 'ನನ್ನ ಮನೆ ಹೊಸ್ತಿಲ ಮೆಟ್ಟೀಯೆ ಜೋಕೆ' . . . ಎಂದಳು ಚಿನ್ನ. . . ಅವ ಹೊರಟು ಹೋದನ . . . ಈಗಲೂ ನನ್ನ ಸಂಗಡ ಮಾತಾಡಕ್ಕಿಲ್ಲರ . . .'

'. . . ಒಂದು ವಾರ ಕಳೀತು. . . ನಾ. . . ಹೋಗೋವೇಳ್ಗೆ. . . ಸಪ್ಪೆ ಮೋರೆಹಾಕಿ. . . ಅಳ್ತಾ ಕುಂತಿದ್ಲ ಚಿನ್ನಿ. . . ನನಗೂ ನೋವಾಯ್ತು. . . ಯಾಕ. . . ಎಂದು ವಿಚಾರಿಸಿದ್ನ. . . ಎಷ್ಟೋ ಹೊತ್ತಿನಮ್ಯಾ ಗ. . . ಮನೆಯ ಬಾಡಿಗೆ ತಕರಾರು. . . ಎಂದು ತಿಳೀತರ. . . ಆಗಲೇ ನನ್ನ ಮನೀಗೆ ಕರೆತಂದನರ . . . ನಾವಿಬ್ಬರೇ ಸುಖವಾಗಿದ್ದೀವ್ರ. . .' ಎಂದು ಮೌನವಾಗಿ ಕುಳಿತ.

'ಒಂದು ಮನೆಯ ನಾಶಕ್ಕೆ ಕಾರಣಳಾದವಳು. . . ಇವನನ್ನೂ ಬಿಟ್ಟಾಳೆಯೇ?' ಎಂದು ಮನದಲ್ಲಿಯೇ ಅಂದುಕೊಂಡೆ. ಮರಿಯ ನುಡಿ ಮತ್ತೆ ಕೇಳಿಬಂದಿತು.

'ಬಂಧು ಬಳಗ ದೂರವಾದ್ರ. . . ನಮ್ಮ ಜನದಾಗ. . . ಯಾರೂ ನೆರವಾಗ ಲಿಲ್ಲರ. . . ಆದರೆ ಚಿನ್ನಿ ಹಂಗಲ್ಲ. . . ದಿಕ್ಕು ಬಂಧು ಬಳಗ ಎಲ್ಲಾ ಆದ್ಲ. . . ಅವಳ್ನೇ ಮದುವೆ. . . ಯಾಗಿ. . . ಸುಖವಾಗಿರೋನಾಂತ. . . ಯೋಚಿಸಿದ್ನ. . . ಅವಳನ್ನೂ ಒಂದಪ ಕೇಳಿದ್ನ. . . ಹಣತಿ ಕೈಯಾಗ ಹಿಡದೇ ಹೇಳಿದ್ಲ. . . 'ನಿಮ್ಮ ಒಪ್ಪಿಗೆಯಂತೇ ಆಗ್ಲ. . .'

ಮರಿ ಮತ್ತೆ ಶಾಂತನಾಗಿ ಕುಳಿತ. ನನಗಂತೂ ಏನು ಹೇಳಲೂ ತೋಚ ದಂತಾಯಿತು. ಅವನ ಪರಿಸ್ಥಿತಿಯಲ್ಲಿ ನಾನೇ ಇದ್ದರೆ! . . . ಎಂದುಕೊಂಡೆ. ಆದರೂ ಬಗೆಹರಿಯಲಿಲ್ಲ. ದೀಪವನ್ನೇ ನೋಡುತ್ತಾ ಕುಳಿತೆ. ಪತಂಗವೊಂದು 'ಜೆಯ್ . . . ಯ್' ಎಂದು ದೀಪದ ಕಡೆಗೆ ನುಗ್ಗಿತು. ಚಿಮಣಿಯನ್ನು ತಾಗಿ ಬಿದ್ದಿತು. . . ಮತ್ತೊಮ್ಮೆ ಹಾರಿ ಬಂದು ಎಗರಿತು! ಬಿದ್ದಿತು! ಆದರೂ ಅದು ಶಾಂತ ವಾಗಿ ಹಾರಿಹೋಗಲಿಲ್ಲ.

'ಮರಿಯ ಪ್ರಯತ್ನ ಹಾಗೂ ಸಾಧನೆ, ಪತಂಗದ ಪ್ರಯತ್ನವೇನು? . . .' ಎಂದಿತು ಮನಸ್ಸು. ಉತ್ತರ ಮಾತ್ರ ತೋಚಲೇ ಇಲ್ಲ. ಅಷ್ಟರಲ್ಲೇ ಮರಿಯು ಮುಂದೆ ನುಡಿದ.

'. . . ಚಿನ್ನಿಗೆ. . . ಹುಸಾರುತಪ್ಪಿತರ. . . ಸೋಮಾರದಿಂದಲೇ ಜ್ವರ ಕುದಿತರ . . . ಒಂದು ರಾತ್ರೆ ಉಳಿಯೋ ಮಟ್ಗೆ ಕಾಣನಿಲ್ಲ. . . ರಾತ್ರ ಬೆಳಗೂ ಒಬ್ಬನೇ ಕಾದನ. . . ದೇವರಗೆ. . . ಕೈಮುಗಿದು ದೂಪ ಹಾಕದ್ನ . . . ನಂಜುಂಡಪ್ಪ ದಯ ತೋರಿದ್ನ . . . ಹೊತ್ತಾರೆಗೆ ಜ್ವರ ಆರಿತರ . . . ಅದ್ಕೇ ಮದುವೆ ನಿಂತ್ಕೆ ಹೋಯಿತರ. . . ಒಳ್ಳೆ ನಗ್ನ ನೋಡ್ಸಿಪ್ನಿ . . . ವೈಸಾಕದಾಗೇ. . . ಮದುವೆ. . . ಪುಣ್ಯಾತ್ಮರು ಬಿಕ್ಸೆ ನೀಡತಾರ. . . ನನಗೆ ಅಷ್ಟೇ ಸಾಕರ . . .'

ಮರಿಯ ಮಾತು ಅಷ್ಟಕ್ಕೇ ನಿಂತಿತು. ಗಡಿಯಾರದ ಕಡೆ ನೋಡಿದೆ. ಹತ್ತು ಘಂಟೆಗೆ ಇನ್ನೂ ಹತ್ತು ನಿಮಿಷಗಳುಳಿದಿದ್ದುವು. ಅನಿರೀಕ್ಷಿತವಾಗಿಯೇ ನನ್ನ ಮನಸ್ಸಿನ ಮೇಲೆ ವಿಚಿತ್ರ ಪರಿಣಾಮವಾಗಿತ್ತೆನ್ನುತ್ತೇನೆ.

'. . . ಹೇಗೋ. . . ಸುಖವಾಗಿ ಬಾಳು. . . ನನಗೆ ಅಷ್ಟೇ ಸಾಕು. . . ' ಎಂದುಬಿಟ್ಟೆ. ಮತ್ತೆ ಮಲಗಲು. . . ಹೊತ್ತಾಗಿದೆ. . .' ಎಂದು ಎದ್ದು ನಿಂತೆ. ಮರಿಯೂ ಎದ್ದು ನಿಂತು ನುಡಿದ '. . . ನಾ. . . ಬರ್ತೇನೆ ಸ್ವಾಮಿ. . . ನಮಸ್ಕಾರ ಮಾಡ್ದೆ. . .' ಎಂದು ಹೊರಹೊರಟ. ಅವನ ಹೆಜ್ಜೆಗಳೂ ತೃಪ್ತಿಕರವಾಗಿಯೇ ಶಾಂತವಾಗಿ ಸಾಗಿದ್ದುವು. ತಿಮ್ಮನಾಗಲೇ ಮಲಗಿ ನಿದ್ರೆಹೋಗಿದ್ದ. ಬೀದಿಯ ಬಾಗಿಲಿಕ್ಕಿ ಬಂದು ಹಾಸಿಗೆಯಲ್ಲಿ ಒರಗಿದೆ.

೪

ಮತ್ತೆರಡು ವಾರಗಳು ಕಳೆದುವು. ತೌರಿನಿಂದ ಲಲಿತ ಬಂದಳು. ಒಂದು ರಾತ್ರಿ ಮರಿಯ ಚರಿತ್ರೆಯನ್ನೆಲ್ಲಾ ಹೇಳಿದೆ. '. . . ಅಯ್ಯೋ. . . ಬಿಡೀಂದ್ರೆ. . . ಅವನೇ ಹಾಳಾಗುವುದಾದರೆ ನಮಗೇನು? . . . ನಮ್ಮ ಹಣ ಬರದಿದ್ದರೂ ಚಿಂತೆಯಿಲ್ಲ. . . ಹೇಗಾದರೂ ಇರಲಂತೆ. . .' ಎಂದು ಹೇಳಿದಳು.

ಕಾರ್ತೀಕ, ಮಾರ್ಗಶಿರ, ಪುಷ್ಯ, ಮಾಘ—ಎಲ್ಲವೂ ಕಳೆದುವು. ಈ ವೇಳೆಯಲ್ಲಿ ನಾಲ್ಕಾರು ಬಾರಿ ಮರಿಯನ್ನು ಕಂಡೆ. ಆದರೆ ಒಮ್ಮೆಯೂ ನುಡಿಸಲಿಲ್ಲ. ರೈಲಿನಲ್ಲಿ ಅವನ ಕೈ ನನ್ನ ಮುಂದೆಯೇ ಸಾವಧಾನವಾಗಿ ಸಾಗುವಾಗ್ಗೆ ಒಂದೆರಡಾಣೆ ಹಾಕಿರುವುದೇನೋ ಉಂಟು. ಅವನ ಹಾಡುಗಳೇನೂ ಕಳೆಗುಂದಿರಲಿಲ್ಲ. ಅವನಲ್ಲಿಯೂ ವ್ಯತ್ಯಾಸಗಳು ಕಂಡುಬಂದಿರಲಿಲ್ಲ. ಅದೇ ಕಂಠ! ಅದೇ ಶಾಂತಮುಖ! ಅದೇ ನಿಲುವು! . . . ನಡೆ! ನುಡಿ! . . . ಎಲ್ಲವೂ ಎಂದಿನಂತೆಯೇ!

ಹೊಸ ಉಗಾದಿ ಬಂದಿತು. ಹೊಸ ಮುಗಿಲು! ಹೊಸ ಮಳೆ! ಹೊಸ ಗಾನ! ಹೊಸ ಉಡಿಗೆ ತೊಡಿಗೆ! . . . ಹೊಸ ವೈಭವ!! ಆಶೆ . . . ಆಕಾಂಕ್ಷೆ. . .

ಎಲ್ಲದೂ ಹೊಸತು; ಹೊಸ ಹೊಸತು!!! ನಿಲ್ದಾಣದ ಮುಂದಿನ ಹಾದಿಯ ಪಕ್ಕದಲ್ಲಿನ ಸಾಲುಮರಗಳು ಹೊಸ ವಿಧದ ಕೆಂಪು ಹೂ ಕಚ್ಚಿದ್ದುವು. ಹೊಸ ವಸಂತದ ಸಂಜೆವೆಣ್ಣಿನ ಚೆಂದುಟಿಗಳಲ್ಲಿನ ಮೃದುಲ ನಗೆಯಿಂದ ರಾಗರಂಜಿತವಾದ ಮುಗಿಲವಾಲೆಯ ರಮ್ಯನೋಟವನ್ನು ನೋಡುತ್ತಾ ಆ ದಾರಿಯಲ್ಲಿಯೇ ಸ್ನೇಹಿತ ನೊಡನೆ ಹೋಗುತ್ತಿದ್ದೆ. ಜೇಬಿನಲ್ಲಿದ್ದ ದುಡ್ಡನ್ನು ಮುಟ್ಟಿ ನೋಡಿಕೊಳ್ಳುತ್ತಲೇ ತನ್ನ ಗುಡಿಸಲಿನ ಕಡೆಗೆ ಧಾವಿಸುತ್ತಿದ್ದ ಮರಿಯನ್ನೂ ಕಂಡಿರುವುದುಂಟು.

ವೈಶಾಖ ಬಂದಿತು. ಪೋರ್ಣಿಮೆಯೂ ಬಂದಿತು. ಅದರ ಮರುದಿವಸ ಬಿಸಿಲು ಮಚ್ಚಿನ ಮೇಲೆ ನಿಂತು ಚಂದ್ರೋದಯವನ್ನು ಕಾದು ನಿಂತೆ. ಬಿಸುಗಾಳಿ ರೊಯ್ಯನೆ ಬೀಸತೊಡಗಿತ್ತು. ಬಾನು ಬುವಿಗಳ ಅಂಚಿಗೆ ಬೆಳಕಿನ ಗೆರೆ ಕಾಣಿಸಿ ಕೊಂಡಿತು. ಬೆಳಕು ಹೊಮ್ಮತೊಡಗಿತು. ಒಮ್ಮೆಗೇ ರಕ್ತವೆರಚಿದಂತೆ ಬಣ್ಣ ವಾಯಿತು. ಚಂದ್ರ ಮೂಡಿದವನು ಕೆಂಪು ಮುಗಿಲ ತೆರೆಯೊಂದರ ಹಿಂದೆ ನಿಂತಿರು ವಂತೆ ಕಾಣಿಸಿತು. ಲಲಿತಳನ್ನೂ ಕೂಗಿ ಕರೆದು ತೋರಿಸಿದೆ. ಇಂದುವಿನ ಮೊಗದ ರಕ್ತರಾಗವನ್ನು ನೋಡಿ '. . . ಎಂತಹ ಸ್ವರ್ಗೀಯಸೌಂದರ್ಯ!' ಎಂದಳು. ಅಮಾವಾಸ್ಯೆಯೂ ಬಂದಿತು. ಆದರೂ ಮನೆಯ ಮುಂದೆ ಚಪ್ಪರ ಕಾಣಲಿಲ್ಲ. ಚಪ್ಪರದ ಹಟ್ಟಿಗೆ ಕರೆದೊಯ್ಯಲು ಮರಿಯಾದರೂ ಬರಲಿಲ್ಲ.

ಅಂದು ಭಾನುವಾರ. ಲಲಿತಳು ಕಾಫಿಮಾಡಿಕೊಡುವುದು ತಡವಾದುದರಿಂದ ಆಗಲೇ ೫॥ ಘಂಟೆಯಾಗಿದ್ದರೂ ಮನೆಯನ್ನು ಬಿಟ್ಟಿರಲಿಲ್ಲ. ಹಾಗೆಯೇ ಆರಾಮ ಕುರ್ಚಿಯಲ್ಲಿ ಒರಗಿದ್ದೆನು. ಯಾರೋ ನುಗ್ಗಿಬಂದರು. ತಿರುಗಿ ನೋಡಿದೆ. ಮರಿಯೇ ಎದುರಿಗೆ ನಿಂತಿದ್ದ. ಅವನ ಹೆಗಲಮೇಲೆ ಚೌಕವೊಂದಿತ್ತು. ಅವನು ಉಟ್ಟಿದ್ದ ಪಂಚೆಯಲ್ಲಿ ಎರಡು ಕಡೆ ಕೆಂಪು ಕಲೆಗಳು ಕಂಡುವು. ಹತ್ತಿರವೇ ಬಂದು ಬಾಗಿ ದಾಗ ಗಬ್ಬುನಾತ ಅಡರಿತು. ಮೂಗು ಮುಚ್ಚಿಕೊಳ್ಳದೇ ಇರಲಾಗಲಿಲ್ಲ.

'. . . ತಗೋಳಿ. . . ಬುದ್ಧಿ. . . ನಿಮ್ಮಹಣ. . .' ಎನ್ನುತ್ತ ಹತ್ತು ರೂಪಾಯಿನ ನೋಟುಗಳನ್ನು ಒಂದೊಂದಾಗಿ ಎಣಿಸುವಂತೆಯೇ ಹಾಕಿದನು.

ಅಚ್ಚರಿಯಿಂದ ಅವನನ್ನೇ ದಿಟ್ಟಿಸಿ ನೋಡಿದೆ. ಆ ಮೊಗದಲ್ಲಿ ಸಂತಸದ ಕಿರುಗೆರೆಯೊಂದಾದರೂ ಕಾಣಿಸಲಿಲ್ಲ; ಅಲ್ಲಿ ದುಃಖದ ಕುರುಹೂ ಕಾಣಲಿಲ್ಲ; ಆವೇಶವೂ ಇಲ್ಲ; ಶಾಂತತೆಯೊಂದೇ ನೆಲೆಯಾಗಿದ್ದಿತು. ನೋಟುಗಳನ್ನು ಕೈಗೆ ತೆಗೆದುಕೊಂಡೆ. ಅಷ್ಟರಲ್ಲೇ ಮತ್ತಾರೋ ಬೀದಿಯ ಬಾಗಿಲಿನ ಮೆಟ್ಟಲೇರುವ ಸದ್ದು ಕೇಳಿಸಿತು. ಎಂದೂ ಬಾರದ ದಫೇದಾರ್ ಸೂರಪ್ಪನವರು ಒಳಕ್ಕೇ ಬಂದು ನಿಂತುದನ್ನು ನೋಡಿ ಅಚ್ಚರಿಯಾಯಿತು.

'. . . ಮತ್ತೆ ಬಂದು ಕಾಣುತ್ತೇನೆ . . .' ಎನ್ನುತ್ತ ಮರಿಯ ರಟ್ಟೆಗೆ ಕೈಯಿಟ್ಟು 'ನಡೆ' ಎಂದರು. ಮರಿ ಪ್ರತಿಭಟಿಸಲಿಲ್ಲ. ಸಾವಧಾನವಾಗಿಯೇ ನಡೆದನು. ಧಫೇದಾರರ ಕಾಲಿನಲ್ಲಿದ್ದ ದಪ್ಪ ಕರಿಯ ಬೂಡ್ಸುಗಳ ಅಡಿಗೆ ಹೊಡೆದಿದ್ದ ಮೊಳೆಗಳು ನೆಲಕ್ಕೆ ತಗುಲಿ 'ಕಟ್ . . . ಕಟ್ . . .' ಸದ್ದು ಮಾಡುತ್ತಿದ್ದುವು. ಕೊನೆಯ ಮೆಟ್ಟಲಿನ ಮೇಲೆಯೂ ಆ ಸದ್ದು ಮೂಡದೇಹೋಗಲಿಲ್ಲ.

ಲಲಿತಳೂ ನಡುಮನೆಯ ಬಾಗಿಲಿಗೆ ಬಂದು ಅಪ್ರತಿಭಳಾಗಿ ನೋಡುತ್ತಾ ನಿಂತಿದ್ದಳು. ಅವಳು ನನ್ನ ಹತ್ತಿರ ಬಂದಾಗಲೂ ನನ್ನ ಕೈಲಿ ನೋಟುಗಳಿದ್ದುವು.

'. . . ಇದೇನೂಂದ್ರೆ . . . ಮರಿಯನ್ನಲ್ಲವೇ ಕೊಂಡೊಯ್ದದ್ದು . . .'

'. . . ಹೌದು . . .' ಎಂದೆ.

ಹಣವನ್ನು ತೆಗೆದು ಜೇಬಿಗಿರಿಸಿದೆ. ಲಲಿತಳು ಒಳಗೆ ಹೋಗಿ ಕಾಫಿಯನ್ನು ತಂದಿತ್ತಳು. ಕುಡಿದು ನಿಂತು 'ಸ್ಟೇಷನ್‌ಗೆ ಹೋಗಿಬರುತ್ತೇನೆ . . .' ಎಂದು ಹೇಳಿ ಹೊರಟುಬಿಟ್ಟೆ.

ಮರಿಯನ್ನಾಗಲೇ ಜೈಲುಖಾನೆಗೆ ಕೂಡಿದ್ದರೂ ಓಡಿಹೋದಾನೆಂಬ ಭಯ ಇನ್‌ಸ್ಪೆಕ್ಟರಿಗೆ ಇದ್ದಂತೆ ಕಂಡಿತು. ಇನ್‌ಸ್ಪೆಕ್ಟರು, ಧಫೇದಾರರೊಡನೆ ನಾನೂ ಮರಿಯ ಗುಡಿಸಲಿನ ಕಡೆ ಸಾಗಿದೆ. ಒಬ್ಬ ಕಾನಸ್ಟೇಬಲ್ ಬಾಗಿಲಿನ ಮುಂದೆಯೇ ನಿಂತಿದ್ದ. ಬಾಗಿಲು ಮಾತ್ರ ಸ್ವಲ್ಪನೇ ತೆರೆದಿದ್ದಿತು.

ಪೊಲೀಸ್ ಅಧಿಕಾರಿಗಳು ಕೇಳಿದರು '. . . ಒಳಗೆ ಕತ್ತಲೆಯೇನು ? . . .' ಎಂದು.

'ಹಣತೆಯನ್ನು . . . ಹೊತ್ತಿಸಿಟ್ಟಿದ್ದೇವೆ . . .' ಎಂದನು ಕಾನಸ್ಟೇಬಲ್. ನಾವು ಮೂವರೇ ಒಳಗೆ ಹೋಗಿ ನೋಡಿದೆವು. ಹಣತೆಯ ಶಾಂತ ಬೆಳಕಿನಲ್ಲಿಯೇ ಆ ಭೀಕರ ದೃಶ್ಯ ! ಆ ಹೆಂಗಸಿನ ಎದೆಯಲ್ಲಿ ಒಂದು ಬಾಕು ನಾಟಿದ್ದಿತು. ರಕ್ತವೂ ಚಿಮ್ಮಿ ಎದೆಯಮೇಲಿನ ಬಟ್ಟೆ ತೊಯ್ದಿದ್ದಿತು. ಅವಳ ಮೈಮೇಲಿನ ಒಡವೆಗಳೆಲ್ಲಾ ಹಾಗೆಯೇ ಇದ್ದುವು.

ಮತ್ತೆ ಮೂವರೂ ಹೊರಗೆ ಬಂದೆವು. ಅಧಿಕಾರಿಗಳು ಗುಡುಗಿದರು '. . . ಯಾರೋ . . . ಚೆನ್ನಿಗ . . . ?' ಹತ್ತಿರದಲ್ಲೇ ನಿಂತಿದ್ದ ಯುವಕ ನುಡಿದ. '. . . ನಾನು . . . ಸ್ವಾಮಿ . . .'

'. . . ಆತ ಖೂನಿ ಮಾಡಿದ್ದನ್ನು ಕಂಡೆಯೇನೋ ? . . .'

'. . . ಹೌದು ಸ್ವಾಮಿ . . . ಕಂಡೆ . . .'

ಚಿನ್ನಿಗನ ಹೇಳಿಕೆಯೂ ಸಿದ್ಧವಾಯಿತು. ಮರಿಯು ಹೆಂಡ ಕುಡಿದು ಬಂದು ಖೂನಿಮಾಡಿದನೆಂದು ಆರೋಪಣೆಯಾಯಿತು.

ಮನೆಗೆ ಹಿಂತಿರುಗುವ ವೇಳೆಗಾಗಲೇ ೮-೩೦ ಘಂಟೆಯಾಗಿದ್ದಿತು. ಲಲಿತ ಬೀದಿಯ ಬಾಗಿಲಿನಲ್ಲೇ ಕಾದು ಕುಳಿತಿದ್ದಳು. ನನ್ನ ಹಿಂದಿನಿಂದ ಒಳಗೆ ಬಂದು '. . . ಏನಾಯಿತೂಂದ್ರೆ . . .' ಎಂದಳು. ಆರಾಮಕುರ್ಚಿಯಲ್ಲಿ ಬಿದ್ದುಕೊಂಡು, ಮರಿ ಖೂನಿಮಾಡಿದ ಸಂಗತಿ ತಿಳುಹಿಸಿದೆ. ಎಲ್ಲವನ್ನೂ ಕೇಳಿದಮೇಲೆ '. . . ಮರಿಯನ್ನು ಗಲ್ಲಿಗೇರಿಸುವರುತಾನೇ ? . . .' ಎಂದಳು. ನಾನು ಏನೆಂದೂ ನುಡಿಯಲಾಗಲಿಲ್ಲ. ನನ್ನರಿವಿಗೆ ಆಚೆ ವ್ಯೈಚಾಚಿದ ನಿಟ್ಟುಸಿರೇ ಅವಳ ಪ್ರಶ್ನೆಗೆ ಉತ್ತರವಾಗಿರಬೇಕು.

ಮರುದಿವಸವೇ ಮತ್ತೆ ಪೊಲೀಸ್ ಸ್ಟೇಷನ್ನಿಗೆ ಹೋದೆ. ಮರಿಯನ್ನು ಕಂಡು ಕೇಳಿದೆ. '. . . ನಿನ್ನಪರವಾಗಿ . . . ಲಾಯರಿಡಿಸುತ್ತೇನೆ . . . ಆಗಲೇನು ? . . .' ಎಂದು.

ಅವನ ಕೈಗಳು ಸೆರೆಮನೆಯ ಬಾಗಿಲಿನ ದಪ್ಪದಪ್ಪ ಕಂಬಿಗಳನ್ನು ಹಿಡಿದಿದ್ದಂತೆಯೇ ಅವನ ಮೊಗದಲ್ಲಿ ನಗೆಯ ಅಲೆಯೊಂದು ಏರಿಳಿದು ಮರೆಯಾಯಿತು. '. . . ನನಗ . . . ಯಾವ ಲಾಯರಿಯೂ . . . ಬೇಕಿಲ್ಲರ . . .' ಎಂದವನೇ ಹಿಂದಕ್ಕೆ ಸರಿದು ಕೋಣೆಯ ಕತ್ತಲೆಯಲ್ಲಿ ಕಾಣದಾದನು. ನಾನೂ ಅದೇ ಬಾಗಿಲಿನ ಕಂಬಿಗಳನ್ನು ಹಿಡಿದು ಒಳಗೆ ನೋಡಿದೆ. '. . . ಮರಿ . . . ಮರಿ. . .' ಎಂದು ಕೂಗಿದೆ. ಉತ್ತರವಾಗಿ ಪ್ರತಿಧ್ವನಿಯೊಂದು ಮೊಳಗಿತು.

ನ್ಯಾಯಸ್ಥಾನದಲ್ಲಿ ಮರಿಯ ವಿಚಾರಣೆಯಾಯಿತು. ಅವನ ಹೇಳಿಕೆಯೇ ಎಲ್ಲರ ಸಂಶಯಗಳನ್ನೂ ಸ್ಪಷ್ಟವಾಗಿ ನಿವಾರಿಸಿತು. ಆ ಹೇಳಿಕೆಯ ಕಾಪಿಯೊಂದನ್ನೂ ಪಡೆದೆ—

". . . ಈಗ್ಗೆ ಒಂದು ವರ್ಷದ ಮಾತು . . . ಆಗಲೇ ನಾನು ಈಕೆಯನ್ನು ಕಂಡುದು. ಮೊದಲ ದಿವಸವೇ ಇವಳ ನಡತೆ ನನ್ನ ಮನಸ್ಸಿಗೆ ಬಂದಿತು . . . ಆಗಾಗ್ಗೆ . . . ಹೋಗಿ ಬರತೊಡಗಿದೆ. ಅಂದು ನಾನು ಹೋಗುವ ವೇಳೆಗೆ ಅಳುತ್ತಾ ಕುಳಿತಿದ್ದಳು. ಮನೆಯ ಬಾಡಿಗೆಯ ಹಣ ಕೊಡಲೂ ಕಾಸಿರಲಿಲ್ಲವಂತೆ . . . ನನ್ನ ಮನಸ್ಸಿಗೂ ನೋವಾಯಿತು. 'ನನ್ನ . . . ಮನೆಗೇಯ ನಡೆ . . . ನಂಗೂ ಯಾವ ದಿಕ್ಕೂ ಇಲ್ಲ . . .' ಎಂದೆ. ಒಪ್ಪಿಕೊಂಡಳು. ಕರತಂದೆ.

"ಅವಳ ಹೆಸರು ಮತ್ತೆ ಬೇರೆಯಿರಬಹುದು. ನಾನು ಮಾತ್ರ 'ಚಿನ್ನಿ' ಎಂದು ಕರೆಯತೊಡಗಿದೆ. ನಿತ್ಯವೂ ರೈಲಿನಲ್ಲಿ ಬೇಡಿ ತಂದ ಹಣವನ್ನೆಲ್ಲಾ ಅವಳ ಮಡಿಲಿಗೇ

ಸುರಿಯುತ್ತಿದ್ದೆ. ನನ್ನನ್ನು ಬಹಳ ಆದರದಿಂದಲೇ ಕಾಣುತ್ತಿದ್ದಳು. ಹೊಸ ಹೊಸ ಹಾಡುಗಳನ್ನು ಕೂಡ ಅವಳೇ ನನಗೆ ಹೇಳಿಕೊಡುತ್ತಿದ್ದಳು. ಅಲ್ಲದೇ ಒಂದು ಸ್ಕೂಲಿನಲ್ಲಿ ಓದಿದ್ದಳಂತೆ. ಹಣದ ಹಾಗೂ ಸಂಸಾರದ ಆದಾಯ ವೆಚ್ಚಗಳನ್ನೆಲ್ಲಾ ಅವಳ ಪಾಲಿಗೇ ಬಿಟ್ಟುಬಿಟ್ಟಿದ್ದೆ. ಅವಳೊಡನೆ ಸುಖವಾಗಿಯೇ ಬಾಳಿದ್ದೆ. . . . ಚಿನ್ನಿಯನ್ನೇ ಮದುವೆಯಾಗುವುದೆಂದು ಯೋಚಿಸಿದೆ. ಎಲ್ಲರಂತೆ ಮದುವೆಯಾಗಿ ಸುಖವಾಗಿ ಬಾಳಬೇಕೆಂಬುದೇ ಇದಕ್ಕೆ ಕಾರಣವೆನ್ನುತ್ತೇನೆ.

"ಮತ್ತೊಂದು ಕಾರಣವೂ ಉಂಟು. ನಮ್ಮ ತಾಯಿ ತೀರಿಕೊಂಡಮೇಲೆ ದಿಕ್ಕಿಲ್ಲದಂತಾಗಿದ್ದೆ. ನಮ್ಮ ಸೋದರಮಾವ ತನ್ನ ಮಗಳನ್ನು ನನಗೆ ಕೊಟ್ಟು ಮದುವೆಮಾಡುವುದಾಗಿ ನಮ್ಮ ತಾಯಿಗೆ ಮಾತುಕೊಟ್ಟಿದ್ದರೂ ತಾಯಿ ತೀರಿಕೊಳ್ಳುತ್ತಲೇ ಮೋಸಮಾಡಿದ. 'ಮನೆಯ ಬಳಿಗೆ ಕಾಲಿಟ್ಟೀಯೆ . . . ಜೋಕೆ . . .' ಎಂದ. ಮನೆಯಲ್ಲಿ ಹಿಟ್ಟು ಬೇಯಿಸಲು ದಿಕ್ಕಿಲ್ಲದ ಕೊರತೆ. ನಮ್ಮ ಜನಗಳಲ್ಲಿ ವಿಚಾರಿಸಿದರೆ ತೊಂದರೆ ತಪ್ಪೀತೆಂದುಕೊಂಡೆ. ಒಂದೆರಡು ಕಡೆ ವಿಚಾರಿಸಿದೆ. ತೊಂದರೆಯನ್ನೆಲ್ಲಾ ಹೇಳಿಕೊಂಡು '. . . ನಾನೂ ನಿಮ್ಮೋನೆಯ . . . ಹೆಣ್ಣು ಕೊಟ್ಟು ಕಾಪಾಡರ . . .' ಎಂದೆ. ಅವರಾರೂ ಕರುಣೆ ತೋರಲಿಲ್ಲ. ನಮ್ಮಲ್ಲಿ ಹೆಣ್ಣಿಲ್ಲವೆಂದರು. ಮತ್ತೊಂದು ಕಡೆ ಹೋಗಿ ಕೇಳಿದೆ. '. . . ಬಿಕಾರಿಗೆಂತ . . . ಮದುವೆ . . . ಬನ್ನರಪ್ಪ . . . ಹೆಣ್ಣು ಹುಳೀತಿದ್ದರ ತನ್ನರ . . .' ಎಂದೇ ಹಾಸ್ಯಮಾಡಿ ಗೇಲಿಯಿಟ್ಟರು. ನನ್ನಪರವಾಗಿ ಒಬ್ಬನಾದರೂ ಮಾತನಾಡಲಿಲ್ಲ. ಅಂದೇ ನಿರ್ಧರಿಸಿದೆ. ಮದುವೆಮಾಡಿಕೊಂಡೇ ಅವರ ಮುಂದೆ ನಿಲ್ಲುತ್ತೇನೆಂದುಕೊಂಡೆ . . ."

"ನಿತ್ಯವೂ ಹಾಡಿ ಬೇಡಿ ಹಣ ತರುತ್ತಿದ್ದೆ. ತಂದ ಹಣವನ್ನು ಉಪಯೋಗಿಸಲೇ ತಿಳಿಯುತ್ತಿರಲಿಲ್ಲ. ಚೆನ್ನಿಗನೇ ಮೊದಲಬಾರಿ ಅವಳ ಮನೆಗೆ ಕರೆದೊಯ್ದ. ಅದೇ ಪರಿಚಯ ಬಂಧುವಾಯಿತು, ದಿಕ್ಕಾಯಿತು, ಎಂದುಕೊಂಡೆ . . ."

"ಚಿನ್ನಿಯೂ ಮದುವೆಯಾಗಲು ಒಪ್ಪಿಕೊಂಡಳು. ಹಣವನ್ನೂ ಕೂಡಿಸಿದೆ. ಲಗ್ನಕಟ್ಟಿಸಿಕೊಂಡು ಬಂದೆ. ಜವಳಿಯನ್ನೂ ತಂದೆನು. ಆದರೆ 'ನನಗೆ ಮೈಯಾಗ ಹುಸಾರಿಲ್ಲ . . .' ಎಂದಳು. ಮದುವೆ ಕಾರ್ಯ ನಿಂತಿತು. ಮತ್ತೊಂದುಬಾರಿ ಲಗ್ನಕಟ್ಟಿಸಿದೆ. ಸ್ವಲ್ಪ ದಿನಸಿಯನ್ನೂ ತಂದೆ. ಎರಡು ಭಂಗಾರದ ಬಳೆಗಳನ್ನೂ ಮಾಡಿಸಿದೆ. ನಮ್ಮ ತಾಯಿಯ ಬಳಿಯಿದ್ದ ಸ್ವಲ್ಪನಗ ಉಪಯೋಗಕ್ಕೆ ಬಂದಿದ್ದಿತು. ಈ ಬಾರಿ ತಾನು ಹೊರಗಾದಳೆಂಬ ನೆವವಾಯಿತು. ಮತ್ತೆ ಮದುವೆ ನಿಂತಿತು. ಆದರೆ ಅವಳ ನಡೆನುಡಿಯಲ್ಲಿ ವ್ಯತ್ಯಾಸವಿರಲಿಲ್ಲ. ಆದರವೂ ಕುಗ್ಗಿದಂತಿರಲಿಲ್ಲ. . . .

"ನಾನು ಕುಡಿಯುತ್ತಿರಲಿಲ್ಲ. ಆದರೆ ಒಂದು ದಿವಸ ತರಿಸಿಟ್ಟುಕೊಂಡಿದ್ದು ನಾನು ಬರುತ್ತಲೇ ಕೊಟ್ಟಳು. ಪಾತ್ರೆಯನ್ನು ಬಾಯಿಯಕಡೆಗೊಯ್ದಾಗ ತಡೆಯಲಾಗಲಿಲ್ಲ. ಥೂ! ನಾತವೆಂದು ಒಗೆಯುವುದರಲ್ಲಿದ್ದೆ. ಆದರೆ ಅವಳೇ ಪಾತ್ರೆಯನ್ನು ಹಿಡಿದು ಹತ್ತಿರ ಕುಳಿತು ಬಲವಂತದಿಂದ ಕುಡಿಸಿದಳು. ಮತ್ತೆ ಅವಳಿಗೆ ಪ್ರಯಾಸವೇ ಆಗಲಿಲ್ಲ. ಮೊದಲೇ ತರಿಸಿಟ್ಟುಕೊಂಡು ಕೊಡತೊಡಗಿದಳು. ಕ್ರಮೇಣ ಸ್ವಲ್ಪ ವ್ಯತ್ಯಾಸ ವಾಯಿತು. ಕೈಗೆ ಹಣವಿತ್ತು ಮದ್ಯದ ಅಂಗಡಿಗೇ ಕಳುಹಿಸತೊಡಗಿದಳು. ನಾನೂ ಕುಡಿದು ಮತ್ತೇರಿ ಬಂದು ಬೀಳುತ್ತಿದ್ದೆ. ಅದೇನೂ ದೋಷವೆನಿಸಲಿಲ್ಲ. . . .

"ವೈಶಾಖದಲ್ಲಿಯೇ ಮದುವೆಯಾಗುವುದೆಂದು ವಿಚಾರಿಸಿದೆ. ಚಿನ್ನಿಯೂ ಒಪ್ಪಿ ದಳು. ಎಲ್ಲ ಸಿದ್ಧತೆಗಳೂ ಆದುವು. ಹೊಟ್ಟೆಯ ಬೇನೆಯೆಂದು ಗೊತ್ತಾದ ದಿವಸಕ್ಕೆ ಸರಿಯಾಗಿ ನಾಲ್ಕುದಿವಸ ಮುಂಚಿನಿಂದಲೇ ಹಾಸಿಗೆ ಹಿಡಿದಳು. ಎಂಟು ಹತ್ತು ದಿವಸಗಳ ನಂತರ ಹಾಸಿಗೆಯಿಂದ ಎದ್ದಳು. . . .

"ಇಷ್ಟಾದರೂ ಅವಳಲ್ಲಿ ದೋಷ ಕಾಣಲಿಲ್ಲ. ಅವಳು ಮೋಸಗಾತಿಯೆನಿಸಲೇ ಇಲ್ಲ. ಆದರೆ ಅವಳು ಖೂನಿಯಾಗುವುದಕ್ಕೆ ಎರಡು ದಿವಸ ಮುಂಚೆಯೇ ಅವಳ ರಹಸ್ಯ ಬಯಲಾಯಿತು. ಆ ದಿವಸ ರೈಲು ಟೈಂ ವ್ಯತ್ಯಾಸವಾಗಿದ್ದುದರಿಂದ ಎಂದಿಗಿಂತ ಸ್ವಲ್ಪ ಮುಂಚೆಯೇ ಬಂದೆ. ಮನೆಯ ಮುಂದಿನ ದಾರಿಯಲ್ಲಿ ಕಾಲಿಡುವ ವೇಳೆಗೆ ಸರಿಯಾಗಿ ಮನೆಯಿಂದ ಒಬ್ಬಾತ ಹೊರಬಿದ್ದ. ಹಸುರು ಶಾಲಿನ ಮುಸುಗಿನಲ್ಲಿದ್ದ ಕಾರಣ ಗುರುತುಹಿಡಿಯಲಾಗಲಿಲ್ಲ. ಆತನ ನಡಿಗೆಯಿಂದ ಹಿಂದೆಲ್ಲೋ ನೋಡಿದ್ದೆನ್ನಿಸಿತು. ಹೇಗೋ ಒಳಗೆ ಹೋಗಿ ನಿಂತೆ. ಚಿನ್ನಿಯಿನ್ನೂ ಅಸ್ತವ್ಯಸ್ತಳಾಗಿಯೇ ಅಲ್ಲಿಯೇ ಬಿದ್ದಿದ್ದಳು. ಪಕ್ಕದಲ್ಲಿ ಎಲೆಯಡಿಕೆಯ ತಟ್ಟೆಯಿದ್ದಿತು. ಅದರ ಪಕ್ಕದಲ್ಲೇ ಸೀಸೆ ಯೊಂದು ಬಿದ್ದಿದ್ದಿತು. ಕೈಯಲ್ಲಿ ತೆಗೆದುಕೊಂಡು ನೋಡಿದೆ. ಅದರಲ್ಲಿ ಇನ್ನೂ ಸ್ವಲ್ಪ ಸಾರಾಯಿ ಉಳಿದಿದ್ದಿತು. ಮೋಟುಗೋಡೆಯ ಮೇಲೆಯೇ ಹಣತೆಯು ಉರಿಯು ತ್ತಲೇ ಇದ್ದಿತು. . . .

"ಸೋದರಮಾವ ಮತ್ತು ದಾಯಾದಿಗಳು ಮೋಸಗಾರರು! ಅವರಾರೂ ನನ್ನ ಮನೆಯ ಬಾಗಿಲಿಗೂ ಬರುವುದು ಬೇಡ. ಮದುವೆಯ ಸಂಭ್ರಮಕ್ಕಾದರೂ ನಮ್ಮ ಗುಡಿಸಲಿನ ಸುತ್ತುಮುತ್ತಲಿದ್ದ ಕೂಲಿಕಾರರ ನಾಲ್ಕೆಂಟು ಮನೆಯಾಳುಗಳೇ ಸಾಕು ಎಂದುಕೊಂಡಿದ್ದೆ. ಆದರೆ ಚಿನ್ನಿಯೂ ಮೋಸಗಾರಳೆನಿಸಿತು. ಖಾಯಿಲೆಯ ನೆಪಗಳೆಲ್ಲಾ ಮದುವೆಯನ್ನು ತಪಿಸುವುದಕ್ಕೆಂದು, ಅಲ್ಲಿನವರೆಗೂ ನನಗೆ ಹೊಳೆದಿರಲಿಲ್ಲ. ತನ್ನರಕ್ಷಣೆಗಾಗಿಯೇ ನನಗೂ ಹೆಂಡ ಕುಡಿಸಿದಳು! . . . ಇನ್ನೇನು ನನಗಾಸೆ! ಈ ಜನ್ಮದಾಗೆ ನಾನು ಹುಟ್ಟಲೇ ಇಲ್ಲವೆಂದುಕೊಳ್ಳುವುದೊಂದೇ! . . .

"ಎರಡು ದಿವಸಗಳನ್ನೂ ಚಿಂತೆಯಲ್ಲಿಯೇ ಕಳೆದೆ. ಗುಟ್ಟು ಬಯಲಾಯಿತೆಂದು ನನ್ನ ಸ್ಥಿತಿಯನ್ನು ಕಂಡೇ ಅವಳಿಗೆ ಅರಿವಾಗಿರಬೇಕು! ಹೇಗೂ ನಿರ್ಧರಿಸಿದೆ! ಅದೇ ಸರಿಯೆಂದುಕೊಂಡು ಮರುದಿವಸವೇ ಅಂಗಡಿಗೆ ಹೋಗಿ ಸ್ವಲ್ಪ ಸಾರಾಯಿಯನ್ನು ಕುಡಿದುಬಂದೆ. ನಾನು ಬರುವ ವೇಳೆಗೆ ಸರಿಯಾಗಿ ಅವಳೂ ನಿದ್ರೆ ಬಂದವಳಂತೆ ಮಲಗಿದ್ದಳು. ಮುಂದಿನ ಬಾಗಿಲನ್ನು ಮುಚ್ಚಿದೆ. ಹಣತೆಯನ್ನು ಹೊತ್ತಿಸಿದೆ. ನೇರವಾಗಿ ಅಡುಗೆಮನೆಗೆ ಹೋಗಿ ಮೂಲೆಯಲ್ಲಿದ್ದ ಮಡಕೆಯೊಂದನ್ನು ಹುಡುಕಿದೆ. ಅಲ್ಲಿಯೇ ಬಾಕುವು ಸಿಕ್ಕಿತು. ಅದು ಚಿನ್ನಿಯದೇ ಬಾಕು. ಅವಳ ಮನೆಯಿಂದ ಬರುವಾಗಲೇ ಅದನ್ನೂ ತಂದಿದ್ದಳು . . . ಚಿನ್ನಿಯ ಪಕ್ಕದಲ್ಲೇ ಹೋಗಿ ಕುಳಿತು ಭುಜವನ್ನು ಹಿಡಿದು ಅಲುಗಿಸಿದೆ. ಹಾಗೆಯೇ ಮೆಲ್ಲಗೆ ಕಣ್ಣುಗಳು ಅರಳಿದುವು. . .

"ಕೊನೆಗೆ ನರಳುತ್ತಲೇ ಹೇಳಿದಳು. ದನಿ ಬಹಳ ಕುಗ್ಗಿಹೋಗಿದ್ದಿತು. '. . . ನಾನೇನು. . . ಮಾಡಲಿ. . . ಅವ ಮುಂಚಿನಿಂದ ಬರುತ್ತಿದ್ದನ. . . ಆ ಹಿಂಸೆ ತಡಿಲಾರ್ದೆ. . . ಹಾಂಗೆಲ್ಲಾ ಮಾಡಿದೆನ. . . ಎಂದಳು. ಮುಂದೆ ಮಾತು ಹೊರಡಲಿಲ್ಲ. ಕಣ್ಣುಗಳಿಂದ ಕಂಬನಿ ಹರಿಯಿತು. ಆ ಹೆಣ್ಣಿನ ಎದೆಯ ನೋವು ಅಲ್ಲಿಯತನಕವೂ ತಿಳಿದಿರಲಿಲ್ಲ. ಏಕೆ ಹುಚ್ಚನಾದೆನೆಂದುಕೊಂಡೆ. ಚಿನ್ನಿಯ ಕಣ್ಣೀರನ್ನು ತೊಡೆದೆ. ಇದ್ದಕ್ಕಿದ್ದಂತೆಯೇ ಆ ತುಟಿಗಳಮೇಲೆ ತಿಳಿನಗೆಯಾಡಿತು. ದೀಪದ ಕಡೆ ಮೆಲ್ಲಗೆ ಕಣ್ಣುಹೊರಳಿಸಿ ನೋಡಿದಳು. ನಾನೂ ಅತ್ತ ನೋಡಿದೆ . . . ಹಣತೆಯಲ್ಲಿ ಇದ್ದಕ್ಕಿದ್ದಂತೆಯೇ ಏರಿದ ಉರಿ! . . . ಹೋ! ನಂದಿಹೋಯಿತು!!"

ಕುರ್ಚಿಯ ಮೇಲೆಯೇ ಓದುತ್ತಾ ಕುಳಿತಿದ್ದ ಲಲಿತ ಅಲ್ಲಿಗೇ ನಿಲ್ಲಿಸಿ ಮೇಜದ ಮೇಲೆಯೇ ಆ ಹಾಳೆಯನ್ನು ಇರಿಸಿದಳು. ಒಂದೆರಡು ನಿಮಿಷಗಳು ಕಳೆದುವೆನ್ನಬೇಕು. ಅವಳ ಬಾಯಿಂದಲೇ ಹೊರಟ ಉದ್ಗಾರವೆಂದರೆ—'ಮರಿಗೆ ಜೀವಾವಧಿ ಶಿಕ್ಷೆಯಾಯಿತು! ಆದರೂ ನಮ್ಮ ಹಣ ಬಂದಿತು!"

ಮಂಚದಮೇಲೆ ಹಾಸಿಗೆಯಲ್ಲಿ ಹೊರಳುತ್ತಿದ್ದಂತೆಯೇ ನನ್ನ ಮನ ಬೇರೆಯೆ ನುಡಿಯಿತು.—ಪತಂಗ ದೀವಿಗೆಯನ್ನೂ ನಂದಿಸಿತು. ರಕ್ಕೆಯನ್ನೂ ಕಳೆದುಕೊಂಡಿತು!!!

ಕ. ವೆಂ. ರಾಜಗೋಪಾಲ

ಸೇತುವೆಗಳ ನಿರ್ಮಾಣಕ್ರಮದಲ್ಲಿ ಮತ್ತೊಂದು ಮತ

ಕಳೆದ ಸಂಚಿಕೆಯಲ್ಲಿ 'ಶಿಲ್ಪತತ್ವರಹಸ್ಯ'ದಲ್ಲಿ ಉಕ್ತವಾಗಿರುವಂತೆ ಸೇತುವೆಗಳ ನಿರ್ಮಾಣರಹಸ್ಯವನ್ನು ಸೂಚಿಸಿದೆ. ವಿಶ್ವರೂಪನೆಂಬ ಮತ್ತೊಬ್ಬ ಶಿಲ್ಪಿವರ್ಯನು ಇನ್ನೂ ಗೂಢವಾದ ರಹಸ್ಯವನ್ನು ಮುಂದಿನ ಶ್ಲೋಕಗಳಲ್ಲಿ ವ್ಯಕ್ತಪಡಿಸಿದ್ದಾನೆ.

"ಸೇತು ತೋರಣ ದೈರ್ಘ್ಯಾತ್ತು ಮಾನಮೇಷಾಂ ನಿಗದ್ಯತೇ |
ಚತುರ್ಥಾಂಶಃ ಪಂಚಮೋವಾ ಸೇತ್ವಂತ್ಯಸ್ತಂಭ ಈರಿತಃ ||

ಷಷ್ಠಾಂಶಃ ಪಂಚಮೋವಾಪಿ ಔನ್ನತ್ಯಂ ಪರಿಕಲ್ಪ್ಯತೇ |
ಷಷ್ಠಾಂಶಃ ಸಪ್ತಮೋವಾಪಿ ಮಧ್ಯಸ್ತಂಭೇಷು ಕೀರ್ತಿತಃ ||

ಅಷ್ಟೋತ್ತರ ದಶಾಂಶಸ್ತು ಸೇತೋಸ್ಥೌಲ್ಯಮಿತಿಸ್ಥಿತಿಃ |
ಸೇತೋರುಪರಿ ತಸ್ಯೈವ ಗಜಪಂಕ್ತಿರ್ಮಹಾಬಲಾಃ ||

ಚಲಿತುಂ ಶಕ್ಯತೇ ಶಶ್ವತ್ ಇತಿ ವಾಸ್ತುವಿದಾಂ ಮತಂ |
ಸೇತುಬಂಧ ಕ್ರಮೋಯಂ ತು ವಿಶ್ವರೂಪೇಣ ಕೀರ್ತಿತಃ ||"

ಮೇಲಿನ ಶ್ಲೋಕಗಳಲ್ಲಿ 'ಶಿಲ್ಪತತ್ವರಹಸ್ಯ'ದಲ್ಲಿ ಹೇಳಿರುವಂತೆ ಸೇತುವೆಯ ವಿವಿಧ ಭಾಗಗಳ ಪರಸ್ಪರ ಪ್ರಮಾಣವನ್ನು ಸೂಚಿಸಿರುವುದಲ್ಲದೆ ಸೇತುವೆಯ ನಿರ್ಮಾಣದಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವ ಚಲನಭಾರ(Rolling load)ದ ಸ್ವರೂಪ ವನ್ನೂ ರಹಸ್ಯವನ್ನೂ ನಿರೂಪಿಸಿರುತ್ತಾನೆ. ಇಲ್ಲಿ ಉಕ್ತವಾಗಿರುವ ಪ್ರಮಾಣದಲ್ಲಿ ನಿರ್ಮಿತವಾದ ಸೇತುವೆಯು ಮಹಾ ಬಲಿಷ್ಠವಾದ ಗಜಪಂಕ್ತಿಯ ಚಲನಭಾರ ವನ್ನು (Rolling load) ವಹಿಸಬಲ್ಲದು ಎಂಬುದು ಶಿಲ್ಪಿಯ ಆಶಯ. ಈ ರಹಸ್ಯ ಆಧುನಿಕ ಶಿಲ್ಪಿಶಾಸ್ತ್ರಜ್ಞರಿಂದ ಬಹು ಮುಖ್ಯವೆಂದು ಪರಿಗಣಿತವಾಗಿದೆ.

ಎಂ. ಜಿ. ಶಿಂಗ್ರಯ್ಯಂಗಾರ್.

ಭಾರತ ರಾಜ್ಯನಿಬಂಧನೆ ಅಥವಾ ಸಂವಿಧಾನ

೭
ರಾಜ್ಯಗಳು

ಭಾರತರಾಜ್ಯಗಳ ಒಕ್ಕೂಟ—ಭಾರತಸಂಘ ಅನೇಕರಾಜ್ಯಗಳನ್ನೊಳಗೊಂಡಿರುವ ಒಂದು ದೊಡ್ಡ ಗಣರಾಜ್ಯ. ಭಾರತದಲ್ಲಿ ಅನೇಕ ಸರ್ಕಾರಗಳಿದ್ದರೂ ಇವುಗಳ ರೂಪುರೇಖೆಗಳೆಲ್ಲಾ ಒಂದೇ ವಿಧ; ಪ್ರಶಾಸನದ ರೀತಿನೀತಿಗಳೆಲ್ಲಾ ಒಂದೇ ಸಮ. ಸರ್ಕಾರಗಳ ಏಕರೂಪತೆ ದೇಶದ ಐಕಮತ್ಯತೆ ಹಾಗೂ ಭದ್ರತೆಗೆ ಮುಖ್ಯಸಾಧನೋಪಾಯವಾಗಿದೆ. ೧೯೪೭ ನೆಯ ಇಸ್ವಿಗೆ ಮುಂಚೆ ಈ ದೇಶದಲ್ಲಿ ಗೌರ್ನರ ಪ್ರಾಂತ್ಯಗಳು ೯, ಚೀಫ್‌ಕಮಿಷನ್ನರ ಪ್ರಾಂತ್ಯಗಳು ೫, ರಾಜರ ಆಳಿಕೆಗೆ ಒಳಪಟ್ಟಿದ್ದ ಸಂಸ್ಥಾನಗಳು ೫೦೦ ಈ ಪ್ರಕಾರ ಇದ್ದುವು. ಇವುಗಳಲ್ಲಿ, ಅದರಲ್ಲಿಯೂ ಸಂಸ್ಥಾನಗಳಲ್ಲಿ ಯಾವವಿಧವಾದ ಸುವ್ಯವಸ್ಥಿತ ಪ್ರಶಾಸನೀಯ ಪದ್ಧತಿಯೂ ಆಚರಣೆಯಲ್ಲಿರಲಿಲ್ಲ. ಇವುಗಳಲ್ಲಿ ಕೆಲವು ಅರಾಜಕತ್ವವನ್ನೂ ಮತ್ತೆ ಕೆಲವು ಮಧ್ಯಯುಗದ ಪಾಳೆಯಗಾರರ ಆಳಿಕೆಯನ್ನೂ ಇನ್ನು ಕೆಲವು ನಿರಂಕುಶಪ್ರಭುತ್ವವನ್ನೂ ಪ್ರತಿಬಿಂಬಿಸುತ್ತಿದ್ದುವು. ಪ್ರಜಾಸ್ವಾತಂತ್ರ್ಯ, ಪ್ರಜಾಮತ, ಪ್ರಜಾಸರ್ಕಾರ ಇವೇ ಮೊದಲಾದ ಆಧುನಿಕ ರಾಜಕೀಯ ಸಂಪ್ರದಾಯಗಳನ್ನು ಅನೇಕ ಸಂಸ್ಥಾನಗಳ ಪ್ರಜೆಗಳು ಸ್ವಪ್ನದಲ್ಲಿಯೂ ಕಂಡಿರಲಿಲ್ಲ. ಇವುಗಳ ಆಡಳಿತದಲ್ಲಿ ಹೇಗೆ ವೈವಿಧ್ಯತೆ ಇದ್ದಿತೋ ಹಾಗೆ ಇವುಗಳ ವಿಸ್ತೀರ್ಣ, ಜನಸಂಖ್ಯೆ, ಸಂಸ್ಕೃತಿ ಮೊದಲಾದ ವಿಷಯಗಳಲ್ಲಿ ವ್ಯತ್ಯಾಸಗಳಿದ್ದುವು. ಇವುಗಳಲ್ಲಿ ಕೆಲವು ಇಂಗ್ಲೆಂಡಿನಷ್ಟು ದೊಡ್ಡವು, ಮತ್ತೆ ಕೆಲವು ಕೇವಲ ೨-೪ ಎಕರೆಗಳಿಂದ ಕೂಡಿದ ಸಣ್ಣ ಪುಟ್ಟ ಜಹಗೀರುಗಳಾಗಿದ್ದುವು. ಇಡೀ ದೇಶದ ಅರ್ಧ ವಿಸ್ತೀರ್ಣವನ್ನೂ (೨೮೭-೮೯೨ ಚ. ಮೈಲಿ) ಸುಮಾರು ೭ ಕೋಟಿ ಜನಸಂಖ್ಯೆಯನ್ನೂ ಹೊಂದಿದ್ದ ಈ ಸಂಸ್ಥಾನಗಳ ಸ್ಥಿತಿ ಶೋಚನೀಯವಾಗಿತ್ತೆಂದರೆ ಅದು ಉತ್ಪ್ರೇಕ್ಷೆಯಾಗಲಾರದು. ಬ್ರಿಟಿಷರು ಅನೇಕ ರಾಜಕೀಯ ಸುಧಾರಣೆಗಳನ್ನು ಆಚರಣೆಗೆ ತಂದರೂ ಅವು ಸಂಸ್ಥಾನಗಳ ಮೇಲ್ಮೈಯ್ಯನ್ನು ಕೂಡ ಮುಟ್ಟಲಿಲ್ಲ.

ಭಾರತ ಸ್ವಾತಂತ್ರ್ಯ ಶಾಸನ ಅಧಿಕೃತವಾಗಿ ಹೊರಬಿದ್ದುದರಿಂದ ಸಂಸ್ಥಾನಗಳಿಗೆ ಬ್ರಿಟಿಷ್ ಸಾರ್ವಭೌಮಾಧಿಕಾರದ ಸಂಬಂಧ ಹಾಗೂ ಪರಾಧೀನತೆ ಕೊನೆಗೊಂಡವು. ಆದರೆ ಈ ಸಂಸ್ಥಾನಗಳು ಸ್ವತಂತ್ರದಿಂದ ವರ್ತಿಸಬೇಕೋ ಅಥವ ಭಾರತ ಸರ್ಕಾರವನ್ನು ಸೇರಬೇಕೋ ಎಂಬುದನ್ನು ಯಾರೂ ಸ್ಪಷ್ಟಪಡಿಸಲಿಲ್ಲ.

ಸ್ವತಂತ್ರದಿಂದಾಳುವುದು ಬಹುಕಷ್ಟವೆಂದು ಸಣ್ಣ ಪುಟ್ಟ ಸಂಸ್ಥಾನಗಳಿಗೆ ಹೊಳೆಯಿತು. ದೊಡ್ಡ ಸಂಸ್ಥಾನಗಳಲ್ಲಿ ಜೂನಾಘಡ್, ಹೈದರಾಬಾದ್ ತಮಗೆ ಸ್ವಾತಂತ್ರ್ಯ ಲಭಿಸಿತೆಂದೂ ತಾವು ಯಾರಿಗೂ ಅಡಿಯಾಳುಗಳಲ್ಲವೆಂದೂ ತಿಳಿಯಲಾರಂಭಿಸಿದುವು. ಇನ್ನು ಕೆಲವು "ಗಾಳಿ ಬೀಸುವ ಕಡೆ ತೂರಿಕೊಳ್ಳೋಣ"ವೆಂದು ಕಾಲ ನಿರೀಕ್ಷಣೆಯಲ್ಲಿದ್ದುವು. ಇಂಥ ವಿಷಯ ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿದ್ದ ಸಂಸ್ಥಾನಗಳನ್ನು ನೂತನ ಸಂವಿಧಾನದ ಆಯಕಟ್ಟಿಗೆ ಸೇರಿಸಿ ಅವುಗಳ ಪ್ರಶಾಸನವನ್ನು ಪ್ರಜಾಪ್ರಭುತ್ವ ತತ್ತ್ವಕ್ಕನುಗುಣವಾಗಿ ಪುನರ್ರಚಿಸುವುದು ಹೇಗೆ ಸಾಧ್ಯವೆಂಬುದು ಕಠಿಣ ಸಮಸ್ಯೆಯಾಯಿತು. ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಧೃಡಸಂಕಲ್ಪ ಮಾಡಿದ ಪ್ರಜಾನಾಯಕರು ಭಾವಪರವಶತೆಗಾಗಲೀ ರಾಷ್ಟ್ರವನ್ನು ವಿಸ್ತರಿಸಬೇಕೆಂಬ ದುರಾಶೆಗಾಗಲೀ ತಮ್ಮ ರಾಜಕೀಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂಬ ಅಭಿಲಾಷೆಗಾಗಲೀ ಮನಕೊಡಲಿಲ್ಲ. ಇಡೀ ದೇಶದ ನೈಸರ್ಗಿಸ್ಥಿತಿ, ರಕ್ಷಣೆ, ಭದ್ರತೆ, ಆರ್ಥಿಕ ಆವಶ್ಯಕತೆ ಇವುಗಳನ್ನೇ ಲಕ್ಷ್ಯದಲ್ಲಿಟ್ಟು ಒಕ್ಕೂಟ ಕಾರ್ಯವನ್ನು ಕೈಕೊಂಡರು. ಗಳಿಸಿದ ಸ್ವಾತಂತ್ರ್ಯವನ್ನು ದೇಶದ ಕೆಲವು ಭಾಗಗಳು ಮಾತ್ರ ಅನುಭವಿಸಿದರೆ ಸಾಕು, ಉಳಿದ ಭಾಗಗಳು ಎಂದಿನಂತೆ ಅರಾಜಕತ್ವಕ್ಕೇ ಈಡಾಗಿರಲಿ ಎಂಬುದು ನಾಯಕರ ಧ್ಯೇಯವಾಗಿರಲಿಲ್ಲ. ಭಾರತದ ಸ್ವಾತಂತ್ರ್ಯವೆಂದರೆ ಇಡೀ ದೇಶದ ಸ್ವಾತಂತ್ರ್ಯವೆಂಬುದೇ ಆ ನಾಯಕರ ನೀತಿಯಾಗಿತ್ತು. ಧೈರ್ಯ, ತಾಳ್ಮೆ, ವಿವೇಚನೆಗಳಿಲ್ಲದ ಪ್ರಶಾಸನೀಯ ನೀತಿಯಿಂದ ಇಂಥ ಜಟಿಲ ಸಮಸ್ಯೆಯನ್ನು ಬಗೆಹರಿಸುವುದು ಕಷ್ಟವೆಂದು ಅವರು ಚೆನ್ನಾಗಿ ಅರಿತು ಈ ಕಠಿಣ ಸಮಸ್ಯೆಯನ್ನು ಸರ್ದಾರ್‌ಪಟೇಲರಿಗೆ ವಹಿಸಿದರು. ಇದನ್ನು ಎದೆಗುಂದದೆ, ಯಶಸ್ವಿಯಾಗಿ ಬಗೆಹರಿಸಿದ ಖ್ಯಾತಿ ಸರ್ದಾರ್‌ಪಟೇಲರಿಗೆ ಸೇರಿತು. ಇವರ ದೂರದೃಷ್ಟಿ, ದೃಢಸಂಕಲ್ಪ, ದೇಶಪ್ರೇಮ, ದಕ್ಷತೆ ಇವುಗಳಿಂದ ಸಂಸ್ಥಾನಗಳ ದೃಷ್ಟಿಕೋಣ ಕ್ರಮೇಣ ಬದಲಾಯಿಸಿತು. ಇವರ ನೀತಿ ಹೊರಬಿದ್ದ ಕೂಡಲೆ ಅನೇಕ ಸಣ್ಣ ಸಂಸ್ಥಾನಗಳು ಭಾರತ ಸರ್ಕಾರವನ್ನು ಸೇರಬೇಕೆಂಬ ಉದ್ದೇಶದಿಂದ ಅಕ್ಕಪಕ್ಕದ ಪ್ರಾಂತಗಳನ್ನು ಸೇರಲು ಒಪ್ಪಿಗೆಕೊಟ್ಟವು. ಮತ್ತೆ ಕೆಲವು ಒಕ್ಕೂಟ ರಾಜ್ಯಗಳನ್ನು ಸ್ಥಾಪಿಸಲು ಅನುಮತಿ ಇತ್ತವು. ಉದಾಹರಣೆಗಾಗಿ ಸುಮಾರು ೨೧೭ ಸಣ್ಣ ಸಂಸ್ಥಾನಗಳು, ನೂರಾರು ಜಹಗೀರುಗಳು ಇವುಗಳಿಂದ ಕೂಡಿದ್ದ ಕ್ಯಾಥೆವಾರ್ ಮೊದಲಾದುವು ಒಕ್ಕೂಟದ ರಾಜ್ಯಗಳಾದುವು. ಮಧ್ಯಭಾರತ, ರಾಜಾಸ್ಥಾನ, ಸೌರಾಷ್ಟ್ರ, ತಿರುವಾಂಕೂರು-ಕೊಚಿನ್. ಮತ್ತೆ ಕೆಲವು ಭಾರತ ಸರ್ಕಾರದ ನೇರವಾದ ಆಡಳಿತಕ್ಕೆ ಒಳಪಟ್ಟವು. ಉದಾಹರಣೆಗಾಗಿ ಕೊಡಗು, ದೆಹಲಿ, ಹಿಮಾ

ಚಲಪ್ರದೇಶ ಮತ್ತು ವಿಂಧ್ಯಪ್ರದೇಶ. ಒಟ್ಟಿನಲ್ಲಿ ಪಟೇಲರ ನೀತಿಯ ಪರಿಣಾಮವಾಗಿ ೨೧೬ ಸಂಸ್ಥಾನಗಳು ಪ್ರಾಂತಗಳಲ್ಲಿ ಲೀನವಾದುವು; ೬೧ ಭಾರತ ಸರ್ಕಾರದ ನೇರವಾದ ಪ್ರಶಾಸನಕ್ಕೆ ಒಳಪಟ್ಟವು; ೨೭೫ ಒಕ್ಕೂಟ ರಾಜ್ಯಗಳಾದುವು. ಸಂಸ್ಥಾನಗಳ ಸಂಖ್ಯೆ ೫೦೦ ರಿಂದ ಕೇವಲ ೧೫ಕ್ಕೆ ಇಳಿಯಿತು; ದೇಶ ಒಟ್ಟುಗೂಡಿತು. ಐಕಮತ್ಯ ಸಾಧಿಸಲು ಅವಕಾಶ ದೊರೆಯಿತು.

ಸಾಧಿಸಿದ ಕೆಲಸವನ್ನು ಶಾಶ್ವತಗೊಳಿಸುವಸಲುವಾಗಿ ಭಾರತ ಸರ್ಕಾರ ಇನ್ನು ಕೆಲವು ಬದಲಾವಣೆಗಳನ್ನು ಸಂಸ್ಥಾನಗಳಲ್ಲಿ ತಂದಿತು. ಅನೇಕ ಸಂಸ್ಥಾನಗಳಲ್ಲಿ ನಿರಂಕುಶ ಪ್ರಭುತ್ವಕ್ಕೆ ಬದಲಾಗಿ ಪ್ರಜಾಸರ್ಕಾರ ಸ್ಥಾಪಿತವಾದುವು; ಇನ್ನು ಕೆಲವು ಸಂಸ್ಥಾನಗಳಲ್ಲಿ (ಮೈಸೂರು, ಕಾಶ್ಮೀರ) ಆಗಲೇ ಸ್ಥಾಪಿತವಾಗಿದ್ದ ಜವಾಬ್ದಾರಿಸರ್ಕಾರ ಮುಂದುವರಿಯಿತು. ರಾಜಪ್ರಮುಖರಿಗೆ ರಾಜ್ಯಪಾಲರ ಸ್ಥಾನಮಾನಗಳೂ, ಅಧಿಕಾರವೂ ದೊರೆತವು. ಬಹುಕಾಲದಿಂದ ಬೇರೂರಿದ್ದ ನಿರಂಕುಶ ಪ್ರಭುತ್ವ ಹಾಗೂ ಅರಾಜಕತ್ವ ನಿರ್ಮೂಲವಾಗಿ ಅವುಗಳ ಸ್ಥಾನದಲ್ಲಿ ಪ್ರಜಾಸರ್ಕಾರ ಅಂಕುರಿಸಿದ್ದು ಪ್ರಜೆಗಳ ಭಾಗ್ಯೋದಯವೇ ಸರಿ! ಭಾರತಸರ್ಕಾರ ರಾಜಪ್ರಮುಖರ ಸ್ವಂತಖರ್ಚಿನ ಹಣವನ್ನು ನಿರ್ದಿಷ್ಟವಾಗಿ ನಿರ್ಧರಿಸಿ ಇದನ್ನು ಭಾರತದ ಸಂಚಿತ ನಿಧಿಯಿಂದ ಕೊಡಬೇಕೆಂಬುದನ್ನು ಗೊತ್ತುಮಾಡಿದ್ದು, ರಾಜರ ಆಸ್ತಿಪಾಸ್ತಿಗಳ ಗೋಜಿಗೆ ಹೋಗದೆ ಅವುಗಳನ್ನು ಯಾವ ವಿಧ ಮನಸ್ತಾಪ, ತಂಟೆತಕರಾರುಗಳಿಲ್ಲದೆ ಬಗೆಹರಿಸಿದ್ದು, ರಾಜಪ್ರಮುಖರ ಜಹಗೀರುಗಳನ್ನು ರದ್ದುಗೊಳಿಸಿದ್ದು ಇವೇ ಮೊದಲಾದುವು ಉಳಿದ ಬದಲಾವಣೆಗಳು. ಒಡವೆವಸ್ತುಗಳು, ಜವಾಹಿರಿನಗಗಳು ರಾಜಪ್ರಮುಖರಿಗೇ ಉಳಿದರೂ ಇವುಗಳ ಮೇಲೆ ಭಾರತ ಸರ್ಕಾರದ ನಿಯಂತ್ರಣವಿರಬೇಕೆಂಬುದು ನಿರ್ಧರವಾಯಿತು.

ಸಂಸ್ಥಾನಗಳ ರಕ್ಷಣಾಬಲಗಳ ಮೇಲಿನ ಅಧೀಕ್ಷಣ ಮತ್ತು ನಿಯಂತ್ರಣವನ್ನು ಭಾರತಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ನೇರವಾದ ಪ್ರಶಾಸನೀಯಾಧಿಕಾರವನ್ನು ರಾಜಪ್ರಮುಖರಿಗೆ ವಹಿಸಿತು. ಇದರಿಂದ ದೇಶದ ರಕ್ಷಣಾಬಲಗಳಲ್ಲಿ ಏಕರೂಪತೆ ಬರುವುದಕ್ಕೂ, ರಕ್ಷಣಾಬಲಗಳಿಗೆ ಒಂದೇ ವಿಧವಾದ ಶಿಕ್ಷಣ ದೊರೆಯುವುದಕ್ಕೂ ಅವಕಾಶ ದೊರೆತವು. ರಕ್ಷಣಾಬಲಗಳನ್ನು ನಿರ್ದೇಶಿಸುವುದು, ಆಜ್ಞೆಮಾಡುವುದು, ಇವುಗಳ ಖರ್ಚನ್ನು ವಹಿಸುವುದು ಇವು ಭಾರತಸರ್ಕಾರದ ಕ್ಷೇತ್ರಾಧಿಕಾರಕ್ಕೆ ಸೇರಿದುವು.

ಕೇಂದ್ರ ಪ್ರಶಾಸನಕ್ಕೆ ಬೇಕಾಗುವ ಪದಾಧಿಕಾರಿವರ್ಗ ಹಾಗೂ ಅದರ ಭರ್ತೀ ಮೊದಲಾದ ಭಾರತಸರ್ಕಾರದ ವಿಚಾರದಲ್ಲಿ ರಾಜ್ಯಗಳೂ ಸಹಕರಿಸಬೇಕೆಂದು

ಭಾರತಸರ್ಕಾರ ನಿರ್ದೇಶಿಸಿತು. ಈ ಧ್ಯೇಯಸಾಧನೆಗಾಗಿ ಐ. ವಿ. ಎಸ್, ಐ. ಪಿ. ಎಸ್. ಮೊದಲಾದ ಪದಾಧಿಕಾರಿವರ್ಗಗಳನ್ನು ಸರ್ಕಾರ ಏರ್ಪಡಿಸಿವೆ. ರಾಜ್ಯಗಳ ಅನುಕೂಲಕ್ಕಾಗಿ ಬೇರೆ ಬೇರೆ ಪದಾಧಿಕಾರಿಗಳ ದರ್ಜೆಗಳನ್ನು ಕೂಡ ಕಲ್ಪಿಸಿದೆ.

ವಿತ್ತೀಯಪ್ರಶಾಸನದ ವಿಚಾರದಲ್ಲಿ ಭಾರತಸರ್ಕಾರ ಶ್ರೀ ವಿ. ಟಿ. ಕೃಷ್ಣಮಾಚಾರ್ಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿತು. ಈ ಸಮಿತಿ ರಾಜ್ಯಗಳ ವಿತ್ತೀಯ ಸಮಸ್ಯೆಗಳನ್ನು ಎಲ್ಲಾದೃಷ್ಟಿಯಿಂದಲೂ ಕೂಲಂಕಷವಾಗಿಯೂ, ನಿಷ್ಪಕ್ಷಪಾತದಿಂದಲೂ ಪರಿಶೀಲಿಸಿ ತನ್ನ ಶಿಫಾರಸ್ಸುಗಳನ್ನು ಮಾಡಿದೆ. ಇವುಗಳಿಗೆ ಭಾರತಸರ್ಕಾರದ ಮತ್ತು ರಾಜ್ಯಗಳ ಒಪ್ಪಿಗೆಯೂ ದೊರೆತಿವೆ. ಈ ಶಿಫಾರಸ್ಸುಗಳ ಮುಖ್ಯಸಾರಾಂಶವೇನೆಂದರೆ:—(*a*) ಗಣರಾಜ್ಯಕ್ಕೆ ಸೇರಿದ ರಾಜ್ಯಗಳಲ್ಲಿ ವಿತ್ತೀಯ ವಿಚಾರದಲ್ಲಿ ಸಮಾನತೆಯಿರಬೇಕು. (*b*) ಇವುಗಳಲ್ಲಿ ತಾರತಮ್ಯ ತೋರಿಸದೆ ಭಾರತಸರ್ಕಾರ ಒಂದೇಸಮನಾಗಿ ತನ್ನ ಕಾರ್ಯವನ್ನು ನಿರ್ವಹಿಸಬೇಕು ಅಲ್ಲದೆ ಒಂದೇವಿಧವಾದ ಅಧಿಕಾರವನ್ನು ಪ್ರಯೋಗಿಸಬೇಕು. (*c*) ಭಾರತಸರ್ಕಾರಕ್ಕೆ ರಾಜ್ಯಗಳು ಅಂಶದಾನಮಾಡುವ ವಿಚಾರದಲ್ಲಾಗಲೀ ಭಾರತಸರ್ಕಾರ ರಾಜ್ಯಗಳಿಗೆ ಸಹಾಯಕ ಅನುದಾನಮಾಡುವ ವಿಚಾರದಲ್ಲಾಗಲಿ ರಾಜ್ಯಗಳಲ್ಲಿ ಯಾವ ವಿಧವಾದ ವ್ಯತ್ಯಾಸ ಅಥವೆ ಪಕ್ಷಪಾತವಿರಕೂಡದು. (*d*) ಈ ಹೊಸ ಬದಲಾವಣೆ ಆಚರಣೆಗೆ ಬರುವವರಿಗೆ (೧೯೫೯) ಭಾರತಸರ್ಕಾರ ರಾಜ್ಯಗಳಿಗೆ ತಾತ್ಕಾಲಿಕವಾಗಿ ಸಹಾಯಕ ಅನುದಾನವನ್ನು ಮಾಡಿ ಅವುಗಳ ವಿತ್ತೀಯ ಪ್ರಶಾಸನ ಹದಗೆಡದಂತೆ ನೋಡಿಕೊಳ್ಳಬೇಕು. ರಕ್ಷಣಾಬಲಗಳ ವಿಚಾರದಲ್ಲಿ ದೇಶ ಒಟ್ಟುಗೂಡಿರುವಂತೆ ವಿತ್ತೀಯ ವಿಚಾರಗಳಲ್ಲಿ (ಅಂದರೆ ವ್ಯಾಪಾರ, ವ್ಯಾಪಾರನೀತಿ, ಕರಗಳು, ಶುಲ್ಕಗಳು, ಸಂಚಾರಸೌಕರ್ಯ ಇತ್ಯಾದಿ) ದೇಶ ಏಕರೂಪತೆ ಪಡೆದಿದೆ. ಭಾರತಒಕ್ಕೂಟದ ಸಮಸ್ಯೆಯನ್ನು ಯಶಸ್ವಿಯಾಗಿ ಬಗೆಹರಿಸಿದ ಖ್ಯಾತಿ ಮೊದಲನೆಯದಾಗಿ ಸರ್ದಾರ್ ಪಟೇಲರ ದಕ್ಷತೆಗೂ, ಎರಡನೆಯದಾಗಿ ರಾಜರುಗಳ ಸಹಾಯ, ಸಹಕಾರ, ಉದಾರಭಾವನೆ, ದೇಶಪ್ರೇಮ ಇವುಗಳಿಗೂ ಸೇರಿದೆ. ಜೊತೆಗೆ ಈ ಏಕರೂಪತೆಯಿಂದ ಭಾರತದ ಸರ್ಕಾರವನ್ನು ಸೇರಿರುವ ರಾಜ್ಯಗಳು ಭಾರತಸಂಘದ ನಿಜವಾದ ಅಂಗಗಳಾಗಿ ಪರಿಣಮಿಸಿ ಅದರ ಹಿರಿಮೆಯನ್ನೂ ಬಲವನ್ನೂ ಹೆಚ್ಚಿಸಿವೆ. ಪ್ರಕೃತ ರಾಜ್ಯಪಾಲರ ಆಳಿಕೆಯಲ್ಲಿ ೯ ರಾಜ್ಯಗಳೂ ರಾಜಪ್ರಮುಖರ ಆಳಿಕೆಯಲ್ಲಿ ೮ ರಾಜ್ಯಗಳೂ ಮುಖ್ಯ ಆಯುಕ್ತರ ಪ್ರಶಾಸನದಲ್ಲಿ ೧೦ ರಾಜ್ಯಗಳೂ ಇವೆ. ಇವುಗಳ ಸರ್ಕಾರ ಬೇರೆಬೇರೆಯಾಗಿದ್ದರೂ ಕ್ಷೇತ್ರಾಧಿಕಾರ ಪ್ರತ್ಯೇಕವಾಗಿದ್ದರೂ ಇವುಗಳ ಸರ್ಕಾರರಚನೆ, ಪ್ರಶಾಸನದ ರೀತಿ ನೀತಿಗಳಲ್ಲಿ ಏಕರೂಪತೆ ಇದೆ. ಏತಕ್ಕೆಂದರೆ ಇವುಗಳೆಲ್ಲದರ

ಸರ್ಕಾರ ಪ್ರಜಾಪ್ರಭುತ್ವತತ್ವದ ಅಡಿಗಲ್ಲಿನಮೇಲೆ ನಿಂತಿದೆ. ಈ ರಾಜ್ಯಗಳ ಪ್ರಜೆಗಳು ಪ್ರಜಾಸರ್ಕಾರ ಹಾಗೂ ಜವಾಬ್ದಾರಿಸರ್ಕಾರದ ರಹಸ್ಯವನ್ನು ಅರಿತು, ಉತ್ಸುಕತೆಯಿಂದ, ಕಾರ್ಯತತ್ಪರತೆಯಿಂದ, ನಿಸ್ಪೃಹತೆಯಿಂದ ಪ್ರಶಾಸನದ ಜವಾಬ್ದಾರಿಯನ್ನು ವಹಿಸಲು ತಕ್ಕ ಶಿಕ್ಷಣ ಪಡೆಯುವವರಿಗೆ, ಇವುಗಳಮೇಲೆ ಭಾರತ ಸರ್ಕಾರದ ಅಧೀಕ್ಷಣ ಮತ್ತು ನಿಯಂತ್ರಣ ಇರುವುವು.

ರಾಜ್ಯಗಳ ಸರ್ಕಾರ ರಚನೆ

ಭಾರತಸಂಘದ ಅಂಗಗಳಿಂತಿರುವ ರಾಜ್ಯಗಳ ಸರ್ಕಾರರಚನೆ ಭಾರತ ಸರ್ಕಾರದ ಪಡಿಯಚ್ಚು. ಇವುಗಳ ಆಡಳಿತ ರಾಜ್ಯಪಾಲರು ಅಥವ ರಾಜಪ್ರಮುಖರು ಅಥವ ಮುಖ್ಯ ಆಯುಕ್ತರು ಇವರ ವಶದಲ್ಲಿರುವುದು. ಇವರ ಸಹಾಯಾರ್ಥವಾಗಿ ಮಂತ್ರಿಗಳು, ಅನೇಕಾನೇಕ ಉದ್ಯೋಗಸ್ಥರು, ಉನ್ನತಾಧಿಕಾರಿಗಳು ಇರುವರು. ವಿಧಿರಚನೆಗಾಗಿ ಒಂದು ಅಥವ ಎರಡು ಸಭೆಗಳಿಂದ ಕೂಡಿದ ವಿಧಾನಮಂಡಲಿ ಪ್ರತಿಯೊಂದು ರಾಜ್ಯದಲ್ಲಿರುವುದು. ಪ್ರಜೆಗಳಿಗೆ ನ್ಯಾಯ ದೊರಕಿಸಲು ಅನೇಕ ನ್ಯಾಯಾಲಯಗಳು, ಇವುಗಳ ಮೇಲ್ಪಟ್ಟ ಹೈಕೋರ್ಟ್ ಎಂಬ ಉನ್ನತ ನ್ಯಾಯಸ್ಥಾನವೂ ಸ್ಥಾಪಿಸಲ್ಪಟ್ಟಿವೆ. ಉನ್ನತಾಧಿಕಾರಿಗಳ ಆಯ್ಕೆ, ಅವರ ಮಿತಾಧಿಕಾರ ಹಾಗೂ ಜವಾಬ್ದಾರಿ, ಅನರ್ಹರಾದ ಅಧಿಕಾರಿಗಳನ್ನೂ ಮಂತ್ರಿಗಳನ್ನೂ ಕೆಲಸದಿಂದ ತೆಗೆಯುವ ಸಂಪ್ರದಾಯ, ವಿಧಿರಚನೆಯ ಕಾರ್ಯಕ್ರಮ, ವಿತ್ತೀಯಪ್ರಶಾಸನ ಮತ್ತು ಅದರ ಮೇಲೆ ವಿಧಾನಮಂಡಲಿಗಿರುವ ನಿಯಂತ್ರಣ ಮತ್ತು ಅಧೀಕ್ಷಣ ಇವೇ ಮೊದಲಾದ ಮುಖ್ಯವಿಷಯಗಳಲ್ಲಿ ರಾಜ್ಯಗಳಲ್ಲಿ ಸಮಾನತೆಯಿರುವುದಲ್ಲದೆ ಈ ರಾಜ್ಯಗಳಿಗೆಲ್ಲಾ ಭಾರತಸರ್ಕಾರದ ರೀತಿ ನೀತಿಗಳೇ ಮೇಲ್ಪಂಕ್ತಿಯಾಗಿವೆ.

ರಾಜ್ಯಗಳ ಶ್ರೇಷ್ಠಾಧಿಕಾರಿಗಳು—೧ ನೆಯ ಅನುಸೂಚಿ, 'ಎ' ಭಾಗದ ರಾಜ್ಯಗಳು ರಾಜ್ಯಪಾಲರ ಆಡಳಿತಕ್ಕೂ, 'ಬಿ' ಭಾಗದ ರಾಜ್ಯಗಳು ರಾಜಪ್ರಮುಖರ ಆಡಳಿತಕ್ಕೂ, 'ಸಿ' ಭಾಗದ ರಾಜ್ಯಗಳು ಮುಖ್ಯ ಆಯುಕ್ತರ ಆಡಳಿತಕ್ಕೂ ಒಳಪಟ್ಟಿವೆ. ಈ ಶ್ರೇಷ್ಠಾಧಿಕಾರಿಗಳು ಅಧ್ಯಕ್ಷನಿಂದ ನೇಮಿಸಲ್ಪಡುವರು ಅಥವ ಅವನ ಅಪ್ಪಣೆಪಡೆದು ಅಧಿಕಾರವನ್ನು ಸ್ವೀಕರಿಸುವರು. ಈ ಅಧಿಕಾರಿಗಳು ರಾಷ್ಟ್ರಾಧ್ಯಕ್ಷನ ಅಧೀಕ್ಷಣ, ತಮ್ಮ ರಾಜ್ಯದ ಸಂವಿಧಾನದ ವಿಧಿಗಳ ಕಟ್ಟು ಹಾಗೂ ಮಂತ್ರಿಗಳ ಸಲಹೆ ಇವುಗಳಿಗೂ ಒಳಪಟ್ಟು ಪ್ರಶಾಸನ ನಡೆಸಬೇಕಾಗಿರುವುದರಿಂದ ದಬ್ಬಾಳಿಕೆಗಾಗಲೀ ಬೇಜವಾಬ್ದಾರಿಗಾಗಲೀ ಅವಕಾಶವಿಲ್ಲ. ಇಂಥ ವಾತಾವರಣದಲ್ಲಿ ಸಾಂಕುಶಪ್ರಭುತ್ವ ಹಾಗೂ ಪ್ರಜಾಸರ್ಕಾರ ಅಂಕುರಿಸಿ ಫಲಿಸಲು ಸಾಧ್ಯವಾಗುವುದು. ರಾಜಪಾಲರ ಸ್ಥಾನಗಳಿಗೆ ಬರುವ ಉಮೇದುವಾರರಿಗೆ ಭಾರತದ ನಾಗರಿಕ

ತೆಯ ಅಧಿಕಾರವಿರಬೇಕು ; ಕನಿಷ್ಠ ಪಕ್ಷ ೩೫ ವರ್ಷ ವಯಸ್ಸಾಗಿರಬೇಕು ; ಯಾವ ವಿಧಾನ್ಮಂಡಲದ ಸದಸ್ಯತ್ವವಿರಕೂಡದು ; ಅಲ್ಲದೆ ಇವರು ವೇತನ ಅಥವ ಪ್ರತಿಫಲ ದೊರೆಯುವ ಪ್ರಶಾಸನೀಯಪದಗಳಲ್ಲಿರಕೂಡದು. ರಾಜಪಾಲರ ಪದಾವಧಿ ೫ ವರ್ಷ, ಉತ್ತರಾಧಿಕಾರಿ ಅಧಿಕಾರಕ್ಕೆ ಬರುವವರಿಗೆ ಇವರು ಪ್ರಶಾಸನ ನಡೆಸುತ್ತಿರ ಬಹುದು. ರಾಜ್ಯಪಾಲರಿಗೆ ತಿಂಗಳಿಗೆ ರೂ ೫೫೦೦ ವೇತನ, ವಾಸಕ್ಕೆ ಯೋಗ್ಯವಾದ ಮನೆ ಭತ್ಯ ಮೊದಲಾದುವು ದೊರೆಯುವುವು. ರಾಜ್ಯಪಾಲರೂ ಅವನಸ್ಥಾನದಲ್ಲಿ ಕೆಲಸಮಾಡುವ ಉನ್ನತಾಧಿಕಾರಿಗಳೂ ಅಧಿಕಾರಸ್ವೀಕರಿಸುವುದಕ್ಕೆ ಮುಂಚೆ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಮುಂದೆ ಪ್ರಮಾಣವಚನ ಕೊಡಬೇಕು. ನ್ಯಾಯಾಲಯಗಳು ಶಿಕ್ಷೆಯನ್ನು ವಿಧಿಸುವ ಅಪರಾಧಿಗಳನ್ನು ರಾಜ್ಯ ಪಾಲ ಕ್ಷಮಿಸಬಹುದು, ಅವರ ಶಿಕ್ಷೆಯನ್ನು ಪ್ರವಿಲಂಬಿಸಬಹುದು, ಅವರಿಗೆ ಪರಿಹಾರ ಒದಗಿಸಬಹುದು, ಹಾಗೂ ಅವರ ಶಿಕ್ಷೆಯನ್ನು ಕಡಿಮೆಮಾಡಬಹುದು. ಒಂದು ರಾಜ್ಯದ ವಿಧಾನಮಂಡಲಿ ಯಾವ ಯಾವ ವಿಷಯಗಳಮೇಲೆ ವಿಧಿಗಳನ್ನು ರಚಿಸಬಲ್ಲದೋ ಆ ವಿಷಯಗಳಮೇಲೆಲ್ಲಾ ಆ ರಾಜ್ಯದ ಕಾರ್ಯಾಂಗದ ಕ್ಷೇತ್ರಾಧಿ ಕಾರವಿದೆ. ಆಡಳಿತದ ವಿಚಾರ, ಕ್ಷೇತ್ರಾಧಿಕಾರಗಳ ಸಂಬಂಧವಾಗಿ ರಾಜ್ಯಪಾಲ ರಿಗೂ ರಾಜಪ್ರಮುಖರಿಗೂ ಯಾವ ವ್ಯತ್ಯಾಸವೂ ಇಲ್ಲ. ಆದರೆ ಕೆಲವು ವಿಚಾರಗಳಲ್ಲಿ ಮಾತ್ರ ಈ ಎರಡು ಶ್ರೇಷ್ಠಾಧಿಕಾರಿಗಳಿಗೆ ವ್ಯತ್ಯಾಸವಿದೆ. ರಾಜ್ಯಪಾಲರ ಪದಾವಧಿ ಕ್ಲುಪ್ತ, ರಾಜಪ್ರಮುಖರದು ಅನಿಯತ ; ವಿಧಿಯನ್ನನುಸರಿಸಿ ಅಧ್ಯಕ್ಷನು ರಾಜ್ಯಪಾಲ ರನ್ನು ನೇಮಿಸುವನು. ರಾಜಪ್ರಮುಖರ ವಿಚಾರದಲ್ಲಿ ಅಧ್ಯಕ್ಷನ ಅನುಮತಿಯೂ ಒಪ್ಪಿಗೆಯೂ ಆವಶ್ಯಕ. ರಾಜ್ಯಪಾಲರಿಗೆ ಪಾರ್ಲಿಮೆಂಟ್ ನಿರ್ಧರಿಸುವ ವೇತನ ಸಲ್ಲು ವುದು, ರಾಜಪ್ರಮುಖರಿಗೆ ಸ್ವಂತವೆಚ್ಚಕ್ಕಾಗಿ ಭಾರತಸರ್ಕಾರ ಪ್ರತಿವರ್ಷ ಇಷ್ಟೇ ಮೊಬಲಗನ್ನು ಸಂಚಿತನಿಧಿಯಿಂದ ಕೊಡಬೇಕೆಂಬುದನ್ನು ನಿರ್ಧರಿಸಿ ಕೊಡುವುದು.

ರಾಜ್ಯಪಾಲರಿಗೆ ಹಾಗೂ ರಾಜಪ್ರಮುಖರಿಗೆ ಸಹಾಯಮಾಡಲು ಹಾಗೂ ಸಲಹೆನೀಡಲು ಪ್ರತಿಯೊಂದು ರಾಜ್ಯದಲ್ಲಿ ಮುಖ್ಯಮಂತ್ರಿಯಿಂದ ಕೂಡಿದ ಒಂದು ಮಂತ್ರಿಪರಿಷತ್ ಇದೆ. ಸ್ವವಿವೇಕದಿಂದ ಯಾವ ಕೆಲಸಗಳನ್ನು ಈ ಶ್ರೇಷ್ಠಾಧಿಕಾರಿ ಗಳು ನಿರ್ವಹಿಸಬಹುದೆಂದು ಸಂವಿಧಾನ ನಿರ್ಧರಿಸಿರುವುದೋ ಆ ಕೆಲಸಗಳನ್ನು ಬಿಟ್ಟು ಉಳಿದವುಗಳ ನಿರ್ವಹಣೆಯ ವಿಚಾರದಲ್ಲಿ, ಮಂತ್ರಿಪರಿಷತ್ತಿನ ಸಲಹೆಯನ್ನು ಪಡೆದೇ ಪ್ರಶಾಸನ ನಡೆಸಬೇಕು. ರಾಜ್ಯಪಾಲ ಅಥವ ರಾಜಪ್ರಮುಖ ಮುಖ್ಯಮಂತ್ರಿ ಯನ್ನೂ ಮುಖ್ಯಮಂತ್ರಿಯ ಸಲಹೆಯಿಂದ ಉಳಿದ ಮಂತ್ರಿಗಳನ್ನೂ ನೇಮಿಸುವನು. ಇದು ಔಪಚಾರಿಕದಮಾತು. ವಾಸ್ತವವಾಗಿ ಮುಖ್ಯಮಂತ್ರಿ ಚುನಾವಣೆಯಲ್ಲಿ

ಜಯಗಳಿಸಿದ ರಾಜಕೀಯಪಕ್ಷದ ನಾಯಕ, ಉಳಿದ ಮಂತ್ರಿಗಳು ಪಕ್ಷದ ಗಣ್ಯರಾದ ಅನುಯಾಯಿಗಳು. ಈ ಕಾರಣದಿಂದ ಇವರುಗಳನ್ನು ನೇಮಿಸದಿದ್ದರೆ ರಾಜ್ಯದ ಶ್ರೇಷ್ಠಾಧಿಕಾರಿಗೆ ಗತ್ಯಂತರವೇ ಇಲ್ಲ. ಪ್ರಮಾಣವಚನಕೊಟ್ಟು ಅಧಿಕಾರಸೂತ್ರವಹಿಸುವುದು, ಅಧಿಕಾರಕ್ಕೆ ಬಂದ ೬ ತಿಂಗಳೊಳಗಾಗಿ ತಮ್ಮ ರಾಜ್ಯದ ವಿಧಾನಮಂಡಲಿಯ ಸದಸ್ಯರಾಗಿ ಚುನಾಯಿತರಾಗುವುದು, ವಿಧಾನ ಮಂಡಲಿ ನಿರ್ಧರಿಸುವ ವೇತನ, ಭತ್ಯಾಗಳನ್ನು ಸ್ವೀಕರಿಸುವುದು, ಆಡಳಿತ ವಿಚಾರದಲ್ಲಿ ವಿಧಾನಮಂಡಲಿಗೆ ಒಟ್ಟಿಗೆ ಜವಾಬ್ದಾರರಾಗಿರುವುದು ಇವು ಮಂತ್ರಿಗಳೆಲ್ಲರಿಗೂ ಅನ್ವಯಿಸುವ ವಿಷಯಗಳು. ಮಂತ್ರಿಪರಿಷತ್ತಿನ ವಿನಿಶ್ಚಯಗಳನ್ನು, ಹೊಸವಿಧಿಗಳ ಆವಶ್ಯಕತೆಯನ್ನು ರಾಜ್ಯಪಾಲರಿಗೆ ಅಥವ ರಾಜಪ್ರಮುಖರಿಗೆ ತಿಳಿಸುವುದು, ಈ ಶ್ರೇಷ್ಠಾಧಿಕಾರಿಗಳು ಅಪೇಕ್ಷಿಸುವ ಆಡಳಿತದ ವಿಷಯಗಳಿಗೆ ಹಾಗೂ ಇವರು ಸೂಚಿಸುವ ವಿಧಿಗಳ ರಚನೆಗೆ ಬೇಕಾದ ಅಂಕಿ ಅಂಶಗಳನ್ನು ಸಂಗ್ರಹಿಸಿ ಇವರ ಅವಗಾಹನಕ್ಕೆ ತರುವುದು, ಮಂತ್ರಿಗಳು ಕೊಡುವ ನಿಶ್ಚಯಗಳನ್ನು ರಾಜ್ಯದ ಶ್ರೇಷ್ಠಾಧಿಕಾರಿಗಳು ಅಪೇಕ್ಷಿಸಿದಾಗ ಮಂತ್ರಿಪರಿಷತ್ತಿನ ಮುಂದೆ ಮಂಡಿಸಿ ಅದರ ವಿನಿಶ್ಚಯಗಳನ್ನು ರಾಜ್ಯಪಾಲರಿಗೆ ಅಥವ ರಾಜಪ್ರಮುಖರಿಗೆ ತಿಳಿಸುವುದು, ಮೇಲಾಗಿ ಮಂತ್ರಿಗಳ ಕೆಲಸಕಾರ್ಯಗಳನ್ನು ಒಟ್ಟುಗೂಡಿಸಿ ಆಡಳಿತದ ಮೇಲಿನ ಜವಾಬ್ದಾರಿಯನ್ನು ವಹಿಸುವುದು ಇವು ಮುಖ್ಯಮಂತ್ರಿಯ ಕೆಲಸಗಳು. ಸೂಕ್ಷ್ಮವಾಗಿ ಹೇಳಬಹುದಾದರೆ, ರಾಜ್ಯಗಳ ಆಡಳಿತ ಶ್ರೇಷ್ಠಾಧಿಕಾರಿಯ ಹೆಸರಿನಲ್ಲಿ ನಡೆದರೂ, ಅಧಿಕೃತ ಕಾಗದಪತ್ರಗಳು, ಆಜ್ಞೆಗಳು ಇವನ ಹೆಸರಿನಲ್ಲಿ ಹೊರಬಿದ್ದರೂ ಶ್ರೇಷ್ಠಾಧಿಕಾರಿ ಮಂತ್ರಿಗಳ ಸಲಹೆ ಸಹಕಾರವಿಲ್ಲದೆ ಯಾವ ಕೆಲಸವನ್ನೂ ನಿರ್ವಹಿಸುವುದಿಲ್ಲ; ಇವರ ತಿಳುವಳಿಕೆ ಅನುಮತಿಗಳಿಲ್ಲದೆ ಯಾವ ಕಾಗದಪತ್ರಗಳನ್ನೂ ಪ್ರಕಟಿಸುವುದಿಲ್ಲ. ಈ ಕಾರಣದಿಂದ ಪ್ರಶಾಸನದ ಮೇಲಿನ ಪೂರ್ಣಜವಾಬ್ದಾರಿ ಮಂತ್ರಿಪರಿಷತ್ತಿನ ಮೇಲೆಯೇ ಬೀಳುವುದು ; ಪ್ರಶಾಸನೀಯ ವಿಷಯಗಳಿಗೆ ಮಂತ್ರಿಗಳೇ ಜವಾಬ್ದಾರರಾಗುವರು.

ರಾಜ್ಯಗಳ ವಿಧಾನಮಂಡಲಿ—ಪ್ರತಿಯೊಂದು ರಾಜ್ಯದಲ್ಲಿಯೂ ರಾಜ್ಯಪಾಲ ಅಥವ ರಾಜಪ್ರಮುಖನಿಂದಲೂ ಒಂದು ಅಥವ ಎರಡು ಸಭೆಗಳಿಂದಲೂ ಕೂಡಿದ ವಿಧಾನ ಮಂಡಲಿ ಇದೆ. ಬಿಹಾರ್, ಬೊಂಬಾಯಿ, ಮದರಾಸ್, ಪಂಜಾಬ್, ಉತ್ತರಪ್ರದೇಶ, ಪಶ್ಚಿಮಬಂಗಾಳ ಮೊದಲಾದುವುಗಳಲ್ಲಿ ವಿಧಾನಪರಿಷತ್, ವಿಧಾನ ಸಭೆಗಳೆಂಬ ೨ ಸಭೆಗಳೂ ಉಳಿದ ರಾಜ್ಯಗಳಲ್ಲಿ ವಿಧಾನಸಭೆ ಎಂಬ ಒಂದೇ ಸಭೆಯೂ ಇವೆ. ವಿಧಾನಸಭೆಯ ಸದಸ್ಯರನ್ನು ಆಯಾಯ ರಾಜ್ಯದ ಪ್ರಜೆಗಳು ಅಂದರೆ

ಪ್ರಾಪ್ತವಯಸ್ಕರಾದ ಸ್ತ್ರೀಪುರುಷರು ೭೫,೦೦೦ ಜನರಿಗೆ ಒಬ್ಬ ಪ್ರತಿನಿಧಿಯಂತೆ ನಿರ್ವಾಚನೆ ಮಾಡುವರು. ವಿಧಾನಸಭೆಯ ಸದಸ್ಯರ ಸಂಖ್ಯೆ ೬೦ ಕ್ಕೆ ಕಡಿಮೆ ಇಲ್ಲದೆಯೂ ೫೦೦ ಕ್ಕೆ ಹೆಚ್ಚಿಲ್ಲದೆಯೂ ಇರಬೇಕು.

ವಿಧಾನಪರಿಷತ್—ಒಂದು ರಾಜ್ಯದ ವಿಧಾನಪರಿಷತ್ತಿನ ಸದಸ್ಯರ ಸಂಖ್ಯೆ ಅದರ ವಿಧಾನಸಭೆಯ ಸದಸ್ಯರ ಸಂಖ್ಯೆಯ ೧/೪ ಭಾಗಕ್ಕಿಂತ ಹೆಚ್ಚಿರಕೂಡದು ಅಲ್ಲದೆ ೪೦ ಕ್ಕಿಂತ ಕಡಿಮೆಯಾಗಿಯೂ ಇರಕೂಡದು. ಪರಿಷತ್ತಿನ ಸದಸ್ಯರಲ್ಲಿ ೧/೩ ಭಾಗವನ್ನು ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡ್ ಹಾಗೂ ಪಾರ್ಲಿಮೆಂಟ್ ನಿರ್ಧರಿಸುವ ಇತರ ಸಂಸ್ಥೆಗಳು ನಿರ್ವಾಚನಮಾಡುವುವು; ೧/೧೨ ಭಾಗ ಸದಸ್ಯರನ್ನು ಕನಿಷ್ಠಪಕ್ಷ ೩ ವರ್ಷಗಳ ಹಿಂದೆ ಭಾರತದ ವಿಶ್ವವಿದ್ಯಾನಿಲಯಗಳ ಪದವೀಧರರಾಗಿದ್ದು ಪ್ರಕೃತ ಆ ರಾಜ್ಯದಲ್ಲಿಯೇ ವಾಸಮಾಡುತ್ತಿರುವವರು ನಿರ್ವಾಚನೆಮಾಡುವರು; ೧/೧೨ ಭಾಗ ಸದಸ್ಯರನ್ನು ಕನಿಷ್ಠಪಕ್ಷ ೩ ವರ್ಷಗಳ ಹಿಂದಿನಿಂದ ಹೈಸ್ಕೂಲುಗಳು, ಇವುಗಳ ಮೇಲಿನ ವಿದ್ಯಾಸಂಸ್ಥೆ ಇವುಗಳಲ್ಲಿ ಉಪಾಧ್ಯಾಯರಾಗಿರುವವರು ನಿರ್ವಾಚನೆಮಾಡುವರು; ೧/೩ ಭಾಗ ಸದಸ್ಯರನ್ನು ವಿಧಾನಸಭೆಯ ಸದಸ್ಯರು ಸಭೆಯ ಹೊರಗಿರುವವರಿಂದ ನಿರ್ವಾಚನೆಮಾಡುವರು; ಉಳಿದ ಸದಸ್ಯರನ್ನು ಆ ರಾಜ್ಯದ ಶ್ರೇಷ್ಠಾಧಿಕಾರಿ ಭಾರತ ಸರ್ಕಾರದ ಮೇಲ್ಪಂಕ್ತಿಯನ್ನನುಸರಿಸಿ ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರಚಳುವಳಿ ಸಾಮಾಜಿಕಸೇವೆ ಮೊದಲಾದವುಗಳಲ್ಲಿ ಖ್ಯಾತಿಪಡೆದವರನ್ನು ನಾಮ ನಿರ್ದೇಶಮಾಡುವನು. ವಿಧಾನಸಭೆಯ ಕಾಲಾವಧಿ ೫ ವರ್ಷ; ಇದರ ಅಧಿವೇಶನ (ಸತ್ರ) ಇದಕ್ಕೆ ಮುಂಚಿತವಾಗಿ ಮುಗಿಯಲೂಬಹುದು. ಆಪತ್ಕಾಲದ ಉದ್ಘೋಷಣ ಆಚರಣೆಯಲ್ಲಿದ್ದಾಗ ಇದಕ್ಕೆ ಸಂಬಂಧಪಡುವ ರಾಜ್ಯದ ವಿಧಾನಸಭೆಯ ಅವಧಿಯನ್ನು ೧ ಸಲಕ್ಕೆ ೧ ವರ್ಷಕ್ಕೆ ಹೆಚ್ಚಾಗದಂತೆ ಹಾಗೂ ಉದ್ಘೋಷಣೆಯ ಅವಧಿ ನಿಂತಮೇಲೆ ೬ ತಿಂಗಳಿಗೆ ಹೆಚ್ಚಾಗದಂತೆ ಸಂಸದ್ ಮುಂದುವರಿಸಬಹುದು. ವಿಧಾನಪರಿಷತ್ತಿನ ಕಾಲಾವಧಿ ಶಾಶ್ವತ; ಆದರೆ ಇದರ ಸದಸ್ಯರಲ್ಲಿ ೧/೩ ಭಾಗ ೨ ವರ್ಷಗಳಿಗೊಂದಾವರ್ತಿ ಬದಲಾಯಿಸಲ್ಪಡಬೇಕು. ವಿಧಾನಮಂಡಲದ ಸದಸ್ಯತ್ವಕ್ಕೆ ನಿಲ್ಲುವ ಉಮೇದುವಾರರು ಭಾರತದ ನಾಗರಿಕತೆಯ ಅಧಿಕಾರವನ್ನು ಪಡೆದಿರಬೇಕು, ವಿಧಾನಸಭೆಯ ಉಮೇದುವಾರರಿಗೆ ಕನಿಷ್ಠಪಕ್ಷ ೨೫ ವರ್ಷ, ಪರಿಷತ್ತಿನ ಉಮೇದುವಾರರಿಗೆ ಕನಿಷ್ಠಪಕ್ಷ ೩೦ ವರ್ಷ ವಯಸ್ಸಾಗಿರಬೇಕು. ವರ್ಷಕ್ಕೆ ಎರಡು ವಿಧಾನಮಂಡಲದ ಸತ್ರಗಳಿರಬೇಕು; ಒಂದು ಸತ್ರಕ್ಕೂ ಇನ್ನೊಂದು ಸತ್ರಕ್ಕೂ ೬ ತಿಂಗಳಿಗಿಂತ ಹೆಚ್ಚಿನ ಅಂತರವಿರಕೂಡದು. ರಾಜ್ಯದ ಶ್ರೇಷ್ಠಾಧಿಕಾರಿ ಒಂದು ಅಥವ ಎರಡು ಸಭೆಗಳಿಗೆ ಆಹ್ವಾನಕೊಡಬಹುದು; ಅವುಗಳನ್ನು ಸತ್ರಾವಸಾನಮಾಡಬಹುದು, ವಿಧಾನಸಭೆ

ಯನ್ನು ವಿಘಟನಪಡಿಸಬಹುದು, ಒಂದು ಅಥವ ಎರಡು ಸಭೆಗಳಮುಂದೆ ಭಾಷಣ ಮಾಡಬಹುದು ಅಥವ ತನ್ನ ಸಂದೇಶವನ್ನು ಕಳಿಸಬಹುದು, ವಿಧಾನಮಂಡಲದ ಪ್ರಥಮ ಸತ್ರದಲ್ಲಿ ಆರಂಭಭಾಷಣಮಾಡಿ ಆಡಳಿತನೀತಿಯನ್ನು ವ್ಯಕ್ತಪಡಿಸಬಹುದು.

ಮಂತ್ರಿಗಳು ಮತ್ತು ರಾಜ್ಯದ ಮಹಾಧಿವಕ್ತ ಇವರು ವಿಧಾನಮಂಡಲದ ಸಭೆಗಳಲ್ಲಿ ಅಥವ ಇವರಿಗೆ ಸದಸ್ಯತ್ವದ ಅಧಿಕಾರವಿರುವ ಸಮಿತಿಗಳಲ್ಲಿ ಹಾಜರಿದ್ದು, ಚರ್ಚೆಯಲ್ಲಿ ಭಾಗವಹಿಸಬಹುದು; ಆದರೆ ತಮ್ಮ ಮತದಾನವನ್ನು ಮಾತ್ರ ಮಾಡಕೂಡದು. ಪ್ರತಿಯೊಂದು ರಾಜ್ಯದ ವಿಧಾನಮಂಡಲದ ಸಭೆಗಳಿಗೆ ಅಂದರೆ ಪರಿಷತ್ತುಗಳಿಗೆ ಸಭಾಪತಿಗಳು ಉಪಸಭಾಪತಿಗಳು, ಸಭೆಗಳಿಗೆ ಅಧ್ಯಕ್ಷರು, ಉಪಾಧ್ಯಕ್ಷರು ಇರುವರು. ದೈನಂದಿನ ಕೆಲಸಕಾರ್ಯಗಳನ್ನು ನೋಡಿಕೊಳ್ಳಲು ಸಭೆಗಳಿಗೆ ಪ್ರತ್ಯೇಕವಾಗಿ ಸೆಕ್ರಿಟರಿ ಮತ್ತು ಇತರ ಉದ್ಯೋಗಸ್ಥರು ಇರುವರು. ವಿಧಾನಮಂಡಲಕ್ಕೆ ಸೇರಿದ ಸಭಾಪತಿಗಳು ಮೊದಲಾದ ಎಲ್ಲಾ ಅಧಿಕಾರಿಗಳ ಅರ್ಹತೆ, ಅವರು ಪದತ್ಯಾಗಮಾಡುವ, ಹಾಗೂ ಅವರನ್ನು ಕೆಲಸದಿಂದ ತೆಗೆಯುವ ಸಂದರ್ಭ, ಅವರ ಕ್ಷೇತ್ರಾಧಿಕಾರ, ವೇತನ, ಭತ್ತಾ ಮೊದಲಾದ ವಿಚಾರಗಳಲ್ಲಿ ಭಾರತದ ಸಂಸದೇ ಎಲ್ಲಾ ರಾಜ್ಯಗಳಿಗೂ ಮಾರ್ಗದರ್ಶಿ; ಇದು ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನೇ ರಾಜ್ಯಗಳೆಲ್ಲಾ ಅನುಸರಿಸುತ್ತಿರುವುವು. ರಾಜ್ಯಗಳ ವಿಧಾನಮಂಡಲಗಳ ಪ್ರತಿಯೊಂದು ಸಭೆಯ ವಿನಿಶ್ಚಯಕ್ಕೆ ಸದಸ್ಯರ ಬಹುಮತದ ಒಪ್ಪಿಗೆ ಆವಶ್ಯಕ; ಸಾಮಾನ್ಯವಾಗಿ ಪರಿಷತ್ತಿನ ಸಭಾಪತಿಯಾಗಲೀ ವಿಧಾನಸಭೆಯ ಅಧ್ಯಕ್ಷನಾಗಲೀ ತಮ್ಮ ಮತದಾನ ಮಾಡಕೂಡದು, ಆದರೆ ಸದಸ್ಯರ ಮತದಾನ ಸಮವಾದರೆ ಆಗ ಸಭಾಪತಿ ಹಾಗೂ ಅಧ್ಯಕ್ಷ ತನ್ನ ಕ್ಯಾಸ್ಟಿಂಗ್ ಓಟನ್ನು (ನಿರ್ಣಾಯಕ ಮತವನ್ನು) ಕೊಡಬೇಕು; ವಿಧಾನಮಂಡಲದ ಪ್ರತಿಯೊಂದು ಸಭೆಯ ಗಣಪೂರ್ತಿ ಸದಸ್ಯರ ಒಟ್ಟು ಸಂಖ್ಯೆಯಲ್ಲಿ ೧/೧೦ ಭಾಗವಿರಬೇಕು. ವಿಧಾನಮಂಡಲದ ಸದಸ್ಯರ ಅರ್ಹತೆ, ಅನರ್ಹತೆ, ಸದಸ್ಯತ್ವವನ್ನು ಕಳೆದುಕೊಳ್ಳುವಿಕೆ, ಅರ್ಹತೆಯಿಲ್ಲದವರು ವಿಧಾನಮಂಡಲದ ಸಭೆಗಳಲ್ಲಿ ಕುಳಿತು ಕಾರ್ಯಕಲಾಪಗಳಲ್ಲಿ ಭಾಗವಹಿಸುವದರಿಂದ ಇವರಿಗೆ ಹಾಗೂ ವಿಧಾನಮಂಡಲದ ವಿನಿಶ್ಚಯಗಳಿಗೆ ಉಂಟಾಗುವ ಪರಿಣಾಮ, ಸದಸ್ಯರ ಸ್ವಾತಂತ್ರ್ಯ ಮತ್ತು ವಿಶೇಷಾಧಿಕಾರ, ವೇತನ, ಭತ್ತಾ ಇವೇ ಮೊದಲಾದ ವಿಚಾರಗಳಲ್ಲಿ ರಾಜ್ಯಗಳು ಭಾರತಸರ್ಕಾರವನ್ನೇ ಅಕ್ಷರಶಃ ಅನುಸರಿಸುತ್ತಿರುವುವು.

ವಿಧಿರಚನಾಕ್ರಮ—ಭಾರತಸರ್ಕಾರದ ಸಂಸದಿನಂತೆ ರಾಜ್ಯಗಳ ವಿಧಾನಮಂಡಲದ ಸಭೆಗಳು ಒಪ್ಪಿಗೆಕೊಟ್ಟ ವಿಧೇಯಕಗಳು ವಿಧಿಗಳಾಗುವುವು. ವಿಧೇಯಕಗಳಲ್ಲಿ ಸಾಮಾನ್ಯ ವಿಧೇಯಕಗಳು, ವಿತ್ತ ವಿಧೇಯಕಗಳು ಎಂದು ಎರಡು ವಿಧ.

ಸಾಮಾನ್ಯ ವಿಧೇಯಕಗಳನ್ನು ಮಂಡಿಸುವ ವಿಧಾನ, ಇವುಗಳಿಗೆ ಒಪ್ಪಿಗೆ ದೊರೆಯುವ ಕ್ರಮ, ವಿಧಾನಮಂಡಲದ ಎರಡು ಸಭೆಗಳಿರುವ ಕಡೆ ವಿಧಾನ ಪರಿಷತ್ತಿಗಿರುವ ಮಿತಾಧಿಕಾರ ಇವೇ ಮೊದಲಾದ ವಿಚಾರಗಳಲ್ಲಿ ರಾಜ್ಯಗಳ ವಿಧಾನ ಮಂಡಲಗಳಿಗೂ ಭಾರತ ಸಂಸದಕ್ಕೂ ವ್ಯತ್ಯಾಸವಿಲ್ಲ. ಭಾರತ ಸಂಸದಿನ ಸಭೆಗಳಲ್ಲಿ ಭಿನ್ನಾಭಿಪ್ರಾಯಬಂದರೆ ಅವುಗಳನ್ನು ಒಟ್ಟುಗೂಡಿಸಿ ನಿರ್ಣಯಪಡೆಯಲವಕಾಶವಿದೆ. ರಾಜ್ಯಗಳಲ್ಲಾದರೋ ವಿಧಾನಪರಿಷತ್ತಿಗಿಂತ ವಿಧಾನಮಂಡಲದ ಪ್ರಾಬಲ್ಯವೇ ಅಧಿಕವಾಗಿರುವುದು. ಹೇಗೆಂದರೆ ವಿಧಾನಮಂಡಲದ ಒಪ್ಪಿಗೆ ಪಡೆದು ಪರಿಷತ್ತಿನಿಂದ ತಿರಸ್ಕೃತವಾದ ಅಥವ ಪರಿಷತ್ ಒಪ್ಪದೆ ೩ ತಿಂಗಳುಗಳಿಗಿಂತ ಹೆಚ್ಚಾಗಿಟ್ಟುಕೊಳ್ಳುವ ಅಥವ ವಿಧಾನಮಂಡಲ ಒಪ್ಪದಿರುವ ಸಂಶೋಧನೆಗಳನ್ನು ಸೂಚಿಸುವ ವಿಧೇಯಕಗಳನ್ನು ಮತ್ತೊಮ್ಮೆ ವಿಧಾನಮಂಡಲ ಅದೇ ಸತ್ರದಲ್ಲಿ ಅಥವ ಮುಂದಿನ ಸತ್ರದಲ್ಲಿ ಒಪ್ಪಿ ಪುನಃ ಪರಿಷತ್ತಿಗೆ ಕಳುಹಿಸಬೇಕು. ಹೀಗೆ ಬರುವ ವಿಧೇಯಕಗಳನ್ನು ಪರಿಷತ್ ತಿರಸ್ಕರಿಸಿದರೆ ಅಥವ ಒಪ್ಪಿಗೆ ಕೊಡದೆ ೧ ತಿಂಗಳಿಗಿಂತ ಹೆಚ್ಚಾಗಿಟ್ಟುಕೊಂಡರೆ ಅಥವ ವಿಧಾನಮಂಡಲ ಒಪ್ಪದಿರುವ ಸಂಶೋಧನೆಗಳನ್ನು ಸೂಚಿಸಿದರೆ ಅಂಥ ವಿಧೇಯಕಗಳನ್ನು ವಿಧಾನಮಂಡಲ ತಾನು ಒಪ್ಪಿಗೆ ಕೊಟ್ಟ ರೀತಿಯಲ್ಲಿ ಮತ್ತೊಮ್ಮೆ ಒಪ್ಪಿ ವಿಧಿಗಳನ್ನಾಗಿ ಮಾಡಬಹುದು. ಇಂಥ ವಿಧಿಗಳಿಗೆ ವಿಧಾನಮಂಡಲದ ೨ ಸಭೆಗಳ ಒಪ್ಪಿಗೆ ದೊರೆತವೆಂದು ಪರಿಗಣಿಸಬೇಕು. ಪರಂತು ಈ ಷರತ್ತುಗಳು ವಿತ್ತವಿಧೇಯಕಗಳಿಗೆ ಅನ್ವಯಿಸುವುದಿಲ್ಲ.

ವಿತ್ತವಿಧೇಯಕಗಳಿಗೆ ಅನ್ವಯಿಸುವ ವಿಶೇಷಕಾರ್ಯಕ್ರಮ—ಕೇಂದ್ರದಂತೆ ವಿತ್ತವಿಧೇಯಕಗಳನ್ನು ರಾಜ್ಯಗಳ ವಿಧಾನಪರಿಷತ್ತುಗಳು ಮೊದಲು ಚರ್ಚಿಸಲು ಅಧಿಕಾರಪಡೆದಿಲ್ಲ. ವಿಧಾನಮಂಡಲ ಒಪ್ಪಿ ಕಳುಹಿಸಿದ ವಿಧೇಯಕಗಳನ್ನು ತಿರಸ್ಕರಿಸಲೂ ಪರಿಷತ್ತಿಗೆ ಅಧಿಕಾರವಿಲ್ಲ. ಆದರೆ ಇಂಥ ವಿಧೇಯಕಗಳನ್ನು ಪರಿಶೀಲಿಸಿ ತನ್ನ ಶಿಫಾರಸ್ಸುಗಳೊಂದಿಗೆ ೧೪ ದಿವಸಗಳೊಳಗಾಗಿ ವಿಧಾನಮಂಡಲಕ್ಕೆ ಕಳುಹಿಸಬೇಕು. ಈ ಶಿಫಾರಸ್ಸುಗಳನ್ನು ವಿಧಾನಮಂಡಲ ಒಪ್ಪಲೇಬೇಕೆಂಬ ವಿಧಿಯೂ ಇಲ್ಲ, ಪರಿಷತ್ತಿನ ಶಿಫಾರಸ್ಸುಗಳನ್ನು ತಿರಸ್ಕರಿಸಿ ವಿಧಿಗಳನ್ನಾಗಿ ರಚಿಸಲು ವಿಧಾನಮಂಡಲಕ್ಕೆ ಅಧಿಕಾರವಿದೆ. ಇಂಥ ವಿಧೇಯಕಗಳಿಗೂ ೧೪ ದಿವಸಗಳೊಳಗಾಗಿ ಪರಿಷತ್ತಿನಿಂದ ಹಿಂದಕ್ಕೆ ಬಾರದಿರುವ ವಿಧೇಯಕಗಳಿಗೂ ೨ ಸಭೆಗಳ ಒಪ್ಪಿಗೆ ದೊರೆತವೆಂದೇ ತಿಳಿಯಬೇಕು.

'ವಿತ್ತವಿಧೇಯಕ' ಎಂಬ ಶಬ್ದದ ಅರ್ಥದ ವಿಚಾರದಲ್ಲಿ ರಾಜ್ಯಗಳು ಭಾರತ ಸರ್ಕಾರವನ್ನೇ ಮೇಲ್ಪಂಕ್ತಿಯನ್ನಾಗಿಟ್ಟುಕೊಂಡಿವೆ. ನಾನಾವಿಧ 'ಕರಗಳನ್ನು'

(ತೆರಿಗೆ ಕಂದಾಯುಗಳನ್ನು) ಆರೋಪಿಸುವುದು, ರದ್ದು ಮಾಡುವುದು, ಬದಲಾಯಿಸುವುದು, ಕ್ರಮಪಡಿಸುವುದು; ಉಧಾರಗ್ರಹಣವನ್ನು (ಸಾಲ) ಕ್ರಮಪಡಿಸುವುದು ಅಥವ ಅವುಗಳಿಗೆ ಪ್ರತಿಭೂತಿಗಳನ್ನೊದಗಿಸುವುದು; ಸಂಚಿತ ಮತ್ತು ಆಕಸ್ಮಿಕ ತಾನಿಧಿಗಳ ಅಭಿರಕ್ಷಣ, ಸಂಗ್ರಹಣ, ವಿನಿಯೋಗ, ಇವೇ ಮೊದಲಾದುವು ವಿತ್ತವಿಧೇಯಕ ಶಬ್ದದಲ್ಲಿ ಅಡಕವಾಗಿರುವ ಅಂಶಗಳು. ಈ ಶಬ್ದದ ಅರ್ಥದ ವಿಚಾರದಲ್ಲಿ ಬರುವ ಸಂದೇಹವನ್ನು ವಿಧಾನಮಂಡಲದ ಅಧ್ಯಕ್ಷ ನಿವಾರಿಸುವನು. ವಿತ್ತವಿಧೇಯಕಗಳನ್ನು ಶಿಫಾರಸ್ಸು ಸಲುವಾಗಿ ಪರಿಷತ್ತಿಗೆ ಕಳುಹಿಸುವಾಗಲೂ ಅವಗಾಹನೆಗಾಗಿ ರಾಜ್ಯಪಾಲನಿಗೆ ಅಥವ ರಾಜಪ್ರಮುಖನಿಗೆ ಕಳುಹಿಸುವಾಗಲೂ ಅವುಗಳ ಮೇಲೆ 'ವಿತ್ತವಿಧೇಯಕಗಳು' ಎಂದು ಸ್ಪಷ್ಟವಾಗಿ ಮಂಡಲದ ಅಧ್ಯಕ್ಷ ಬರೆದು ತನ್ನ ಸಹಿಹಾಕಬೇಕು.

ವಿಧಾನಮಂಡಲ ಅಥವ ಅದರ ೨ ಸಭೆಗಳು ಒಪ್ಪಿ ಕಳುಹಿಸಿದ ವಿತ್ತವಿಧೇಯಕಗಳನ್ನು ರಾಜ್ಯಪಾಲ ಅಥವ ರಾಜಪ್ರಮುಖ ಒಪ್ಪಬಹುದು, ಒಪ್ಪದಿರಬಹುದು ಅಥವ ರಾಷ್ಟ್ರಾಧ್ಯಕ್ಷನ ಅವಗಾಹನೆಗಾಗಿ ಹಾಗೆಯೇ ತನ್ನಲ್ಲಿಟ್ಟುಕೊಳ್ಳಬಹುದು. ತನ್ನ ಒಪ್ಪಿಗೆಗಾಗಿ ಬಂದ ಸಾಮಾನ್ಯವಿಧೇಯಕಗಳನ್ನು ರಾಜ್ಯದ ಶ್ರೇಷ್ಠಾಧಿಕಾರಿ ಅಂಗೀಕರಿಸಬಹುದು ಅಥವ ಅವುಗಳನ್ನು ಮತ್ತು ಅವುಗಳ ಸಂಶೋಧನೆಗಳನ್ನು ಸಂದೇಶದ ಮೂಲಕ ಹಿಂದಕ್ಕೆ ಕಳುಹಿಸಬಹುದು. ಶ್ರೇಷ್ಠಾಧಿಕಾರಿ ಕೊಡುವ ಸಲಹೆಗಳನ್ನು ವಿಧಾನಮಂಡಲ ಗೌರವದಿಂದ ಪರಿಶೀಲಿಸಬೇಕು. ಒಂದುವೇಳೆ ಇಂಥ ಸಲಹೆಗಳನ್ನು ವಿಧಾನಮಂಡಲ ಒಪ್ಪದೆ ಮತ್ತೊಮ್ಮೆ ವಿಧೇಯಕಗಳನ್ನು ತನಗೆ ಸೂಕ್ತವೆಂದು ತೋರುವ ರೀತಿಯಲ್ಲಿ ಒಪ್ಪಿ ಶ್ರೇಷ್ಠಾಧಿಕಾರಿಗೆ ಕಳುಹಿಸಿದರೆ ಅವುಗಳನ್ನು ಶ್ರೇಷ್ಠಾಧಿಕಾರಿ ಒಪ್ಪಲೇಬೇಕು. ಪರಂತು ಯಾವ ವಿಧೇಯಕಗಳು ವಿಧಿಗಳಾಗುವುದರಿಂದ ಹೈಕೋರ್ಟುಗಳ ಅಧಿಕಾರ ಹಾಗೂ ಗೌರವಗಳಿಗೆ ಧಕ್ಕೆ ತಗಲುವುದೆಂದು ತೋರುವುವೋ ಅಂಥವುಗಳನ್ನು ವಿಧಿಗಳನ್ನಾಗಿ ಮಾಡಲವಕಾಶ ಕೊಡದೆ ರಾಜ್ಯದ ಶ್ರೇಷ್ಠಾಧಿಕಾರಿ ರಾಷ್ಟ್ರಾಧ್ಯಕ್ಷನ ಅವಗಾಹನಕ್ಕಾಗಿ ಇಟ್ಟುಕೊಳ್ಳಬಹುದು. ತನ್ನ ಅವಗಾಹನೆಗಾಗಿ ಬಂದ ವಿಧೇಯಕಗಳನ್ನು ರಾಷ್ಟ್ರಾಧ್ಯಕ್ಷ ಒಪ್ಪಿದ್ದಕ್ಕೂ ತಿರಸ್ಕರಿಸಿದ್ದಕ್ಕೂ ಕೂಡಲೆ ಘೋಷಣೆ ಹೊರಡಿಸಬೇಕು. ತನ್ನ ಅವಗಾಹನೆಗಾಗಿ ಕಳುಹಿಸಲ್ಪಟ್ಟ ಹಾಗೂ ತಾನು ಒಪ್ಪದಿರುವ ಸಾಮಾನ್ಯ ವಿಧೇಯಕಗಳನ್ನು ರಾಜ್ಯದ ಶ್ರೇಷ್ಠಾಧಿಕಾರಿಗೆ ತನ್ನ ಸಂಶೋಧನೆಗಳೊಡನೆ ಸಂದೇಶದ ರೂಪಿನಲ್ಲಿ ರಾಷ್ಟ್ರಾಧ್ಯಕ್ಷನು ಹಿಂದಕ್ಕೆ ಕಳುಹಿಸಬೇಕು. ೬ ತಿಂಗಳುಗಳೊಳಗಾಗಿ ಈ ವಿಧೇಯಕಗಳನ್ನು ಹಾಗೂ ಸಂಶೋಧನೆಗಳನ್ನು ವಿಧಾನಮಂಡಲ ಪರಿಶೀಲಿಸಿ

ತನಗೆ ಸೂಕ್ತವೆಂದು ತೋರುವ ರೀತಿಯಲ್ಲಿ ಒಪ್ಪಿ ರಾಷ್ಟ್ರಾಧ್ಯಕ್ಷನ ತಿಳುವಳಿಕೆಗಾಗಿ ಕಳುಹಿಸಬೇಕು.

ವಾರ್ಷಿಕವಿತ್ತ ವಿವರಣದ ಕಾರ್ಯಕ್ರಮ—ರಾಜ್ಯದ ಶ್ರೇಷ್ಠಾಧಿಕಾರಿ ತನ್ನ ರಾಜ್ಯದ ವಾರ್ಷಿಕವಿತ್ತವಿವರಣವನ್ನು (ಅಂದರೆ ವರಮಾನ ಮತ್ತು ಖರ್ಚಿನ ಅಂದಾಜ್ ಪಟ್ಟಿಯನ್ನು) ವಿಧಾನಮಂಡಲದಲ್ಲಿ ಮಂಡಿಸತಕ್ಕದ್ದು. ಈ ವಿವರಣ ದಲ್ಲಡಕವಾಗಿರುವ ೨ ಪ್ರತ್ಯೇಕ ಭಾಗಗಳು ಯಾವುವೆಂದರೆ (1) ರಾಜ್ಯದ ಸಂಚಿತ ನಿಧಿಯ ಮೇಲೆ ಆವಶ್ಯಕವಾಗಿ ಬೀಳುವ ಖರ್ಚುಬಾಬುಗಳು (2) ಸಂಚಿತನಿಧಿಯ ಮೇಲೆ ಬೀಳಬಹುದಾದ ಅಂದರೆ ರಾಜ್ಯದ ವರಮಾನವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸ ಬೇಕಾಗುವ ಉಳಿದ ಖರ್ಚುಬಾಬುಗಳು. ಸಂಚಿತನಿಧಿಯಮೇಲೆ ಬಿದ್ದೇ ಬೀಳುವ ಖರ್ಚನ್ನು ಭಾರತಸರ್ಕಾರದಲ್ಲಿರುವಂತೆ ವಿಧಾನಮಂಡಲ ಒಪ್ಪಬೇಕಾದು ದಿಲ್ಲ; ಆದರೆ ಅದನ್ನು ಪರಿಶೀಲಿಸಬಹುದು. ಸಂಚಿತನಿಧಿಯಮೇಲೆ ಬೀಳಬಹುದಾದ ಉಳಿದ ಖರ್ಚಿನ ಅಂದಾಜನ್ನು ಮಂತ್ರಿಮಂಡಲ ಬೇಡಿಕೆರೂಪದಲ್ಲಿ ಶ್ರೇಷ್ಠಾಧಿ ಕಾರಿಯ ಅಪ್ಪಣೆ ಪಡೆದು ವಿಧಾನಮಂಡಲದಲ್ಲಿ ಮಂಡಿಸಬೇಕು. ಮತ್ತು ಇದರ ಒಪ್ಪಿಗೆ ಪಡೆಯಬೇಕು. ಶ್ರೇಷ್ಠಾಧಿಕಾರಿಯ ಶಿಫಾರಸ್ಸಿಲ್ಲದೆ ಯಾವ ಬೇಡಿಕೆಯನ್ನು ಮಂತ್ರಿಗಳು ವಿಧಾನಮಂಡಲದ ಮುಂದೆ ತರಕೂಡದು. ಅಂದರೆ ಸಂಚಿತನಿಧಿಯ ಮೇಲೆ ಆವಶ್ಯಕವಾಗಿ ಬೀಳುವ ಖರ್ಚನ್ನು ವಿಧಾನಮಂಡಲ ಅಂಗೀಕರಿಸಿದ ನಂತರ ಸಂಚಿತನಿಧಿಯ ಮೇಲೆ ಬೀಳಬಹುದಾದ ಹಾಗೂ ಈ ನಿಧಿಯ ಹಣವನ್ನು ವಿನಿಯೋಗಿಸಬಹುದಾದ ಅಂದಾಜನ್ನು ವಿಧೇಯಕರೂಪದಲ್ಲಿ ಮಂಡಿಸಿ, ಚರ್ಚೆಗೆ ಅವಕಾಶ ಕಲ್ಪಿಸಿ ವಿಧಾನಮಂಡಲದ ಒಪ್ಪಿಗೆಯನ್ನು ಮಂತ್ರಿಮಂಡಲ ಪಡೆಯ ಬೇಕು. ಆಗಲೀಗ ವಿತ್ತವಿನಿಯೋಗವಿಧೇಯಕ ವಿಧಿರೂಪದಲ್ಲಿ ಹೊರಬೀಳುವುದು. ವಾರ್ಷಿಕವಿತ್ತದ ಅಂದಾಜನ್ನೂ ಇದರ ವಿನಿಯೋಗದ ಗುರಿಯನ್ನೂ ಬದಲಾಯಿ ಸುವ ಅಥವ ಸಂಚಿತನಿಧಿಯಮೇಲೆ ಬೀಳುವ ಖರ್ಚನ್ನು ಬದಲಾಯಿಸುವ ಸಂಶೋ ಧನೆಗಳು ವಿಧಾನಮಂಡಲದ ಯಾವಸಭೆಯಮುಂದೂ ಚರ್ಚೆಗೆಬರಕೂಡದು. ಇಂಥ ಸಂಶೋಧನೆಗಳನ್ನು ಮಂಡಿಸುವ ವಿಚಾರದಲ್ಲಿ ಸಭೆಯ ಅಧ್ಯಕ್ಷ ಕೊಡುವ ತೀರ್ಪು ಕಟ್ಟಕಡೆಯದು.

ವಿಧಿಪೂರ್ವಕವಾಗಿ ಯಾವುದಾದರೂ ಒಂದು ಉದ್ಯಮಕ್ಕೆ (ಸೇವೆಗೆ) ಮಂಜೂರಾದ ಧನ ಸಾಲದೆಂದು ತೋರಿದರೂ ಹೆಚ್ಚು ದ್ರವ್ಯ ಬೇಕೆಂದು ವರ್ಷದ ಮಧ್ಯದಲ್ಲಿ ಕಂಡುಬಂದರೂ ವಾರ್ಷಿಕವಿತ್ತ ವಿವರಣೆಯಲ್ಲಿ ನಮೂದಾಗದಿರುವ ಉದ್ಯಮ ಗಳು ಆಕಸ್ಮಿಕವಾಗಿ ಒದಗಿದರೂ ಅಥವ ಯಾವುದಾದರೂ ಒಂದು ಉದ್ಯಮಕ್ಕೆ

ಅಧಿಕೃತವಾಗಿ ಮಂಜೂರಾದ ಹಣಕ್ಕಿಂತ ಹೆಚ್ಚಾಗಿ ಆ ವರ್ಷದಲ್ಲಿ ಖರ್ಚಾಗಿದ್ದರೂ ರಾಜ್ಯದ ಶ್ರೇಷ್ಠಾಧಿಕಾರಿ ಇನ್ನೊಂದು ಅನುಪೂರಕ ಪಟ್ಟಿಯನ್ನು ವಿಧಾನಮಂಡಲದ ಮುಂದೆ ಮಂಡಿಸಿ ಅದರ ಒಪ್ಪಿಗೆಯಿಂದ ಹೆಚ್ಚು ದ್ರವ್ಯವನ್ನು ಪಡೆಯಬಹುದು. ಸೂಕ್ಷ್ಮವಾಗಿ ಹೇಳಬಹುದಾದರೆ, ರಾಜ್ಯದ ಸಂಚಿತನಿಧಿಯನ್ನು ಎಚ್ಚರಿಕೆಯಿಂದ ರಕ್ಷಿಸುವುದಲ್ಲದೆ, ಅದರ ವಿತ್ತವನ್ನು ವಿಧಿಪೂರ್ವಕವಾಗಿ ಜವಾಬ್ದಾರಿಯಿಂದ ಉಪಯೋಗಿಸಬೇಕು.

ವಿತ್ತವಿನಿಯೋಗ ವಿಧೇಯಕಗಳು ವಿಧಿಗಳಾಗುವುದಕ್ಕೆ ಮುಂಚಿತವಾಗಿ ವಾರ್ಷಿಕವಿತ್ತವಿವರಣೆಯಲ್ಲಡಕವಾಗಿರುವ ಯಾವುದಾದರೂ ಖರ್ಚುಬಾಬುಗಳಿಗೆ ಮುಂಗಡವಾಗಿ ಆ ವರ್ಷದ ಕೆಲವು ಕಾಲದವರೆಗೆ ವಿತ್ತವನ್ನು ಒದಗಿಸುವುದು, ಅನಿರೀಕ್ಷಿತವಾಗಿ ಒದಗುವ ಬಾಬುಗಳಿಗೆ ಅಂದರೆ ಸರ್ಕಾರ ಕೈಕೊಂಡಿರುವ ಖರ್ಚು ಇಷ್ಟೇ ಆಗುವುದೆಂದು ನಿರ್ಧರಿಸಲಾಗದ ಕಷ್ಟವಾದ ಬಾಬುಗಳಿಗೆ ಆವಶ್ಯಕವಾಗಿ ಬೇಕಾಗುವ ದ್ರವ್ಯವನ್ನು ಒದಗಿಸುವುದೂ ವಾರ್ಷಿಕವಿತ್ತವಿವರಣೆಯಲ್ಲಿ ನಮೂದಾಗದಿರುವ ಸನ್ನಿವೇಶಗಳು ಒದಗಿದರೆ ಅವುಗಳಿಗೆ ಬೇಕಾಗುವ ಹಣವನ್ನು ಒದಗಿಸಿಕೊಡುವುದೂ ವಿಧಾನಮಂಡಲದ ಅಧಿಕಾರಕ್ಷೇತ್ರಕ್ಕೆ ಸೇರಿವೆ. ಈ ಖರ್ಚು ಬಾಬುಗಳಿಗೆ ಆವಶ್ಯಕವಾದದ್ರವ್ಯವನ್ನು ಸಂಚಿತನಿಧಿಯಿಂದ ತೆಗೆದು ಉಪಯೋಗಿಸಲು ಮಂತ್ರಿಮಂಡಲಕ್ಕೆ ವಿಧಿಪೂರ್ವಕವಾಗಿ ಅಪ್ಪಣೆಯನ್ನು ವಿಧಾನ ಮಂಡಲ ಕೊಡುವುದು. ಒಟ್ಟಿನಲ್ಲಿ ಹೇಳಬಹುದಾದರೆ ಶ್ರೇಷ್ಠಾಧಿಕಾರಿಯ ಅನುಮತಿಯಿಲ್ಲದೆ, ವಿಧಾನಮಂಡಲದ ಒಪ್ಪಿಗೆಯಿಲ್ಲದೆ ರಾಜ್ಯದ ನಿಧಿಯನ್ನು ಉಪಯೋಗಿಸಲಾಗಲಿ, ಇದರ ಸಂಬಂಧವಾಗಿ ವಿಧೇಯಕಗಳನ್ನು, ಸಂಶೋಧನೆಗಳನ್ನು ಮಂಡಿಸಲಾಗಲಿ ಯಾರಿಗೂ ಅವಕಾಶವಿಲ್ಲ.

ಸಾಮಾನ್ಯ ಕಾರ್ಯಕ್ರಮದ ನಿಯಮಗಳು—ರಾಜ್ಯದ ವಿಧಾನ ಮಂಡಲದ ಸಭೆಗಳು ಕಾರ್ಯನಿರ್ವಹಣೆಗಾಗಿ ಭಾರತ ಸಂವಿಧಾನಕ್ಕೆ ವಿರೋಧ ಬರದಂತೆ ಬೇಕಾದ ನಿಯಮಗಳನ್ನು ರಚಿಸಬಹುದು, ಕಾರ್ಯಕಲಾಪಗಳನ್ನು ಕ್ರಮ ಪಡಿಸಿಕೊಳ್ಳಬಹುದು. ವಿಧಾನಮಂಡಲ ೨ ಸಭೆಗಳಿಂದ ಕೂಡಿದ್ದರೆ ಅಂಥ ರಾಜ್ಯದ ಶ್ರೇಷ್ಠಾಧಿಕಾರಿ ಮಂಡಲದ ಅಧ್ಯಕ್ಷ, ಪರಿಷತ್ತಿನ ಸಭಾಪತಿಗಳ ಸಲಹೆ ಪಡೆದು ಉಭಯಸಭೆಗಳಿಗನ್ವಯಿಸುವ ಕಾರ್ಯಕ್ರಮಕ್ಕೆ ಬೇಕಾಗುವ ನಿಯಮಗಳನ್ನು ರಚಿಸಬಹುದು. ವಿಧಾನಮಂಡಲದ ಕಾರ್ಯಕಲಾಪಗಳನ್ನು ಅಧಿಕೃತ ಭಾಷೆಯಲ್ಲಿ ಅಥವ ಪ್ರಾಂತೀಯ ಭಾಷೆಯಲ್ಲಿ ಅಥವ ಇಂಗ್ಲೀಷ್ ಅಥವ ಹಿಂದಿ ಭಾಷೆಯಲ್ಲಿ ನಿರ್ವಹಿಸಲವಕಾಶವಿದೆ. ಮೇಲ್ಕಂಡ ಭಾಷೆಗಳಲ್ಲಿ ಪರಿಶ್ರಮವಿಲ್ಲದವರು

ತಮ್ಮ ಮಾತೃಭಾಷೆಯನ್ನು ಉಪಯೋಗಿಸಲೂಬಹುದು. ಕೇಂದ್ರದಂತೆ ರಾಜ್ಯಗಳಲ್ಲಿ ೧೫ ವರ್ಷಗಳನಂತರ ಇಂಗ್ಲಿಷ್ ಭಾಷೆಯ ಪ್ರಯೋಗ ನಿಂತುಹೋಗುವುದು. ಸುಪ್ರೀಂಕೋರ್ಟಿನ ಅಥವ ಹೈಕೋರ್ಟಿನ ನ್ಯಾಯಾಧೀಶರ ನಡತೆಯನ್ನು ಚರ್ಚಿಸಲು ವಿಧಾನಮಂಡಲದ ಸದಸ್ಯರಿಗೂ, ವಿಧಾನಮಂಡಲದ ಕಾರ್ಯ ಅಥವ ವಿನಿಶ್ಚಯಗಳು ಕ್ರಮಬದ್ಧವಲ್ಲವೆಂದು ಹೇಳುವುದಕ್ಕೆ ನ್ಯಾಯಾಲಯಗಳಿಗೂ ಅಧಿಕಾರವಿರುವುದಿಲ್ಲ. ವಿಧಾನಮಂಡಲದ ಕಾರ್ಯಕಲಾಪಗಳನ್ನು ಕ್ರಮಪಡಿಸಲು, ಅದರ ಶಿಸ್ತನ್ನು ಕಾಪಾಡಲು ನೇಮಿಸಲ್ಪಟ್ಟಿರುವ ಅಧಿಕಾರಿಗಳ ಮತ್ತು ಸದಸ್ಯರ ನಡತೆ ನ್ಯಾಯಾಲಯಗಳ ಕ್ಷೇತ್ರಾಧಿಕಾರಕ್ಕೆ ಸೇರಿಲ್ಲ.

ರಾಜ್ಯದ ಶ್ರೇಷ್ಠಾಧಿಕಾರಿಯ ವಿಧಾಯನೀಶಕ್ತಿ—ರಾಜ್ಯದ ವಿಧಾನಮಂಡಲದ ಸಭೆಗಳು ಸತ್ರದಲ್ಲಿ ಇಲ್ಲದಿರುವಾಗಲೂ ರಾಜ್ಯದ ಸ್ಥಿತಿ ಹದಗೆಡುವ ಸನ್ನಿವೇಶ ಒದಗಿದಾಗಲೂ ಕ್ಷಿಪ್ರವಾಗಿ ಕಾರ್ಯಕ್ರಮವನ್ನು ಕೈಕೊಳ್ಳುವುದು ಅಗತ್ಯವಾದಾಗಲೂ ರಾಜ್ಯಪಾಲ ಅಥವ ರಾಜಪ್ರಮುಖ ತನಗೆ ಸೂಕ್ತವೆಂದು ತೋರುವ ಅಧ್ಯಾದೇಶಗಳನ್ನು ಘೋಷಿಸಬಹುದು. ಆದರೆ ಇಂಥ ಅಧ್ಯಾದೇಶಗಳು ರಾಷ್ಟ್ರಾಧ್ಯಕ್ಷನ ಕ್ಷೇತ್ರಾಧಿಕಾರಕ್ಕೆ ವಿರುದ್ಧವಾಗಿರಕೂಡದು ; ಅಂದರೆ ಪೂರ್ವಭಾವಿಯಾಗಿ ರಾಷ್ಟ್ರಾಧ್ಯಕ್ಷನ ಅಪ್ಪಣೆಪಡೆದು ರಾಜ್ಯದ ವಿಧಾನಮಂಡಲದಲ್ಲಿ ಮಂಡಿಸತಕ್ಕ ವಿಧೇಯಕಗಳು, ಅಧ್ಯಕ್ಷನ ಅವಗಾಹನೆಗಾಗಿ ರಾಜ್ಯದ ಶ್ರೇಷ್ಠಾಧಿಕಾರಿ ಮೀಸಲಾಗಿಡತಕ್ಕ ವಿಧೇಯಕಗಳು ಇವುಗಳನ್ನು ಬಿಟ್ಟು ಉಳಿದ ವಿಧೇಯಕಗಳ ಸಂಬಂಧವಾಗಿ ಅಧ್ಯಾದೇಶವನ್ನು ಹೊರಡಿಸಬಹುದು. ಇಂಥ ಅಧ್ಯಾದೇಶಗಳು ರಾಜ್ಯದ ವಿಧಾನಮಂಡಲ ರಚಿಸುವ ಮತ್ತು ಶ್ರೇಷ್ಠಾಧಿಕಾರಿಯ ಒಪ್ಪಿಗೆ ಪಡೆದಿರುವ ವಿಧಿನಿಯಮಗಳಂತೆ ಆಚರಣೆಗೆ ಬರುವುವು. ಆದರೆ ಇಂಥ ಅಧ್ಯಾದೇಶಗಳನ್ನು ಶ್ರೇಷ್ಠಾಧಿಕಾರಿ ವಿಧಾನಮಂಡಲದ ಸತ್ರ ಪ್ರಾರಂಭವಾದ ಕೂಡಲೆ ಅದರ ಸಭೆಗಳ ಮುಂದೆ ಮಂಡಿಸಬೇಕು, ಸತ್ರ ಪ್ರಾರಂಭವಾದ ೬ ವಾರಗಳಾದ ಕೂಡಲೆ ಅಥವ ವಿಧಾನಮಂಡಲ ನಿರ್ಧರಿಸಿದರೆ ಈ ಅವಧಿಗೆ ಮುಂಚಿತವಾಗಿ ನಿಲಂಬನಗೊಳಿಸಬೇಕು. ಶ್ರೇಷ್ಠಾಧಿಕಾರಿ ತನಗೆ ತೋರಿದಾಗ ಇಂಥ ಅಧ್ಯಾದೇಶಗಳನ್ನು ಕೊನೆಗಾಣಿಸಲೂಬಹುದು.

ರಾಜ್ಯಗಳ ಉಚ್ಚ ನ್ಯಾಯಾಲಯಗಳು (ಹೈಕೋರ್ಟುಗಳು)—ಪ್ರತಿಯೊಂದು ರಾಜ್ಯದಲ್ಲಿಯೂ ಒಂದು ಉಚ್ಚ ನ್ಯಾಯಾಲಯ (ಹೈಕೋರ್ಟ್)ವಿದೆ. ಇದು ಆ ರಾಜ್ಯದ ಅಭಿಲೇಖನ್ಯಾಯಾಲಯವೆಂದೂ, ಇದಕ್ಕೆ ಅಗೌರವ ತೋರಿಸುವವರನ್ನು ಶಿಕ್ಷಿಸಲು ಅಧಿಕಾರವಿದೆಯೆಂದೂ ಪರಿಗಣಿಸಬೇಕು. ಪ್ರತಿಯೊಂದು

ಹೈಕೋರ್ಟಿಗೆ ಒಬ್ಬ ಮುಖ್ಯ ನ್ಯಾಯಾಧೀಶ, ರಾಷ್ಟ್ರಾಧ್ಯಕ್ಷ ನಿರ್ಧರಿಸುವಷ್ಟು ಸಂಖ್ಯೆಯ ಸಾಮಾನ್ಯ ನ್ಯಾಯಾಧೀಶರು ಇರುವರು. ನ್ಯಾಯಾಧೀಶರನ್ನು ತನ್ನ ಸಹಿ, ಮುದ್ರೆಹಾಕಿದ ಅಧಿಪತ್ರದ ಮೂಲಕ ರಾಷ್ಟ್ರಾಧ್ಯಕ್ಷನು ನೇಮಿಸುವನು. ಮುಖ್ಯ ನ್ಯಾಯಾಧೀಶರ ಭರ್ತಿವಿಚಾರದಲ್ಲಿ ರಾಷ್ಟ್ರಾಧ್ಯಕ್ಷನು ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧಿಪತಿ ಮತ್ತು ಆ ರಾಜ್ಯದ ಶ್ರೀಷ್ಠಾಧಿಕಾರಿ ಇವರ ಸಲಹೆಯನ್ನೂ ಸಾಮಾನ್ಯ ನ್ಯಾಯಾಧೀಶರ ಭರ್ತಿವಿಚಾರದಲ್ಲಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶನ ಸಲಹೆಯನ್ನೂ ಪಡೆಯುವನು. ೬೫ ವರ್ಷ ವಯಸ್ಸಾಗುವವರೆಗೆ ನ್ಯಾಯಾಧೀಶರು ಪದಾಧಿಕಾರದಲ್ಲಿರಬಹುದು, ಕೆಲಸ ಬೇಕಿಲ್ಲದಿದ್ದರೆ ಅಧ್ಯಕ್ಷನಿಗೆ ಬರೆದು ಪದತ್ಯಾಗಮಾಡಬಹುದು ಅಥವ ಅವಿಶ್ವಾಸ ಪ್ರಸ್ತಾವದ ಪರಿಣಾಮವಾಗಿಯೂ ಅಧ್ಯಕ್ಷನ ಅಪ್ಪಣೆಮೇರೆ ಪದಚ್ಯುತರಾಗಬಹುದು ಅಥವ ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿ ನೇಮಿಸಲ್ಪಡಬಹುದು ಅಥವ ಬೇರೆ ಹೈಕೋರ್ಟುಗಳಿಗೆ ವರ್ಗಾಯಿಸಲ್ಪಡಬಹುದು.

ನ್ಯಾಯಸ್ಥಾನಗಳಿಗೆ ನಿಲ್ಲುವ ಉಮೇದುವಾರರು ಭಾರತದ ನಾಗರೀಕತಾಧಿಕಾರವನ್ನು ಪಡೆದಿರಬೇಕು. ಕನಿಷ್ಠಪಕ್ಷ ೧೦ ವರ್ಷ ಭಾರತದ ನ್ಯಾಯಾಲಯಗಳ ಪದಾಧಿಕಾರದಲ್ಲಿರಬೇಕು, ಅಥವ ೧೦ ವರ್ಷ ಹೈಕೋರ್ಟಿನ ವಕೀಲವೃತ್ತಿಯಲ್ಲಿರಬೇಕು. ಶ್ರೀಷ್ಠಾಧಿಕಾರಿಯ ಅಥವ ಅವನ ಪ್ರತಿನಿಧಿಯ ಸಮ್ಮುಖದಲ್ಲಿ ವಿಧಿಪೂರ್ವಕವಾಗಿ ನ್ಯಾಯಾಧೀಶರು ಪ್ರಮಾಣವಚನ ಕೊಟ್ಟು ಅಧಿಕಾರಸೂತ್ರ ವಹಿಸಬೇಕು. ನ್ಯಾಯಾಧೀಶರಾಗಿ ಕೆಲಸಮಾಡಿದವರು ಭಾರತದ ನ್ಯಾಯಾಲಯಗಳಲ್ಲಿ (ಸುಪ್ರೀಂಕೋರ್ಟನ್ನು ಬಿಟ್ಟು ಉಳಿದ) ಪದಗಳನ್ನು ಸ್ವೀಕರಿಸಕೂಡದು, ಅವುಗಳ ಮುಂದೆ ವಾದಿಸಲೂಕೂಡದು. ಮುಖ್ಯ ನ್ಯಾಯಾಧೀಶನಿಗೆ ತಿಂಗಳಿಗೆ ರೂ. ೪೦೦೦ ಉಳಿದ ನ್ಯಾಯಾಧೀಶರಿಗೆ ರೂ. ೩೫೦೦ ವೇತನ, ಭಾರತ ಸಂಸದ್ ನಿರ್ಧರಿಸುವ ಭತ್ಯಾ, ರಜಾ, ನಿವೃತ್ತಿವೇತನ ಮೊದಲಾದುವು ಸಲ್ಲುವುವು.

ರಾಷ್ಟ್ರಾಧ್ಯಕ್ಷ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧಿಪತಿಯ ಸಲಹೆಯನ್ನು ಪಡೆದು ಹೈಕೋರ್ಟ್ ನ್ಯಾಯಾಧೀಶರನ್ನು ಒಂದು ನ್ಯಾಯಾಲಯದಿಂದ ಇನ್ನೊಂದು ನ್ಯಾಯಾಲಯಕ್ಕೆ ವರ್ಗಾಯಿಸಬಹುದು. ಅಧ್ಯಕ್ಷನು, ಸಂಸದ್ ನಿರ್ಧರಿಸುವ ಪರಿಹಾರದ್ರವ್ಯವನ್ನು ಇಂಥವರಿಗೆ ಅವರ ವೇತನದ ಜೊತೆಗೆ ಕೊಡಬಹುದು. ಹೈಕೋರ್ಟಿನ ಮುಖ್ಯ ನ್ಯಾಯಾಧೀಶನ ಸ್ಥಾನ ಖಾಲಿಬಿದ್ದಾಗ ಹಾಗೂ ದೇಹಾಲಸ್ಯದಿಂದ ಅವನು ಕೆಲಸಕ್ಕೆ ಬಾರದಿದ್ದಾಗ ಅಧ್ಯಕ್ಷನು ನ್ಯಾಯಾಧೀಶರಲ್ಲಿ ಒಬ್ಬನನ್ನು ಆ ಸ್ಥಾನಕ್ಕೆ ನೇಮಿಸಬಹುದು; ನಿವೃತ್ತ ಹೈಕೋರ್ಟ್ ನ್ಯಾಯಾಧೀಶರನ್ನು

ಮುಖ್ಯ ನಾಯಾಧೀಶ ರಾಷ್ಟ್ರಾಧ್ಯಕ್ಷನ ಅಪ್ಪಣೆಪಡೆದು ಪುನಃ ಕೆಲಸಕ್ಕೆ ನೇಮಿಸ ಬಹುದು. ಇಂಥವರಿಗೆ ಇವನು ನಿರ್ಧರಿಸುವ ಭತ್ಯಾ ಸಲ್ಲುವುದು ; ಜೊತೆಗೆ ಖಾಯಂ ನ್ಯಾಯಾಧೀಶರ ವಿಶೇಷಾಧಿಕಾರ ಮೊದಲಾದುವೂ ಸೇರುವುವು, ತಮ್ಮ ನಿರ್ದೇಶ ವನ್ನು, ಆಜ್ಞೆಯನ್ನು, ಹೇಬಿಯಸ್ ಕಾರ್ಪಸ್, ಮಾಂಡೆಮಸ್, ಪ್ರೊಹಿಬಿಷನ್, ಕೊವರಾಂಟೋ, ಸರ್ಷಿಯೋರಾರೆ ಮೊದಲಾದ ಲೇಖಗಳನ್ನು ತಮ್ಮ ಕ್ಷೇತ್ರಾಧಿ ಕಾರಕ್ಕೆ ಒಳಪಡುವ ವ್ಯಕ್ತಿಗಳ ಮೇಲೆ, ಸಂಘಗಳ ಮೇಲೆ ಹೊರಡಿಸಲು ಹೈಕೋರ್ಟ್ ಅಧಿಕಾರಪಡೆದಿದೆ.

ಕೆಳಕೋರ್ಟುಗಳ ಮೇಲಿನ ಅಧೀಕ್ಷಣ ಹೈಕೋರ್ಟಿನ ಕ್ಷೇತ್ರಾಧಿಕಾರಕ್ಕೆ ಸೇರಿರುವ ವಿಚಾರ. ಅಂದರೆ ಇವುಗಳ ಕಾರ್ಯಕಲಾಪಗಳು ಹೇಗೆ ಸಾಗುತ್ತಿದೆ ಎಂಬುದರ ವರದಿ ಮತ್ತೆ ಅಂಕಿ ಅಂಶಗಳನ್ನು ತರಿಸಿಕೊಳ್ಳುವುದು, ನ್ಯಾಯದ ತೀರ್ಪಿಗೆ ಆವಶ್ಯಕವಾದ ವಿಷಯಗಳ ಕಾರ್ಯಕ್ರಮವನ್ನು ನಿರ್ಧರಿಸುವುದು, ಮತ್ತು ಕ್ರಮಪಡಿಸುವುದು, ಕೆಳಕೋರ್ಟುಗಳ ಅಧಿಕಾರಿಗಳ ವೇತನವನ್ನೂ ವಕೀಲರ ಫೀಜನ್ನೂ ಗೊತ್ತುಮಾಡುವುದು, ಕೆಳಕೋರ್ಟುಗಳ ಮುಂದೆ ವಿಚಾರಣೆಗಾಗಿರುವ ವ್ಯವಹಾರಗಳಿಗೆ ಅನ್ವಯಿಸುವ ವಿಧಿಗಳ ನಿರ್ವಚನ ಅತಿಮುಖ್ಯವೆಂದು ತೋರಿದಾಗ ಆ ವ್ಯವಹಾರಗಳ ಕಾಗದಪತ್ರಗಳನ್ನು ಅಲ್ಲಿಂದ ತರಿಸಿಕೊಂಡು ವಿಚಾರಣೆ ನಡೆಸಿ ನಿರ್ಣಯಕೊಡುವುದು ಅಥವ ಸಂದೇಹಾಸ್ಪದವಾದ ವಿಧಿಗಳ ನಿರ್ವಚನ ಏನೆಂಬುದನ್ನು ವ್ಯಕ್ತಪಡಿಸಿ ವ್ಯವಹಾರವನ್ನು ವಿಚಾರಣೆಗಾಗಿ ಕೆಳಕೋರ್ಟಿಗೆ ಪುನಃ ಕಳುಹಿಸು ವುದು ಇವೇ ಮೊದಲಾದುವು ಹೈಕೋರ್ಟುಗಳ ಅಧೀಕ್ಷಣದ ಉದಾಹರಣೆಗಳು.

ಹೈಕೋರ್ಟುಗಳ ಸೇವಕರನ್ನು ಮುಖ್ಯ ನ್ಯಾಯಾಧೀಶ ಅಥವ ಅವನಿಂದ ನಿಯೋಗಿಸಲ್ಪಟ್ಟ ನ್ಯಾಯಾಧೀಶ ಅಥವ ಅಧಿಕಾರಿ ನೇಮಿಸುವನು. ನ್ಯಾಯಾಲಯ ಗಳಿಗೆ ಸಂಬಂಧವಿಲ್ಲದವರನ್ನು ನ್ಯಾಯಾಲಯಗಳ ಕೆಲಸಗಳಿಗೆ ನೇಮಿಸುವಾಗ ಲೋಕಸೇವಾಯೋಗದ (ಪಬ್ಲಿಕ್ ಸರ್ವಿಸ್ ಕಮಿಷನ್) ಸಲಹೆ ಪಡೆಯಬೇಕು. ಹೈಕೋರ್ಟುಗಳ ಪದಾಧಿಕಾರಿಗಳ ಕೆಲಸಗಳ ವಿಧಾನ, ಅವರ ವೇತನ ಮೊದಲಾ ದವುಗಳನ್ನು ಮುಖ್ಯನ್ಯಾಯಾಧೀಶ ಅಥವ ಅವನ ಪ್ರತಿನಿಧಿ ರಾಷ್ಟ್ರಾಧ್ಯಕ್ಷನ ಅನುಮತಿಪಡೆದು ನಿರ್ಧರಿಸುವನು. ಹೈಕೋರ್ಟುಗಳ ವಿಶಿಷ್ಟ ಖರ್ಚು ಆಯಾಯ ರಾಜ್ಯದ ಸಂಚಿತ ನಿಧಿಯ ಮೇಲೆ ಬೀಳುವುದು. ಆ ಕೋರ್ಟುಗಳಿಗೆ ಬರುವ ಕೋರ್ಟ್ ಫೀ ಮೊದಲಾದ ವರಮಾನ ಸಂಚಿತ ನಿಧಿಗೆ ಸೇರುವುದು. ಹೈಕೋರ್ಟು ಗಳ ಕ್ಷೇತ್ರಾಧಿಕಾರವನ್ನು ಕಡಿಮೆಮಾಡುವುದಕ್ಕೆ ಅಥವ ಹೆಚ್ಚುಮಾಡುವುದಕ್ಕೆ ಭಾರತ ಸಂಸದಕ್ಕೆ ಪೂರ್ಣಾಧಿಕಾರವಿದೆ.

ಕಾರಣಾಂತರದಿಂದ ಒಂದು ಹೈಕೋರ್ಟಿನ ಅಧಿಕಾರಕ್ಷೇತ್ರ, ಅದರ ರಾಜ್ಯದ ಹೊರಗಿರುವ ಪ್ರಾಂತ್ಯಗಳಲ್ಲಿ ವ್ಯಾಪಿಸಿದ್ದರೆ ಆ ರಾಜ್ಯದ ವಿಧಾನಮಂಡಲ ಆ ಹೈಕೋರ್ಟಿನ ಅಧಿಕಾರಕ್ಷೇತ್ರವನ್ನು ಹೆಚ್ಚಿಸುವ, ಕಡಿಮೆ ಮಾಡುವ, ನಿಲಂಬನಗೊಳಿಸುವ ವಿಧಿಗಳನ್ನು ರಚಿಸಲು ಅಧಿಕಾರಪಡೆದಿಲ್ಲ.

ಪ್ರತಿಯೊಂದು ಹೈಕೋರ್ಟಿನ ಕೆಳಗೆ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್, ಸಬ್‌ಜಡ್ಜಿಯವರ ಕೋರ್ಟ್, ಮ್ಯಾಜಿಸ್ಟ್ರೇಟರವರ ಕೋರ್ಟ್, ಮುನಸಿಫರ ಕೋರ್ಟ್ ಎಂಬ ವಿವಿಧ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಿವೆ. ಇವುಗಳ ನ್ಯಾಯಾಧೀಶರ ಭರ್ತಿ, ಅವರ ವೇತನ, ವೇತನ ಬಡ್ತಿ, ಮೊದಲಾದವುಗಳನ್ನು ಆಯಾಯ ರಾಜ್ಯದ ಶ್ರೇಷ್ಠಾಧಿಕಾರಿ ಹೈಕೋರ್ಟಿನ ಸಲಹೆ ಪಡೆದು ನಿರ್ಧರಿಸುವನು. ಭಾರತಸರ್ಕಾರದ ಅಥವ ರಾಜ್ಯದ ಸರ್ಕಾರದ ಪದಾಧಿಕಾರಿಯಾಗಿಲ್ಲದಿದ್ದವನು ಡಿಸ್ಟ್ರಿಕ್ಟ್‌ಜಡ್ಜಿಯಸ್ಥಾನಕ್ಕೆ ಬರಬೇಕಾದರೆ ಅವನು ಕನಿಷ್ಠಪಕ್ಷ ೭ ವರ್ಷವಾದರೂ ವಕೀಲನಾಗಿರಬೇಕು. ಜೊತೆಗೆ ಇವನನ್ನು ಆ ಪದಕ್ಕೆ ನೇಮಿಸಬಹುದೆಂದು ಹೈಕೋರ್ಟು ಶಿಫಾರಸ್ಸುಮಾಡಬೇಕು. ಉಳಿದ ನ್ಯಾಯಾಧೀಶರನ್ನು, ಮುನಸೀಫರನ್ನು, ಮ್ಯಾಜಿಸ್ಟ್ರೇಟರುಗಳನ್ನು ಆಯಾಯರಾಜ್ಯದ ಶ್ರೇಷ್ಠಾಧಿಕಾರಿ ಲೋಕಸೇವಾಯೋಗ ಮತ್ತು ಹೈಕೋರ್ಟು ಇವುಗಳ ಸಲಹೆಗಳಿಗನುಸಾರವಾಗಿಯೂ ತಾನೇ ರಚಿಸಿರುವ ನಿಯಮಗಳಿಗನುಗುಣವಾಗಿಯೂ ನೇಮಿಸುವನು. ಒಟ್ಟಿನಲ್ಲಿ ಕೆಳಕೋರ್ಟುಗಳ ವಿಶಿಷ್ಟ ಆಡಳಿತ, ಅವುಗಳ ಉದ್ಯೋಗಸ್ಥರ ಭರ್ತಿ, ವೇತನ, ರಜಾ ಮೊದಲಾದವುಗಳನ್ನು ಹೈಕೋರ್ಟ್ ನಿರ್ಧರಿಸಲು ತಕ್ಕ ಅಧಿಕಾರಪಡೆದಿದೆ.

ಭಾರತಸಂಘ, ರಾಜ್ಯಗಳು, ಇವುಗಳ ಪರಸ್ಪರ ಸಂಬಂಧ

ವಿಧಾಯನೀ ಸಂಬಂಧ—ಭಾರತ ಸಂಘಕ್ಕೂ, ರಾಜ್ಯಗಳಿಗೂ ವಿಧಿರಚನೆ, ಪ್ರಶಾಸನ (ಆಡಳಿತ), ವಿತ್ತ, ವ್ಯಾಪಾರ, ವಾಣಿಜ್ಯ ಮೊದಲಾದ ವಿಷಯಗಳಲ್ಲಿ ನಿಕಟಸಂಬಂಧವಿರುವಂತೆ ಸಂವಿಧಾನವಿಧಿಗಳನ್ನು ರಚಿಸಿದೆ. ಈ ಸಂಬಂಧದ ಪರಿಣಾಮವಾಗಿ ಸರ್ಕಾರ ಕೇಂದ್ರೀಕರಣತತ್ವವನ್ನು ಉದ್ದೇಶಪೂರ್ವಕವಾಗಿ ಸ್ವಲ್ಪಮಟ್ಟಿಗೆ ಅನುಷ್ಠಾನಕ್ಕೆ ತಂದು ಇಡೀ ದೇಶವನ್ನು ಒಟ್ಟುಗೂಡಿಸಿದೆ ಎಂದರೆ ಅದು ತಪ್ಪಾಗಲಾರದು. ಇಂಥ ನೀತಿಗೆ ಕಾಲಸ್ಥಿತಿಯೂ ಇತರ ರಾಜ್ಯಗಳ ಮೇಲ್ಪಂಕ್ತಿಯೂ ಸ್ವಲ್ಪಮಟ್ಟಿಗೆ ಕಾರಣ. ಕಳೆದ ಎರಡು ಮಹಾಯುದ್ಧಗಳಿಂದ ಪ್ರಪಂಚಕ್ಕುಂಟಾಗಿರುವ ಅನರ್ಥ, ಅನಾಹುತ, ವಿಶ್ವದ ಅಭದ್ರತೆ, ಶಾಂತ್ಯಾಭಾವ, ಆರ್ಥಿಕ ಸಮಸ್ಯೆಗಳ ಜಟಿಲತ್ವ, ಧನದ ಉಬ್ಬರ, ಜನಜೀವನಕ್ಕೂ, ವಿಜ್ಞಾನ

ಶಾಸ್ತ್ರಗಳಿಗೂ ದಿನೆದಿನೆ ಹೆಚ್ಚುತ್ತಿರುವ ನಿಕಟಸಂಬಂಧ ಹಾಗೂ ಯಂತ್ರ ಮತ್ತು ಯಂತ್ರೋಪಕರಣಗಳಿಗಾಗಿ ಹೆಚ್ಚು ವೆಚ್ಚಮಾಡಬೇಕಾದ ಆವಶ್ಯಕತೆ ಇವೇ ಮೊದಲಾದ ಅಂಶಗಳನ್ನು ಗಮನದಲ್ಲಿಟ್ಟು ಪ್ರಜಾನಾಯಕರು ಕೇಂದ್ರೀಕರಣದ ತತ್ತ್ವವನ್ನು ಕೆಲವು ವಿಚಾರಗಳಲ್ಲಿ ಆಚರಣೆಗೆ ತಂದಿರುವರು. ಪ್ರಜಾಪ್ರಭುತ್ವ ತತ್ವದೃಷ್ಟಿಯಲ್ಲಿ ಕೇಂದ್ರೀಕರಣದ ನೀತಿ ಉಚಿತವಲ್ಲವಾದರೂ ಕಾಲಸ್ಥಿತಿಯ ಅನಿವಾರ್ಯಗಳ ದೆಶೆಯಿಂದ ಈ ನೀತಿಯನ್ನು ಅನುಷ್ಠಾನಕ್ಕೆ ತರದಿದ್ದರೆ ಗತ್ಯಂತರವೇ ಇಲ್ಲ. ಪ್ರಜಾಸರ್ಕಾರಕ್ಕೆ ಮಾತೃಸ್ಥಾನವಾಗಿರುವ ಇಂಗ್ಲೆಂಡ್ ಮತ್ತು ಅಮೆರಿಕ ದೇಶಗಳೂ ಕೂಡ ಕಾಲಧರ್ಮದ ಒತ್ತಡದಿಂದ ಇದೇ ನೀತಿಯನ್ನೇ ಸಮರ್ಥಿಸಿ ಆಚರಣೆಗೆ ತಂದಿವೆ. ಹೊಸದಾಗಿ ಜನ್ಮತಾಳಿರುವ ಭಾರತಸಂಘ ಬಲಿತು, ಐಕಮತ್ಯ ದಿಂದಿರುವುದಕ್ಕೆ ಕೇಂದ್ರೀಕರಣ ತತ್ವ ಒಂದು ಸಾಧನೋಪಾಯವೆಂದು ಹೇಳುವುದು ತಪ್ಪಾಗಲಾರದು.

ಭಾರತಸಂಘ, ರಾಜ್ಯಗಳು ಇವುಗಳ ಪರಸ್ಪರ ಸಂಬಂಧಕ್ಕೆ ವಿಧಾಯಿನೀ (ವಿಧಿರಚನೆ) ಸಂಬಂಧ ಮೊದಲನೆಯದು. ಭಾರತ ಸಂವಿಧಾನಕ್ಕೆ ವಿರೋಧ ಬರದ ರೀತಿಯಲ್ಲಿ ಭಾರತ ಸಂಸದ್ ಇಡೀ ಭಾರತಕ್ಕೂ ಪ್ರತಿಯೊಂದು ರಾಜ್ಯದ ವಿಧಾನ ಮಂಡಲ ತನ್ನ ರಾಜ್ಯಕ್ಕೂ ಅನ್ವಯಿಸುವ ವಿಧಿಗಳನ್ನು ರಚಿಸಲು ಅಧಿಕಾರ ಪಡೆದಿವೆ. ಭಾರತ ಪ್ರಶಾಸನದ ನಿಯಂತ್ರಣಕ್ಕೆ ಒಳಪಡುವ ವಿಷಯಗಳನ್ನು ಭಾರತ ಸಂವಿಧಾನ ೭ ನೆಯ ಅನುಸೂಚಿಯ ೩ ಸೂಚಿಗಳಲ್ಲಿ ಪ್ರತ್ಯೇಕವಾಗಿ ತೋರಿಸಿದೆ; ಅಂದರೆ ೧ ನೆಯ ಸೂಚಿಯಲ್ಲಿ (ಸಂಘಸೂಚಿ) ಭಾರತಸಂಘದ, ಅಧಿಕಾರಕ್ಷೇತ್ರಕ್ಕೆ ಸೇರಿರುವ ೯೭ ವಿಷಯಗಳನ್ನೂ ೨ ನೆಯ ಸೂಚಿಯಲ್ಲಿ (ರಾಜ್ಯಸೂಚಿ) ರಾಜ್ಯಗಳ ಅಧಿಕಾರಕ್ಷೇತ್ರಕ್ಕೆ ಸೇರಿರುವ ೬೬ ವಿಷಯಗಳನ್ನೂ, ೩ ನೆಯ ಸೂಚಿಯಲ್ಲಿ (ಸಮವರ್ತಿಸೂಚಿ) ಭಾರತ ಸರ್ಕಾರ ಮತ್ತು ರಾಜ್ಯಗಳ ಅಧಿಕಾರಕ್ಷೇತ್ರಕ್ಕೆ ಸೇರಿರುವ ೪೭ ವಿಷಯಗಳನ್ನೂ ಸಂವಿಧಾನ ಸೂಚಿಸಿದೆ. ಹೀಗೆಂದ ಮೇಲೆ ೧ ನೆಯ ಸೂಚಿಯಲ್ಲಿ ಅಡಕವಾಗಿರುವ ವಿಷಯಗಳ ಮೇಲೆ ಭಾರತ ಸಂಸದೂ ೨ ನೆಯ ಸೂಚಿಯಲ್ಲಿ ಅಡಕವಾಗಿರುವ ವಿಷಯಗಳಮೇರೆ ರಾಜ್ಯಗಳ ವಿಧಾನಮಂಡಲಗಳೂ ೩ ನೆಯ ಸೂಚಿಯಲ್ಲಿ ಅಡಕ ವಾಗಿರುವ ವಿಷಯಗಳ ಮೇಲೆ ಎರಡು ರಾಜ್ಯಗಳೂ ವಿಧಿಗಳನ್ನು ರಚಿಸಬಹುದೆಂಬುದು ವ್ಯಕ್ತವಾದಹಾಗಾಯಿತು. ಉದಾಹರಣೆಗಾಗಿ ರಕ್ಷಣಾಬಲಗಳು, ವಿದೇಶೀಯ ಕಾರ್ಯ, ಯುದ್ಧ, ಶಾಂತಿ, ರೈಲ್ವೆ, ಜಹಜು, ದೊಡ್ಡ ಬಂದರುಗಳು, ವಿಮಾನನಿಲ್ದಾಣ, ದೊಡ್ಡ ಜಲಮಾರ್ಗಗಳು, ನಾಣ್ಯ, ವಿದೇಶವಾಣಿಜ್ಯ, ಖನಿಜಸಂಪತ್ತು, ಬ್ಯಾಂಕು, ವಾರ್ತಾಪ್ರಸಾರಣ, ಪೋಸ್ಟ್ ಟೆಲಿಗ್ರಾಫ್, ಜೀವವಿಮಾ, ಜನಗಣನಾ, ಮೊದ

ಲಾದುವು ಸಂಘಸೂಚಿಗೂ; ಸಾರ್ವಜನಿಕವ್ಯವಸ್ಥಾ, ಪೋಲಿಸ್, ಹೈಕೋರ್ಟ್ ಮೊದಲಾದ ನ್ಯಾಯಾಲಯಗಳ ಪ್ರಶಾಸನ, ಸ್ಥಾನೀಯಶಾಸನ, ಸಾರ್ವಜನಿಕ ಆರೋಗ್ಯ, ವಿದ್ಯಾಭ್ಯಾಸ, ವ್ಯವಸಾಯ, ಅರಣ್ಯಶಾಖೆ, ನೀರಾವರಿಯೋಜನೆ, ರಸ್ತೆಗಳು, ಪಶುಪಾಲನೆ, ಆಸ್ಪತ್ರೆ, ಮೊದಲಾದುವು ರಾಜ್ಯಸೂಚಿಗೂ; ವಿವಾಹ ಮತ್ತು ವಿವಾಹವಿಚ್ಛೇದನ, ದತ್ತುಸ್ವೀಕಾರ, ವೃತ್ತಾಂತ ಪತ್ರಿಕೆಗಳು, ಪುಸ್ತಕ, ಮುದ್ರಣಾಲಯ, ಧಾರ್ಮಿಕಸಂಸ್ಥೆ, ವಿದ್ಯುಚ್ಛಕ್ತಿ, ಕಾರ್ಮಿಕರ ಹಿತಸಾಧನೆ ಮತ್ತು ಸಂಘಗಳು, ವಕೀಲರ ಮತ್ತು ವೈದ್ಯರವೃತ್ತಿ ಮೊದಲಾದುವು ಸಮವರ್ತಿಸೂಚಿಗೂ ಸೇರಿವೆ. ಕೆನಡಾದಲ್ಲಿರುವಂತೆ ಪ್ರಶಾಸನೀಯ ವಿಷಯಗಳ ಅವಶಿಷ್ಟಾಧಿಕಾರ ಭಾರತ ಸರ್ಕಾರಕ್ಕೆ ಸೇರಿದೆ; ಅಂದರೆ ಮೇಲ್ಕಂಡ ೩ ಸೂಚಿಗಳಲ್ಲಿ ಅಡಕವಾಗದಿರುವ ವಿಷಯಗಳಮೇಲೆ ಭಾರತಸರ್ಕಾರಕ್ಕೆ ಮಾತ್ರ ಅಧಿಕಾರವುಂಟು.

ಸಾಮಾನ್ಯಕಾಲದಲ್ಲಿ ಪ್ರತಿಯೊಂದು ರಾಜ್ಯ ತನ್ನ ಅಧಿಕಾರಕ್ಷೇತ್ರಕ್ಕೆ ಒಳಪಟ್ಟ ವಿಷಯಗಳಮೇಲೆ ವಿಧಿಗಳನ್ನು ರಚಿಸುವ ಅಧಿಕಾರಪಡೆದಿದ್ದರೂ ವಿಶೇಷ ಸಂದರ್ಭಗಳಲ್ಲಿ ಅಂದರೆ ರಾಷ್ಟ್ರೀಯ ಹಿತಸಾಧಿಸುವ ಮತ್ತು ಆಪತಕೀಉದ್ಘೋಷಣ ಹೊರಬಿದ್ದ ಸಂದರ್ಭಗಳಲ್ಲಿಯೂ ಎರಡು ಅಥವ ಅನೇಕ ರಾಜ್ಯಗಳು ಆತ್ಮಸಂತೋಷದಿಂದ ಕರಾರುಮಾಡಿಕೊಂಡು ತಮ್ಮ ರಾಜ್ಯಗಳಿಗೋಸ್ಕರ ಸಂಸದ್ ನಿರ್ದಿಷ್ಟವಾದ ಕೆಲವು ಬಾಬುಗಳಮೇಲೆ ವಿಧಿಗಳನ್ನು ರಚಿಸಬೇಕೆಂದು ಒಪ್ಪಿಕೊಂಡ ಸಂದರ್ಭಗಳಲ್ಲಿಯೂ ರಾಜ್ಯಸೂಚಿಕೆಗೆ ಒಳಪಟ್ಟ ವಿಷಯಗಳಮೇಲೆ ಸಂಸದ್ ವಿಧಿಗಳನ್ನು ರಚಿಸುವ ಅಧಿಕಾರ ಪಡೆದಿದೆ. ಯಾವ ವಿಷಯ ರಾಷ್ಟ್ರೀಯ ಹಿತಕ್ಕೆ ಸಂಬಂಧ ಪಟ್ಟಿರುವುದು ಎಂಬುದನ್ನು ರಾಜ್ಯಪರಿಷತ್ ಬಹುಮತದಿಂದ ಅಂದರೆ ⅔ ಭಾಗಕ್ಕೆ ಕಡಿಮೆ ಇಲ್ಲದ ಸದಸ್ಯರ ಮತದಾನದಿಂದ ನಿರ್ಧರಿಸುವುದು ಅತ್ಯಗತ್ಯ. ಆಪತಕೀ ಉದ್ಘೋಷಣ ಆಚರಣೆಯಲ್ಲಿರುವಾಗ ಸಂಸದ್ ಇಡೀ ಭಾರತಕ್ಕಾಗಲೀ, ಅದರ ಯಾವ ಭಾಗಕ್ಕಾಗಲೀ ಅನ್ವಯಿಸುವಂಥ ರಾಜ್ಯಸೂಚಿಯಲ್ಲಿ ಅಡಕವಾಗಿರುವ ಯಾವ ವಿಷಯಗಳಿಗಾದರೂ ಸಂಬಂಧವಿರುವಂಥ ವಿಧಿಗಳನ್ನು ರಚಿಸಬಹುದು. ವಿದೇಶಾಂಗ ಪ್ರಶಾಸನೀಯ ಸಂಬಂಧವಾದ ವಿಷಯಗಳನ್ನು ಹಾಗೂ ಪರರಾಷ್ಟ್ರಗಳೊಡನೆ ಭಾರತಸರ್ಕಾರ ಮಾಡಿಕೊಳ್ಳುವ ಕರಾರುಗಳನ್ನು ಕಾರ್ಯರೂಪಕ್ಕೆ ತರುವ ವೇಳೆಗಳಲ್ಲಿ ರಾಜ್ಯಗಳ ಅಧಿಕಾರಕ್ಷೇತ್ರಕ್ಕೆ ಸೇರಿದ ವಿಷಯಗಳ ಮೇಲೂ ಸಂಸದ್ ವಿಧಿಗಳನ್ನು ರಚಿಸಬಹುದು. ಯಾವುದಾದರೂ ಪ್ರಶಾಸನೀಯ ವಿಷಯಗಳಮೇಲೆ ಭಾರತಸರ್ಕಾರ ಮತ್ತು ರಾಜ್ಯಗಳು ವಿಧಿಗಳನ್ನು ರಚಿಸಿದಾಗ ಇಂಥ ವಿಧಿಗಳಲ್ಲಿ ಪರಸ್ಪರ ವಿರೋಧ ಕಂಡುಬಂದರೆ ಅಂಥ ಸಂದರ್ಭಗಳಲ್ಲಿ

ರಾಜ್ಯಗಳು ಸಂಸದಿನ ವಿಧಿಗಳಿಗೇ ಮನ್ನಣೆಕೊಟ್ಟು ತಾವು ಮಾಡಿದ ವಿಧಿಗಳನ್ನು ಬದಲಾಯಿಸಿಕೊಳ್ಳಬೇಕು ಅಥವ ನಿಲಂಬನಗೊಳಿಸಿಕೊಳ್ಳಬೇಕು.

ಭಾರತಸರ್ಕಾರಕ್ಕೂ ರಾಜ್ಯಗಳಿಗೂ ಇರುವ ಪ್ರಶಾಸನೀಯ ಸಂಬಂಧ—ಪ್ರತಿಯೊಂದು ರಾಜ್ಯದ ಕಾರ್ಯಪಾಲಿಕಾಶಕ್ತಿ ಭಾರತ ಸಂಸದ್ ರಚಿಸುವ ವಿಧಿಗಳಿಗೂ ಆಚರಣೆಯಲ್ಲಿರುವ ರಾಜ್ಯದ ವಿಧಿಗಳಿಗೂ ವಿರುದ್ಧವಾಗಿರ ಕೂಡದು; ಭಾರತಸರ್ಕಾರದ ಕಾರ್ಯಪಾಲಿಕಾಶಕ್ತಿ ಎಲ್ಲ ರಾಜ್ಯಗಳ ಧ್ಯೇಯಸಾಧನೆ ಗಾಗಿ ನೆರವಾಗಬೇಕು. ಪ್ರತಿಯೊಂದು ರಾಜ್ಯದ ಕಾರ್ಯಪಾಲಿಕಾಶಕ್ತಿ ಭಾರತ ಸರ್ಕಾರದ ಕಾರ್ಯಪಾಲಿಕಾಶಕ್ತಿಗೆ ವಿರೋಧವಾಗಿರಕೂಡದು ಅಲ್ಲದೆ ಇದರ ಪ್ರಯೋಗಕ್ಕೆ ಅಡ್ಡಿ ಆತಂಕಗಳನ್ನುಂಟುಮಾಡಕೂಡದು. ಈ ಉದ್ದೇಶಸಾಧನೆಗಾಗಿ ಸೂಕ್ತ ನಿರ್ದೇಶಗಳನ್ನು ಭಾರತಸರ್ಕಾರ ರಾಜ್ಯಗಳಿಗೆ ಕೊಡುವುದು ಅತ್ಯಗತ್ಯ. ಉದಾಹರಣೆಗಾಗಿ ರಾಷ್ಟ್ರೀಯ ಹಿತ ಮತ್ತು ರಕ್ಷಣೆಯ ಸಾಧನೆಗಾಗಿ ಸಂಚಾರ ಸಾಧನಗಳನ್ನು ಏರ್ಪಡಿಸುವುದು, ಅವುಗಳನ್ನು ಸರಿಯಾದ ಸ್ಥಿತಿಯಲ್ಲಿ ಇಡುವುದು ಇವೇ ಮೊದಲಾದ ಕಾರ್ಯಗಳನ್ನು ರಾಜ್ಯಗಳು ನಿರ್ವಹಿಸಬೇಕೆಂಬದಾಗಿ ರಾಜ್ಯಗಳಿಗೆ ಭಾರತಸರ್ಕಾರ ಆಜ್ಞೆಮಾಡಬೇಕು., ಅಲ್ಲದೆ ದೇಶದಲ್ಲಿರುವ ಯಾವ ಭೂಮಾರ್ಗ ಅಥವ ಜಲಮಾರ್ಗವನ್ನು ರಾಷ್ಟ್ರೀಯ ಮಾರ್ಗವೆಂದು ಘೋಷಿಸುವ ಅಧಿಕಾರ ಭಾರತ ಸಂಸದಕ್ಕೆ ಸೇರಿದೆ. ಜೊತೆಗೆ ಈ ರಾಷ್ಟ್ರೀಯ ಮಾರ್ಗಗಳನ್ನು ಏರ್ಪಡಿಸ ವುದಕ್ಕೂ ಅವುಗಳನ್ನು ಸರಿಯಾದಸ್ಥಿತಿಯಲ್ಲಿಡುವುದಕ್ಕೂ ಸಂಸದಕ್ಕೆ ಪೂರ್ಣಾಧಿ ಕಾರವಿದೆ. ಪ್ರತಿಯೊಂದು ರಾಜ್ಯದ ರೈಲ್ವೆಮಾರ್ಗಗಳನ್ನು ರಕ್ಷಿಸಿಕೊಂಡಿರುವಂತೆ ರಾಜ್ಯಗಳಿಗೆ ಆಜ್ಞೆಮಾಡುವ ಅಧಿಕಾರವನ್ನೂ ಭಾರತಸರ್ಕಾರ ಪಡೆದಿದೆ. ಇಂಥ ಕಾರ್ಯನಿರ್ವಹಣೆಯಲ್ಲಿ ರಾಜ್ಯಗಳು ಸಾಮಾನ್ಯಖರ್ಚಿಗಿಂತ ಹೆಚ್ಚಾಗಿ ಖರ್ಚು ಮಾಡಬೇಕಾದ ಸನ್ನಿವೇಶ ಒದಗಿದರೆ ಅಂಥ ಸಂದರ್ಭದಲ್ಲಿ ಹೆಚ್ಚು ದ್ರವ್ಯವನ್ನು ಭಾರತಸರ್ಕಾರ ರಾಜ್ಯಗಳಿಗೆ ಒದಗಿಸಿಕೊಡುವುದು.

ರಾಷ್ಟ್ರಾಧ್ಯಕ್ಷನು ಷರತ್ತುಗಳಿಂದಕೂಡಿದ ಹಾಗೂ ಷರತ್ತುಗಳಿಲ್ಲದಂಥ ಕರಾರುಗಳನ್ನು ಯಾವ ರಾಜ್ಯದೊಡನೆಯಾದರೂ ಮಾಡಿಕೊಂಡು ಭಾರತಸರ್ಕಾರದ ಅಧಿಕಾರಕ್ಷೇತ್ರಕ್ಕೆ ಸೇರಿದ ಯಾವ ಕೆಲಸವನ್ನಾದರೂ ಆ ರಾಜ್ಯಕ್ಕೆ ವಹಿಸ ಬಹುದು. ಇಂಥ ಸೇವೆ ಸಲ್ಲಿಸಿದ್ದಕ್ಕಾಗಿ ಆ ರಾಜ್ಯಗಳಿಗೆ ಭಾರತಸರ್ಕಾರ ಕರಾರಿನಲ್ಲಿ ನಮೂದಾದ ಹಣವನ್ನು ಕೊಡಬೇಕು. ಒಂದುವೇಳೆ ಇಷ್ಟೇ ಹಣ ಕೊಡ ಬೇಕೆಂಬುದು ಕರಾರಿನಲ್ಲಿ ಸ್ಪಷ್ಟಪಡಿಸದಿದ್ದರೆ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧಿಪತಿ ನೇಮಿಸುವ ಮಧ್ಯಸ್ಥಗಾರರು ನಿರ್ಧರಿಸುವ ಹಣವನ್ನು ಭಾರತ

ಸರ್ಕಾರ ಸಂಬಂಧಪಟ್ಟ ರಾಜ್ಯಕ್ಕೆ ಕೊಡತಕ್ಕದ್ದು. ಭಾರತಕ್ಕೆ ಸೇರದಿರುವ ರಾಜ್ಯ ಕ್ಷೇತ್ರಗಳೊಡನೆ ಭಾರತಸರ್ಕಾರ ಕರಾರುಮಾಡಿಕೊಂಡು ಆ ಕ್ಷೇತ್ರಗಳ ವಿಧಾಯಿನೀ, ಕಾರ್ಯಪಾಲಿಕಾ, ನ್ಯಾಯಿಕ ಕಾರ್ಯಗಳನ್ನು ನಿರ್ವಹಿಸಲು ಅಧಿಕಾರ ಪಡೆದಿದೆ. ಆದರೆ ಇಂಥ ಕರಾರುಗಳು ಆ ಕಾಲದಲ್ಲಿ ಆಚರಣೆಯಲ್ಲಿರುವ ವಿದೇಶೀಯ ಅಧಿಕಾರಕ್ಷೇತ್ರಕ್ಕೆ ಅನ್ವಯಿಸುವ ವಿಧಿಗಳ ಕಟ್ಟಿಗೆ ಒಳಪಡಬೇಕು. ಭಾರತಸರ್ಕಾರ ಮತ್ತು ರಾಜ್ಯಗಳಿಂದ ಹೊರಬೀಳುವ ಸಮಸ್ತ ಅಧಿನಿಯಮ, ಅಭಿಲೇಖ, ನ್ಯಾಯಿಕ ನಿರ್ಣಯ ಇವುಗಳನ್ನು ದೇಶದಲ್ಲಿರುವ ಸಮಸ್ತರು ಪೂರ್ಣವಾಗಿ ನಂಬಬೇಕು ಮತ್ತು ಅವುಗಳಿಗೆ ಮನ್ನಣೆ ತೋರಿಸಬೇಕು. ಎರಡು ಅಥವ ಅನೇಕ ರಾಜ್ಯಗಳಿಗೆ ಸಂಬಂಧಿಸುವ ಜಲಾಶಯಗಳ ವಿಚಾರವಾಗಿ ಅಂದರೆ ಅವುಗಳ ಉಪಯೋಗ, ವಿತರಣ, ನಿಯಂತ್ರಣ ಇವುಗಳ ವಿಚಾರವಾಗಿ ಬರಬಹುದಾದ ವ್ಯವಹಾರಗಳನ್ನು ತೀರ್ಮಾನಿಸಲು ಭಾರತ ಸಂಸದ್ ಸೂಕ್ತ ಕಾರ್ಯಕ್ರಮವನ್ನು ಕೈಕೊಂಡು ಮಧ್ಯಸ್ಥಗಾರರನ್ನು ನೇಮಿಸಬಹುದು. ಇಂಥ ವ್ಯವಹಾರಗಳು ಯಾವ ನ್ಯಾಯಾಲಯದ ಅಧಿಕಾರಕ್ಷೇತ್ರಕ್ಕೂ ಸೇರಕೂಡದೆಂಬದಾಗಿ ಸಂಸದ್ ವಿಧಿಯನ್ನು ರಚಿಸಲೂ ಬಹುದು. ಒಂದು ರಾಜ್ಯಕ್ಕೂ, ಇನ್ನೊಂದು ರಾಜ್ಯಕ್ಕೂ ಬರಬಹುದಾದ ಮನಸ್ತಾಪವನ್ನೂ ಒಂದು ಅಥವ ಅನೇಕ ರಾಜ್ಯಗಳು ಒಂದುಕಡೆ, ಭಾರತಸರ್ಕಾರ ಅಥವ ಇತರ ರಾಜ್ಯಗಳು ಇನ್ನೊಂದು ಕಡೆ ನಿಲ್ಲುವ ವ್ಯವಹಾರಗಳನ್ನೂ ಕೂಲಂಕಷವಾಗಿ ವಿಚಾರಿಸಿ ರಾಷ್ಟ್ರೀಯಹಿತದೃಷ್ಟಿಯಿಂದ ಸರಿಯಾದ ನಿರ್ಣಯಕೊಡಲು ರಾಷ್ಟ್ರಾಧ್ಯಕ್ಷನು ಅಂತರರಾಜ್ಯ (ಇಂಟರ್-ಸ್ಟೇಟ್ ಕೌನ್ಸಿಲ್) ಪರಿಷತ್ತನ್ನು ಏರ್ಪಡಿಸಬಹುದು ಮತ್ತು ಇಂಥ ಪರಿಷತ್ತಿನ ಕರ್ತವ್ಯ, ಸಂಘಟನ, ಕಾರ್ಯಕ್ರಮ ಇವುಗಳನ್ನು ನಿರ್ಧರಿಸಲೂಬಹುದು.

ವಿತ್ತ, ಸಂಪತ್ತಿ, ಸಂವಿದಾ, ವ್ಯವಹಾರ—ರಾಜಕೀಯತತ್ವದೃಷ್ಟಿಯಲ್ಲಿ ಫೆಡರಲ್‌ರಾಜ್ಯ, ಯೂನಿಟರಿ ರಾಜ್ಯದ ಹಾಗೆ ಸುವ್ಯವಸ್ಥಿತವೂ ಬಲವಾದುದೂ ಅಲ್ಲವೆಂದೂ ಸಮಾಜಹಿತವನ್ನು ಸರ್ವತೋಮುಖವಾಗಿ ಯೂನಿಟರಿ ರಾಜ್ಯ ಸಾಧಿಸುವಂತೆ ಫೆಡರಲ್ ರಾಜ್ಯ ಸಾಧಿಸಲಾರದೆಂದೂ ವಿಕೇಂದ್ರೀಕರಣಪದ್ಧತಿ ಪ್ರಜಾಪ್ರಭುತ್ವತತ್ವಕ್ಕನುಗುಣವಾಗಿದೆಯೆಂದೂ ಕೇಂದ್ರೀಕರಣಪದ್ಧತಿ ಪ್ರಾಬಲ್ಯಕ್ಕೆ ಬಂದಹಾಗೆ ಪ್ರಜಾಪ್ರಭುತ್ವದ ಸತ್ವ ಕಡಿಮೆಯಾಗುವುದೆಂದೂ ವಾದ ಮಾಡುವುದು ಸರಿ. ಇದು ತತ್ವದ ಮಾತಾಯಿತು. ಆಚರಣೆಯ ದೃಷ್ಟಿಯಲ್ಲಿ ನೋಡಿದರೆ ಇತ್ತೀಚಿಗೆ ಫೆಡರಲ್ ರಾಜ್ಯ ಯೂನಿಟರಿ ರಾಜ್ಯಕ್ಕಿಂತ ಬಲವಾಗುತ್ತಿರುವುದೂ ವಿಕೇಂದ್ರೀಕರಣಪದ್ಧತಿಗಿಂತ ಕೇಂದ್ರೀಕರಣಪದ್ಧತಿ ಅತ್ಯಧಿಕವಾಗಿ

ಸಮಾಜಹಿತವನ್ನು ಸಾಧಿಸುತ್ತಿರುವುದೂ ಅನೇಕರ ಗಮನಕ್ಕೆ ಬಂದಿವೆ. ಇದಕ್ಕೆ ಅಮೆರಿಕ ದೇಶವೇ ಒಂದು ದೊಡ್ಡ ನಿದರ್ಶನ. ಅನೇಕ ಪ್ರಕಾರಗಳಿಂದ ಫೆಡರಲ್ ಸರ್ಕಾರದ ಅಧಿಕಾರಕ್ಷೇತ್ರವನ್ನೂ ವಿತ್ತಸಂಗ್ರಹಣವನ್ನೂ ಬಹಳಮಟ್ಟಿಗೆ ಹೆಚ್ಚಿಸಿಕೊಂಡು ಅಮೆರಿಕ ಮುಂದುವರಿಯುತ್ತಿರುವುದು ಎಲ್ಲರ ಅನುಭವಕ್ಕೆ ಬಂದ ವಿಚಾರವಾಗಿದೆ. ಉದಾಹರಣೆಗಾಗಿ ೧೯ ನೆಯ ಶತಮಾನದ ಆದಿಯಲ್ಲಿ ಕೇಂದ್ರ ಸರ್ಕಾರ ವರಮಾನ ತೆರಿಗೆಯಿಂದ (ಆಯಕರದಿಂದ) ರಾಷ್ಟ್ರದ ಆಯದಲ್ಲಿ ಶೇಕಡ ೪ ಭಾಗವನ್ನು ಮಾತ್ರ ಪಡೆಯುತ್ತಿತ್ತು, ಈಗ ಈ ಬಾಬಿನಿಂದ ಶೇಕಡ ೩೩⅓ ಭಾಗ ಬರುತ್ತಿದೆ. ಇದೇ ರೀತಿಯಲ್ಲಿ ಕೆನಡಾ ಫೆಡರಲ್ ಕರಗಳ ಮೂಲಕ ರಾಷ್ಟ್ರದ ಆಯದಲ್ಲಿ ಅರ್ಧಭಾಗವನ್ನು ಪಡೆಯುತ್ತಿರುವುದು. ಇವೆರಡು ಫೆಡರಲ್ ರಾಜ್ಯಗಳು ಕೇಂದ್ರಸರ್ಕಾರದ ಆಯವನ್ನು ಹೆಚ್ಚಿಸಿಕೊಂಡಿರುವುದರಿಂದ ದೊಡ್ಡ ಉದ್ಯಮಗಳನ್ನು ಕೈಕೊಂಡು ಸಮಾಜಹಿತವನ್ನು ಸರ್ವತೋಮುಖವಾಗಿ ಸಾಧಿಸುತ್ತಿರುವುವು. ಹೀಗೆಂದಮೇಲೆ ಇವು ವಿಕೇಂದ್ರೀಕರಣಕ್ಕಿಂತ ಹೆಚ್ಚಾಗಿ ಕೇಂದ್ರೀಕರಣಪದ್ಧತಿಯನ್ನೇ ಆಚರಣೆಗೆ ತಂದಿರುವುವು ಎಂಬುದು ವ್ಯಕ್ತವಾದಹಾಗಾಯಿತು. ಎರಡು ಮಹಾಯುದ್ಧಗಳ ಹೊಡತಕ್ಕೆ ಸಿಕ್ಕಿ ನರಳುತ್ತಿರುವ ರಾಜ್ಯಗಳೆಲ್ಲವೂ ಈ ಎರಡು ಫೆಡರಲ್ ರಾಜ್ಯಗಳು ತೋರಿಸಿರುವ ಮಾರ್ಗವನ್ನು ಅನುಸರಿಸದಿದ್ದರೆ ಗತ್ಯಂತರವೇ ಇಲ್ಲ. ಈ ಅಂಶವನ್ನು ಚೆನ್ನಾಗಿ ಅರಿತೇ ಭಾರತ ಪ್ರಜಾನಾಯಕರು ವಿತ್ತವಿಚಾರದಲ್ಲಿ ಕೇಂದ್ರೀಕರಣ ಪಥವನ್ನು ಹಿಡಿದು ದೇಶದ ಆರ್ಥಿಕಸ್ಥಿತಿಯನ್ನು ಬಲಪಡಿಸಲೆತ್ನಿಸಿರುವರು.

ಭಾರತಸರ್ಕಾರ ಮತ್ತು ರಾಜ್ಯಗಳು ಅದರದರ ವಿಧಾನಮಂಡಲ ರಚಿಸುವ ವಿಧಿಗಳ ಆಧಾರವಿಲ್ಲದೆ ಯಾವವಿಧ ಕರಗಳನ್ನು ಪ್ರಜೆಗಳ ಮೇಲೆ ಹಾಕಿ ಅವರಿಂದ ದ್ರವ್ಯವನ್ನು ವಸೂಲ್ ಮಾಡಕೂಡದು. ಸಂವಿಧಾನದ ಪ್ರಕಾರ ರಾಜ್ಯಗಳಿಗೆ ಕಾದಿಟ್ಟಿರುವ ಕೆಲವು ಕರಗಳ ಮತ್ತು ಶುಲ್ಕಗಳ ಒಟ್ಟು ವರಮಾನ ಅಥವ ಅದರ ಕೆಲವು ಭಾಗ (ಅಂದರೆ ಖರ್ಚುಕಳೆದು ಉಳಿಯುವ ವರಮಾನ) ಇವುಗಳನ್ನು ಬಿಟ್ಟು ಉಳಿಯುವ ವರಮಾನ; ಭಾರತಸರ್ಕಾರಕ್ಕೆ ಇತರ ಮಾರ್ಗಗಳಿಂದ ಬರುವ ಆಯ, ಸರ್ಕಾರ ತೆಗೆದುಕೊಳ್ಳುವ ಉಧಾರ, ಸರ್ಕಾರದ ಸಾಲಗಾರರಿಂದ ಬರುವ ವಿತ್ತ ಇವು ಭಾರತ ಸಂಚಿತ ನಿಧಿಗೆ ಸೇರುವುವು. ಇದೇ ಮಾರ್ಗಗಳಿಂದ ರಾಜ್ಯಗಳಿಗೆ ಬರುವ ವಿತ್ತ ರಾಜ್ಯಗಳ ಸಂಚಿತ ನಿಧಿಗಳಾಗುವುವು. ಇತರ ವಿಧಗಳಿಂದ ಬರುವ ಸಾರ್ವಜನಿಕವಿತ್ತ ಭಾರತಸರ್ಕಾರದ ಅಥವ ರಾಜ್ಯಗಳ ಸಾರ್ವಜನಿಕ ಲೇಖಾಕ್ಕೆ ಸೇರುವುವು. ಭಾರತಸರ್ಕಾರದ ಅಥವ ರಾಜ್ಯಗಳ ಸಂಚಿತ ನಿಧಿಯಿಂದ ಆಯಾಯ

ವಿಧಾನ ಮಂಡಲದ ಅಪ್ಪಣೆಯಿಲ್ಲದೆ ಅದು ನಿರ್ದೇಶಿಸುವ ಉದ್ದೇಶ ಸಾಧನೆಗಲ್ಲದೆ ಉಳಿದ ಕೆಲಸಗಳಿಗೆ ವಿತ್ತವನ್ನು ವಿನಿಯೋಗಿಸಲು ಯಾವ ಸರ್ಕಾರಕ್ಕೂ ಅಧಿಕಾರವಿಲ್ಲ. ಸಂಚಿತನಿಧಿಯಲ್ಲದೆ ಭಾರತಸರ್ಕಾರದಲ್ಲಿಯೂ ಮತ್ತು ರಾಜ್ಯಗಳಲ್ಲಿಯೂ ಆಯಾಯ ವಿಧಾನಮಂಡಲ ಆಕಸ್ಮಿಕತಾನಿಧಿ ಎಂಬ ಪ್ರತ್ಯೇಕ ನಿಧಿಯನ್ನು ವಿಧಿಪೂರ್ವಕವಾಗಿ ಏರ್ಪಡಿಸಬಹುದು. ಈ ನಿಧಿಗೆ ಆಯಾಯ ರಾಜ್ಯದ ವಿಧಾನಮಂಡಲ ವಿಧಿಪೂರ್ವಕವಾಗಿ ನಿರ್ಧರಿಸುವ ರೀತಿಯಲ್ಲಿಯೂ ಪ್ರಮಾಣದಲ್ಲಿಯೂ ವಿತ್ತವನ್ನು ಆಗಿಂದಾಗ್ಯೆ ಸೇರಿಸಬಹುದು. ಆಕಸ್ಮಿಕತಾ ನಿಧಿ ರಾಷ್ಟ್ರಾಧ್ಯಕ್ಷ ಅಥವ ರಾಜ್ಯದ ಶ್ರೇಷ್ಠಾಧಿಕಾರಿ ಇವರ ವಶದಲ್ಲಿರುವುದು. ಇದನ್ನು ಅನಿರೀಕ್ಷಿತ ಖರ್ಚುಬಾಬುಗಳಿಗಾಗಿ ಆಯಾಯ ವಿಧಾನಮಂಡಲ ವಿಧಿಪೂರ್ವಕವಾಗಿ ವಿತ್ತ ವಿನಿಯೋಗವನ್ನು ಒಪ್ಪುವವರೆಗೆ ಮುಂಗಡವಾಗಿ ಅಧ್ಯಕ್ಷ ಅಥವ ರಾಜ್ಯದ ಶ್ರೇಷ್ಠಾಧಿಕಾರಿ ವಿನಿಯೋಗಿಸಬಹುದು.

ಭಾರತಸಂಘ ಮತ್ತು ರಾಜ್ಯ ಇವುಗಳಿಗೆ ರಾಜಸ್ವವಿತರಣಮಾಡಿರುವ ವಿಧಾನ—ಭಾರತಸರ್ಕಾರ ಆರೋಪಣಮಾಡಿ ರಾಜ್ಯಗಳು ವಸೂಲ್‌ಮಾಡಿ ತಾವು ವಿನಿಯೋಗಿಸಿಕೊಳ್ಳುವ ಶುಲ್ಕಗಳು ಕೆಲವು. ಉದಾಹರಣೆಗಾಗಿ. ೧ ನೆಯ ಸೂಚಿಯಲ್ಲಿ ಅಡಕವಾಗಿರುವ ಮುದ್ರಾಂಕಶುಲ್ಕ, ಅಂಗಶೃಂಗಾರವಸ್ತುಗಳು, ಮತ್ತು ಔಷಧಗಳು ಇವುಗಳ ಮೇಲಿನ ಶುಲ್ಕ. ಈ ಶುಲ್ಕಗಳಿಂದ ಬರುವ ಆಯವನ್ನು ಭಾರತ ಸರಕಾರ ತನ್ನ ಸಂಚಿತ ನಿಧಿಗೆ ಸೇರಿಸಿಕೊಳ್ಳದೆ ರಾಜ್ಯಗಳಿಗೆ ವಿತರಣ ಮಾಡಬೇಕು.

ಭಾರತಸರ್ಕಾರ ಆರೋಪಣೆಮಾಡಿ, ವಸೂಲ್‌ಮಾಡಿ ರಾಜ್ಯಗಳಿಗೆ ವಿತ್ತ ವಿನಿಯೋಗಮಾಡುವ ಕರಗಳು ಇನ್ನು ಕೆಲವು. ಉದಾಹರಣೆಗಾಗಿ, ವ್ಯವಸಾಯದ ಜಮೀನುಗಳಲ್ಲದೆ ಉಳಿದ ಆಸ್ತಿಗಳಮೇಲೆ ಬೀಳುವ ಉತ್ತರಾಧಿಕಾರ ಶುಲ್ಕ, ವ್ಯವಸಾಯದ ಜಮೀನುಗಳಲ್ಲದೆ ಉಳಿದ ಸಂಪದದಮೇಲಿನ ಶುಲ್ಕ, ರೈಲಿನಲ್ಲಿ, ಹಡಗುಗಳಲ್ಲಿ, ವಿಮಾನಗಳಲ್ಲಿ ಸಾಗಿಸುವ ಮತ್ತು ತರಿಸಿಕೊಳ್ಳುವ ಪದಾರ್ಥಗಳ ಮೇಲೂ ಮತ್ತು ಪ್ರಯಾಣೀಕರಮೇಲೂ ಬೀಳುವ 'ಸೀಮಾಕರಗಳು', ಪ್ರಯಾಣೀಕರ ರೈಲ್ವೆಭಾಡಾ ಹಾಗೂ ವಸ್ತುಭಾಡಾಗಳಮೇಲಿನ ಕರಗಳು, ಶ್ರೇಷ್ಠಿಚತ್ವರ, ವಾಯಿದಾ ಬಾಜಾರಗಳ ಸಂಬಂಧವಾದ ವ್ಯವಹಾರಗಳಮೇಲಿನ ಕರಗಳು; ಸಮಾಚಾರ ಪತ್ರಗಳ ಕ್ರಯ ವಿಕ್ರಯಗಳಮೇಲಿನ ಮತ್ತು ಜಾಹಿರಾತುಗಳಮೇಲಿನ ಕರಗಳು. ಇಂಥ ಶುಲ್ಕ ಮತ್ತು ಕರಗಳಿಂದ ಖರ್ಚುಕಳೆದು ಬರುವ ಆಯವನ್ನು ಭಾರತಸರ್ಕಾರ ತನ್ನ ಸಂಚಿತ ನಿಧಿಗೆ ಸೇರಿಸಿಕೊಳ್ಳದೆ ಸಂಬಂಧಪಡುವ ರಾಜ್ಯಗಳಿಗಾಗಿ ಸಂಸದ್ ನಿರ್ಧರಿಸುವ ಪ್ರಮಾಣದಲ್ಲಿ ನಿಯೋಗಿಸಬೇಕು; ವ್ಯವಸಾಯದ

ಆಯವನ್ನು ಬಿಟ್ಟು ಉಳಿದ ಆಯದಮೇಲಿನ ಕರವನ್ನು ಭಾರತಸರ್ಕಾರ ಆರೋಪಣೆ ಮಾಡಿ, ವಸೂಲ್‌ಮಾಡಿ ಭಾರತಸರ್ಕಾರ ಮತ್ತು ರಾಜ್ಯ ಇವುಗಳಿಗೆ ವಿತರಣ ಮಾಡತಕ್ಕದ್ದು.

ಸಂಸದ್ ತನಗೆ ಸೂಕ್ತವೆಂದು ತೋರಿದಾಗ ಶುಲ್ಕಗಳ ಅಥವ ಕರಗಳಮೇಲೆ 'ದಂಡಕರಗಳನ್ನು' ಹಾಕಿ ಅವುಗಳಿಂದ ಬರುವ ಆಯವನ್ನು ಹೆಚ್ಚಿಸಿಕೊಂಡು ತನ್ನ ಸಂಚಿತನಿಧಿಗೆ ಸೇರಿಸಿಕೊಳ್ಳಬಹುದು.

ಭಾರತಸರ್ಕಾರ ಆರೋಪಣೆಮಾಡಿ, ವಸೂಲ್‌ಮಾಡಿ, ಭಾರತಸರ್ಕಾರ ಮತ್ತು ರಾಜ್ಯ ಇವುಗಳಿಗೆ ವಿತರಣೆಮಾಡಬಹುದಾದ ಕರಗಳು ಕೆಲವು. ಉದಾಹರಣೆಗಾಗಿ, ಅಂಗಶೃಂಗಾರವಸ್ತುಗಳು, ಔಷಧಗಳು ಇವುಗಳಲ್ಲದೆ ಉಳಿದ ವಸ್ತುಗಳಮೇಲೆ ಭಾರತ ಹಾಕುವ ಒಳಸುಂಕ (ಜಕಾತಿ)ವನ್ನು ಭಾರತಸರ್ಕಾರ ಆರೋಪಣೆಮಾಡಿ, ವಸೂಲ್‌ಮಾಡಿ ತನ್ನ ಸಂಚಿತನಿಧಿಗೆ ಸೇರಿಸಿಕೊಂಡು, ಇವುಗಳಿಂದ ಖರ್ಚುಕಳೆದು ಬರುವ ಆಯುವನ್ನು ಸಂಪೂರ್ಣವಾಗಿ ಅಥವ ಸ್ವಲ್ಪವಾಗಿ ಸಂಬಂಧಪಟ್ಟ ರಾಜ್ಯ ಗಳಿಗೆ ವಿತರಣಮಾಡಬೇಕು.

ಸಣಬು, ಸಣಬಿನಿಂದ ತಯಾರಾಗುವ ವಸ್ತುಗಳಮೇಲಿನ ನಿರ್ಯಾತ ಶುಲ್ಕ ವನ್ನು ಭಾರತಸರ್ಕಾರ ಆರೋಪಣೆಮಾಡುವದಾದ್ದರಿಂದ ಇದಕ್ಕೆ ಸಂಬಂಧ ಪಡುವ ಅಸ್ಸಾಂ, ಬಿಹಾರ್, ಒರಿಸ್ಸಾ, ಪಶ್ಚಿಮ ಬಂಗಾಳ ರಾಜ್ಯಗಳಿಗೆ ಸಂಚಿತ ನಿಧಿಯಿಂದ ಸಹಾಯಕ ಅನುದಾನವನ್ನು ಭಾರತಸರ್ಕಾರ ಮಾಡಬೇಕು. ರಾಜ್ಯ ಗಳಿಗೆ ಅನ್ವಯಿಸುವ ಕರಗಳು, ಶುಲ್ಕಗಳು ಇವುಗಳಿಗೆ ಸಂಬಂಧಪಡುವ ವಿಧೇಯಕ ಗಳನ್ನೂ ಇವುಗಳ ಸಂಶೋಧನೆಗಳನ್ನೂ ಸಂಸದಿನಲ್ಲಿ ಯಾರು ಮಂಡಿಸ ಬೇಕಾದರೂ ರಾಷ್ಟ್ರಾಧ್ಯಕ್ಷನ ಅಪ್ಪಣೆಯನ್ನು ಪಡೆಯಬೇಕು.

ಭಾರತಸರ್ಕಾರ ಸಂಸದಿನ ವಿಧಿಗಳಿಗನುಸಾರವಾಗಿ ತನ್ನ ಸಂಚಿತನಿಧಿಯಿಂದ ರಾಜ್ಯಗಳಿಗೆ ಅವುಗಳ ಸ್ಥಿತಿಗತಿಗಳಿಗನುಗುಣವಾಗಿ ಪ್ರತಿವರ್ಷ ಸಹಾಯಕ ಅನುದಾನ ಮಾಡಬಹುದು. ಜೊತೆಗೆ ರಾಜ್ಯಗಳಲ್ಲಿರುವ ಅನುಸೂಚಿತಜನಜಾತಿಯ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಸಂಬಂಧಿಸುವ, ಭಾರತಸರ್ಕಾರ ಒಪ್ಪುವ ಯೋಜನೆ ಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಈ ನಿಧಿಯಿಂದ ವಿತ್ತವನ್ನು ವಿನಿಯೋಗಿಸ ಬಹುದು. ರಾಜ್ಯದ ಅಥವ ಮುನಿಸಿಪಾಲಿಟಿಯ ಅಥವ ಡಿಸ್ಟ್ರಿಕ್ಟ್‌ಬೋರ್ಡಿನ ಅಥವ ಸ್ಥಾನೀಯಬೋರ್ಡಿನ ಉಪಯೋಗಕ್ಕಾಗಿ ಪ್ರಜೆಗಳ ಆಯದ ಮೇಲೆ ಬೀಳುವ ಕರಗಳನ್ನು (ಅಂದರೆ ವೃತ್ತಿ, ವ್ಯಾಪಾರ, ನೌಕರಿಗಳಮೇಲೆ ಬೀಳುವ ಕರಗಳನ್ನು) ವಿಧಾನಮಂಡಲ ವಿಧಿಪೂರ್ವಕವಾಗಿ ಆರೋಪಣೆಮಾಡಿ ವಸೂಲ್

ಮಾಡಲು ಅಧಿಕಾರಪಡೆದಿದೆ. ಒಬ್ಬ ಪ್ರಜೆ ತನ್ನ ರಾಜ್ಯ ಅಥವ ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್‌ಬೋರ್ಡ್, ಸ್ಥಾನೀಯಬೋರ್ಡ್ ಇವುಗಳಿಗೆ ಕೊಡುವ ಕರಗಳ ಒಟ್ಟು ವಿತ್ತ ವರ್ಷಕ್ಕೆ ರೂ. ೨೫೦ ಕ್ಕಿಂತ ಹೆಚ್ಚಿರಕೂಡದು. ಹೊಸಸಂವಿಧಾನ ಆಚರಣೆಗೆ ಬರುವುದಕ್ಕೆ ಮುಂಚೆ ರಾಜ್ಯ ಅಥವ ಮುನಿಸಿಪಾಲಿಟಿ ಅಥವ ಡಿಸ್ಟ್ರಿಕ್ಟ್ ಬೋರ್ಡ್ ಅಥವ ಸ್ಥಾನೀಯಬೋರ್ಡ್ ಸಾರ್ವಜನಿಕ ಹಿತಸಾಧನೆಗಾಗಿ, ವಿಧಿಪೂರ್ವಕವಾಗಿ ಆರೋಪಣೆಮಾಡುತ್ತಿದ್ದ ಕರಗಳು, ಶುಲ್ಕಗಳು, ಉಪಕಾರ, ಫೀಜು ಇವು ನೂತನ ಸಂವಿಧಾನದ ಸಂಘಸೂಚಿಗೆ ಸೇರಿದ್ದರೂ ಇವುಗಳನ್ನು ಭಾರತಸಂಸದ್ ಬದಲಾಯಿಸುವವರಿಗೆ ರಾಜ್ಯಗಳೇ ಆರೋಪಣೆಮಾಡತಕ್ಕದ್ದು.

ಕೆಲವು ವಿತ್ತವಿಚಾರಗಳಲ್ಲಿ ಅಂದರೆ ಕರಗಳ ಮತ್ತು ಶುಲ್ಕಗಳ ಆರೋಪಣೆ, ವಸೂಲಿ, ಇವುಗಳಿಂದ ಬರುವ ವಿತ್ತದ ವಿತರಣ ಇವುಗಳ ವಿಚಾರಗಳಲ್ಲಿ ಭಾರತ ಸರ್ಕಾರ ೧ ನೆಯ ಅನುಸೂಚಿ 'ಬಿ' ಭಾಗದ ರಾಜ್ಯಗಳೊಡನೆ ಕರಾರುಮಾಡಿಕೊಳ್ಳ ಬಹುದು. ಇಂಥ ಕರಾರಿನ ಅವಧಿ ೧೦ ವರ್ಷ. ಇಂಥ ಕರಾರುಗಳ ಪರಿಣಾಮವಾಗಿ ನಷ್ಟಕ್ಕೆ ಗುರಿಯಾಗುವ ರಾಜ್ಯಗಳಿಗೆ ಭಾರತಸರ್ಕಾರ ಧನಸಹಾಯಮಾಡಬಹುದು ಅಥವ ಸಂವಿಧಾನ ಆಚರಣೆಗೆ ಬಂದ ೫ ವರ್ಷಗಳಾದ ಮೇಲೆ ರಾಷ್ಟ್ರಾಧ್ಯಕ್ಷನು ವಿತ್ತಾಯೋಗದ ಸಲಹೆಗನುಸಾರವಾಗಿ ಮೇಲ್ಕಂಡ ಕರಾರುಗಳನ್ನು ಬದಲಾಯಿಸ ಬಹುದು ಅಥವ ರದ್ದುಗೊಳಿಸಬಹುದು.

ವಿತ್ತಾಯೋಗ—ನೂತನ ಸಂವಿಧಾನ ಆಚರಣೆಗೆ ಬಂದ ೨ ವರ್ಷಗಳಾದ ಕೂಡಲೆ ಆಮೇಲೆ ೫ ವರ್ಷಗಳಿಗೊಂದುಸಲ ರಾಷ್ಟ್ರಾಧ್ಯಕ್ಷ ಒಂದು ವಿತ್ತಾ ಯೋಗವನ್ನು ಏರ್ಪಡಿಸಬೇಕು. ಇದಕ್ಕೆ ಒಬ್ಬ ಸಭಾಪತಿ, ನಾಲ್ಕು ಸದಸ್ಯರಿರಬೇಕು. ಇವರ ಅರ್ಹತೆ, ಭರ್ತೀವಿಧಾನ ಮೊದಲಾದ ವಿಷಯಗಳನ್ನು ಭಾರತಸಂಸದ್ ವಿಧಿ ಪೂರ್ವಕವಾಗಿ ನಿರ್ಧರಿಸುವುದು. ಕರಗಳು ಮೊದಲಾದವುಗಳಿಂದ ಖರ್ಚುಕಳೆದು ಉಳಿಯುವ ಆಯವನ್ನು ಭಾರತಸರ್ಕಾರ ಮತ್ತು ರಾಜ್ಯಗಳಿಗೂ ಹಾಗೂ ಒಂದು ರಾಜ್ಯಕ್ಕೂ ಇನ್ನೊಂದುರಾಜ್ಯಕ್ಕೂ ಯಾವಪ್ರಮಾಣದಲ್ಲಿ ವಿತರಣೆಮಾಡಬೇಕು ಎನ್ನುವುದನ್ನು ಗೊತ್ತುಮಾಡುವುದೂ ಭಾರತ ಸಂಚಿತನಿಧಿಯಿಂದ ರಾಜ್ಯಗಳಿಗೆ ಸಹಾಯಕ ಅನುದಾನನ್ನು ವಿನಿಯೋಗಮಾಡುವ ನೀತಿಯನ್ನು ನಿರ್ಧರಿಸುವುದೂ ಭಾರತಸರ್ಕಾರಕ್ಕೂ ರಾಜ್ಯಗಳಿಗೂ ಇರುವ ವಿತ್ತವಿಷಯಕ ಕರಾರುಗಳು ಆಚರಣೆ ಯಲ್ಲಿರಬೇಕೇ ಅಥವ ಬದಲಾಯಿಸಲ್ಪಡಬೇಕೇ ಎಂಬುದನ್ನು ವಿನಿಶ್ಚಯಮಾಡು ವುದೂ ರಾಷ್ಟ್ರಾಧ್ಯಕ್ಷ ಅಪೇಕ್ಷಿಸುವ ಇತರ ವಿಷಯಗಳನ್ನು ಪರ್ಯಾಲೋಚಿಸಿ ಸೂಕ್ತ ಸಲಹೆ ನೀಡುವುದೂ ವಿತ್ತಾಯೋಗದ ಕೃತ್ಯಗಳು.

ವಿತ್ತಾಯೋಗಮಾಡುವ ಪ್ರತಿಯೊಂದು ಶಿಫಾರಸ್ಸನ್ನೂ ಇದರಮೇಲೆ ತಾನು ಕೈಕೊಂಡಿರುವ ಕಾರ್ಯಕ್ರಮವನ್ನೂ ಅಧ್ಯಕ್ಷ ಭಾರತ ಸಂಸದಿನ ಪ್ರತಿ ಒಂದು ಸಭೆಯ ಮುಂದೆ ಮಂಡಿಸಬೇಕು. ಭಾರತಸರ್ಕಾರ ರಾಜ್ಯಗಳು ವಿಶೇಷಸಂದರ್ಭಗಳಲ್ಲಿ ಅಂದರೆ ಸಾರ್ವಜನಿಕಹಿತವನ್ನು ಸಾಧಿಸುವ ಸಂದರ್ಭಗಳಲ್ಲಿ ತಮ್ಮ ವಿಧಾನಮಂಡಲ ವಿಧಿಗಳನ್ನು ರಚಿಸಲು ಅಧಿಕಾರಪಡೆಯದಿರುವ ಉದ್ದೇಶದಸಲುವಾಗಿ ವಿತ್ತವಿನಿಯೋಗಿಸಲು ಅಧಿಕಾರಪಡೆದಿವೆ.

ಭಾರತಸರ್ಕಾರದ ಸಂಚಿತನಿಧಿ ಮತ್ತು ಆಕಸ್ಮಿಕತಾನಿಧಿಗಳ ಅಭಿರಕ್ಷಣ, ಶೇಖರಣ, ವಿನಿಯೋಗ, ಇವುಗಳನ್ನು ಸಂಸದೂ ರಾಜ್ಯಗಳಿಗೆ ಸೇರಿದ ಈ ನಿಧಿಗಳ ಅಭಿರಕ್ಷಣ ಮೊದಲಾದವುಗಳನ್ನು ಅವುಗಳ ವಿಧಾನಮಂಡಲಗಳೂ ಕ್ರಮಪಡಿಸುವುವು. ರಾಜ್ಯಗಳ ಸಂಪತ್ತಿನ ಮೇಲೆ ಭಾರತಸರ್ಕಾರ, ಭಾರತಸರ್ಕಾರದ ಸಂಪತ್ತಿನ ಮೇಲೆ ರಾಜ್ಯಗಳು ಕರಗಳನ್ನು ಆರೋಪಣೆಮಾಡಕೂಡದು. ಒಂದು ರಾಜ್ಯದ ಹೊರಗೆ ನಡೆಯುವ ಪದಾರ್ಥಗಳ ಕ್ರಯ ವಿಕ್ರಯಗಳ ಮೇಲೆ ಆ ರಾಜ್ಯ ಕರಗಳನ್ನು ಆರೋಪಣೆಮಾಡಕೂಡದು. ಭಾರತಸರ್ಕಾರ ರೈಲ್ವೆ ಮೊದಲಾದವುಗಳಿಗಾಗಿ ಉಪಯೋಗಿಸುವ ಇತರ ಕಾರ್ಯಗಳಿಗಾಗಿ ಕೊಂಡುಕೊಳ್ಳುವ ವಿದ್ಯುಚ್ಛಕ್ತಿಯ ಮೇಲೆ ಕರಗಳನ್ನು ಆರೋಪಣೆಮಾಡುವಸಲುವಾಗಿ ರಾಜ್ಯಗಳು ವಿಧಿಗಳನ್ನು ರಚಿಸಕೂಡದು. ಭಾರತಸರ್ಕಾರ ವಿಧಿಪೂರ್ವಕವಾಗಿ ಕೈಕೊಂಡಿರುವ ಎರಡು ಅಥವ ಅನೇಕ ರಾಜ್ಯಗಳಿಗೆ ಸಂಬಂಧಿಸುವ ನದಿ, ನದಿಗಳ ತಗ್ಗುಪ್ರದೇಶ, ವಿದ್ಯುಚ್ಛಕ್ತಿ ಇವುಗಳ ಶೇಖರಣ, ವಿನಿಯೋಗ, ವಿತರಣ, ವಿಕ್ರಯ ಇವುಗಳಮೇಲೆ ಯಾವ ರಾಜ್ಯವೂ ಕರಗಳನ್ನು ಆರೋಪಣೆಮಾಡಕೂಡದು.

ರಾಜಪ್ರಮುಖರ ಸ್ವಂತಖರ್ಚಿಗಾಗಿ ನಿರ್ಧರಿಸುವ ವಿತ್ತವನ್ನು ಭಾರತ ಸರ್ಕಾರ ತನ್ನ ಸಂಚಿತನಿಧಿಯಿಂದ ವಿನಿಯೋಗಿಸಬೇಕು. ಇಂಥ ವಿತ್ತದ ಮೇಲೆ ಯಾವ ಕರಗಳನ್ನು ಆರೋಪಣೆಮಾಡಕೂಡದು.

ಉಧಾರಗ್ರಹಣ—ಸಂಚಿತನಿಧಿಯ ಆಧಾರದಮೇಲೆ ಭಾರತಸರ್ಕಾರವೂ ರಾಜ್ಯಗಳೂ ಉಧಾರಗ್ರಹಣವನ್ನು ಸಂಸದ್ ಅಥವ ಅದರ ವಿಧಾನಮಂಡಲಿ ನಿರ್ಧರಿಸುವ ಪ್ರಮಾಣದಲ್ಲಿ ತೆಗೆದುಕೊಳ್ಳಬಹುದು. ಸಂಸದ್ ನಿರ್ಧರಿಸುವ ಷರತ್ತುಗಳಿಗನುಸಾರವಾಗಿ ಭಾರತಸರ್ಕಾರ ರಾಜ್ಯಗಳಿಗೆ ಉಧಾರ ಕೊಡಲೂಬಹುದು. ಹಿಂದಿನ ಉಧಾರವನ್ನು ಸಂಪೂರ್ಣವಾಗಿ ಕೊಡದಿರುವ ರಾಜ್ಯ ಭಾರತಸರ್ಕಾರದ ಅಪ್ಪಣೆ ಇಲ್ಲದೆ ಮತ್ತೊಂದು ಉಧಾರವನ್ನು ತೆಗೆದುಕೊಳ್ಳಲು ಅವಕಾಶವಿಲ್ಲ.

ಭಾರತಸಂವಿಧಾನ ಆಚರಣೆಗೆ ಬರುವುದಕ್ಕೆ ಮುಂಚೆ ಇದ್ದ ಇಂಡಿಯಾ

ಸರ್ಕಾರಕ್ಕೆ ಸೇರಿದ್ದ ಸಂಪತ್ತಿ, ಅದು ಮಾಡಿಕೊಂಡಿದ್ದ ಕರಾರು, ಅದರ ಅಧಿಕಾರ, ದಾಯಿತ್ವ, ಇತರರಮೇಲೆ ಅದು ಹೂಡಿದ್ದ ವ್ಯವಹಾರ ಆದರಮೇಲೆ ಇತರರು ಹೂಡಿದ್ದ ವ್ಯವಹಾರ ಇವುಗಳಮೇಲಿನ ಪೂರ್ಣಜವಾಬ್ದಾರಿಯನ್ನು ನೂತನ ಭಾರತಸಂವಿಧಾನ ವಹಿಸಿಕೊಂಡಿದೆ. ಭಾರತದ ಜಲಪ್ರಾಂಗಣದಲ್ಲಿ ದೊರೆಯುವ ವಿಶಿಷ್ಟ ವಸ್ತುಗಳು, ರಾಜಗಾಮಿಯಿಂದ ಭಾರತಸರ್ಕಾರಕ್ಕೆ ಸೇರಬೇಕಾದ ಸಂಪತ್ತಿ ಭಾರತಸರ್ಕಾರಕ್ಕೂ, ರಾಜ್ಯಗಳಿಗೆ ಸೇರಬೇಕಾದ ಸಂಪತ್ತಿ ರಾಜ್ಯಗಳಿಗೂ ಸೇರುವುದು. ಭಾರತದಲ್ಲಿ ವಾಣಿಜ್ಯ ವ್ಯಾಪಾರವಿಚಾರಗಳಲ್ಲಿ ಸಮಸ್ತ ಪ್ರಜೆಗಳಿಗೆ, ಸಂಸ್ಥೆಗಳಿಗೆ ಮತ್ತು ರಾಜ್ಯಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಪಕ್ಷಪಾತ ತೋರಿಸದ ರೀತಿಯಲ್ಲಿ ಕೆಲವು ನಿರ್ಬಂಧಗಳನ್ನು ವಾಣಿಜ್ಯ, ವ್ಯಾಪಾರಗಳಮೇಲೆ ವಿಧಿಪೂರ್ವಕವಾಗಿ ಹೂಡಲು ಭಾರತಸಂಸದಕ್ಕೂ ರಾಜ್ಯಗಳ ವಿಧಾನಮಂಡಲಿಗಳಿಗೂ ಅಧಿಕಾರವಿದೆ. ವಿಶೇಷ ಸಂದರ್ಭಗಳಲ್ಲಿ ಪಕ್ಷಪಾತಕ್ಕವಕಾಶಕೊಡದಂತೆ ಆಯಾತಶುಲ್ಕಗಳನ್ನು ರಾಜ್ಯಗಳು ಆರೋಪಣೆಮಾಡಬಹುದು ಅಥವ ವ್ಯಾಪಾರದಮೇಲೆ ಕೆಲವು ನಿರ್ಬಂಧಗಳನ್ನೂ ಕಲ್ಪಿಸಬಹುದು.

ಭಾರತಸಂಘ ಮತ್ತು ರಾಜ್ಯಗಳ ಲೋಕಸೇವಾಯೋಗ

ಭಾರತಸಂಘದ ಮತ್ತು ರಾಜ್ಯಗಳ ಕ್ಷೇತ್ರಾಧಿಕಾರಕ್ಕೆ ಒಳಪಟ್ಟ ಲೋಕಸೇವಾಪದಗಳಿಗೆ (ಪ್ರಶಾಸನೀಯಪದಗಳಿಗೆ) ಸಂಬಂಧಿಸುವ ಪದಾಧಿಕಾರಿಗಳ ಆಯ್ಕೆ (ಭರ್ತಿ) ಅವರ ಸೇವೆಯ ಷರತ್ತು ಇವುಗಳನ್ನು ಆಯಾಯ ರಾಜ್ಯದ ವಿಧಾನಮಂಡಲ ಕ್ರಮಪಡಿಸಿ ರಾಷ್ಟ್ರಾಧ್ಯಕ್ಷನ ಅಥವ ರಾಜ್ಯದ ಶ್ರೇಷ್ಠಾಧಿಕಾರಿಯ ನಿರ್ದೇಶಕ್ಕನುಸಾರವಾಗಿ ವಿಧಿಗಳನ್ನು ರಚಿಸಬಹುದು. ಅಖಿಲ ಭಾರತ ಸೈನಿಕ ಮತ್ತು ಅಸೈನಿಕ ಪದಾಧಿಕಾರಿಗಳ ಪದಾವಧಿ ರಾಷ್ಟ್ರಾಧ್ಯಕ್ಷನ ಇಚ್ಛೆಗೂ ರಾಜ್ಯಗಳ ಪದಾಧಿಕಾರಿಗಳ ಪದಾವಧಿ ಆ ರಾಜ್ಯಗಳ ಶ್ರೇಷ್ಠಾಧಿಕಾರಿಗಳ ಇಚ್ಛೆಗೂ ಒಳಪಟ್ಟಿವೆ. ಈ ಪದಾಧಿಕಾರಿಗಳನ್ನು ಕಾರಣವಿಲ್ಲದೆ ಕೆಲಸದಿಂದ ತೆಗೆಯುವುದಕ್ಕೂ ಇವರ ಹೇಳಿಕೆಯನ್ನು ಕೇಳದೆ ತಪ್ಪಿತಸ್ಥರೆಂದು ಇವರ ಮೇಲೆ ದೋಷಾರೋಪ ಮಾಡುವುದಕ್ಕೂ ಅವಕಾಶವಿಲ್ಲ. ಅಲ್ಲದೆ ಹೇಳಿಕೆಯನ್ನು ಕೇಳದೆ ಕೆಲವು ಪದಾಧಿಕಾರಿಗಳನ್ನು ಕೆಲಸದಿಂದ ತೆಗೆಯಲೂಬಹುದು. ಅಂಥ ಪದಾಧಿಕಾರಿಗಳು ಯಾರೆಂದರೆ:—ನ್ಯಾಯಾಲಯಗಳು ಅಪರಾಧಿಗಳೆಂದು ಪರಿಗಣಿಸುವ ಪದಾಧಿಕಾರಿಗಳು; ಪದಾಧಿಕಾರಿಗಳ ಕದಾಚಾರವನ್ನು ವಿಚಾರಿಸಿ ಶಿಕ್ಷಿಸಲು ನೇಮಿಸಲ್ಪಟ್ಟ

ಪ್ರಾಧಿಕಾರಿಯ ವಿಚಾರಣೆಗೆ ಗುರಿಯಾಗಿರುವವರೂ ಆಪಾದನೆಗೆ ಗುರಿಯಾಗಿ ಅವರ ಹೇಳಿಕೆಯನ್ನು ತೆಗೆದುಕೊಳ್ಳುವುದರಲ್ಲಿ ಔಚಿತ್ಯವಿಲ್ಲವೆಂದು ಪರಿಗಣಿತರಾಗಿರುವ ಪದಾಧಿಕಾರಿಗಳೂ ತಮ್ಮ ರಾಜ್ಯದ ಭದ್ರತೆಯದೃಷ್ಟಿಯಲ್ಲಿ ಆಪಾದಿತರಾದ ಪದಾಧಿಕಾರಿಗಳ ಹೇಳಿಕೆ ತೆಗೆದುಕೊಳ್ಳುವುದು ಕ್ಷೇಮಕರವಲ್ಲವೆಂದು ರಾಷ್ಟ್ರಾಧ್ಯಕ್ಷ ಅಥವ ರಾಜ್ಯದ ಶ್ರೇಷ್ಠಾಧಿಕಾರಿಗಳಿಂದ ಪರಿಗಣಿತರಾದವರು. ಈ ಸಂದರ್ಭಗಳಲ್ಲಿ ಹೇಳಿಕೆಯನ್ನು ತೆಗೆದುಕೊಳ್ಳದೆ ಪದಾಧಿಕಾರಿಗಳನ್ನು ಸಂಬಂಧಪಟ್ಟ ಸರ್ಕಾರ ಕೆಲಸದಿಂದ ತೆಗೆಯಬಹುದು.

ಅಖಿಲ ಭಾರತಸೇವಾ—ರಾಜ್ಯಪರಿಷತ್ ಬಹುಮತದಿಂದ ಅಂದರೆ ಸಭೆಯಲ್ಲಿ ಹಾಜರಿದ್ದು ಮತದಾನಮಾಡಿದವರಲ್ಲಿ ೨/೩ ಭಾಗಕ್ಕೆ ಕಡಿಮೆ ಇಲ್ಲದ ಸದಸ್ಯರ ಮತದಿಂದ ಯಾವ ಪ್ರಶಾಸನೀಯ ಪದಗಳು ಅಖಿಲಭಾರತಸೇವಾಪದಗಳಾಗಬೇಕೆಂದೂ ಭಾರತೀಯರ ಹಿತಸಾಧನೆಗೆ ಅತ್ಯಗತ್ಯವೆಂದೂ ವಿನಿಶ್ಚಯಮಾಡವುದೋ ಆ ಪದಗಳು ಅಖಿಲಭಾರತಸೇವಾಪದಗಳೆಂದು ಪರಿಗಣಿಸಲ್ಪಡುವುವು. ಇವು ಭಾರತಸರ್ಕಾರ ಮತ್ತು ರಾಜ್ಯ ಇವೆರಡಕ್ಕೂ ಅನ್ವಯಿಸುವುವು.

ಭಾರತಸಂವಿಧಾನ ಆಚರಣೆಗೆ ಬರುವುದಕ್ಕೆ ಮುಂಚೆ ಇಂಡಿಯಾ ಸರ್ಕಾರದಿಂದ ನೇಮಿತರಾದ ಹಾಗೂ ಪ್ರಕೃತ ಭಾರತಸರ್ಕಾರದಲ್ಲಿ ಅಥವ ರಾಜ್ಯಗಳಲ್ಲಿ ಪದಾಧಿಕಾರಿಗಳಾಗಿರುವ 'ಸಿವಿಲ್ ಸರ್ವಿಸ್' ಪದಾಧಿಕಾರಿಗಳ ವೇತನ, ಸೇವೆಯ ಷರತ್ತು, ರಜಾ, ನಿವೃತ್ತಿವೇತನ ಇವುಗಳಿಗೆ ಭಾರತಸರ್ಕಾರ ಮತ್ತು ರಾಜ್ಯಗಳು ಮನ್ನಣೆಕೊಡಬೇಕು.

ಲೋಕಸೇವಾಯೋಗ—ಭಾರತಸರ್ಕಾರ ಮತ್ತು ಪ್ರತಿಯೊಂದು ರಾಜ್ಯ ಪ್ರಶಾಸನದ ಉಪಯೋಗಕ್ಕಾಗಿ ಪ್ರತ್ಯೇಕ ಲೋಕಸೇವಾಯೋಗವನ್ನು ಏರ್ಪಡಿಸಬಹುದು. ಎರಡು ಮೂರು ರಾಜ್ಯಗಳು ಒಪ್ಪಿ ಒಂದೇ ಒಂದು ಲೋಕಸೇವಾಯೋಗವನ್ನು ಏರ್ಪಡಿಸಿಕೊಳ್ಳಲೂಬಹುದು. ಅಲ್ಲದೆ ಈ ಏರ್ಪಾಡಿಗೆ ಆಯಾಯ ರಾಜ್ಯಗಳ ವಿಧಾನಮಂಡಲದ ಮತ್ತು ಸಂಸದಿನ ಒಪ್ಪಿಗೆ ಅತ್ಯಗತ್ಯ. ಎರಡು ಮೂರು ರಾಜ್ಯಗಳಿಗೆ ಅನ್ವಯಿಸುವ ಲೋಕಸೇವಾಯೋಗಕ್ಕೆ ಅವಿಭಕ್ತಯೋಗವೆಂದು ಹೆಸರು. ರಾಜ್ಯಪಾಲರು ಅಥವ ರಾಜಪ್ರಮುಖರು ತಮಗೆ ಬೇಕಾದಾಗ ಭಾರತಲೋಕಸೇವಾಯೋಗದ ಸಹಾಯವನ್ನು ಸಂಪೂರ್ಣವಾಗಿ ಅಥವ ಸ್ವಲ್ಪವಾಗಿ ರಾಷ್ಟ್ರಾಧ್ಯಕ್ಷನ ಅನುಮತಿಯಿಂದ ಪಡೆಯುವುದಕ್ಕೂ ಅವಕಾಶವಿದೆ.

ಭಾರತಲೋಕಸೇವಾಯೋಗದ ಮತ್ತು ಅವಿಭಕ್ತಯೋಗದ ಸಭಾಪತಿ ಮತ್ತು ಸದಸ್ಯರುಗಳನ್ನು ರಾಷ್ಟ್ರಾಧ್ಯಕ್ಷನೂ, ರಾಜ್ಯಗಳ ಪ್ರತ್ಯೇಕ ಲೋಕಸೇವಾ

ಯೋಗದ ಸಭಾಪತಿ ಮತ್ತು ಸದಸ್ಯರುಗಳನ್ನು ಆಯಾಯ ರಾಜ್ಯದ ಶ್ರೇಷ್ಠಾಧಿಕಾರಿಯೂ ನೇಮಿಸುವರು. ಪ್ರತಿಯೊಂದು ಆಯೋಗದ ಸದಸ್ಯರಲ್ಲಿ ಅರ್ಧಮಂದಿ ಇಂಡಿಯಾಸರ್ಕಾರದಲ್ಲಿ ಅಂದರೆ ಹಿಂದಿನ ಸರ್ಕಾರದಲ್ಲಿ ಅಥವ ರಾಜ್ಯಗಳಲ್ಲಿ ಕನಿಷ್ಠ ಪಕ್ಷ ೧೦ ವರ್ಷ ಪದಾಧಿಕಾರಿಗಳಾಗಿರಬೇಕು. ಲೋಕಸೇವಾಯೋಗದ ಸದಸ್ಯರ ಪದಾವಧಿ ೬ ವರ್ಷ, ಭಾರತಲೋಕಸೇವಾಯೋಗದ ಸದಸ್ಯರು ತಮ್ಮ ೬೫ ವರ್ಷ ವಯಸ್ಸಿನವರಿಗೂ, ರಾಜ್ಯಗಳ ಮತ್ತು ಅವಿಭಕ್ತ ಆಯೋಗದ ಸದಸ್ಯರು ತಮ್ಮ ೬೦ ವರ್ಷ ವಯಸ್ಸಿನವರಿಗೂ ಪದಾಧಿಕಾರದಲ್ಲಿರಬಹುದು. ಈ ಆಯೋಗದ ಸದಸ್ಯರು ತಮ್ಮ ರಾಜ್ಯದ ಶ್ರೇಷ್ಠಾಧಿಕಾರಿಗೆ ಬರೆದು ಪದತ್ಯಾಗಮಾಡಲೂಬಹುದು. ಒಂದಾವರ್ತಿ ಆಯೋಗದ ಪದಾಧಿಕಾರಿಯಾಗಿದ್ದವನು ಪುನಃ ಈ ಪದಕ್ಕೆ ಬರಲು ಅನರ್ಹನು. ಕದಾಚಾರದ ಕಾರಣದಿಂದಲೂ ಉಚ್ಚತಮ ನ್ಯಾಯಾಲಯ ವಿಚಾರಣೆ ನಡೆಸಿ ಅಪರಾಧಿಗಳೆಂಬ ನಿರ್ಣಯ ಕೊಡುವುದರಿಂದಲೂ ಲೋಕಸೇವಾಯೋಗದ ಸಭಾಪತಿಯನ್ನಾಗಲೀ ಅಥವ ಸದಸ್ಯರನ್ನಾಗಲೀ ರಾಷ್ಟ್ರಾಧ್ಯಕ್ಷ ಪದಚ್ಯುತರನ್ನಾಗಿ ಮಾಡಬಹುದು. ಕದಾಚಾರದ ಆಪಾದನೆಯಮೇಲೆ ಆಯೋಗದ ಸಭಾಪತಿಗಳನ್ನು ಅಥವ ಸದಸ್ಯರನ್ನು ರಾಷ್ಟ್ರಾಧ್ಯಕ್ಷ ರಾಜ್ಯದ ಶ್ರೇಷ್ಠಾಧಿಕಾರಿ ಸಂದರ್ಭಾನುಸಾರ ನಿಲಂಬನಮಾಡಲು ಅವಕಾಶವಿದೆ.

ದಿವಾಳಿಗಳೆಂದು ನ್ಯಾಯಾಲಯ ನಿರ್ಣಯಕೊಡುವ ಅಥವ ಪ್ರತಿಫಲ ದೊರೆಯುವ ಇತರ ಪದಗಳಲ್ಲಿ ಕೆಲಸಮಾಡುವ ಅಥವ ಅಧ್ಯಕ್ಷನ ಅಭಿಪ್ರಾಯದಲ್ಲಿ ಶಾರೀರಕ ಅಥವ ಮಾನಸಿಕ ಸಂಬಂಧವಾದ ದುರ್ಬಲತೆಗಳಿಂದ ಕೂಡಿರುವ ಕೆಲಸಮಾಡಲಶಕ್ತರಾಗಿರುವ ಸಭಾಪತಿಯನ್ನಾಗಲೀ, ಸದಸ್ಯರನ್ನಾಗಲೀ ಅಧ್ಯಕ್ಷನು ಪದಚ್ಯುತರನ್ನಾಗಿ ಮಾಡಬಹುದು. ಭಾರತಸರ್ಕಾರ ನೇರವಾಗಿ ಮಾಡಿಕೊಳ್ಳುವ ಅಥವ ಭಾರತಸರ್ಕಾರದ ಅಥವ ರಾಜ್ಯಗಳ ಪರವಾಗಿ ಇತರರು ಮಾಡಿಕೊಳ್ಳುವ ಕರಾರುಗಳಲ್ಲಿ ಲೋಕಸೇವಾಯೋಗದ ಸಭಾಪತಿಯಾಗಲೀ ಸದಸ್ಯರಾಗಲೀ ಸ್ವಾರ್ಥೋದ್ದೇಶದಿಂದ ಆಸಕ್ತಿತೋರಿಸಿದರೆ ಅಥವ ಇಂಥ ಕರಾರುಗಳ ಪರಿಣಾಮದಿಂದ ಬರುವ ಪ್ರತಿಫಲದಲ್ಲಿ ಭಾಗಿಗಳಾದರೆ ಅಂಥ ಪದಾಧಿಕಾರಿಗಳು ಕದಾಚಾರದ ಆಪಾದನೆಗೆ ಗುರಿಯಾದವರೆಂದು ಪರಿಗಣಿಸಿ ಅವರಿಗೆ ಸೂಕ್ತ ಶಿಕ್ಷೆ ವಿಧಿಸಬೇಕು.

ರಾಷ್ಟ್ರಾಧ್ಯಕ್ಷ ಭಾರತ ಲೋಕಸೇವಾಯೋಗ ಮತ್ತು ಅವಿಭಕ್ತ ಆಯೋಗ ಇವುಗಳ ಸದಸ್ಯರ ಸಂಖ್ಯೆ, ಇವರ ಸೇವೆಯ ಷರತ್ತು, ಇವರ ಸಹಾಯಕ್ಕೆ ಕೊಡುವ ಸಣ್ಣ ಪದಾಧಿಕಾರಿಗಳ ಸಂಖ್ಯೆ ಇವುಗಳನ್ನೂ ರಾಜ್ಯಗಳ ಶ್ರೇಷ್ಠಾಧಿಕಾರಿಗಳು ತಮ್ಮ ರಾಜ್ಯಗಳಿಗೆ ಸಂಬಂಧಪಡುವ ಆಯೋಗಗಳ ಸದಸ್ಯರ ಸಂಖ್ಯೆ ಮೊದಲಾದುವು

ಗಳನ್ನೂ ನಿರ್ಧರಿಸುವರು. ಅಧಿಕಾರಕ್ಕೆ ಬಂದಮೇಲೆ ಈ ಪದಾಧಿಕಾರಿಗಳ ವೇತನ ಮೊದಲಾದುವುಗಳನ್ನು ಬದಲಾಯಿಸಕೂಡದು.

ಲೋಕಸೇವಾಯೋಗದ ಸಭಾಪತಿ ಮತ್ತು ಸದಸ್ಯರು ನಿವೃತ್ತರಾದಮೇಲೆ ಕೆಳಗೆ ತಿಳಿಸುವ ಪದಗಳನ್ನು ಸ್ವೀಕರಿಸಕೂಡದು.

ಭಾರತ ಲೋಕಸೇವಾಯೋಗದ ಸಭಾಪತಿಯು ಭಾರತ ಸರ್ಕಾರದಲ್ಲಿಯಾಗಲೀ, ರಾಜ್ಯಗಳಲ್ಲಿಯಾಗಲೀ ಯಾವ ಪದವಿಯನ್ನೂ ಸ್ವೀಕರಿಸಕೂಡದು; ರಾಜ್ಯಗಳ ಲೋಕ ಸೇವಾಯೋಗದ ಸಭಾಪತಿಯಾದರೆ ಭಾರತ ಲೋಕಸೇವಾಯೋಗದ ಸಭಾಪತಿ ಯಾಗಬಹುದು, ಅಥವ ಸದಸ್ಯನಾಗಬಹುದು. ಅಥವ ಇನ್ನೊಂದು ರಾಜ್ಯದ ಆಯೋಗದ ಸಭಾಪತಿಯಾಗಬಹುದು. ಮತ್ತೆ ಇನ್ನಾವ ಪದಗಳನ್ನು ಸ್ವೀಕರಿಸ ಕೂಡದು.

ಭಾರತ ಆಯೋಗದ ಸದಸ್ಯರು ಭಾರತ ಅಥವ ರಾಜ್ಯದ ಆಯೋಗದ ಸಭಾ ಪತಿಗಳಾಗಬಹುದು ; ರಾಜ್ಯದ ಆಯೋಗದ ಸದಸ್ಯ ಭಾರತ ಆಯೋಗದ ಸದಸ್ಯ ನಾಗಬಹುದು, ಸಭಾಪತಿಯಾಗಬಹುದು ಅಥವ ತನ್ನ ರಾಜ್ಯದ ಅಥವ ಇತರ ರಾಜ್ಯದ ಆಯೋಗದ ಸಭಾಪತಿಯಾಗಬಹುದು ; ಇನ್ನಾವ ಪದವಿಯನ್ನು ಸ್ವೀಕರಿಸಕೂಡದು.

ಲೋಕಸೇವಾಯೋಗದ ಕೃತ್ಯಗಳು—ಪ್ರತಿ ಒಂದು ಆಯೋಗ ತನ್ನ ಕ್ಷೇತ್ರಾಧಿಕಾರಕ್ಕೆ ಸೇರಿದ ರಾಜ್ಯದ ಪ್ರಶಾಸನೀಯ ಪದಗಳಿಗೆ ಬೇಕಾಗುವ ಪದಾಧಿಕಾರಿಗಳನ್ನು ಭರ್ತಿಮಾಡುವ ಸಲುವಾಗಿ ಸ್ಪರ್ಧಾಪರೀಕ್ಷೆಗಳನ್ನು ಏರ್ಪಡಿ ಸುವ್ರದು, ಎರಡು ಅಥವ ಅನೇಕ ರಾಜ್ಯಗಳು ತಮಗೆ ಸಂಯುಕ್ತವಾಗಿ ಪ್ರಶಾಸನೀಯ ಪದವಿಗಳಿಗೆ ಭರ್ತಿಯಾಗಬೇಕೆಂದು ಭಾರತಸರ್ಕಾರವನ್ನು ಬೇಡಿಕೊಂಡರೆ ಅಂಥ ರಾಜ್ಯಗಳಿಗೆ ಬೇಕಾಗುವ ಯೋಜನೆಗಳನ್ನು ಭಾರತ ಆಯೋಗ ತಯಾರುಮಾಡಿ ಕಾರ್ಯರೂಪಕ್ಕೆ ತರುವುದು ಇವು ಭಾರತ ಆಯೋಗದ ಕರ್ತವ್ಯ.

ಭಾರತ ಆಯೋಗದ ಅಥವ ರಾಜ್ಯದ ಆಯೋಗದ ಸಲಹೆಯನ್ನು ಇದರ ಕ್ಷೇತ್ರಾಧಿಕಾರಕ್ಕೆ ಒಳಪಟ್ಟ ಸರ್ಕಾರ ಕೆಳಗೆ ತಿಳಿಸುವ ವಿಷಯಗಳಲ್ಲಿ ಪಡೆಯಬೇಕು. ಅವು ಯಾವುವೆಂದರೆ, ಪ್ರಶಾಸನೀಯ ಪದವಿಗಳ ಭರ್ತೀ, ಪದಾಧಿಕಾರಿಕಾರಿಗಳ ಭರ್ತೀ, ವೇತನ, ವೇತನದ ಬಡ್ತಿ, ವರ್ಗ, ಅರ್ಹತೆ, ವೇತನ ಬಡ್ತಿಯ ಅರ್ಹತೆ ಇವು ಗಳಿಗೆ ಸಂಬಂಧಿಸುವ ನೀತಿಯನ್ನೂ ನಿರ್ದೇಶವನ್ನೂ ನಿರ್ಧರಿಸುವುದು ; ಪದಾಧಿಕಾರಿ ಗಳ ಅನುಶಾಸನ ಹಾಗೂ ಇವರು ತಮ್ಮ ಉನ್ನತಾಧಿಕಾರಿಗಳಿಗೆ ಅರ್ಜಿ ಸಲ್ಲಿಸುವ ಅವಕಾಶ ಇವುಗಳನ್ನು ನಿರ್ಧರಿಸುವುದು ; ಪ್ರಶಾಸನೀಯ ಕಾರ್ಯಗಳನ್ನು ನಿರ್ವಹಿಸುವ ಪದಾಧಿಕಾರಿಗಳ ಮೇಲೆ ಇತರರು ಹೂಡುವ ವ್ಯವಹಾರಗಳ ಸಲುವಾಗಿ

ಬೀಳುವ ಖರ್ಚು ಸಂಬಂಧಪಟ್ಟ ರಾಜ್ಯದ ಸಂಚಿತನಿಧಿಯ ಮೇಲೆ ಬೀಳಬೇಕೇ ಇಲ್ಲವೇ ಎಂಬುದನ್ನು ವಿನಿಶ್ಚಯಮಾಡುವುದು ; ಭಾರತದ ಅಥವ ರಾಜ್ಯದ ಪ್ರಶಾಸನೀಯ ಕಾರ್ಯನಿರ್ವಹಣೆಯ ಸಮಯದಲ್ಲಿ ಅಂಗಹೀನರಾಗುವ, ದುರ್ಬಲರಾಗುವ ಪದಾಧಿಕಾರಿಗಳಿಗೆ ಆಯಾಯ ಸರ್ಕಾರ ನಿವೃತ್ತಿವೇತನ ಕೊಡುವ ವಿಚಾರವನ್ನು ಗೊತ್ತುಮಾಡುವುದು—ಇವೇ ಮೊದಲಾದ ವಿಚಾರಗಳಲ್ಲಿ ಲೋಕಸೇವಾಯೋಗ ತನ್ನ ಸರ್ಕಾರದ ಅಧ್ಯಕ್ಷನಿಗೆ ಅಥವ ಶ್ರೀಪ್ರಾಧಿಕಾರಿಗೆ ಸೂಕ್ತಸಲಹೆಗಳನ್ನು ನೀಡಬೇಕು. ಈ ಸಲಹೆಗಳಿಗನುಸಾರವಾಗಿ ಅಧ್ಯಕ್ಷ ಅಥವ ರಾಜ್ಯದ ಶ್ರೀಪ್ರಾಧಿಕಾರಿ ಸೂಕ್ತವಿನಿಯಮಗಳನ್ನು ರಚಿಸಿ ತಮ್ಮ ತಮ್ಮ ವಿಧಾನಮಂಡಲದ ಮುಂದೆ ಆಚರಣೆಗೆ ತರುವುದಕ್ಕೆ ೧೪ ದಿವಸಗಳಿಗೆ ಮುಂಚಿತವಾಗಿ ಮಂಡಿಸತಕ್ಕದ್ದು. ಈ ವಿನಿಯಮಗಳ ಒಪ್ಪಿಗೆ, ನಿರಸನ, ಸಂಶೋಧನ ಇವು ವಿಧಾನಮಂಡಲದ ಕ್ಷೇತ್ರಾಧಿಕಾರಕ್ಕೆ ಸೇರಿವೆ.

ಲೋಕಸೇವಾಯೋಗದ ಕೃತ್ಯಗಳನ್ನು ಆಯಾಯ ರಾಜ್ಯದ ವಿಧಾನಮಂಡಲ ಹೆಚ್ಚಿಸುವುದಕ್ಕೂ ಅಧಿಕಾರಪಡದಿದೆ. ಲೋಕಸೇವಾಯೋಗದ ವಿಶಿಷ್ಟ ಖರ್ಚನ್ನು ಆಯಾಯ ರಾಜ್ಯ ವಹಿಸತಕ್ಕದ್ದು. ಭಾರತ ಆಯೋಗ ತನ್ನ ಕಾರ್ಯನಿರ್ವಹಣೆಯ ವರದಿಯನ್ನು ಅಧ್ಯಕ್ಷನಿಗೂ ರಾಜ್ಯದ ಆಯೋಗ ಶ್ರೀಪ್ರಾಧಿಕಾರಿಗೂ ಒಪ್ಪಿಸಬೇಕು. ಈ ಶ್ರೀಪ್ರಾಧಿಕಾರಿಗಳು ವರದಿಯನ್ನೂ, ವರದಿಯಲ್ಲಡಕವಾದ ಸಲಹೆಗಳನ್ನೂ ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ತಂದಿರುವರೆಂಬುದನ್ನೂ ಪ್ರತಿ ವರ್ಷ ತಮ್ಮ ತಮ್ಮ ವಿಧಾನಮಂಡಲಗಳಿಗೆ ತಿಳಿಯಪಡಿಸತಕ್ಕದ್ದು.

ನಿರ್ವಾಚನ ಹಾಗೂ ನಿರ್ವಾಚನ ಆಯೋಗ—ನಿರ್ವಾಚನ ನಾಮಾವಳಿಯ ತಯಾರಿಕೆಯ ಅಧೀಕ್ಷಣ, ನಿರ್ದೇಶ, ನಿಯಂತ್ರಣ ಇವೂ ಭಾರತ ಸಂಸದ್, ರಾಜ್ಯಗಳ ವಿಧಾನಮಂಡಲ ಮತ್ತು ವಿಧಾನಪರಿಷತ್‌ಗಳ ಮತ್ತು ರಾಷ್ಟ್ರಾಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ನಿರ್ವಾಚನ; ನಿರ್ವಾಚನದಲ್ಲಿ ಬರಬಹುದಾದ ಸಂದೇಹಗಳ ಮತ್ತು ವ್ಯವಹಾರಗಳ ವಿನಿಶ್ಚಯ ಮಾಡುವುದಕ್ಕಾಗಿರುವ ನಿರ್ವಾಚನ ಅಧಿಕರಣದ ಸದಸ್ಯರ ನಿರ್ವಾಚನ ಇವೇ ಮೊದಲಾದುವೂ ನಿರ್ವಾಚನ ಆಯೋಗದ ಕೃತ್ಯಗಳು. ನಿರ್ವಾಚನ ಆಯೋಗಕ್ಕೆ ಒಬ್ಬ ಮುಖ್ಯ ಆಯುಕ್ತನೂ ಕೆಲವು ಸಾಮಾನ್ಯ ಆಯುಕ್ತರೂ ಇರುವರು. ಸಾಮಾನ್ಯ ಆಯುಕ್ತರ ಸಂಖ್ಯೆಯನ್ನು ರಾಷ್ಟ್ರಾಧ್ಯಕ್ಷನು ನಿರ್ಧರಿಸುವನು. ಈ ಪದಾಧಿಕಾರಿಗಳ ಭರ್ತಿ ಸಂಸದಿನ ವಿಧಿಗಳ ಕಟ್ಟಿಗೆ ಒಳಪಟ್ಟಿರಬೇಕು.

ಲೋಕಸಭಾ, ಪ್ರತಿಯೊಂದು ರಾಜ್ಯದ ವಿಧಾನಸಭಾ ಇವುಗಳ ಪ್ರತಿಯೊಂದು

ಸಾಧಾರಣ ನಿರ್ವಾಚನಕ್ಕೆ ಮುಂಚೆಯೂ ಪ್ರತಿಯೊಂದು ರಾಜ್ಯದ ವಿಧಾನಪರಿಷತ್ತಿನ ಪ್ರಥಮ ನಿರ್ವಾಚನಕ್ಕೆ ಮುಂಚೆಯೂ, ನಂತರ ೨ ವರ್ಷಗಳಿಗೊಂದಾವರ್ತಿ ನಡೆಯುವ ವಿಧಾನಪರಿಷತ್ತಿನ ನಿರ್ವಾಚನಕ್ಕೆ ಮುಂಚೆಯೂ, ರಾಷ್ಟ್ರಾಧ್ಯಕ್ಷನು ನಿರ್ವಾಚನ ಆಯೋಗದ ಸಲಹೆ ಪಡೆದು ಇದರ ಸಹಾಯಕ್ಕಾಗಿ ಪ್ರಾದೇಶಿಕ ನಿರ್ವಾಚನ ಆಯುಕ್ತರನ್ನು ನೇಮಿಸಬಹುದು.

ಭಾರತ ಸಂಸದಿನವಿಧಿಗಳಿಗನುಸಾರವಾಗಿ ನಿರ್ವಾಚನ ಆಯುಕ್ತರ ವೇತನ, ಸೇವಾಷರತ್ತುಗಳನ್ನು ರಾಷ್ಟ್ರಾಧ್ಯಕ್ಷನು ವಿನಿಶ್ಚಯಮಾಡುವನು. ಉಚ್ಚತಮ ನ್ಯಾಯಾಲಯದ ನ್ಯಾಯಾಧೀಶರನ್ನು ಪದತ್ಯಾಗಮಾಡಿಸಲು ಯಾವ ಕಾರಣಗಳಿರುವುವೋ, ಯಾವ ಕಾರ್ಯಕ್ರಮವಿರುವುದೋ ಅವು ನಿರ್ವಾಚನ ಮುಖ್ಯ ಆಯುಕ್ತರಿಗೂ ಅನ್ವಯಿಸುವುವು. ಮುಖ್ಯ ಆಯುಕ್ತನ ಸಲಹೆಯನ್ನು ಪಡೆದು ಅಧ್ಯಕ್ಷನು ಉಳಿದ ಆಯುಕ್ತರನ್ನು ಪದತ್ಯಾಗಮಾಡಿಸಬಹುದು. ರಾಷ್ಟ್ರಾಧ್ಯಕ್ಷ ಅಥವ ರಾಜ್ಯಗಳ ಶ್ರೀಷ್ಠಾಧಿಕಾರಿಗಳು ತಮ್ಮ ತಮ್ಮ ನಿರ್ವಾಚನ ಆಯೋಗಕ್ಕೆ ಬೇಕಾಗುವ ಪದಾಧಿಕಾರಿಗಳ ಸಹಾಯವನ್ನು ಕೊಡಬೇಕು.

ಭಾರತಸಂಸದಿನ ೨ ಸಭೆಗಳ ಹಾಗೂ ರಾಜ್ಯಗಳ ವಿಧಾನಮಂಡಲದ ಒಂದು ಅಥವ ಎರಡು ಸಭೆಗಳ ನಿರ್ವಾಚನದ ಸಲುವಾಗಿ ಪ್ರತಿ ಒಂದು ಪ್ರಾದೇಶಿಕ ನಿರ್ವಾಚನಕ್ಷೇತ್ರಕ್ಕೆ ಒಂದೇ ಒಂದು ಸಾಮಾನ್ಯ ನಿರ್ವಾಚನ ನಾಮಾವಳಿ ಇರಬೇಕು. ನಾಮಾವಳಿಯನ್ನು ತಯಾರಿಸುವಾಗ ಯಾರನ್ನೂ ಜಾತಿ, ಮತ, ಲಿಂಗ ಇವುಗಳ ಕಾರಣದಿಂದ ಸೇರಿಸಿಕೊಳ್ಳದಿರಕೂಡದು. ವಯಸ್ಕರ ಮತಾಧಿಕಾರದ ಆಧಾರದಮೇಲೆ ಅಂದರೆ ೨೧ ವರ್ಷ ವಯಸ್ಸಾಗಿರುವ ಹಾಗೂ ಭಾರತ ನಾಗರೀಕತಾಧಿಕಾರಕ್ಕೆ ಅರ್ಹತೆ ಪಡೆದಿರುವ ಪ್ರತಿ ಒಬ್ಬ ಸ್ತ್ರೀ ಮತ್ತು ಪುರುಷ ಇವರ ಮತಾಧಿಕಾರದ ಆಧಾರದಮೇಲೆ ಲೋಕಸಭಾ ಮತ್ತು ರಾಜ್ಯಗಳ ವಿಧಾನಮಂಡಲ ಇವುಗಳ ನಿರ್ವಾಚನ ನಡೆಯಬೇಕು. ಭಾರತ ಸಂಸದಿನ ೨ ಸಭೆಗಳ ನಿರ್ವಾಚನಕ್ಕೆ ಬೇಕಾಗುವ ಎಲ್ಲಾ ಏರ್ಪಾಡುಗಳನ್ನು ಮಾಡಲು ಭಾರತ ಸಂಸದೂ, ರಾಜ್ಯಗಳ ವಿಧಾನಮಂಡಲದ ಸಭೆಗಳ ನಿರ್ವಾಚನಕ್ಕೆ ಬೇಕಾಗುವ ಏರ್ಪಾಡುಗಳನ್ನು ಮಾಡಲು ರಾಜ್ಯಗಳ ವಿಧಾನಮಂಡಲಗಳೂ ಅಧಿಕಾರಪಡೆದಿವೆ.

ನಿರ್ವಾಚನ ಕ್ಷೇತ್ರಗಳ ಪರಿಸೀಮನದ ಸಂಬಂಧವಾದ ಹಾಗೂ ನಿರ್ವಾಚನ ಕ್ಷೇತ್ರಕ್ಕೆ ಸ್ಥಾನಗಳನ್ನು ವಿತರಣಮಾಡುವ ಸಂಬಂಧವಾದ ವಿಧಿಗಳನ್ನು ಪ್ರಶ್ನಿಸಲು ನ್ಯಾಯಾಲಯಗಳು ಅಧಿಕಾರಪಡೆದಿಲ್ಲ. ನಿರ್ವಾಚನೆಯ ಕ್ರಮವನ್ನು ಅಥವ ಫಲಿತಾಂಶವನ್ನು ಪ್ರಶ್ನಿಸಬೇಕೆಂದಿರುವವರು ವಿಧಿಪೂರ್ವಕವಾಗಿ ತಮಗೆ ಸಂಬಂಧ

ಪಟ್ಟ ವಿಧಾನಮಂಡಲ ನಿರ್ಧರಿಸಿರುವ ರೀತಿಯಲ್ಲಿ, ನಿರ್ಧರಿಸಿರುವ ಪದಾಧಿಕಾರಿಗಳ ಮುಂದೆ ಅರ್ಜಿ ಸಲ್ಲಿಸಿ ನಿರ್ಣಯಪಡೆಯಬಹುದು.

ಅನುಸೂಚಿತ ಜಾತಿ ಮತ್ತು ಜನಜಾತಿಗಳಿಗೆ ಅನ್ವಯಿಸುವ ವಿಶೇಷ ಉಪಬಂಧಗಳು—ಲೋಕಸಭಾದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಜನಜಾತಿಗಳಿಗೆ ಸ್ಥಾನಗಳನ್ನು ಕಾದಿಡಬೇಕು. ಆಂಗ್ಲೋ-ಇಂಡಿಯನ್ನರಿಗೆ ಲೋಕಸಭಾದಲ್ಲಿ ಸರಿಯಾದ ಪ್ರಾತಿನಿಧ್ಯವಿಲ್ಲದಿದ್ದರೆ ರಾಷ್ಟ್ರಾಧ್ಯಕ್ಷನು ಇಬ್ಬರನ್ನು ನಾಮನಿರ್ದೇಶಮಾಡಬಹುದು. ಇದೇ ನೀತಿಯನ್ನು ಪ್ರತಿ ಒಂದು ರಾಜ್ಯ ಅನುಷ್ಠಾನಕ್ಕೆ ತರತಕ್ಕದ್ದು. ಸಂವಿಧಾನ ಆಚರಣೆಗೆ ಬಂದ ೧೦ ವರ್ಷಗಳ ನಂತರ ಈ ರೀತಿ ಸ್ಥಾನಗಳನ್ನು ಕಾದಿಡಕೂಡದು. ಅನುಸೂಚಿತ ಜಾತಿ ಮತ್ತು ಜನಜಾತಿಗಳಿಗೆ ಭಾರತ ಮತ್ತು ರಾಜ್ಯಗಳ ಪ್ರಶಾಸನೀಯ ಪದವಿಗಳಲ್ಲಿ ಪ್ರಾತಿನಿಧ್ಯ ಕಡಿಮೆಯಾಗಿದ್ದರೆ ಕಾರ್ಯಕ್ಷಮತೆಗೆ ಕುಂದಕ ಬರದ ರೀತಿಯಲ್ಲಿ ಇವರಿಗೆ ಪದವಿಗಳನ್ನು ಕೊಡಬಹುದು. ಆಂಗ್ಲೋ-ಇಂಡಿಯನ್ನರಿಗೆ ಸಂವಿಧಾನ ಆಚರಣೆಗೆ ಬಂದ ಎರಡು ವರ್ಷಗಳ ವರಿಗೆ ರೈಲ್ವೆ, ಪೋಸ್ಟ್, ಮತ್ತು ಟೆಲಿಗ್ರಾಫ್, ಶುಲ್ಕ ಈ ಇಲಾಖೆಗಳ ಪದವಿಗಳನ್ನು ಕಾದಿಡಬೇಕು. ನಂತರ ಪ್ರತಿ ಎರಡು ವರ್ಷಗಳಿಗೊಂದಾವರ್ತಿ ರಕ್ಷಿತವಾದ ಪದವಿಗಳನ್ನು ಸೇಕಡ ೧೦ ರಂತೆ ಕಡಿಮೆಮಾಡಿ ೧೦ ವರ್ಷಗಳ ಹೊತ್ತಿಗೆ ಈ ಕಾದಿಟ್ಟ ಪದವಿಗಳನ್ನು ನಿಲಂಬನಗೊಳಿಸಬೇಕು. ಆಂಗ್ಲೋ-ಇಂಡಿಯನ್ನರಿಗೆ ಸಂವಿಧಾನ ಆಚರಣೆಗೆ ಬಂದ ಮೂರು ವರ್ಷಗಳ ವರೆಗೆ ವಿದ್ಯಾರ್ಜನೆಗಾಗಿ ಸಹಾಯಕ ಅನುದಾನವನ್ನು ಭಾರತಸರ್ಕಾರವೂ, ರಾಜ್ಯಗಳೂ ಕೊಡಬೇಕು. ಮೂರು ವರ್ಷಗಳಿಗೊಂದಾವರ್ತಿ ಸಹಾಯಕ ಅನುದಾನವನ್ನು ಸೇಕಡ ೧೦ ರಂತೆ ಕಡಿಮೆಮಾಡಿ ೧೦ ವರ್ಷಗಳ ಹೊತ್ತಿಗೆ ಈ ಪದ್ಧತಿಯನ್ನು ಕೊನೆಗಾಣಿಸಬೇಕು. ಒಂದುವೇಳೆ ಮುಂದಕ್ಕೂ ಆಂಗ್ಲೋ-ಇಂಡಿಯನ್ನರು ವಿದ್ಯೆಗಾಗಿ ಭಾರತಸರ್ಕಾರದಿಂದ ಅಥವ ರಾಜ್ಯದಿಂದ ಪಡೆಯಬೇಕೆಂದಿದ್ದರೆ ತಮ್ಮ ವಿದ್ಯಾಸಂಸ್ಥೆಗಳಲ್ಲಿ ಸೇಕಡ ೪೦ ರಷ್ಟು ಇತರ ಜಾತಿ ಜನರನ್ನು ಸೇರಿಸಿಕೊಳ್ಳಲು ಒಪ್ಪುವುದು ಅಗತ್ಯ.

ಅನುಸೂಚಿತ ಜಾತಿ ಮತ್ತು ಜನಜಾತಿಗಳ ಹಿತರಕ್ಷಣೆಗಾಗಿ ವಿಶೇಷ ಪದಾಧಿಕಾರಿಗಳನ್ನು ರಾಷ್ಟ್ರಾಧ್ಯಕ್ಷ ನೇಮಿಸಬೇಕು. ಈ ಜನರಿಗಾಗಿ ರಚಿಸಿರುವ ವಿಧಿಗಳು ಎಷ್ಟರಮಟ್ಟಿಗೆ ಆಚರಣೆಯಲ್ಲಿವೆ ಇವರ ಅಭಿವೃದ್ಧಿ ಎಷ್ಟು ಸಾಗಿದೆ ಎಂಬ ಅಂಶಗಳನ್ನು ಈ ಪದಾಧಿಕಾರಿ ಅಧ್ಯಕ್ಷನಿಗೆ ತಿಳಿಸಬೇಕು, ಈ ವರದಿಯನ್ನು ಅಧ್ಯಕ್ಷನು ಸಂಸದಿನ ಮುಂದೆ ಮಂಡಿಸಬೇಕು. ೧೦ ವರ್ಷಗಳ ನಂತರ ಅಧ್ಯಕ್ಷನು ಒಂದು ಆಯೋಗವನ್ನು ನೇಮಿಸಿ ಅದರ ಸಹಾಯದಿಂದ ಅನುಸೂಚಿತ ಜಾತಿ ಮತ್ತು

ಜನಜಾತಿಗಳ ಅಭಿವೃದ್ಧಿಯನ್ನು ಕೂಲಂಕಷವಾಗಿ ತಿಳಿಯಬೇಕು. ಅನುಸೂಚಿತ ಜಾತಿಯ ಹಿತಸಾಧನೆಗಾಗಿ ಭಾರತಸರ್ಕಾರ ಯಾವ ರಾಜ್ಯವನ್ನಾದರೂ ಯಾವ ಕಾಲದಲ್ಲಿಯಾದರೂ ನಿರ್ದೇಶಿಸಬಹುದು. ಅನುಸೂಚಿತ ಜಾತಿಯಂತೆ ಸಾಮಾಜಿಕ ಸ್ಥಿತಿ, ವಿದ್ಯೆ ಮೊದಲಾದುವುಗಳಲ್ಲಿ ಹಿಂದುಳಿದ ಜನರ ಜೀವನಸ್ಥಿತಿಯನ್ನು ಅವರ ಕಷ್ಟನಿಷ್ಠುರಗಳನ್ನು ಪರೀಕ್ಷಿಸಲು ಹಾಗೂ ಸೂಕ್ತ ಶಿಫಾರಸ್ಸು ಮಾಡಿ ವರದಿ ಒಪ್ಪಿಸಲು ಅಧ್ಯಕ್ಷನು ಮತ್ತೊಂದು ಆಯೋಗವನ್ನು ನೇಮಿಸಬಹುದು. ಇದು ಕೊಡುವ ವರದಿಯನ್ನು ಅಧ್ಯಕ್ಷನು ಸಂಸದಿನ ಮುಂದೆ ಮಂಡಿಸತಕ್ಕದ್ದು.

ರಾಷ್ಟ್ರಾಧ್ಯಕ್ಷನು ರಾಜ್ಯಪಾಲರ ಮತ್ತು ರಾಜಪ್ರಮುಖರ ಸಲಹೆಯನ್ನು ಪಡೆದು ಯಾವ ಯಾವ ಜಾತಿ ಅನುಸೂಚಿತಜಾತಿಗೆ, ಜನಜಾತಿಗೆ ಸೇರಬೇಕು ಎಂಬುದನ್ನು ನಿರ್ಧರಿಸಬಹುದು. ಸಂಸದ್ ವಿಧಿಪೂರ್ವಕವಾಗಿ ಯಾರು ಯಾರು ಅನುಸೂಚಿತಜಾತಿಗೆ ಸೇರಿರುತ್ತಾರೆ, ಯಾರನ್ನು ಸೇರಿಸಬಹುದು, ಯಾರನ್ನು ಸೇರಿಸಕೂಡದು ಎಂಬ ಅಂಶಗಳನ್ನು ನಿರ್ಧರಿಸಲು ಅಧಿಕಾರಪಡೆದಿದೆ.

ಸರ್ಕಾರಿಭಾಷಾ—ದೇವನಾಗರಿ ಲಿಪಿಯಲ್ಲಿರುವ ಹಿಂದಿ ಭಾರತಸರ್ಕಾರದ ಭಾಷೆಯಾಗಿರಬೇಕೆಂಬ ವಿಧಿ ರಚಿತವಾಗಿದೆ. ಆದರೆ ೧೫ ವರ್ಷಗಳ ವರೆಗೆ ಇಂಗ್ಲಿಷ್ ಭಾಷೆ ಪ್ರಯೋಗದಲ್ಲಿರುವುದಕ್ಕೂ ರಾಷ್ಟ್ರಾಧ್ಯಕ್ಷನು ಆಜ್ಞೆ ಮಾಡಿದಾಗ ಹಿಂದಿ ಭಾಷೆಯನ್ನು ಉಪಯೋಗಿಸುವುದಕ್ಕೂ ಅವಕಾಶವಿದೆ. ಸಂವಿಧಾನ ಆಚರಣೆಗೆ ಬಂದ ೫ ವರ್ಷಗಳನಂತರ ಇದಾದ ೧೦ ವರ್ಷಗಳ ಮೇಲೆ, ಅಧ್ಯಕ್ಷನು ಒಬ್ಬ ಸಭಾಪತಿ ಮತ್ತು ೮ ನೆಯ ಅನುಸೂಚಿಯಲ್ಲಿ ನಮೂದಿಸಿರುವ ಭಾಷೆಗಳ ಪ್ರತಿನಿಧಿಗಳು ಇವರಿಂದ ಕೂಡಿದ ಒಂದು ಆಯೋಗವನ್ನು ನೇಮಿಸಬೇಕು. ಹಿಂದಿ ಎಷ್ಟರ ಮಟ್ಟಿಗೆ ಮುಂದುವರಿದಿದೆ, ಇಂಗ್ಲಿಷ್ ಭಾಷೆಯ ಪ್ರಯೋಗವನ್ನು ಎಷ್ಟರಮಟ್ಟಿಗೆ ಕಡಿಮೆ ಮಾಡುವುದು ಸಾಧ್ಯ ಹಾಗೂ ಉಚಿತ ಎಂಬ ವಿಚಾರವಾಗಿ ಈ ಆಯೋಗ ಶಿಫಾರಸ್ಸು ಮಾಡಬೇಕು. ಇದಕ್ಕೆ ಪೂರ್ವಭಾವಿಯಾಗಿ ದೇಶದ ಕೈಗಾರಿಕೆ, ಸಂಸ್ಕೃತಿ, ವಿಜ್ಞಾನ ಇವುಗಳ ಬೆಳವಣಿಗೆಯನ್ನು ಲಕ್ಷ್ಯದಲ್ಲಿಟ್ಟು ಚೆನ್ನಾಗಿ ವಿಷಯವನ್ನು ಪರ್ಯಾಲೋಚಿಸಬೇಕು. ಈ ಆಯೋಗ ಒಪ್ಪಿಸುವ ವರದಿಯನ್ನು ಅಧ್ಯಕ್ಷನು ಒಂದು ವಿಶೇಷ ಸಮಿತಿಯ ಮುಂದೆ ಮಂಡಿಸಬೇಕು. ಈ ಸಮಿತಿಗೆ ಲೋಕ ಸಭೆಯಿಂದ ೨೦, ರಾಜ್ಯ ಪರಿಷತ್ತಿನಿಂದ ೧೦ ಸದಸ್ಯರು ಅನುಪಾತಿ ಪ್ರಾತಿನಿಧ್ಯ ಪದ್ಧತಿಗನುಸಾರವಾಗಿ ನಿರ್ವಾಚನೆಯಾಗಬೇಕು. ಈ ೩೦ ಮಂದಿ ಆಯೋಗದ ಶಿಫಾರಸ್ಸುಗಳನ್ನು ಚೆನ್ನಾಗಿ ಪರಿಶೀಲಿಸಿ ತಮ್ಮ ವಿನಿಶ್ಚಯಗಳೊಂದಿಗೆ ವರದಿಯನ್ನು ಅಧ್ಯಕ್ಷನಿಗೆ ಹಿಂದಕ್ಕೆ ಕಳುಹಿಸಬೇಕು.

ಪ್ರಾದೇಶಿಕಭಾಷೆ—ಪ್ರತಿಯೊಂದು ರಾಜ್ಯದ ವಿಧಾನಮಂಡಲ ತನಗೆ ಬೇಕಾದ ಒಂದು ಅಥವ ಅನೇಕ ಭಾಷೆಗಳನ್ನು ಉಪಯೋಗಿಸಬಹುದೆಂದೂ ಅಥವ ಹಿಂದಿಯನ್ನು ಉಪಯೋಗಿಸಬಹುದೆಂದೂ ವಿಧಿಗಳನ್ನು ರಚಿಸಬಹುದು. ಅಲ್ಲಿನವರಿಗೆ ಇಂಗ್ಲಿಷ್ ಭಾಷೆ ಪ್ರಯೋಗದಲ್ಲಿರತಕ್ಕದ್ದು. ಈಗ ಭಾರತಸರ್ಕಾರದೊಡನೆ ಹಾಗೂ ಇತರ ರಾಜ್ಯಗಳೊಡನೆ ಕಾಗದಪತ್ರಗಳನ್ನು ಬರೆಯುವಾಗ ಪ್ರತಿ ಒಂದು ರಾಜ್ಯ ಭಾರತಸರ್ಕಾರ ಈಗ ಉಪಯೋಗಿಸುತ್ತಿರುವ ಭಾಷೆಯನ್ನೇ ಉಪಯೋಗಿಸ ತಕ್ಕದ್ದು. ಪರಸ್ಪರ ಒಪ್ಪಂದದಿಂದ ಎರಡು ಮೂರು ರಾಜ್ಯಗಳು ತಾವು ಕಾಗದ ಪತ್ರಗಳನ್ನು ಬರೆಯುವಾಗ ಹಿಂದೀ ಭಾಷೆಯನ್ನು ಉಪಯೋಗಿಸಲು ಅವಕಾಶವಿದೆ.

ಉಚ್ಚತಮ ಮತ್ತು ಉಚ್ಚನ್ಯಾಯಾಲಯಗಳ ವಿಶಿಷ್ಟ ಕಾರ್ಯಕಲಾಪಗಳು ಭಾರತಸಂಸದ್ ಬೇರೇ ರೀತಿಯಲ್ಲಿ ನಿರ್ಧರಿಸುವವರಿಗೆ ಇಂಗ್ಲಿಷ್ ಭಾಷೆಯಲ್ಲಿಯೇ ನಿರ್ವಹಿಸಲ್ಪಡತಕ್ಕದ್ದು.

ಹಿಂದೀಭಾಷೆಗೆ ಉತ್ತೇಜನ ಕೊಟ್ಟು ಅದನ್ನು ಬೆಳಸುವುದು ಭಾರತಸರ್ಕಾರದ ಗುರಿ. ಭಾರತಸಂಘಟಿತ ಸಂಸ್ಕೃತಿಯಲ್ಲಿ ಅಡಕವಾಗಿರುವ ಮುಖ್ಯ ಅಂಶಗಳನ್ನು ವ್ಯಕ್ತಪಡಿಸುವುದಕ್ಕೂ ಹಾಗೂ ಪ್ರತಿ ಒಬ್ಬ ಪ್ರಜೆ ತನ್ನ ಮನೋಭಾವವನ್ನು ಸ್ಪಷ್ಟವಾಗಿ ತಿಳಿಸುವುದಕ್ಕೂ ಇನ್ನುಮುಂದೆ ಹಿಂದೀಭಾಷೆಯೇ ಮುಖ್ಯಸಾಧನ ವಾಗಬೇಕು. ಹಿಂದೂಸ್ಥಾನಿ ಮೊದಲಾದ ಭಾಷೆಗಳ ಶೈಲಿ, ಮನೋಭಾವವನ್ನು ವ್ಯಕ್ತಪಡಿಸುವ ರೀತಿ, ಸಂಸ್ಕೃತಭಾಷೆಯಲ್ಲಿರುವ ಶಬ್ದಸಂಪತ್ತು ಇವುಗಳ ಸಹಾಯ ದಿಂದ ಹಿಂದೀಭಾಷೆಯನ್ನು ಪುಷ್ಟಿಗೊಳಿಸಬೇಕು. ಪರಂತು ಹಿಂದೀಭಾಷೆಯ ಪ್ರಭಾವವನ್ನಾಗಲೀ ಅದರ ಮಹತ್ವವನ್ನಾಗಲೀ ಯಾವ ರೀತಿಯಿಂದಲೂ ಕಡಿಮೆ ಮಾಡಕೂಡದು ಎಂಬುವುದೇ ಭಾರತಸರ್ಕಾರದ ನೀತಿಯಾಗಿದೆ.

ಆಪತ್ಕಾಲೀನ ಉಪಬಂಧಗಳು—ಇಡೀ ಭಾರತದ ಅಥವ ಅದರ ಒಂದೆರಡು ಭಾಗಗಳ ಭದ್ರತೆಗೆ ಯುದ್ಧದಿಂದ ಅಥವ ಇತರ ರಾಜ್ಯಗಳ ಆಕ್ರಮಣದಿಂದ ಅಥವ ಅಂತಃಕ್ರಾಂತಿಯಿಂದ ಅಪಾಯ ಸಂಭವಿಸಿತೆಂದು ಅಥವ ಸಂಭವಿಸಬಹುದೆಂದು ಅಧ್ಯಕ್ಷ ತಿಳಿದರೆ ಆಗ ಅವನು ಒಂದು ಉದ್ಘೋಷಣವನ್ನು ಹೊರಡಿಸಿ ದೇಶಕ್ಕೆ ಒದಗಬಹುದಾದ ಅಥವ ಒದಗಿರುವ ಆಪತ್ತನ್ನು ಪ್ರಕಟಿಸಬಹುದು. ಇಂಥ ಉದ್ಘೋಷಣೆಯ ಪ್ರತಿಸಂಹರಣವನ್ನು ಅಧ್ಯಕ್ಷ ತನ್ನ ಇನ್ನೊಂದು ಉದ್ಘೋಷಣದ ಮೂಲಕ ತಿಳಿಸಲೂ ಬಹುದು. ಅಧ್ಯಕ್ಷನಿಂದ ಹೊರಡುವ ಉದ್ಘೋಷ ಸಂಸದಿನ ಪ್ರತಿ ಒಂದು ಸಭೆಯ ಮುಂದೆ ಬರತಕ್ಕದ್ದು. ಸಾಮಾನ್ಯವಾಗಿ ಎರಡು ತಿಂಗಳ ನಂತರ ಉದ್ಘೋಷಣೆ ಆಚರಣೆಯಲ್ಲಿರಲು ಅವಕಾಶವಿಲ್ಲ. ಒಂದುವೇಳೆ ಸಂಸದ್ ಒಪ್ಪಿ ಇದನ್ನು ಆಚರಣೆಯಲ್ಲಿಡಲೂ ಅವಕಾಶವಿದೆ.

ಲೋಕಸಭಾವಿಘಟನವಾಗಿದ್ದಾಗ ಅಥವ ರಾಜ್ಯಪರಿಷತ್ ಒಪ್ಪಿ ಲೋಕಸಭೆಯ ಒಪ್ಪಿಗೆ ದೊರೆಯದೆ ಹೊರಬೀಳುವ ಉದ್ಘೋಷಣ ೩೦ ದಿವಸಗಳಿಗಿಂತ ಹೆಚ್ಚಾಗಿ (ಅಂದರೆ ಪುನರ್ರಚಿತವಾದ ಲೋಕಸಭೆಯ ಸತ್ರಪ್ರಾರಂಭವಾದ ೩೦ ದಿವಸಗಳಿಗಿಂತ ಹೆಚ್ಚಾಗಿ) ಆಚರಣೆಯಲ್ಲಿರಕೂಡದು.

ಆಪತ್ಕಾಲೀ ಘೋಷಣ ಆಚರಣೆಯಲ್ಲಿದ್ದಾಗ ತಮ್ಮ ಕಾರ್ಯಪಾಲಿಕಾಶಕ್ತಿಯನ್ನು ರಾಜ್ಯಗಳು ಹೀಗೆಯೇ ವಿನಿಯೋಗಿಸಬೇಕೆಂದು ಕೇಂದ್ರಕಾರ್ಯಪಾಲಿಕಾ ಶಕ್ತಿ ನಿರ್ದೇಶಿಸಬಹುದು; ಸಂಘಸೂಚಿಗೆ ಸೇರದೇ ಇರುವ ಪ್ರಶಾಸನೀಯ ವಿಷಯಗಳ ಮೇಲೂ ಭಾರತ ಸಂಸದ್ ವಿಧಿಗಳನ್ನು ರಚಿಸಬಹುದು ಹಾಗೂ ಭಾರತ ಸರ್ಕಾರ ತನ್ನ ಕ್ಷೇತ್ರಾಧಿಕಾರವನ್ನು ಮತ್ತು ಅದರ ಪದಾಧಿಕಾರಿಗಳ ಶಕ್ತಿಯನ್ನೂ ಹೆಚ್ಚಿಸಬಹುದು; ಭಾರತಸರ್ಕಾರ ಮತ್ತು ರಾಜ್ಯ ಇವುಗಳ ಆಯವಿತರಣಕ್ಕೆ ಸಂಬಂಧಿಸುವ ಉಪಬಂಧಗಳನ್ನು ನಡೆಯುತ್ತಿರುವ ವಿತ್ತೀಯವರ್ಷ ಮುಗಿಯುವವರಿಗೆ ನಿಲಂಬನಗೊಳಿಸಬಹುದು. ಪರಂತು ಈ ಆಜ್ಞೆಗಳನ್ನು ಅಧ್ಯಕ್ಷ ಸಂಸದಿನ ಮುಂದೆ ಮಂಡಿಸುವುದು ಅತ್ಯಾವಶ್ಯಕ.

ರಾಜ್ಯಗಳನ್ನು ಪರರಾಜ್ಯಗಳ ಆಕ್ರಮಣದಿಂದಲೂ ಅಂತಃಕ್ರಾಂತಿಯಿಂದಲೂ ಸಂರಕ್ಷಿಸುವುದು, ರಾಜ್ಯಗಳ ಪ್ರಶಾಸನ ಭಾರತ ಸಂವಿಧಾನದ ಉಪಬಂಧಗಳಿಗನುಸಾರವಾಗಿ ನಡೆಯುವುದಕ್ಕೆ ತಕ್ಕ ಭರವಸೆಕೊಡುವುದು ಇವು ಭಾರತ ಸರ್ಕಾರದ ಕರ್ತವ್ಯ.

ತನ್ನ ರಾಜ್ಯದ ಪ್ರಶಾಸನ ಭಾರತಸಂವಿಧಾನದ ಉಪಬಂಧಗಳಿಗನುಸಾರವಾಗಿ ನಡೆಯುತ್ತಿಲ್ಲವೆಂದೂ ಸ್ಥಿತಿಗತಿಗಳು ಹದಗೆಟ್ಟಿವೆಯೆಂದೂ ರಾಜ್ಯಪಾಲ ಅಥವ ರಾಜಪ್ರಮುಖ ವರ್ತಮಾನ ತಿಳಿಸಿದಕೂಡಲೆ ರಾಷ್ಟ್ರಾಧ್ಯಕ್ಷ ಅಂಥ ರಾಜ್ಯದ ಸ್ಥಿತಿಯನ್ನು ಉದ್ಘೋಷಣೆಯ ಮೂಲಕ ಪ್ರಕಟಪಡಿಸಿ ಅದರ ಪ್ರಶಾಸನವನ್ನು ಸಂಪೂರ್ಣವಾಗಿ ಅಥವ ಸ್ವಲ್ಪವಾಗಿ ವಹಿಸಿಕೊಳ್ಳಬಹುದು; ಆ ರಾಜ್ಯದ ಶ್ರೇಷ್ಠಾಧಿಕಾರಿಯ ಕ್ಷೇತ್ರಾಧಿಕಾರಕ್ಕೆ ಸೇರಿದ ವಿಶೇಷಾಧಿಕಾರವನ್ನು ತಾನೇ ವಹಿಸಿಕೊಳ್ಳಬಹುದು, ಆ ರಾಜ್ಯದ ವಿಧಾನಮಂಡಲ ಭಾರತಸಂಸದಿನ ಅಧಿಕಾರಕ್ಕೆ ಒಳಪಟ್ಟು ಕಾರ್ಯನಿರ್ವಹಿಸಬೇಕೆಂದು ಆಜ್ಞೆಮಾಡಬಹುದು. ಉದ್ಘೋಷಣೆಯ ಉದ್ದೇಶವನ್ನು ಸ್ಪಷ್ಟಪಡಿಸುವ ಸಲುವಾಗಿ ಸೂಕ್ತ ಉಪಬಂಧಗಳನ್ನು ರಚಿಸಬಹುದು ಹಾಗೂ ಸಂವಿಧಾನದ ಯಾವ ವಿಧಿಗಳು ಅಂಥ ರಾಜ್ಯಕ್ಕೆ ತಾತ್ಕಾಲಿಕವಾಗಿ ಅನ್ವಯಿಸುವುದಿಲ್ಲವೆಂಬ ಅಂಶವನ್ನು ಪ್ರಕಟಿಸಬಹುದು. ಆದರೆ ಅಂಥ ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ಸೇರಿದ ಕೆಲಸಗಳನ್ನು ಮಾತ್ರ ಭಾರತಸರ್ಕಾರ ವಹಿಸಕೂಡದು.

ರಾಜ್ಯಗಳಿಗೆ ಅನ್ವಯಿಸುವ ಉದ್ಘೋಷಣೆಯ ಪ್ರತಿಸಂಹರಣವನ್ನು ಅಧ್ಯಕ್ಷನು ತನ್ನ ಇನ್ನೊಂದು ಉದ್ಘೋಷಣದ ಮೂಲಕ ತಿಳಿಯಪಡಿಸಬಹುದು. ಉಳಿದ ವಿಚಾರಗಳಲ್ಲಿ ಅಂದರೆ ಸಂಸದಿನ ಮುಂದೆ ಮಂಡಿಸುವ ವಿಚಾರದಲ್ಲಿ ಇಂಥ ಉದ್ಘೋಷಣೆಗೂ ಭಾರತಸರ್ಕಾರಕ್ಕೆ ಅನ್ವಯಿಸುವ ಉದ್ಘೋಷಣೆಗೂ ಯಾವ ವಿಧವಾದ ವ್ಯತ್ಯಾಸಗಳೂ ಇಲ್ಲ. ಸಂಸದಿನ ಒಪ್ಪಿಗೆ ಪಡೆದ ಉದ್ಘೋಷಣದ ಅವಧಿ ಆರು ತಿಂಗಳು, ಸಂಸದಿನ ಎರಡು ಸಭೆಗಳು ವಿಧಿಪೂರ್ವಕವಾಗಿ ಒಪ್ಪಿ ಇಂಥ ಉದ್ಘೋಷಣೆಯನ್ನು ಒಂದಾವರ್ತಿಗೆ ಆರು ತಿಂಗಳುಗಳು ಮೀರದಂತೆ ಮುಂದು ವರಿಸಲೂಬಹುದು, ಹೇಗೊ ಇಂಥ ಉದ್ಘೋಷಣ ಮೂರು ವರ್ಷಗಳಿಗಿಂತ ಹೆಚ್ಚಾಗಿ ಆಚರಣೆಯಲ್ಲಿರಲು ಅವಕಾಶವಿಲ್ಲ. ಉದ್ಘೋಷಣೆ ಆಚರಣೆಯಲ್ಲಿರುವಾಗ ಅಂಥ ರಾಜ್ಯದ ವಿಧಾನಮಂಡಲದ ಕೆಲಸಕಾರ್ಯಗಳನ್ನು ಸಂಸದ್ ನೆರವೇರಿಸ ಬಹುದು ಅಥವ ಈ ಅಧಿಕಾರವನ್ನು ಅಧ್ಯಕ್ಷನಿಗೆ ವಹಿಸಬಹುದು ಅಥವ ಅಧ್ಯಕ್ಷನಿಂದ ನೇಮಿಸಲ್ಪಡುವ ಪದಾಧಿಕಾರಿಗಳಿಗೆ ವಹಿಸಬಹುದು, ಲೋಕಸಭಾಸತ್ರ ಇಲ್ಲ ದಿರುವಾಗ ಅಧ್ಯಕ್ಷನು ಅಂಥ ರಾಜ್ಯದ ಸಂಚಿತನಿಧಿಯ ಹಣವನ್ನು ಪ್ರಶಾಸನ ಕಾರ್ಯಗಳಿಗಾಗಿ ವಿನಿಯೋಗಿಸಲು ಅಪ್ಪಣೆ ಕೊಡಬಹುದು. ಆದರೆ ಲೋಕಸಭಾ ಸತ್ರ ಪ್ರಾರಂಭವಾದಕೂಡಲೆ ಇಂಥ ವಿತ್ತವಿನಿಯೋಗಕ್ಕೆ ಅದರ ಒಪ್ಪಿಗೆ ಪಡೆಯು ವುದು ಅತ್ಯಗತ್ಯ. ಉದ್ಘೋಷಣ ಆಚರಣೆಯಲ್ಲಿರುವಾಗ ಸಂವಿಧಾನದ ೩ ನೆಯ ಭಾಗ ದಲ್ಲಿ ನಮೂದಾಗಿರುವ ಮೂಲಾಧಿಕಾರಿಗಳನ್ನು ಆಚರಣೆಗೆ ತರಬೇಕೆಂದು ಒತ್ತಾಯ ಪಡಿಸುವ ಪ್ರಜೆಗಳನ್ನು ಅಧ್ಯಕ್ಷ ನಿರೋಧಿಸಬಹುದು ಅಂದರೆ ಇಂಥ ಪರಿಸ್ಥಿತಿಯಲ್ಲಿ ಪ್ರಜೆಗಳ ಮೂಲಾಧಿಕಾರ ಆಚರಣೆಗೆ ಬರಲು ಅವಕಾಶವಿಲ್ಲ.

ಇದರಂತೆ ಯಾವುದಾದರೂ ಒಂದು ರಾಜ್ಯದ ಅಥವ ಭಾರತಸರ್ಕಾರದ ವಿತ್ತದ ಪರಿಸ್ಥಿತಿ ಹದಗೆಟ್ಟಿದೆ ಎಂದು ಅಧ್ಯಕ್ಷ ತಿಳಿದಕೂಡಲೆ ಈ ವಿಚಾರವಾಗಿ ಉದ್ಘೋಷಣೆ ಹೊರಡಿಸಬಹುದು ; ಅಂಥ ರಾಜ್ಯದ ವಿತ್ತಪ್ರಶಾಸನವನ್ನು ಭಾರತ ಸರ್ಕಾರದ ನಿಯಂತ್ರಣಕ್ಕೆ ಒಳಪಡಿಸಬಹುದು. ಇದರ ಪರಿಣಾಮವಾಗಿ ಅಂಥ ರಾಜ್ಯದ ಸರ್ವ ಅಥವ ಹಲವು ಪದಾಧಿಕಾರಿಗಳ ವೇತನ ಭತ್ತಾ ಮೊದಲಾದುವು ಗಳನ್ನು ಅಧ್ಯಕ್ಷ ಕಡಿಮೆಮಾಡಬಹುದು ; ಅಂಥ ರಾಜ್ಯದ ವಿಧಾನಮಂಡಲ ಒಪ್ಪಿಗೆ ಕೊಡುವ ವಿತ್ತ ವಿಧೇಯಕಗಳನ್ನು ಭಾರತ ಸಂಸದಿನ ನಿಯಂತ್ರಣಕ್ಕೆ ಒಳಪಡಿಸ ಬಹುದು ; ಭಾರತಸರ್ಕಾರದ ವಿಶಿಷ್ಟ ಪದಾಧಿಕಾರಿಗಳ ಹಾಗೂ ಉಚ್ಚತಮ ನ್ಯಾಯಾಲಯದ ನ್ಯಾಯಾಧೀಶರ ವೇತನ ಭತ್ತಾ ಮೊದಲಾದುವುಗಳನ್ನು ರಾಷ್ಟ್ರಾಧ್ಯಕ್ಷ ಕಡಿಮೆ ಮಾಡಲೂಬಹುದು.

ವಿವಿಧವಿಷಯ ಉಪಬಂಧಗಳು

ರಾಷ್ಟ್ರಾಧ್ಯಕ್ಷ, ರಾಜ್ಯಪಾಲ, ರಾಜಪ್ರಮುಖ ಇವರ ರಕ್ಷಣೆ— ರಾಷ್ಟ್ರಾಧ್ಯಕ್ಷ, ರಾಜ್ಯಪಾಲ, ರಾಜಪ್ರಮುಖ ಇವರು ತಮ್ಮ ಕ್ಷೇತ್ರಾಧಿಕಾರಕ್ಕೆ ಸೇರಿದ ಕೆಲಸಕಾರ್ಯಗಳ ನಿರ್ವಹಣೆಯ ವಿಚಾರದಲ್ಲಿ ಯಾವ ನ್ಯಾಯಾಲಯಕ್ಕೂ ಜವಾಬ್ದಾರರಾಗಬೇಕಾದುದಿಲ್ಲ. ಆದರೆ ರಾಷ್ಟ್ರಾಧ್ಯಕ್ಷನ ವರ್ತನೆಯನ್ನು ಯಾವ ನ್ಯಾಯಾಲಯವಾಗಲಿ ಅಥವ ಸಂಸದಿನ ಪ್ರತಿಯೊಂದು ಸಭೆ ನಿರ್ಧರಿಸುವ ನ್ಯಾಯಾಧಿಕರಣವಾಗಲಿ ಪುನರ್ವಿಲೋಕನಮಾಡಿ ಅವನಮೇಲೆ ಆರೋಪಿಸಿರುವ ದೋಷಗಳನ್ನು ಅನುಸಂಧಾನಮಾಡಲವಕಾಶವಿದೆ. ಇದೂ ಅಲ್ಲದೆ ಭಾರತಸರ್ಕಾರದ ಮೇಲೆ ಅಥವ ರಾಜ್ಯದಮೇಲೆ ವಿಧಿಪೂರ್ವಕವಾಗಿ ವ್ಯವಹಾರ ಹೂಡಲು ಪ್ರತಿ ಒಬ್ಬ ಪ್ರಜೆಗೆ ಅಧಿಕಾರವಿದೆ. ದಂಡಸಂಬಂಧವಾದ ವ್ಯವಹಾರವನ್ನು ಯಾರೂ ರಾಷ್ಟ್ರಾಧ್ಯಕ್ಷ ಅಥವ ರಾಜ್ಯಪಾಲ ಅಥವ ರಾಜಪ್ರಮುಖ ಇವರಮೇಲೆ ಇವರು ಆ ಪದಾಧಿಕಾರದಲ್ಲಿರುವಾಗ ತರಕೂಡದು ; ಇವರನ್ನು ದಸ್ತಗಿರಿಮಾಡುವ ಆಜ್ಞೆಯನ್ನು ಯಾವ ನ್ಯಾಯಾಲಯವೂ ಹೊರಡಿಸಕೂಡದು. ಇವರು ಪದಾಧಿಕಾರಕ್ಕೆ ಬರುವುದಕ್ಕೆ ಮುಂಚೆ ನಡೆದ ಅಥವ ಇವರು ಪದಾಧಿಕಾರಕ್ಕೆ ಬಂದಮೇಲೆ ನಡೆದ ವಿಷಯಗಳಾದರೂ ಇವರು ಆ ಪದಾಧಿಕಾರದಲ್ಲಿರುವಾಗ ಇವರಮೇಲೆ ವ್ಯವಹಾರ ಹೂಡಲು ಯಾರಿಗೂ ಅಧಿಕಾರವಿಲ್ಲ. ಪರಂತು ಇವರು ಪದಾಧಿಕಾರದಿಂದ ನಿವೃತ್ತರಾದ ೨ ತಿಂಗಳುಗಳ ಮೇಲೆ ವಿಧಿಪೂರ್ವಕವಾಗಿ ವ್ಯಾವಹಾರಿಕ ವಿಷಯಗಳನ್ನು ಸೂಚನಾಪತ್ರದ ಮೂಲಕ ತಿಳಿಸಿ ಇವರ ಮೇಲೆ ವ್ಯವಹಾರ ಹೂಡಲು ಯಾವ ಪ್ರಜೆಗಾದರೂ ಅಧಿಕಾರವಿದೆ. ಭಾರತ ಸಂಸದ್ ಅಥವ ರಾಜ್ಯಗಳ ವಿಧಾನಮಂಡಲ ವಿಧಿಗಳನ್ನು ರಚಿಸುವಾಗಲೂ ಭಾರತದ ಅಥವ ರಾಜ್ಯದ ಕಾರ್ಯಪಾಲಕ ತನ್ನ ಕೆಲಸಕಾರ್ಯಗಳನ್ನು ನಿರ್ವಹಿಸುವಾಗಲೂ ರಾಜಪ್ರಮುಖರ ವೈಯಕ್ತಿಕ ಅಧಿಕಾರ, ವಿಶೇಷಾಧಿಕಾರ, ಗೌರವ ಇವುಗಳಿಗೆ ಧಕ್ಕೆ ತಗಲದಂತೆ ನೋಡಿಕೊಳ್ಳಬೇಕು. ಭಾರತ ಸಂವಿಧಾನ ಆಚರಣೆಗೆ ಬರುವುದಕ್ಕೆ ಮುಂಚೆ ಸಂಸ್ಥಾನಗಳ ರಾಜರಿಗೂ ಆಗಿನ ಸರ್ಕಾರಕ್ಕೂ ನಡೆದ ಹಾಗೂ ಈಗಲೂ ಆಚರಣೆಯಲ್ಲಿರುವ ಕರಾರು, ವಚನಬಂಧ, ಸನ್ನದ್, ಮೊದಲಾದ ಲಿಖಿತಗಳ (ಉಪಬಂಧಗಳ) ಸಂಬಂಧವಾಗಿ ಬರಬಹುದಾದ ವ್ಯವಹಾರಗಳನ್ನು ವಿಚಾರಣೆಗೆ ಗುರಿಮಾಡಿ ನಿರ್ಣಯ ಕೊಡಲು ಯಾವ ನ್ಯಾಯಾಲಯಕ್ಕೂ ಅಧಿಕಾರವಿಲ್ಲ.

ದೊಡ್ಡ ಬಂದರು, ವಿಮಾನನಿಲ್ದಾಣ ಇವುಗಳಿಗೆ ಸಂವಿಧಾನದ ಸಾಮಾನ್ಯ ವಿಧಿಗಳು ಅನ್ವಯಿಸುವುದಿಲ್ಲ ; ಇವುಗಳಿಗಾಗಿ ಭಾರತ ಸರ್ಕಾರ ವಿಶೇಷ ಉಪಬಂಧ

ಗಳನ್ನು ರಚಿಸಿ ಆಚರಣೆಗೆ ತರುವುದು ಅತ್ಯಗತ್ಯ. ಭಾರತ ಕಾರ್ಯಪಾಲಿಕದಿಂದ ಹೊರಡುವ ನಿರ್ದೇಶ, ಆಜ್ಞೆ ಇವುಗಳನ್ನು ಉಲ್ಲಂಘಿಸಿ ವರ್ತಿಸುವ ರಾಜ್ಯಗಳ ಪ್ರಶಾಸನ ಭಾರತಸಂವಿಧಾನದ ಉಪಬಂಧಗಳಿಗೆ ವಿರುದ್ಧವಾಗಿದೆ ಎಂದು ಅಧ್ಯಕ್ಷನು ತಿಳಿಯುವುದು ಹಾಗೂ ಮುಂದಿನ ಕ್ರಮ ಜರಿಗಿಸುವುದು ವಿಧಿಪೂರ್ವಕವೆಂದೇ ಪರಿಗಣಿಸಬೇಕು.

ಭಾರತಸಂವಿಧಾನದ ಸಂಶೋಧನ—ಭಾರತಸಂವಿಧಾನದ ಸಂಶೋಧನೆಗೆ ಸಂಬಂಧಪಟ್ಟ ಸಾಮಾನ್ಯ ವಿಧೇಯಕಗಳ ಉಪಕ್ರಮಣವನ್ನು ಸಂಸದಿನ ಯಾವ ಸಭೆಯಲ್ಲಿಯಾದರೂ ಪುರಸ್ಥಾಪನಮಾಡಬಹುದು. ಇಂಥ ವಿಧೇಯಕವನ್ನು ಸಂಸದಿನ ಪ್ರತಿಯೊಂದು ಸಭೆ ಬಹುಮತದಿಂದ (ಅಂದರೆ ಹಾಜರಿದ್ದು ಮತದಾನಮಾಡಿದ ಸದಸ್ಯರಲ್ಲಿ ⅔ ಭಾಗಕ್ಕೆ ಕಡಿಮೆ ಇಲ್ಲದಂತೆ) ಒಪ್ಪಿ ರಾಷ್ಟ್ರಾಧ್ಯಕ್ಷನ ಒಪ್ಪಿಗೆಗಾಗಿ ಕಳುಹಿಸಬೇಕು. ಇವನ ಒಪ್ಪಿಗೆ ದೊರೆತಮೇಲೆ ಆ ವಿಧೇಯಕಗಳು ವಿಧಿಗಳಾಗುವುವು. ಸಂವಿಧಾನ ಇವುಗಳಿಗನುಗುಣವಾಗಿ ಬದಲಾಯಿಸಲ್ಪಡುವುದು. ಅಲ್ಲದೆ ರಾಷ್ಟ್ರಾಧ್ಯಕ್ಷನ ನಿರ್ವಾಚನದ ವಿಧಾನ, ಭಾರತ ಸಂಘದ ಕಾರ್ಯಪಾಲಿಕದ ಕ್ಷೇತ್ರಾಧಿಕಾರ ಹಾಗೂ ರಾಜ್ಯಗಳ ಕಾರ್ಯಪಾಲಿಕದ ಕ್ಷೇತ್ರಾಧಿಕಾರ ಇವುಗಳನ್ನು ಹೆಚ್ಚಿಸುವುದು, ೧ ನೆಯ ಅನುಸೂಚಿಯ ಸಿ ಭಾಗದ ರಾಜ್ಯಗಳ ಉಚ್ಚನ್ಯಾಯಾಲಯ, ಭಾರತಸಂಘದ ನ್ಯಾಯಾಲಯ, ರಾಜ್ಯಗಳ ನ್ಯಾಯಾಲಯ, ಭಾರತಸರ್ಕಾರ ಮತ್ತು ರಾಜ್ಯಗಳು ಇವುಗಳ ವಿಧಾಯಿನೀವಿತರಣ, ೭ ನೆಯ ಅನುಸೂಚಿಯಲ್ಲಿರುವ ಮೂರು ಸೂಚಿಗಳು, ಭಾರತಸಂಸದಲ್ಲಿ ರಾಜ್ಯಗಳಿಗಿರುವ ಪ್ರಾತಿನಿಧ್ಯ, ಸಂವಿಧಾನ ಸಂಶೋಧನೆಗೆ ಸಂಬಂಧಪಡುವ ಅನುಚ್ಛೇದದ ಉಪಬಂಧಗಳು ಇವುಗಳ ಸಂಶೋಧನ ಆಗಬೇಕಾದರೆ ಸಂಸದಿನ ಬಹುಮತ ಮತ್ತು ರಾಷ್ಟ್ರಾಧ್ಯಕ್ಷನ ಒಪ್ಪಿಗೆಯ ಜೊತೆಗೆ ೧ ನೆಯ ಅನುಸೂಚಿ ಎ ಮತ್ತು ಬಿ ಭಾಗದಲ್ಲಿರುವ ರಾಜ್ಯಗಳ ಪೈಕಿ ಅರ್ಧ ಸಂಖ್ಯೆಯ ರಾಜ್ಯಗಳ ವಿಧಾನಮಂಡಲಗಳ ಒಪ್ಪಿಗೆಯೂ ಅತ್ಯಗತ್ಯ. ರಾಜ್ಯಗಳ ವಿಧಾನ ಮಂಡಲಗಳು ಈ ರೀತಿ ತಮ್ಮ ಒಪ್ಪಿಗೆ ಕೊಟ್ಟನಂತರ ಸಂಶೋಧನೆಗೆ ಸಂಬಂಧಪಟ್ಟ ವಿಧೇಯಕಗಳನ್ನು ಸಂಸದ್ ಒಪ್ಪಿಗೆಗಾಗಿ ರಾಷ್ಟ್ರಾಧ್ಯಕ್ಷನಿಗೆ ಕಳುಹಿಸಬೇಕು. ಇವನು ಒಪ್ಪಿದನಂತರ ಅವು ವಿಧಿಗಳಾಗುವುವು.

[ಒಂದನೆಯ ಅನುಸೂಚಿ ಎ ಭಾಗ ನಮೂದಿಸಿರುವ ರಾಜ್ಯಗಳು ಯಾವುವೆಂದರೆ:— ಅಸ್ಸಾಂ, ಬೀಹಾರ್, ಬೊಂಬಾಯಿ, ಮಧ್ಯಪ್ರದೇಶ, ಮದರಾಸ್, ಒರಿಸ್ಸ, ಪಂಜಾಬ್, ಉತ್ತರಪ್ರದೇಶ, ಪಶ್ಚಿಮಬಂಗಾಳ; ಬಿ ಭಾಗ ನಮೂದಿಸಿರುವ ರಾಜ್ಯಗಳು ಯಾವುವೆಂದರೆ:— ಹೈದರಾಬಾದ್, ಜಮ್ಮು ಮತ್ತು ಕಾಶ್ಮೀರ, ಮಧ್ಯಭಾರತ, ಮೈಸೂರು, ಪಾಟಿಯಾಲ

ಮತ್ತು ಪೂರ್ವಪಂಜಾಬ್ ರಾಷ್ಟ್ರಗಳ ಒಕ್ಕೂಟ, ರಾಜಾಸ್ಥಾನ್, ಸೌರಾಷ್ಟ್ರ, ತಿರುವಾಂಕೂರ್-ಕೊಚಿನ್ ; ಸಿ ಭಾಗ ನಮೂದಿಸಿರುವ ರಾಜ್ಯಗಳು ಯಾವುವೆಂದರೆ:—ಅಜ್ಮೀರ್, ಭೂಪಾಲ್, ಬಿಲಾಸ್‌ಪುರ್, ಕುಚ್-ಬಿಹಾರ್, ಕೊಡಗು, ದೆಹಲಿ, ಹಿಮಾಚಲ ಪ್ರದೇಶ, ವಿಂಧ್ಯಪ್ರದೇಶ, ಕಚ್, ಮಣಿಪುರ, ತ್ರಿಪುರ ; ಡಿ ಭಾಗಕ್ಕೆ—ಅಂದಮಾನ್, ನಿಕೊಬಾರ್ ದ್ವೀಪಗಳು ಸೇರಿವೆ.

ರಾಜ್ಯಪರಿಷತ್ತಿನಲ್ಲಿರುವ ರಾಜ್ಯಗಳ ಪ್ರತಿನಿಧಿಗಳ ಸಂಖ್ಯೆ—ಅಸ್ಸಾಂ ೬, ಬಿಹಾರ್ ೨೧, ಬೊಂಬಾಯಿ ೧೭, ಮಧ್ಯಪ್ರದೇಶ ೧೨, ಮದರಾಸ್ ೨೭, ಒರಿಸ್ಸ ೯, ಪಂಜಾಬ್ ೮, ಉತ್ತರಪ್ರದೇಶ ೩೧, ಪಶ್ಚಿಮ ಬಂಗಾಳ ೧೪ (ಒಟ್ಟು ೧೪೫); ಹೈದರಾಬಾದ್ ೧೧, ರಾಜಾಸ್ಥಾನ ೯, ಮಧ್ಯಭಾರತ, ಮೈಸೂರು, ತಿರುವಾಂಕೂರು-ಕೊಚಿನ್ ಇವುಗಳಲ್ಲಿ ಪ್ರತಿ ಒಂದಕ್ಕೆ ೬, ಸೌರಾಷ್ಟ್ರ, ಕಾಶ್ಮೀರ ಮತ್ತು ವಿಂಧ್ಯಪ್ರದೇಶ ಪ್ರತಿ ಒಂದಕ್ಕೆ ೪, ಪಾಟಿಯಾಲ ೩ (ಒಟ್ಟು ೫೩); ಅಜ್ಮೀರ ಮತ್ತು ಕೊಡಗು ೧, ಭೂಪಾಲ್ ೧, ಬಿಲಾಸ್‌ಪುರ ಮತ್ತು ಹಿಮಾಚಲಪ್ರದೇಶ ೧, ಕುಚ್‌ಬಿಹಾರ್ ೧, ದೆಹಲಿ ೧, ಕಚ್ ೧, ಮಣಿಪುರ ಮತ್ತು ತ್ರಿಪುರ ೧ (ಒಟ್ಟು ೭).]

ಎಚ್. ಕೃಷ್ಣರಾವ್

ಶಬ್ದಕೋಶ

Act (N)	ಅಧಿನಿಯಮ	
Ad hoc	ತದರ್ಥ	ಒಂದು ಉದ್ದೇಶಕ್ಕಾಗಿ ಗೊತ್ತು ಮಾಡಿದ
Adjourn	ಸ್ಥಗನ, ಕಾಲದಾನ	ಮುಂದುವರಿಸುವುದು
Administer	ಪ್ರಶಾಸನ	
Administered	ಪ್ರಶಾಸಿತ	
Administration	ಪ್ರಶಾಸನ	ಆಡಳಿತ
Administrative	ಪ್ರಶಾಸನೀಯ	
Adult suffrage	ವಯಸ್ಕ ಮತಾಧಿಕಾರ	
Advocate-General	ಮಹಾಧಿವಕ್ತಾ	
Amendment	ಸಂಶೋಧನ	ತಿದ್ದುಪಡಿ
Annual Financial Statement	ವಾರ್ಷಿಕವಿತ್ತ ವಿವರಣ	
Application	ಆವೇದನ ಪತ್ರ	ಅರ್ಜಿ ಸಲ್ಲಿಸುವುದು
Appropriation	ವಿನಿಯೋಗ	
Armed forces	ಸಶಸ್ತ್ರಬಲ	
Assembly	ಸಭಾ	
Assessment	ನಿರ್ಧಾರಣ	
Attorney-General	ಮಹಾನ್ಯಾಯವಾದಿ	
Audit	ಲೇಖಾ ಪರೀಕ್ಷಾ	
Auditor-General	ಮಹಾಲೇಖಾ ಪರೀಕ್ಷಕ	
Ballot	ಶಲಾಕಾ	ಗುಪ್ತವಾಗಿ ಅಭಿಮತಕೊಡುವ ಚೀಟಿ . . .
Bill	ವಿಧೇಯಕ	ಮಸೂದೆ
Bicameral	ದೊಘರಾ, ದ್ವಿಗೃಹೀ	ದ್ವಿಸಭಾ
Body	ನಿಕಾಯ	ಸಂಸ್ಥೆ, ಸಮುದಾಯ
—corporate	ನಿಗಮನಿಕಾಯ	
—Governing	ಶಾಸೀ ನಿಕಾಯ	
Borrowng	ಉಧಾರಗ್ರಹಣ	ಸಾಲ
Candidate	ಅಭ್ಯರ್ಥಿ	ಉಮೇದುವಾರ
Casting vote	ನಿರ್ಣಾಯಕಮತ	

Certificate	ಪ್ರಮಾಣಪತ್ರ	
Certiorari	ಉತ್ಪ್ರೇಷಣ ಲೇಖ	ಕಟ್ಟನಕರೆ (ಕೆಳಕೋರ್ಟಿನಲ್ಲಿ ವಿಚಾರಣೆಯಾದ ಮೊಕದ್ದಮೆಯ ಕಟ್ಟನ್ನು ಕಳುಹಿಸಬೇಕೆಂದು ಮೇಲುಕೋರ್ಟು ಕೊಡುವ ಆಜ್ಞಾಪತ್ರ)
Chairman	ಸಭಾಪತಿ	
Chief Commissioner	ಮುಖ್ಯ ಆಯುಕ್ತ	
Chief-Election-Commissioner	ಮುಖ್ಯ ನಿರ್ವಾಚನ ಆಯುಕ್ತ	
Chief Judge	ಮುಖ್ಯ ನ್ಯಾಯಾಧೀಶ	
Chief Justice	ಮುಖ್ಯ ನ್ಯಾಯಾಧಿಪತಿ	
Chief Minister	ಮುಖ್ಯಮಂತ್ರಿ	
Citizenship	ನಾಗರಿಕತಾ	ಪೌರತ್ವ
Civil Court	ವ್ಯವಹಾರ ನ್ಯಾಯಾಲಯ	
Commute	ಲಘೂಕರಣ	
Comptroller and Auditor General	ನಿಯಂತ್ರಕ ಮಹಾಲೇಖಾ ಪರೀಕ್ಷಕ	
Consolidated Fund	ಸಂಚಿತನಿಧಿ	
Constituency	ನಿರ್ವಾಚನಕ್ಷೇತ್ರ	ಚುನಾವಣೆಕ್ಷೇತ್ರ
Constituent Assembly	ಸಂವಿಧಾನಸಭಾ	ರಾಜ್ಯಾಂಗರಚನಾಸಭೆ
Constitution	ಸಂವಿಧಾನ	ರಾಜ್ಯಾಂಗ, ರಾಜ್ಯನಿಬಂಧನೆ
Contingency Fund	ಆಕಸ್ಮಿಕತಾನಿಧಿ	
Control	ನಿಯಂತ್ರಣ	ಹತೋಟಿ
Council	ಪರಿಷದ್	
Court of Appeal	ಪುನರ್ವಿಚಾರ ನ್ಯಾಯಾಲಯ	
Court, Civil	ವ್ಯವಹಾರ ನ್ಯಾಯಾಲಯ	
Court, District	ಜಿಲ್ಲಾ ನ್ಯಾಯಾಲಯ	
Court, High	ಉಚ್ಚ ನ್ಯಾಯಾಲಯ	
Court, Magistrate	ದಂಡಾಧಿಕಾರಿ ನ್ಯಾಯಾಲಯ	
Court, Martial	ಸೇನಾ ನ್ಯಾಯಾಲಯ	
Court, Revenue	ರಾಜಸ್ವ ನ್ಯಾಯಾಲಯ	
Court, Sesson	ಸತ್ರ ನ್ಯಾಯಾಲಯ	

Court, Supreme	ಉಚ್ಚತಮ ನ್ಯಾಯಾಲಯ	
Crime	ಅಪರಾಧ	
Criminal Law	ದಂಡವಿಧಿ	
Decision	ವಿನಿಶ್ಚಯ	ತೀರ್ಪು
Declaration	ಘೋಷಣ	
Decree	ಆಜ್ಞಪ್ತಿ	
Deputy Chairman	ಉಪಸಭಾಪತಿ	
Deputy Commissioner	ಉಪಾಯುಕ್ತ	
Deputy Speaker	ಉಪಾಧ್ಯಕ್ಷ	
Diplomacy	ರಾಜನಯ	ರಾಯಭಾರನಿರ್ವಹಣಕೌಶಲ
Discipline	ಅನುಶಾಸನ	ಶಿಸ್ತು
Distribution	ವಿತರಣ	ಹಂಚುವಿಕೆ
District Board	ಜಿಲ್ಲಾಮಂಡಲಿ	
During good behaviour	ಸದಾಚಾರಪರ್ಯಂತ	
During the pleasure of the President	ರಾಷ್ಟ್ರಪತಿ ಪ್ರಸಾದಪರ್ಯಂತ	
Duty	ಶುಲ್ಕ	
Elect	ನಿರ್ವಾಚನ	ಚುನಾಯಿಸು
Election-Commissioner	ನಿರ್ವಾಚನ ಆಯುಕ್ತ	ಚುನಾವಣೆ ಮುಖ್ಯಾಧಿಕಾರಿ
—General	ಸಾಧಾರಣ ನಿರ್ವಾಚನ	
—Tribunal	ನಿರ್ವಾಚನ ಅಧಿಕರಣ	
Electoral Roll	ನಿರ್ವಾಚನ ನಾಮಾವಳಿ	ಚುನಾವಣೆಯ (ಮತದಾರರ) ಪಟ್ಟಿ
Emergency	ಆಪಾತ	ಆಪತ್ಕಾಲದ
Executive	ಕಾರ್ಯಪಾಲಿಕಾ	ಕಾರ್ಯಾಂಗ
—Power	ಕಾರ್ಯಪಾಲಿಕಾಶಕ್ತಿ	
Finance	ವಿತ್ತ	ಹಣಕಾಸಿನ
—Bill	ವಿತ್ತ ವಿಧೇಯಕ	ಹಣಕಾಸಿನ ಮಸೂದೆ
—Commissioner	ವಿತ್ತಾಯೋಗ	
Function	ಕೃತ್ಯ	
Fund-sinking	ನಿಕ್ಷೇಪನಿಧಿ	
Governor	ರಾಜ್ಯಪಾಲ	
Grant-in-aid	ಸಹಾಯಕ ಅನುದಾನ	

Habeus Corpus	ಬಂದೀಪ್ರತ್ಯಕ್ಷೀಕರಣ	ಬಂಧನದಲ್ಲಿಟ್ಟಿರುವವನನ್ನು ವಿಚಾರಣೆಗಾಗಿ ನ್ಯಾಯಾಧಿಪತಿಯ ಮುಂದೆ ಹಾಜರ್ಮಾಡಬೇಕೆಂದು ಕೊಡುವ ಆಜ್ಞೆ
House of People	ಲೋಕಸಭಾ	
Impactment	ಮಹಾಭಿಯೋಗ	ರಾಜದ್ರೋಹ ಮೊದಲಾದ ಅಪರಾಧಗಳಿಗೆ ಗುರಿಯಾಗಿರುವವರನ್ನು ವಿಚಾರಣೆಗೆ ಗುರಿಮಾಡುವ ಕ್ರಮ
Investigation	ಅನುಸಂಧಾನ	
Judgment	ನಿರ್ಣಯ	
Judicial Power	ನ್ಯಾಯಿಕ ಶಕ್ತಿ	
Judiciary	ನ್ಯಾಯಪಾಲಿಕಾ	
Jurisdiction	ಕ್ಷೇತ್ರಾಧಿಕಾರ	ಅಧಿಕಾರವ್ಯಾಪ್ತಿ
Law	ವಿಧಿ	ಕಾನೂನು
Legislative Power	ವಿಧಾಯಿನೀ ಶಕ್ತಿ	ಕಾನೂನು ರಚಿಸುವ ಶಕ್ತಿ (ಅಧಿಕಾರ)
—Assembly	ವಿಧಾನ ಸಭಾ	
—Council	ವಿಧಾನ ಪರಿಷತ್	
Legislature	ವಿಧಾನಮಂಡಲ	
Lieutenant-Governor	ಉಪರಾಜ್ಯಪಾಲ	
List	ಸೂಚೀ	ಪಟ್ಟಿ
—Concurrent	ಸಮವರ್ತಿ ಸೂಚೀ	ಸಮಾನಅಧಿಕಾರವಿರುವ(ಕೇಂದ್ರಸರ್ಕಾರಕ್ಕೂ, ರಾಜ್ಯಗಳಿಗೂ)
State	ರಾಜ್ಯ ಸೂಚೀ	ರಾಜ್ಯಗಳ ಪಟ್ಟಿ
—Union	ಸಂಘ ಸೂಚೀ	ಕೇಂದ್ರಸರ್ಕಾರದ ಪಟ್ಟಿ
Local Authorities	ಸ್ಥಾನೀಯ ಪ್ರಾಧಿಕಾರಿ	
—Government	ಸ್ಥಾನೀಯ ಶಾಸನ	
—Self-Government	ಸ್ಥಾನೀಯ ಸ್ವಶಾಸನ	
Mandamus	ಪರಮಾದೇಶ	ಮೇಲಿನಕೋರ್ಟಿನಿಂದ (ಅಧಿಕಾರಿಗಳಿಂದ) ಕೆಳಕೋರ್ಟಿಗೆ (ಅಧಿಕಾರಿಗಳಿಗೆ) ಸಾರ್ವಜನಿಕ ಕರ್ತವ್ಯವನ್ನು ನೆರವೇರಿಸುವ ಬಗ್ಗೆ ಕಳುಹಿಸುವ ಆಜ್ಞಾಪತ್ರ

Message	ಸಂದೇಶ	
Misbehaviour	ಕದಾಚಾರ	
Money-bill	ವಿತ್ತವಿಧೇಯಕ	ಹಣಕಾಸಿನ ಮಸೂದೆ
Motion of Confidence	ವಿಶ್ವಾಸ ಪ್ರಸ್ತಾವ	ವಿಶ್ವಾಸ ನಿರ್ಣಯ
Nominate	ನಾಮನಿರ್ದೇಶನ	ನಾಮಕರಣಮಾಡು
Notice	ಸೂಚನಾ, ಸೂಚನಾಪತ್ರ	
Office	ಪದ	ಹುದ್ದೆ
Officer	ಪದಾಧಿಕಾರಿ	ಅಧಿಕಾರಿ
Ordinance	ಅಧ್ಯಾದೇಶ	ಅಧಿಕಾರಿಯುತ ಆದೇಶ, ಆಜ್ಞೆ
Parliament	ಸಂಸದ್	
President	ರಾಷ್ಟ್ರಪತಿ	
Proclamation	ಉದ್‌ಘೋಷಣ	
Proclamation of Emergency	ಆಪತ್ಕೀ ಉದ್‌ಘೋಷಣ	ಆಪತ್ಕಾಲದಲ್ಲಿ ಹೊರಡಿಸುವ ಉದ್ಘೋಷಣೆ
Writ of Prohibition	ಪ್ರತಿಷೇಧ ಲೇಖ	ನಿಷೇಧಾಜ್ಞೆ
Proportional Representation	ಅನುಪಾತೀಪ್ರತಿನಿಧಿತ್ವ	ಪ್ರಮಾಣಾನುಗುಣಪ್ರಾತಿನಿಧ್ಯ
Prorogue	ಸತ್ರಾವಸಾನ	ಮುಂದುವರಿಸು
Provision	ಉಪಬಂಧ	
Public Service Commission	ಲೋಕಸೇವಾಯೋಗ	
Quorum	ಗಣಪೂರ್ತಿ	ಒಂದು ಸಭೆಯ ಕಾರ್ಯಕಲಾಪಗಳು ಕ್ರಮಬದ್ಧವೆಂದು ಅಂಗೀಕಾರಪಡೆಯಲು ಅಗತ್ಯವಾಗಿ ಇರಲೇಬೇಕಾದ ಸದಸ್ಯರ ನಿರ್ದಿಷ್ಟ ಸಂಖ್ಯೆ
Quo warrants	ಅಧಿಕಾರಪೃಚ್ಛ	
Regulation	ವಿನಿಯಮ	
Remedy	ಉಪಚಾರ	ಪರಿಹಾರ
Remession	ಪರಿಹಾರ	ಕ್ಷಮಿಸುವುದು (ಅಪರಾಧವನ್ನು)
Repeal	ನಿರಸನ	
Reprieve	ಪ್ರವಿಲಂಬನ	ಮರಣದಂಡನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸುವುದು

Ruler	ಶಾಸಕ	
Schedule	ಅನುಸೂಚಿ	
Scheduled caste	ಅನುಸೂಚಿತ ಜಾತಿ	
Sheduled-Tribes	ಅನುಸೂಚಿತ ಜನಜಾತಿ	
Service	ಸೇವಾ	
Single transferable vote	ಏಕಲ ಸಂಕ್ರಮಣೀಯ ಮತ	
Sinking fund	ನಿಕ್ಷೇಪ ನಿಧಿ	
Sovereign Democratic Republic	ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯ	
Speaker	ಅಧ್ಯಕ್ಷ	
Superintendent	ಅಧೀಕ್ಷಕ	ಮೇಲ್ವಿಚಾರಣಾಧಿಕಾರಿ
Superintendence	ಅಧೀಕ್ಷಣ	ಮೇಲ್ವಿಚಾರಣೆ
Supplementary	ಅನುಪೂರಕ	
Supreme Court	ಉಚ್ಚತಮ ನ್ಯಾಯಾಲಯ	
Suspension	ನಿಲಂಬನ	ರದ್ದುಗೊಳಿಸುವುದು
Tax	ಕರ	ತೆರಿಗೆ
Tenure	ಪದಾವಧಿ	ಅಧಿಕಾರಾವಧಿ
Traffic in human beings	ಮಾನವ ಪಣನೆ	ಮಾನವ ವ್ಯಕ್ತಿಗಳನ್ನು ಮಾರುವುದು
Union	ಸಂಘ	
Vacancy	ರಿಕ್ತ	ಖಾಲಿಬಿದ್ದಿರುವ, ವಿರಾಮದ
Vice-President	ಉಪರಾಷ್ಟ್ರಪತಿ	
Vote-casting	ನಿರ್ಣಾಯಕಮತ	
Warrant	ಅಧಿಪತ್ರ	ಅಧಿಕಾರಪತ್ರ
Writ	ಲೇಖ	ಆಜ್ಞಾಪತ್ರ

ಕಾವ್ಯಾವಲೋಕನ

ಮಲ್ಲಸರ್ಜಕಾವ್ಯ (ಕಿತ್ತೂರ ಚೆನ್ನಮ್ಮರಾಣಿ ಇತಿಹಾಸ ಮಂಡಲ ಪ್ರಕಟನೆ ೨)—
ಸಂಪಾದಕರು : ತಲ್ಲೂರ ರಾಯನಗೌಡರು ಪಾಟೀಲ, ಬಿ.ಏ. ; ಶ್ರೀ ವಿ. ಬಿ. ಹಾಲಭಾವಿ, ಬಿ.ಏ., ಎಲ್‌ಎಲ್.ಬಿ. ಅವರ ಮುನ್ನುಡಿಯೊಂದಿಗೆ ; ಬೈಲಹೊಂಗಲ ಬೆಲೆ, ೧-೫-೦. ೧೯೪೮.

ಬೈಲುಹೊಂಗಲದ ಕಿತ್ತೂರ ಚೆನ್ನಮ್ಮರಾಣಿ ಇತಿಹಾಸಮಂಡಲವು ಕರ್ಣಾಟಕದ ವೀರರಮಣಿಯಾದ ಕಿತ್ತೂರ ಚೆನ್ನಮ್ಮನ ಸ್ಮಾರಕವಾಗಿ "ಕಿತ್ತೂರ ಬಂಡಾಯು" ಎಂಬ ಗ್ರಂಥದಲ್ಲಿ ರುದ್ರಕವಿಯ ಮೂರು ಕಾವ್ಯಗಳನ್ನೂ, ಅಮೃತೇಶ ಮತ್ತು ಕಾಶಿರಾಜಕವಿಗಳ ಒಂದೊಂದು ಕವನವನ್ನೂ ಇದಕ್ಕೆ ಮುಂಚೆಯೇ ಪ್ರಕಟಿಸಿರುವರು. ಮಲ್ಲಸರ್ಜಕಾವ್ಯ ಎರಡನೆಯ ಪ್ರಕಟಣೆ. ಈಚೆಗೆ ಪಾರ್ಸಿ ಸನ್ನದುಗಳನ್ನೂ ಪ್ರಕಟಿಸಿರುವರು. ಕಿತ್ತೂರ ರಾಜ್ಯಾದಾಯ, ಬೇಬರ—ಚೆನ್ನಮ್ಮರಾಣಿ ಪತ್ರಗಳು, ಚೆನ್ನಮ್ಮರಾಣಿ ಚರಿತ್ರೆ ಮುಂತಾದವನ್ನೂ ಪ್ರಕಾಶಪಡಿಸಲು ಸಂಕಲ್ಪಿಸಿರುವದು ಸ್ತುತ್ಯವಾದ ಕಾರ್ಯ. ಕರ್ಣಾಟಕದ ಚರಿತ್ರೆಯ ರಚನೆಗೆ ಮೂಲಾಧಾರಗಳು ಅತ್ಯವಶ್ಯಕ. ಕನ್ನಡನಾಡಿನ ಎಲ್ಲ ಭಾಗಗಳಲ್ಲೂ ಈ ಇತಿಹಾಸಮಂಡಲದಂತೆ ಸಾರ್ವಜನಿಕ ಸಂಸ್ಥೆಗಳು ಚಾರಿತ್ರಕ ವಿಷಯ ಸಂಗ್ರಹಮಾಡುವ ಕೆಲಸವನ್ನು ಉತ್ಸಾಹ ಶ್ರದ್ಧೆಯಿಂದ ಕೈಗೊಂಡಲ್ಲಿ ಸರ್ವಾಂಗಪೂರ್ಣವಾದ ಚರಿತ್ರೆಯನ್ನು ರಚಿಸಲು ಸಾಧ್ಯವಾಗುವದು. ಕೇವಲ ಸಂಗ್ರಹಣೆ ಮಾತ್ರವಲ್ಲದೆ ವಿಮರ್ಶದೃಷ್ಟಿಯಿಂದ ಅವುಗಳ ಬೆಲೆಯನ್ನು ನಿರ್ಧರಿಸಿ ಪ್ರಕಟಿಸುವದೂ ಕರ್ತವ್ಯವಾಗಿದೆ.

ಮಲ್ಲಸರ್ಜಕಾವ್ಯವನ್ನು ಕಾಗದಪ್ರತಿಗಳ ಆಧಾರದಮೇಲೆ ಪ್ರಕಟಿಸಿರುವರೆಂದು ಮುನ್ನುಡಿಯಲ್ಲಿ ಹೇಳಿದೆ. ಈ ಕಾಗದಪ್ರತಿಗಳ ವರ್ಣನೆಯನ್ನು ಕೊಟ್ಟಿಲ್ಲ. ಆ ಕಾಲದ ಕಾಗದಗಳ "ವಾಟರ್ ಮಾರ್ಕ್", ಶಾಯಿ ಮುಂತಾದವುಗಳಿಂದ ಸ್ಥೂಲವಾಗಿ ಕಾಲವನ್ನು ನಿರ್ಣಯಿಸಬಹುದು. ಅಲ್ಲದೆ ಪಾಠಾಂತರಗಳನ್ನು ಪ್ರಕಟಿಸಿಲ್ಲ. ಕವಿಯ ವಿಚಾರವನ್ನು ಹೇಳುವಾಗ "ಗುರು ಶಾಂತವೀರನು ಹೇಳಿದನು" ಮತ್ತು "ಗುರುಶಾಂತವೀರನಿಗೆ ಹೇಳಿದನು" ಎಂಬ ಪಾಠಭೇದಗಳಿವೆ ಎಂದು ಮಾತ್ರ ಹೇಳಿರುವರು. ಆ ಪ್ರತಿಗಳನ್ನು ನಿರ್ದೇಶಿಸಿದ್ದಲ್ಲಿ ಉಪಯೋಗವಾಗುತ್ತಿದ್ದಿತು. ಕವಿಯು ರುದ್ರ ಅಥವಾ ಲೋಕೇಶ ಎಂಬುವನೆ? ಶಾಂತವೀರನೆ? ಎಂಬ ಸಮಸ್ಯೆ ಹಾಗೆಯೇ ಉಳಿದಿದೆ. ರುದ್ರನು ವೀರಭದ್ರನಾಮಾವಳಿ ಮತ್ತು

ಮೈಸೂರು ರಾಜರ ಬಗ್ಗೆ ಕಾವ್ಯವನ್ನೂ ಬರೆದಿರುವನೆಂದು ಹೇಳಿರುವರು. ಇವುಗಳನ್ನೂ ಶೀಘ್ರವಾಗಿ ಪ್ರಕಟಿಸುವರೆಂದು ನಂಬುತ್ತೇವೆ.

ಈ ಕಾವ್ಯದ ಕಾಲನಿರ್ಣಯ ಮತ್ತು ಇದರಲ್ಲಿ ಕಂಡುಬರುವ ಇತಿಹಾಸ ಅಂಶಗಳ ನಿರ್ಣಯವನ್ನು ಮುನ್ನುಡಿಯಲ್ಲಿ ನಿರ್ಧರಿಸಿದ್ದರೆ ಮತ್ತಷ್ಟು ಉಪಯೋಗವಾಗುತ್ತಿತ್ತು. ಇತಿಹಾಸದೃಷ್ಟಿಯಿಂದ ಚರ್ಚಿಸಬೇಕಾದ ಕೆಲವು ಅಂಶಗಳನ್ನು ಇಲ್ಲಿ ಸೂಚಿಸುತ್ತೇವೆ. ಈ ಕಾವ್ಯದ ನಾಯಕನಾದ ಮಲ್ಲಸರ್ಜನು ಕಿತ್ತೂರ ಪಟ್ಟದಲ್ಲಿ ಹನ್ನೊಂದನೆಯವನು. ಇವನ ಪ್ರಥಮ ಪತ್ನಿ ರುದ್ರವ್ವ. ಶಿವಲಿಂಗರುದ್ರಸರ್ಜ (ಬಾವೂಸಾಹೇಬ)ನ ತಾಯಿ. ರುದ್ರವ್ವನ ತಾಯಿ ನೀಲವ್ವ ಈ ಕಾವ್ಯದಲ್ಲಿ ಉಕ್ತಳಾಗಿದ್ದಾಳೆ. ಎರಡನೆಯ ರಾಣಿಯೇ ಚೆನ್ನಮ್ಮ, ಕಾಗತಿ ದೇಶಾಯಿಯ ಮಗಳು; ಇವಳಿಗೆ ಮಕ್ಕಳಿಲ್ಲ. ಬಾವೂಸಾಹೇಬನು ಮಲ್ಲಸರ್ಜನ ಅನಂತರ ಏಳು ವರ್ಷ ಆಳಿ, ಮಕ್ಕಳಿಲ್ಲದುದರಿಂದ ದತ್ತುತೆಗೆದುಕೊಂಡು ಚೆನ್ನಮ್ಮನಿಗೆ ರಾಜ್ಯಭಾರವನ್ನು ವಹಿಸಿ ಸತ್ತನು. ಈ ದತ್ತು ಕೃತ್ರಿಮವೆಂದು "ಡಾಕ್ಟ್ರೈನ್ ಆಪ್ ಲ್ಯಾಫ್ಸ್" ನಿಯಮವನ್ನು ಜಾರಿಗೆ ತಂದು ಬ್ರಿಟಿಷರು ಕಿತ್ತೂರನ್ನು ವಶಮಾಡಿಕೊಳ್ಳಲು ಯತ್ನಿಸಿದಾಗ ಚೆನ್ನಮ್ಮನು ಇಂಗ್ಲಿಷ್ ಸೇನೆಗಳೊಡನೆ ಹೋರಾಡಿ ಕೊನೆಗೆ ಬೈಲಹೊಂಗಲದಲ್ಲಿ (ಕ್ರಿ.ಶ. ೧೮೨೪) ಸೆರೆಯಲ್ಲಿಡಲ್ಪಟ್ಟಳು. ಮಲ್ಲಸರ್ಜನ ಮರಣವನ್ನು ವರ್ಣಿಸುವ ಮಲ್ಲಸರ್ಜಕಾವ್ಯ ಸುಮಾರು ಕ್ರಿ.ಶ. ೧೮೧೭ ರಲ್ಲಿ ರಚಿತವಾಯಿತೆಂದು ನಿರ್ಧರಿಸಬಹುದು. ಕ್ರಿ.ಶ. ೧೭೮೫ನೆಯ ಸೆಪ್ಟಂಬರ್ ತಿಂಗಳಲ್ಲಿ ಟೀಪು ನರ್ಗುಂದವನ್ನು ನಾಶಮಾಡಿದನಂತರ, ಕಿತ್ತೂರನ್ನು ಕೊಳ್ಳೆಹೊಡೆದು ಆ ದೇಶಾಯಿಯ ಮನೆತನದ ಹೆಂಗಸರಿಗೂ ಅತ್ಯಾಚಾರಮಾಡಿ, ಲಿಂಗಾಯತರನ್ನು ಚಿತ್ರಹಿಂಸೆಮಾಡಿ ಆ ಹೆಂಗಸರನ್ನು ಬಲಾತ್ಕಾರದಿಂದ ಮುಸ್ಲಿಮರಿಗೆ ವಿವಾಹ ಮಾಡಿಸಿದ್ದನು. ನಾನಾಫಡ್ನೀಸನೂ ನಿಸಾಂ ಆಲಿಯೂ ಇದಕ್ಕೆ ಪ್ರತೀಕಾರಮಾಡಲು ೧೭೮೬ ರಲ್ಲಿ ತುಕೋಜ ಹೋಳ್ಕರ್, ನಾಗಪುರದ ಭೋಸಲೆ ಮತ್ತು ಮರಾಠ ದಂಡನಾಯಕನಾದ ಬೆಹರೆ ಮುಂತಾದವರನ್ನು ಯಾದಗಿರಿಯಿಂದ ಕಳುಹಿಸಿದ್ದರು. ಗಜೇಂದ್ರಗಡದ ಕೌಲಿನಪ್ರಕಾರ ಟೀಪು ಬಾದಾಮಿ ನರ್ಗುಂದ ಮತ್ತು ಕಿತ್ತೂರನ್ನು ಮರಾಟರಿಗೆ ಒಪ್ಪಿಸಬೇಕಾಯಿತು. (ಮಾರ್ಚ್ ೧೭೮೭). ಇಮ್ಮಡಿ ಬಾಜಿರಾಯನು ೧೭೯೭ ರಲ್ಲಿ ಪೇಷ್ವೆಯಾದಾಗಿನಿಂದ ಮರಾಟ ಸಾಮ್ರಾಜ್ಯದ ಅವನತಿಗೆ ಆರಂಭವಾಯಿತು. ಇವನ ವಿಷಯಲಾಲಸೆಯ ಫಲವಾಗಿ ದುಷ್ಟ ಮಂತ್ರಿಗಳು ಪ್ರಬಲರಾಗಿ ಆರ್ಥಿಕ ವ್ಯವಸ್ಥೆಯು ಕೆಟ್ಟಿತು. ಬಾಜಿರಾಯನು ದ್ರವ್ಯಸಂಗ್ರಹ ಮಾಡುವದಕ್ಕಾಗಿ ಕಂದಾಯ ವಸೂಲಿಮಾಡುವ ಹಕ್ಕನ್ನು ಹರಾಜುಹಾಕಲು

ಆರಂಭಿಸಿದನು. ಇದರಿಂದ ದೇಶಾಯಿ ದೇಶಪಾಂಡೆ ಮತ್ತು ಸಾಮಾನ್ಯಜನರಿಗೂ ಚಿತ್ರಹಿಂಸೆಯಾಗುತ್ತಿತ್ತು. ಮಲ್ಲಸರ್ಜನು ಆರುಲಕ್ಷ ಬಾಕಿಕೊಡಬೇಕಾಗಿದ್ದುದರಿಂದ ಪುಣೆಯಲ್ಲಿ ಬಂಧಿತನಾದನು. ಬಾಜಿರಾಯನು ತನ್ನ ಕಾರಭಾರಿ ಮಾಣಿಕೇಶ್ವರನನ್ನೂ ಮಾಧವರಾವ್‌ರಾಸ್ತೆಯನ್ನೂ ಕರೆದುಕೊಂಡು ಸಂಡೂರಿನ ಕಾರ್ತಿಕೇಯ ಸ್ವಾಮಿಯನ್ನು ದರ್ಶಿಸುವ ನೆಪದಿಂದ ದಕ್ಷಿಣಕ್ಕೆ ಬಂದನೆಂದೂ, ಪಂಡರಿಪುರದಲ್ಲಿ ಪಟ್ಟವರ್ಧನರು ಚಿಂತಾಮಣಿರಾವ್, ನಿಪ್ಪಾಣಿಯ ಅಪ್ಪದೇಶಾಯಿ ಬಾಜಿರಾಯನನ್ನು ಭೇಟಿಮಾಡಿ ಗೋಡಗೇರಿ ಮತ್ತು ಹೊಂಗಳಕ್ಕೆ ಬಂದಾಗ ಬಾಜಿರಾಯನ ಅಪ್ಪಣೆಯಂತೆ ಮಲ್ಲಸರ್ಜನು ಹೊಂಗಳದಲ್ಲಿ ಬಾಜಿರಾಯನನ್ನು ಸೇರಲಿಲ್ಲ. ಇದರಿಂದ ಅಸಮಾಧಾನವನ್ನು ವ್ಯಕ್ತಪಡಿಸಿ ಬಾಜಿರಾಯನು ಸಂಡೂರಿಗೆ ಬಂದು ಕಾರ್ತಿಕೇಯಸ್ವಾಮಿಯನ್ನು ಪೂಜಿಸಿದನೆಂದು ಈ ಕಾವ್ಯದಲ್ಲಿ ಹೇಳಿದೆ. ಬಾಜಿರಾಯನು ಸಂಡೂರಿಗೆ ಬಂದುದು ಅಕ್ಟೋಬರ್, ೧೮೧೪ ರಲ್ಲಿ. ಬಾಜಿರಾಯನ ಕುತಂತ್ರಗಳಲ್ಲಿ ಸಹಾಯಕನಾಗಿದ್ದ ಮಾಣಿಕೇಶ್ವರನು ಸನ್ಯಾಸಿಯ ಸೋಗುಹಾಕಿಕೊಂಡಿದ್ದ ಸದಾಶಿವ ಮಂಕೇಶ್ವರ್. ಬ್ಯಾರಿಕ್ಲೋಸ್ ಇವನ ತಂತ್ರಗಳನ್ನೂ ಬ್ರಿಟಿಷರ ಮೇಲಿನ ದ್ವೇಷವನ್ನೂ ವರ್ಣಿಸಿರುವನು (P.R.C. VII, ೮ and ೧೯೦). ಖಂಡೇರಾವ್ ರಾಸ್ತೆಗೂ ಮಂಕೇಶ್ವರನಿಗೂ ಬದ್ಧದ್ವೇಷವಿದ್ದು ಕೊನೆಗೆ ಬಾಜಿರಾಯನು ಮಂಕೇಶ್ವರನ ಪಕ್ಷವನ್ನೇ ವಹಿಸಿ ನಿಪ್ಪಾಣಿಯದೇಶಾಯ್, ಪಟ್ಟವರ್ಧನರು, ರಾಸ್ತೆ, ಪನ್ಸೆ ಮುಂತಾದವರನ್ನೂ ಇತರ ಜಾಗೀರುದಾರರನ್ನೂ ನಾಶಮಾಡಲು ಯತ್ನಿಸುತ್ತಿದ್ದನು. ಬಾಜಿರಾಯನು ಸಂಡೂರನ್ನು ಬಿಟ್ಟು ಗೂಡೂರು, ಕಂಪಿಲಿ, ಹೊಸಪೇಟೆ, ಬಾಗಲಕೋಟೆ, ಬಾದಾಮಿ, ಗುರ್ಲಹೊಸೂರು, ಮರಿಹಾಳ, ಮೀರಜ್ ಮಾರ್ಗವಾಗಿ ಪುಣೆಗೆ ಹಿಂತಿರುಗಿದನು. ಮಲ್ಲಸರ್ಜನು ಮರಿಹಾಳಿನಲ್ಲಿ ಬಾಜಿರಾಯನ ಸೈನ್ಯವನ್ನು ಸೇರಿ ವೀರಪ್ಪದೇಶಾಯಿ ಮೂಲಕ ಕಿತ್ತೂರಿಗೆ ಹಿಂತಿರುಗಲು ಅಪ್ಪಣೆ ಪಡೆದನೆಂದೂ ಆದರೆ ಶಿಂಗುಣಿಸಿಯ ಅಲಪ್ಪಗೌಡನ ತಂತ್ರದಿಂದ ಪುಣೆಗೆ ಹೋಗಬೇಕಾಯಿತೆಂದೂ ಅಲ್ಲಿ ಬಂಧಿತನಾದನೆಂದೂ ಈ ಕಾವ್ಯವು ಹೇಳುವದು. ಮೂರುವರ್ಷ ಸೆರೆಯಲ್ಲಿ ಕಳೆದ ಮೇಲೆ ಬಾಜಿರಾಯನು ಉತ್ಥಾನದ್ವಾದಶಿ ದಿನ ತುಳಸೀ ಪೂಜೆ ಮಾಡುವಾಗ ಸರದಾರರ ಮಧ್ಯದಲ್ಲಿ ಮಲ್ಲಸರ್ಜನು ಕಾಣಿಸದಿರಲು ವಿಚಾರಿಸಿ, ಅವನು ರೋಗದಿಂದ ಕ್ಷಯಿಸುತ್ತಿದ್ದುದರಿಂದ ಕಿತ್ತೂರಿಗೆ ಹಿಂತಿರುಗಲು ಅಪ್ಪಣೆಕೊಟ್ಟನು. ೧೮೧೭—೧೮ ರಲ್ಲಿ ಬಾಜಿರಾಯನ ತಂತ್ರದ ಫಲವಾಗಿ ಪಿಂಡಾರೆಗಳ ಹಾವಳಿ ಹೆಚ್ಚಿ ಕೊನೆಗೆ ಬ್ರಿಟಿಷರು ಮರಾಟ ಸಾಮ್ರಾಜ್ಯವನ್ನೇ ಪರಿಸಮಾಪ್ತಿಮಾಡಿದರು. ಮಲ್ಲಸರ್ಜನು ಕಿತ್ತೂರಿಗೆ ಹಿಂತಿರುಗಿ ಬಾಪುಸಾಹೇಬನಿಗೆ ಪಟ್ಟಕಟ್ಟಿ ಕೆಲವುದಿನಗಳಲ್ಲಿ ಸತ್ತನು.

ಥಾಮಸ್ ಮನ್ರೋ ಮಲ್ಲಸರ್ಜನ ಮಗನಾದ ಶಿವಲಿಂಗಸರ್ಜನಿಗೆ ಜುಲೈ ೨೮, ಕ್ರಿ.ಶ. ೧೮೧೮ (ಫಸಲಿ ೧೨೨೮) ರಲ್ಲಿ ಹೊಸಸನ್ನದನ್ನು ಕೊಟ್ಟನು. ಇವನು ಕ್ರಿ.ಶ. ೧೮೨೩ ರ ವರೆಗೆ ಆಳಿದನು. ಅನಂತರ ಚೆನ್ನಮ್ಮನ ಕಾಲದಲ್ಲಿ ನವೆಂಬರ್ ೩೦, ೧೮೨೪ ರಲ್ಲಿ ಬ್ರಿಟಿಷರು ಕಿತ್ತೂರನ್ನು ವಶಮಾಡಿಕೊಂಡರು. ಆದ್ದರಿಂದ ಈ ಕಾವ್ಯವು ಸುಮಾರು ಕ್ರಿ. ಶ. ೧೮೧೭—೧೮ ರಲ್ಲಿ ರಚಿತವಾಗಿರಬೇಕು.

ಈ ಕಾವ್ಯವು "ದುಂದುಭಿಪದಗಳ ಚೆಂದ" ದಲ್ಲಿ ರಚಿತವಾಗಿದೆ. ದುಂದುಮೆ ಅಥವಾ ದುಂದುಭಿ ಲಕ್ಷಣಗಳನ್ನೂ, ಮಲ್ಲಸರ್ಜನ ಗುರುವಾದ ಮುಪ್ಪಿನ ಮಡಿವಾಳ ಸ್ವಾಮಿಯ ವಿಷಯವನ್ನೂ ವಿಶದವಾಗಿ ಚರ್ಚಿಸಿದ್ದರೆ ಮತ್ತಷ್ಟು ಉಪಯೋಗವಾಗುತ್ತಿತ್ತು. ಈ ಕಾವ್ಯವು ಪೂರ್ತ ಐತಿಹಾಸಿಕವಲ್ಲದಿದ್ದರೂ ಆ ಕಾಲದ ರಾಜಕೀಯ ಮತ್ತು ಸಾಮಾಜಿಕ ಪದ್ಧತಿಗಳನ್ನು ತಿಳಿಯಲು ಸಹಾಯಕವಾಗುವದರಿಂದ ಇದನ್ನು ಪ್ರಕಟಿಸಿದ ಇತಿಹಾಸಮಂಡಲಿಯವರಿಗೆ ಅಭಿನಂದನೆ ಸಲ್ಲಿಸಬೇಕಾಗಿದೆ. ಕಿತ್ತೂರಿಗೆ ಸಂಬಂಧಪಟ್ಟ "ಮಲ್ಲೇಂದ್ರಮಹೋವಿಲಾಸ" ಮತ್ತು "ಮಲ್ಲತರಂಗಿಣಿ" ಎಂಬ ಕಾವ್ಯಗಳನ್ನೂ ಮಂಡಲಿಯವರು ಪ್ರಕಟಿಸುವರೆಂದು ಹಾರೈಸುತ್ತೇವೆ.

ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.

***

ಹೇಮರೆಡ್ಡಿ ಮಲ್ಲಮ್ಮ (ರಾಜಯೋಗಿ ವೇಮಣ್ಣ; ಪ್ರಬೋಧ ಪುಸ್ತಕಮಾಲೆಯ ೯ ನೆಯ ಹೂ)—ಲೇಖಕರು: ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು; ಪ್ರಬೋಧ ಪುಸ್ತಕಮಾಲೆ, ನಂ. ೫; ೩ ನೆ ರಸ್ತೆ, ಚಾಮರಾಜಪೇಟೆ, ಬೆಂಗಳೂರು ಸಿಟಿ; ಬೆಲೆ, ಎಂಟಾಣೆ.

ಈ ಚಿಕ್ಕ ಪುಸ್ತಕದಲ್ಲಿ ಶ್ರೀ ನಂಜುಂಡಾರಾಧ್ಯರು ಚಾರಿತ್ರಕ ದೃಷ್ಟಿಯಿಂದ ಕೊಂಡವೀಡು ರೆಡ್ಡಿವಂಶಕ್ಕೆ ಸೇರಿದ್ದ ಮಲ್ಲಮ್ಮ ಮತ್ತು ವೇಮನನ ಕಾಲನಿರ್ಣಯವನ್ನು ಮಾಡಲು ಯತ್ನಿಸಿರುವರು. ಈ ರೆಡ್ಡಿರಾಜರ ವಂಶವೃಕ್ಷವನ್ನು ನಿರ್ಧರಿಸುವಾಗ ಇದುವರೆಗೂ ಶಾಸನ ಇಲಾಖೆಯವರಿಂದ ಪ್ರಕಟಿತವಾದ ಶಾಸನಗಳನ್ನೆಲ್ಲ ಪರಿಶೀಲಿಸಿ ತೆಲುಗಿನಲ್ಲಿ ನಡೆದಿರುವ ವಿಮರ್ಶೆಗಳನ್ನು ಅವಗಾಹಿಸಿ ನಿರ್ಣಯಮಾಡಬೇಕಾಗಿದ್ದಿತು. ಇಲ್ಲಿ ಕೊಟ್ಟಿರುವ ವಂಶವೃಕ್ಷಕ್ಕೂ ಚಾರಿತ್ರಕ ಸಿದ್ಧಾಂತಕ್ಕೂ ಬಹು ದೂರವಿದೆ. ಕುಮಾರಗಿರಿಯ ಅನಪರ್ತಿಶಾಸನ (ಕ್ರಿ.ಶ. ೧೩೯೦), ಕಾಟಯ ವೇಮನ ಕೊಮರಗಿರಿವರಂ (೧೪೦೮) ಮತ್ತು ಗೋಪವರಂ (೧೩೯೫) ಅನವೊತವರಂ (M.E.R. 1937. C.P. 4), ವೇಮವರಂ (೧೪೩೪) ಶಾಸನಗಳು ಮುಖ್ಯಾಧಾರಗಳು. ಇವುಗಳಿಂದ ತಿಳಿದುಬರುವ ವಂಶವೃಕ್ಷ ಹೀಗಿದೆ.

ವೇಮ (ವೀರನಾರಾಯಣ, ಜಗಕೊಬ್ಬ ಗಂಡ, ಶ್ರೀಶೈಲಸೋಪಾನವನ್ನು ಕಟ್ಟಿಸಿದನು)

- ಅನವೋತ I (೧೩೬೦)
  - ಕುಮಾರಗಿರಿ (ವಸನ್ತರಾಯ)
    - ಅನವೋತ II (ವೀರನಾರಾಯಣ)
  - ಮಲ್ಲಮಾಂಬ + ಕಾಟಯವೇಮ (೧೩೮೫)
    - ಕಾಟ—ಹರಿಹರಾಂಬ (೧೩೮೮)
- ವೇಮಾಸಾನಿ
- ಅನವೇಮ (ವಸನ್ತರಾಯ) ೧೩೮೧
  - ಮಾಚವೇಮ
    - ಪೆದ್ದ ಕೋಮಟಿ ವೇಮ (೧೪೧೦)
      - ರಾಚವೇಮ

ಇಲ್ಲಿ ಉದಾಹರಿಸಿರುವ ಚಾಟುಪದ್ಯದಲ್ಲೂ ಇದೇ ಪೀಳಿಗೆ ಕಂಡುಬರುವದು. ಕುಮಾರಗಿರಿಯ ನಂತರ ಪೆದ್ದ ಕೋಮಟಿ ವೇಮ ಮತ್ತು ಅವನ ಮಗ ರಾಚವೇಮ ಪ್ರಬಲರಾದುದರಿಂದ ಈ ಪದ್ಯದಲ್ಲಿ ಕುಮಾರಗಿರಿಯ ಮಗನ ಹೆಸರು ಹೇಳಲಿಲ್ಲ. ಅನಪರ್ತಿ ಶಾಸನದಲ್ಲಿ ಕುಮಾರಗಿರಿಯು ತನ್ನ ಮಗನಾದ ಅನವೋತನನ್ನು ತೊಡೆಯಲ್ಲಿರಿಸಿಕೊಂಡು ದ್ರಾಕ್ಷಾರಾಮದಲ್ಲಿ ತುಲಾಭಾರಮಾಡಿಸಿಕೊಂಡನೆಂದು ಹೇಳಿದೆ. ಕುಮಾರಗಿರಿ ವಿಷಯಾಸಕ್ತನೂ ಬಲಹೀನನೂ ಆಗಿರಲಿಲ್ಲ. ರಾಜಮಂದ್ರಿಯನ್ನು ಭಾವಮೈದುನನಾದ ಕಾಟಯವೇಮನಿಗೆ ಕೊಟ್ಟಿದ್ದನು. ಆದರೆ ಪೆದ್ದ ಕೋಮಟಿ ವೇಮನು ಕಾಟಯವೇಮನನ್ನು ಪ್ರತಿಭಟಿಸಿ ಯುದ್ಧಮಾಡಿ ರಾಚಕೊಂಡದ ವೇಮನಿಂದ ಹತನಾದನು. ಅವನ ಮಗ ರಾಚವೇಮನು ಕ್ರೂರನಾಗಿದ್ದುದರಿಂದ ನಾಲ್ಕುವರ್ಷ ಮಾತ್ರ ಕೊಂಡವೀಡಿನಲ್ಲಿ ಆಳಿ ಕೊಲ್ಲಲ್ಪಟ್ಟನು. ಕುಮಾರಗಿರಿಯ ಮಗನಾದ ಅನವೋತನು ಬಾಲ್ಯದಲ್ಲಿಯೇ, ಕುಮಾರಗಿರಿಯ ಜೀವಿತ ಕಾಲದಲ್ಲಿ ಗತಿಸಿದುದರಿಂದ ಕೊಂಡವೀಡು ಸ್ವಲ್ಪಕಾಲ ಪೆದ್ದಕೋಮಟಿವೇಮ ಮತ್ತು ರಾಚವೇಮರ ಸ್ವಾಧೀನವಾಗಿದ್ದು ಕೊನೆಗೆ ಇಮ್ಮಡಿ ದೇವರಾಯನ ಕಾಲದಲ್ಲಿ ಈ ರೆಡ್ಡಿ ರಾಜ್ಯಗಳೆಲ್ಲ ವಿಜಯನಗರಸಾಮ್ರಾಜ್ಯಕ್ಕೆ ಸೇರಿಸಲ್ಪಟ್ಟವು. ಬಾರ್ನೆಟ್ (*Epi. Ind. XIII. p. 237*) ಸರಿಯಾಗಿ ವಿಮರ್ಶಿಸದೆ ತಪ್ಪು ವಂಶಾವಳಿಯನ್ನು ಕೊಟ್ಟಿರುವರು. ಶ್ರೀ ನಂಜುಂಡಾರಾಧ್ಯರು ಪ್ರಸಿದ್ಧನಾದ ಕುಮಾರಗಿರಿಗೆ ಹೇಮರೆಡ್ಡಿ ಎಂಬ ಹೆಸರೂ ಇದ್ದಿತೆಂದೂ ಅವನಿಗೆ ಶಾಸನಗಳಲ್ಲಿಯೂ ಕಾಣದಿರುವ ಕೋಮಟಿವೆಂಕ, ನಾಗೇಂದ್ರ, ಭರಮ, ಮತ್ತೊಬ್ಬ ನಾಲ್ಕನೆಯವನು, ಐದನೆಯವನೇ ಯೋಗಿವೇಮನ ಎಂಬ ಮಕ್ಕಳಿದ್ದರೆಂದೂ ಕಲ್ಪಿಸಿ, ಚನ್ನಕವಿಯ ಮಲ್ಲಮನ ಪುರಾಣದಲ್ಲಿ ಹೇಮರೆಡ್ಡಿಯ ನಾಲ್ಕನೆಯ ಮಗನೇ ಯೋಗಿವೇಮನನಾದನೆಂದು ಹೇಳಿದ್ದರೂ (ಸಂಧಿ ೧೩. ಪ ೨), ವಂಶವೃಕ್ಷದಲ್ಲಿ ನಾಲ್ಕನೆಯವನ ಹೆಸರು

ಗೊತ್ತಿಲ್ಲವೆಂದು ಬರೆದು, ಐದನೆಯವನು ಯೋಗಿವೇಮನನೆಂದೂ, ವೇಮನನು ಯಾಚಿಸಿದುದು ಅತ್ತಿಗೆಯ ಕಿವಿಯ ಹರಳಿನೋಲೆಯೆಂದು ಕನ್ನಡ ಕಾವ್ಯದಲ್ಲೂ, ಮೂಗುತಿಯೆಂದು ತೆಲುಗು ಗ್ರಂಥಗಳಲ್ಲೂ ಉಕ್ತವಾಗಿದ್ದರೂ "ಸಂಪೂರ್ಣ ಹೋಲಿಕೆ" ಇದೆಯೆಂದು ಸಾಧಿಸಲು ಯತ್ನಿಸಿರುವರು. ಶ್ರೀಶೈಲ ಇತಿಹಾಸದಲ್ಲಿ ಮಲ್ಲಮ್ಮನ ಕಾಲ ೧೩೨೬ ರಿಂದ ೧೩೭೪ ವರೆಗೆ ಎಂದು ಸ್ಪಷ್ಟವಾಗಿದ್ದರೂ, ಹದಿನೈದು ಹದಿನಾರನೆಯ ಶತಾಬ್ದದ ವೇಮನನಿಗೆ ಸಮಕಾಲೀನಳನ್ನಾಗಿ ಮಾಡಲು ವ್ಯರ್ಥ ಪ್ರಯಾಸಪಟ್ಟಿರುವರು. ವೇಮನನು ಮೊದಲು ಲಿಂಗಧಾರಿಯಾಗಿದ್ದು ಕಡೆಗೆ ಲಿಂಗವಿಹೀನನಾಗಿಯೇ ಇದ್ದಿರಬೇಕೆಂದೂ ಅಭಿಪ್ರಾಯಪಡುವರು. (ಪುಟ ೩೩), ಇಂತಹ ಗ್ರಂಥದಿಂದ ಚರಿತ್ರರಚನೆಗೆ ಯಾವ ಉಪಕಾರವೂ ಆಗಿಲ್ಲ.

ಡಾ|| ಎಸ್. ಶ್ರೀಕಂಠಶಾಸ್ತ್ರೀ.

ವಸ್ತುಕೋಶ

ಭಾಸ—ಒಂದು ಒಗಟು

I

ಭಾಸ ಬಹು ಪ್ರಾಚೀನಕವಿ. ಅವನನ್ನು ಮುನಿ ಎಂದು ಕರೆದಿರುವರು; ಅಷ್ಟು ಹಳಬ. ಕವಿಕಾಳಿದಾಸನೂ ಕೂಡ ತಾನು ಹೊಸಕವಿ ಎಂದೂ ಭಾಸ, ಸೌಮಿಲ್ಲ, ಕವಿಪುತ್ರಾದಿಗಳು ತನಗಿಂತಲೂ ಪ್ರಾಚೀನರಾದ ಪ್ರಸಿದ್ಧ ನಾಟಕಕಾರರೆಂದೂ ಹೇಳಿರುವನು. ಭಾಸನು ೨೩ ಅಥವ ೨೪ ನಾಟಕಗಳನ್ನು ರಚಿಸಿದ್ದನಂತೆ. ಕ್ರಿ.ಶ. ೧೯೧೦ ರವರೆಗೆ ಅವನ ಯಾವ ನಾಟಕವೂ ದೊರೆತಿರಲಿಲ್ಲ. ಮಹಾಮಹೋಪಾಧ್ಯಾಯ ಶ್ರೀ ಗಣಪತಿಶಾಸ್ತ್ರಿಗಳಿಗೆ ಆ ವರ್ಷ ತಿರುವನಂತಪುರದಲ್ಲಿಯ ಗ್ರಂಥ ಭಂಡಾರದಲ್ಲಿ ೧೩ ರೂಪಕಗಳು ದೊರೆತವು. ಭಾಸರಚಿತವಾದದ್ದೆಂದು ಪ್ರಸಿದ್ಧವಾದ ಸ್ವಪ್ನವಾಸದತ್ತವು ಅವುಗಳಲ್ಲಿ ಒಂದು. ಆ ೧೩ ರೂಪಕಗಳಲ್ಲಿ ಅನೇಕ ಸಂಗತಿಗಳು ಒಂದೇ ಆಗಿರುವುದರಿಂದಲೂ, ನಾಟಕರಚನೆ ಒಂದೇ ಮಾದರಿಯಲ್ಲಿರುವುದರಿಂದಲೂ, ಅವುಗಳೆಲ್ಲ ಭಾಸನಿಂದಲೇ ರಚಿತವಾದವುಗಳೆಂದು ಶ್ರೀ ಗಣಪತಿಶಾಸ್ತ್ರಿಗಳು ಅಭಿಪ್ರಾಯಪಟ್ಟರು. ಈ ೧೩ ರೂಪಕಗಳಲ್ಲಿಯೂ ಭಾಸನ ಹೆಸರೇ ಉಕ್ತವಾಗಿಲ್ಲ. ಆದ್ದರಿಂದ ಆ ಗ್ರಂಥಕರ್ತ ಯಾರು? ಅವು ಅಷ್ಟು ಪ್ರಾಚೀನವೇ? ಎಂಬ ಮುಂತಾದ ವಿಷಯಗಳಲ್ಲಿ ವಿದ್ವಾಂಸರಲ್ಲಿ ವಾದವಿವಾದಗಳುಂಟಾಗಿ ಯಾವ ಸಂಗತಿಯೂ ಖಚಿತವಾಗಿ ನಿರ್ಧರವಾಗಿಲ್ಲ. ಅದು ಒಗಟೆಯಾಗಿಯೇ ಉಳಿದಿದೆ.

II

ಈ ಗ್ರಂಥಗಳಲ್ಲಿ ಅಂತರ್ಯವಾಗಿ ಏನಾದರೂ ವಿಷಯ ದೊರಕಬಹುದೇ ಎಂಬುದನ್ನು ಮೊದಲು ಪರೀಕ್ಷಿಸುವುದು ಸೂಕ್ತವಾಗಿದೆ.

ಈ ೧೩ ರೂಪಕಗಳಲ್ಲಿ ೧೧ ರಲ್ಲಿ ಮಾತ್ರ 'ನಮ್ಮ ಮಹಾರಾಜನು ಭೂಮಿಯನ್ನು ರಕ್ಷಿಸಲಿ' ಎಂದು ಅರ್ಥವುಳ್ಳ ಭರತವಾಕ್ಯಗಳು ಉಕ್ತವಾಗಿವೆ. ಉಳಿದ ೨ ರಲ್ಲಿ ಅಂದರೆ ಚಾರುದತ್ತ ಮತ್ತು ದೂತಘಟೋತ್ಕಚಗಳಲ್ಲಿ ಭರತವಾಕ್ಯಗಳೇ ಇಲ್ಲ.

(ಅ) ಇಮಾಂ ಸಾಗರಪರ್ಯಂತಾಂ ಹಿಮವದ್ವಿಂಧ್ಯಕುಂಡಲಾಂ |
ಮಹೀಮೇಕಾತಪತ್ರಾಂಕಾಂ ರಾಜಸಿಂಹಃ ಪ್ರಶಾಸ್ತು ನಃ ||

ಎಂಬ ಭರತವಾಕ್ಯಶ್ಲೋಕವು ಸ್ವಪ್ನವಾಸವದತ್ತ ಬಾಲಚರಿತ ಮತ್ತು ದೂತ ವಾಕ್ಯಗಳಲ್ಲಿಯೂ,

(ಆ) ಭವಂತ್ವರಜಸೋ ಗಾವಃ ಪರಚಕ್ರಂ ಪ್ರಶಾಮ್ಯತು |
ಇಮಾಮಪಿ ಮಹೀಂ ಕೃತ್ಸ್ನಾಂ **ರಾಜಸಿಂಹಃ** ಪ್ರಶಾಸ್ತು ನಃ ||

ಎಂದು ಪ್ರತಿಜ್ಞಾಯೌಗಂಧರಾಯಣ ಅಭಿಷೇಕನಾಟಕ ಮತ್ತು ಅವಿಮಾರಕ ಗಳಲ್ಲಿಯೂ

(ಇ) ಹಂತ ಸರ್ವೇ ಪ್ರಸನ್ನಾಃ ಸ್ಮಃ ಪ್ರವೃದ್ಧಕುಲ ಸಂಗ್ರಹಾಃ |
ಇಮಾಮಪಿ ಮಹೀಂ ಕೃತ್ಸ್ನಾಂ **ರಾಜಸಿಂಹಃ** ಪ್ರಶಾಸ್ತು ನಃ ||

ಎಂದು ಪಂಚರಾತ್ರದಲ್ಲಿಯೂ

(ಈ) ಯಥಾ ರಾಮಶ್ಚ ಜಾನಕ್ಯಾ ಬಂಧುಭಿಶ್ಚ ಸಮಾಗತಃ |
ತಥಾ ಲಕ್ಷ್ಮ್ಯಾ ಸಮಾಯುಕ್ತೋ **ರಾಜಾ** ಭೂಮಿಂ ಪ್ರಶಾಸ್ತು ನಃ ||

ಎಂದು ಪ್ರತಿಮಾ ನಾಟಕದಲ್ಲಿಯೂ

(ಉ) ಸರ್ವತ್ರ ಸಂಪದಃ ಸಂತು ನಶ್ಯಂತು ವಿಪದಸ್ಸದಾ |
ರಾಜಾ ರಾಜಗುಣೋಪೇತೋ ಭೂಮಿಮೇಕಃ ಪ್ರಶಾಸ್ತು ನಃ ||

ಎಂದು ಕರ್ಣಭಾರದಲ್ಲಿಯೂ

(ಊ) ಗಾಂ ಪಾತು ನೋ **ನರಪತಿಃ ಶಮಿತಾರಿ** ಪಕ್ಷಃ

ಎಂದು ಊರು ಭಂಗದಲ್ಲಿಯೂ

(ಋ) ಯಥಾ ನದೀನಾಂ ಪ್ರಭವಃ ಸಮುದ್ರಃ
ಯಥಾಹುತೀನಾಂ ಪ್ರಭವೋ ಹುತಾಶನಃ |
ಯಥೇಂದ್ರಿಯಾಣಾಂ ಪ್ರಭವಂ ಮನೋಪಿ
ತಥಾ ಪ್ರಭುರ್ನೋ ಭಗವಾನು**ಪೇಂದ್ರಃ** ||

ಎಂದು ಮಧ್ಯಮ ವ್ಯಾಯೋಗದಲ್ಲಿಯೂ ಭರತವಾಕ್ಯ ಶ್ಲೋಕಗಳು ಉಕ್ತ ವಾಗಿವೆ.

ಈ ರೀತಿಯಲ್ಲಿ ೭ ನಾಟಕಗಳಲ್ಲಿ **ರಾಜಸಿಂಹ** ಎಂದೂ ೨ ರಲ್ಲಿ **ರಾಜ** ಎಂದೂ ಒಂದರಲ್ಲಿ **ಉಪೇಂದ್ರ** ಎಂದೂ ಒಂದರಲ್ಲಿ **ಅರಿನರಪತಿ** ಎಂದೂ ಉಕ್ತವಾಗಿವೆ. ರಾಜಸಿಂಹ ಮತ್ತು ರಾಜ ಈ ಎರಡೂ ಒಬ್ಬನಿಗೇ ಅನ್ವಯಿಸುವುವು ಎಂದು ಭಾವಿಸಿದರೆ ಈ ೧೩ ರೂಪಕಗಳಲ್ಲಿ **ರಾಜಸಿಂಹ, ಉಪೇಂದ್ರ** ಮತ್ತು **ಅರಿನರಪತಿ** ಎಂಬ ಮೂರು ರಾಜರ ಹೆಸರು ಮಾತ್ರ ಉಕ್ತವಾದಂತಾಗಿದೆ.

ಈ ಹೆಸರುಗಳು ನಾಟಕಕಾರನ ಪೋಷಕ ರಾಜರುಗಳಿಗೆ ಅನ್ವಯಿಸುವುವೇ? ಅಥವ ರಾಜ ಎಂಬ ಸಾಧಾರಣ ಅರ್ಥವನ್ನು ಸೂಚಿಸುವುವೇ? ಎಂಬ ಅಭಿಪ್ರಾಯದಲ್ಲಿ ವಿದ್ವಾಂಸರಲ್ಲಿಯೇ ಭಿನ್ನಾಭಿಪ್ರಾಯಗಳಿರುವುವು. **ರಾಜಸಿಂಹ** ಎಂಬ ಹೆಸರು ಯಾವ ರಾಜನ ಹೆಸರೂ ಆಗಿರಲಾರದು. ಇದು ರಾಜಶ್ರೇಷ್ಠ ಎಂಬ ಅರ್ಥದಲ್ಲಿ ಉಪಯುಕ್ತವಾಗಿರಬೇಕು. ಇದು ಸಾಮಾನ್ಯೋಕ್ತಿಯಾಗಿರಬಹುದು ಎಂದು ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳವರು ಅಭಿಪ್ರಾಯಪಟ್ಟಿರುವರು[1]. ಈ ರಾಜನು ಕ್ರಿ.ಶ. ೭ ನೆಯ ಶತಮಾನದಲ್ಲಿದ್ದ ಪಾಂಡ್ಯದೊರೆ ತೇರುಮಾರನ್ ರಾಜಸಿಂಹನಿರಬಹುದೆಂದು ಶ್ರೀ ಎಲ್. ಡಿ. ಬಾರ್‌ನೆಟ್‌ರವರೂ[2] ಕ್ರಿ.ಶ. ೮ ನೆಯ ಶತಮಾನದಲ್ಲಿದ್ದ ರಾಜಸಿಂಹನೆಂದು ಕರೆಯಲ್ಪಡುತ್ತಿದ್ದ ಪಲ್ಲವದೊರೆ ೨ ನೆಯ ನರಸಿಂಹವರ್ಮನಿರಬಹುದೆಂದು ಶ್ರೀ ರಂಗಸಾಮಿ ಸರಸ್ವತಿಯವರೂ[3] ಅಭಿಪ್ರಾಯಪಟ್ಟಿದ್ದಾರೆ. ಆದರೆ **ಅರಿನರಪತಿ** ಮತ್ತು **ಉಪೇಂದ್ರ** ಎಂಬ ಹೆಸರುಗಳು ಯಾವ ರಾಜರುಗಳಿಗಾದರೂ ಅನ್ವಯಿಸುವುವೇ ಅಥವ ಅವುಗಳೂ ರಾಜ ಎಂಬ ಅರ್ಥದಲ್ಲಿ ಮಾತ್ರ ಉಪಯೋಗಿಸಲ್ಪಟ್ಟಿರುವುವೇ ಎಂಬುದನ್ನು ಯಾರೂ ಪರ್ಯಾಲೋಚಿಸಿದಂತೆ ಕಂಡು ಬಂದಿರುವುದಿಲ್ಲ.

ರಾಜಸಿಂಹ, ಅರಿನರಪತಿ ಮತ್ತು **ಉಪೇಂದ್ರ** ಎಂಬ ಪರ್ಯಾಯನಾಮವುಳ್ಳ **ಸಿಂಹವಿಷ್ಣು** ಎಂಬ ಮೂರು ರಾಜರು ಏಕ-ಕಾಲದಲ್ಲಿ ದಕ್ಷಿಣ ಭರತಖಂಡದಲ್ಲಿ ಆಳುತ್ತಿದ್ದರು ಎಂದು ಇತಿಹಾಸದಿಂದ ಗೊತ್ತಾಗುವುದು. ವಿವರ ಈ ರೀತಿ ಇದೆ:—

ರಾಜಸಿಂಹ—ಬಾದಾಮಿಯ ಚಾಲುಕ್ಯ ರಾಜ್ಯವನ್ನು ಸ್ಥಾಪಿಸಿದ ವಿಜಯಾದಿತ್ಯನು ಅಕಾಲಮೃತ್ಯುವಶವಾದನು. ಆಗ ಗರ್ಭಿಣಿಯಾಗಿದ್ದ ಇವನ ರಾಣಿಯನ್ನು ಋಷಿಸಮಾನನಾದ ವಿಷ್ಣುಸೋಮಯಾಜಿ ಎಂಬ ಬ್ರಾಹ್ಮಣನು ರಕ್ಷಿಸಿದನು. ಅಲ್ಲಿ ಜನಿಸಿದ ರಾಜಕುಮಾರನೇ **ರಾಜಸಿಂಹ**[4]. ಈ ರಾಜಕುಮಾರನಿಗೆ ಜಯಸಿಂಹವಲ್ಲಭ ಮತ್ತು ವಿಷ್ಣುವರ್ಧನ ಎಂಬ ಹೆಸರುಗಳೂ ಇದ್ದುವು. ಡಾ|| ಕೀಲ್‌ಹಾರ್ನ್‌ರವರ ಪಟ್ಟಿಯಲ್ಲಿ ಈ ರಾಜನನ್ನು **ರಾಜಸಿಂಹ,** ರಣನಾಗ ಮತ್ತು ವಿಷ್ಣುವರ್ಧನ ಎಂದು ಕರೆದಿದೆ. ಈ ನಾಟಕ-ಚಕ್ರದಲ್ಲಿ ಉಕ್ತವಾಗಿರುವ ರಾಜಸಿಂಹ ಈ ರಾಜನೇ ಇರಬಹುದು; ಇವನ ಕಾಲ ಸುಮಾರು ಕ್ರಿ.ಶ. ೪೮೩ ರಿಂದ ೪೦ ವರ್ಷಗಳಿರಬಹುದೆಂಬುದನ್ನು ಮುಂದೆ ವಿವರಿಸಲಾಗುವುದು.

---

[1] ಭಾಸಕವಿ ಪುಟ ೮ ಅಡಿ ಟಿಪ್ಪಣಿ.

[2] *Classical Sanskrit Literature* by Sri M. Krishnamacharyar, p. 558 foot note 7.

[3] *Q. J. M. S.* XIII 686.

[4] Sri Hayavadana Rao's *Mysore Gezetteer*, Vol II, p. 706-707.

ಅರಿನರಪತಿ—ಚಾಳುಕ್ಯರಾಜಸಿಂಹನ ಅಜ್ಜ ಅಂದರೆ ತಾಯಿಯ ತಂದೆಯಾದ ದುರ್ವಿನೀತ ಗಂಗನನ್ನು ಅವನ ರಾಜ್ಯಭಾರದ ೪೦ ನೆಯ ವರ್ಷದ ನಲ್ಲಾಳ ತಾಮ್ರಶಾಸನದಲ್ಲಿ "ಶ್ರೀಮತ್ ಕೊಂಗಣಿ **ವೃದ್ಧರಾಜೇನ ಅರಿನರಪತಿ** ಶ್ರೀ ದುರ್ವಿನೀತ ನಾಮಧೇಯೇನ" ಎಂಬ ಪ್ರಶಸ್ತಿಯಿಂದ ಹೊಗಳಿದೆ. ಆದ್ದರಿಂದ ಕವಿಪೋಷಕನು ಈ '**ಅರಿನರಪತಿ**' ಇರಬಹುದೇ ಎಂದು ಊಹಿಸಲು ಸಾಧ್ಯವಿದೆ. ಅವಿನೀತ ಮತ್ತು ದುರ್ವಿನೀತರಿಗೆ '**ವೃದ್ಧರಾಜ**' ಎಂಬ ಹೆಸರೂ ಶಾಸನಗಳಲ್ಲಿ ಉಕ್ತವಾಗಿರುವುದು. ರಾಜಸಿಂಹನು ಈ ವೃದ್ಧರಾಜರ ದೌಹಿತ್ರ ಕುಲದವನು[6] ಎಂಬುದನ್ನು ಸೂಚಿಸುವ ಉದ್ದೇಶದಿಂದಲೇ ಕವಿಯು **ವೃದ್ಧಕುಲ** ಎಂಬ ಪದವನ್ನು ಉಪಯೋಗಿಸಿರುವಂತೆ ಭಾಸವಾಗುವುದು.

ಉಪೇಂದ್ರ—ಉಪೇಂದ್ರನಾಮವು ವಿಷ್ಣುವಿನ ೨೪ ಹೆಸರುಗಳಲ್ಲಿ ಒಂದು. ಪಲ್ಲವರಾಜನಾದ ಕಂಚಿಯ ಸಿಂಹವಿಷ್ಣುವಿಗೆ ಈ **ಉಪೇಂದ್ರ** ನಾಮವು ಅನ್ವಯಿಸಿರಬಹುದು. ಚಾಳುಕ್ಯ ರಾಜಸಿಂಹ, ಅರಿನರಪತಿ ದುರ್ವಿನೀತ ಗಂಗ ಮತ್ತು ಕಂಚಿಯ ಪಲ್ಲವ ಸಿಂಹವಿಷ್ಣು ಈ ಮೂರು ರಾಜರೂ ಸಮಕಾಲೀನರೆಂದೂ ಭಾರವಿಯು ಈ ಮೂರು ರಾಜರ ಆಸ್ಥಾನವನ್ನು ಅಲಂಕರಿಸಿದ್ದನೆಂದೂ ದಂಡಿಯ ಅವಂತಿಸುಂದರೀಕಥೆಯಿಂದ ತಿಳಿದುಬಂದಿದೆ.

ದುರ್ವಿನೀತ ಗಂಗನಿಗೆ "ಯುಗಯುಗಕಾರಣ ನರರೂಪುವಿಷ್ಣು," ಎಂದು ಹೆಬ್ಬೆಟ್ಟ ತಾಮ್ರಪಟ್ಟಿಯಲ್ಲಿ ಉಕ್ತವಾಗಿದೆ[7]. ಆದ್ದರಿಂದ ಈ ಉಪೇಂದ್ರನಾಮವು ದುರ್ವಿನೀತನಿಗೇ ಅನ್ವಯಿಸಬಹುದೇ ಎಂಬ ಸಮಸ್ಯೆಯು ಉಂಟಾಗುವುದು. ಹೀಗೆಯೇ ಎಂದು ನಿರ್ಧರಿಸುವುದಕ್ಕೆ ಸಾಕಾದಷ್ಟು ಆಧಾರಗಳು ದೊರೆತಿಲ್ಲ.

III

ಕವಿಯು ಅರಿತಿದ್ದ ಬೃಹತ್ಕಥೆ—ಶಾತವಾಹನನ ಮಂತ್ರಿ ಗುಣಾಢ್ಯನಿಂದ ಪೈಶಾಚಿ ಭಾಷೆಯಲ್ಲಿ ಏಳು ಕಥೆಗಳು ರಚಿತವಾದವು. ಅವುಗಳಲ್ಲಿ ಆರನ್ನು ಗುಣಾಢ್ಯನೇ ಬೆಂಕಿಯಲ್ಲಿ ಹಾಕಿ ದಹಿಸಿದನು. ಉಳಿದ ಏಳನೆಯ ಕಥೆಯನ್ನು

[5] *M.A.R. 1942 Inscription 79.*

[6] ವಸುಧೆಗೆ ರಾವಣಪ್ರತಿಮನೆಂಬ ನೆಗಳ್ಕೆಯ ಕಾಡುವೆಟ್ಟಯಂ
ವಿಸಸನ ರಂಗದೊಳ್ ಪಿಡಿದು ತನ್ನ ತನೂಜೆಯ ಪುತ್ರನಂ ಪ್ರತಿ
ಷ್ಠಿಸಿ ಜಯಸಿಂಹವಲ್ಲಭನನ್ವಯರಾಜ್ಯದೊಳುರ್ವಿಯೊಳ್ ವಿಗು
ರ್ವಿಸಿದನಿದೇನಗುರ್ವೊ ನಿಜ ದೋರ್ಬಲದುನ್ನತಿ ದುರ್ವಿನೀತನಾ ||
(ನಗರ ೩೫—ಹುಂಬಚದ ಶಿಲಾಶಾಸನ)

[7] *Q. J. M. S.* XXXVI 130.

ಶಾತವಾಹನನು ಕೇಳಿ ಅದಕ್ಕೆ ಮುನ್ನುಡಿಯನ್ನು ಬರೆದನು. ಅವನ ಕಾಲ ಸುಮಾರು ಕ್ರಿ.ಶ. ೭೮. ಈ ಕಥೆಗೆ ಬೃಹತ್ಕಥೆ ಎಂದೂ ವಡ್ಡಕಥೆ ಎಂದೂ ಹೆಸರಿದೆ.

ಪೈಶಾಚಿ ಭಾಷೆಯ ಬೃಹತ್ಕಥೆಯು ಈಗ ಉಪಲಬ್ಧವಿಲ್ಲ. ಆದರೆ ಕ್ರಿ.ಶ. ೧೧ನೆಯ ಶತಮಾನದ ಅಂತ್ಯದವರೆಗಾದರೂ ಬಾಳಿತ್ತೆಂದು ತಿಳಿದುಬರುವುದು. ಪೈಶಾಚಿ ಕಥೆಯ ಆಧಾರದ ಮೇಲೆ ಬೇರೆ ಬೇರೆ ಕವಿಗಳು ಸಂಸ್ಕೃತದಲ್ಲಿ ಕಥೆಗಳನ್ನು ರಚಿಸಿದರು. ಅವುಗಳು ಮಾತ್ರ ಈಗ ದೊರೆಯುತ್ತವೆ. (೧) ನೇಪಾಳದಲ್ಲಿ ದೊರಕಿದ ಬುಧಸ್ವಾಮಿಯ 'ಬೃಹತ್ಕಥಾಶ್ಲೋಕ'ಸಂಗ್ರಹ. (೨) ಕಾಶ್ಮೀರದಲ್ಲಿ ದೊರಕಿದ ಕ್ಷೇಮೇಂದ್ರನ ಬೃಹತ್ಕಥಾಮಂಜರಿ. (೩) ಅದೇ ಕಾಶ್ಮಿರದಲ್ಲಿಯೇ ದೊರೆತ ಸೋಮದೇವನ 'ಕಥಾಸರಿತ್ಸಾಗರ.' ಇವುಗಳಲ್ಲದೆ ತಮಿಳಿನಲ್ಲಿ (೪) 'ಪೆರುಂಗತೈ' ಎಂಬ ಬೃಹತ್ಕಥೆಯ ಭಾಷಾಂತರವೂ ಇದೆ. (೫) ಗಂಗರಾಜ ದುರ್ವಿನೀತನು "ದೇವಭಾರತೀ ನಿಬದ್ಧ ಬೃಹತ್ಕಥೇಣ ಅಥವ ವಡ್ಡಕಥೇಣ ಎಂಬ ಪ್ರಶಸ್ತಿಯನ್ನು ಪಡೆದಿದ್ದನು. ಅಂದರೆ ದುರ್ವಿನೀತನು ಪೈಶಾಚೀ ಭಾಷೆಯಿಂದ ಸಂಸ್ಕೃತಕ್ಕೆ ಬೃಹತ್ಕಥೆಯನ್ನು ಭಾಷಾಂತರಮಾಡಿದ್ದನು. ಇದೂ ಉಪಲಬ್ಧವಿಲ್ಲ. ಇದರ ಆಧಾರದಮೇಲೆ ಕೊಂಗನಾಡಿನ ಕೊಂಗುವೇಳಿರ್ ಎಂಬ ಕಿರಿಯರಸನೊಬ್ಬನು ತಮಿಳು 'ಪೆರುಂಗತೈ' ಯನ್ನು ರಚಿಸಿರಬೇಕು ಎಂದು 'ಪೆರುಂಗತೈ' ಸಂಪಾದಕರಾದ ಡಾ|| ಸ್ವಾಮಿನಾಥ ಐಯ್ಯರವರು ಊಹಿಸಿರುತ್ತಾರೆ.[8]

ಪ್ರತಿಜ್ಞಾಯೌಗಂಧರಾಯಣ, ಸ್ವಪ್ನವಾಸವದತ್ತ ಇವೆರಡರ ವಸ್ತುವು ಬೃಹತ್ಕಥೆಯಿಂದ ತೆಗೆದುಕೊಂಡದ್ದು; ಇವರಂತೆ ಅವಿಮಾರಕ, ಚಾರುದತ್ತ ಇವೆರಡಕ್ಕೂ ಬೃಹತ್ಕಥೆಯೇ ಮೂಲವಾಗಿದ್ದರೂ ಇರಬಹುದು[9]. ಪ್ರತಿಜ್ಞಾ ಮತ್ತು ಸ್ವಪ್ನವಾಸವದತ್ತ ಇವೆರಡನ್ನೂ ಮೇಲೆ ಹೇಳಿರುವ ಬೃಹತ್ಕಥೆಗಳೊಂದಿಗೆ ಹೋಲಿಸಿದರೆ ಪೆರುಂಗತೈಯಲ್ಲಿ ಹೆಚ್ಚು ಸಾಮ್ಯವಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಶ್ರೀ ಎಲ್. ಗುಂಡಪ್ಪನವರು ವಿವರಿಸಿರುವಂತೆ ಈ ಸಾಮ್ಯಗಳನ್ನು ಕೆಳಗೆ ಕೊಟ್ಟಿದೆ.

ಪ್ರತಿಜ್ಞಾಯೌಗಂಧರಾಯಣ, 'ಪೆರುಂಗತೈ'—ಈ ಎರಡರಲ್ಲೂ ಉದಯನನನ್ನು ಸೆರೆಹಿಡಿದು ತರುವವನು ಶಾಲಂಕಾಯನ. ಯೌಗಂಧರಾಯಣನು ಉಜ್ಜಯಿನಿಗೆ ಏಕಾಏಕಿ ಬರದೆ ಪರಿವಾರದೊಡನೆ ಬರುವುದು, ನಲಗಿರಿಗೆ ಮದವೇರಿಸಿ ಆ ಮೂಲಕ ಉದಯನನನ್ನು ಸೆರೆಯಿಂದ ಬಿಡಿಸುವುದು, ಉದಯನನು ಮೊದಲು

[8] ಶ್ರೀ ಎಲ್. ಗುಂಡಪ್ಪನವರ ಪ್ರತಿಜ್ಞಾಯೌಗಂಧರಾಯಣದ ಮುನ್ನುಡಿ ಪುಟ, XIII.

[9] ಭಾಸಕವಿ, ಪುಟ ೪೯.

ವಾಸವದತ್ತೆಯ ಸಂಗತಿಯನ್ನೇ ಅರಿಯದಿದ್ದು ಅಕಸ್ಮಾತ್ತಾಗಿ ಅವಳನ್ನು ಕಂಡು ಮೋಹಿಸುವುದು, ಆ ಮೇಲೆ ಮಹಾಸೇನನು ಅವಳನ್ನು ಮಗಳಿಗೆ ವಿದ್ಯಾಗುರುವಾಗಿ ನೇಮಿಸುವುದು, ಉದಯನ ವಾಸವದತ್ತೆಯರು ಓಡಿಹೋದ ಮೇಲೆ ಅವರನ್ನು ಬೆಂಬತ್ತಿದ ಸೇನೆಯೊಡನೆ ಯೌಗಂಧರಾಯಣನ ಕಡೆಯವರು ಯುದ್ಧ ಮಾಡುವುದು, ಎಲ್ಲಕ್ಕಿಂತ ಮುಖ್ಯವಾಗಿ ದೊರೆಯನ್ನೇ ಬಿಡಿಸಿ ವಾಸವದತ್ತೆಯನ್ನು ಹರಣಮಾಡಿ ಕೊಂಡು ಹೋಗುವುದಾಗಿ ಯೌಗಂಧರಾಯಣನು ಪ್ರತಿಜ್ಞೆಮಾಡುವುದು—ಇವಿಷ್ಟೂ ಸಂಸ್ಕೃತ ಗ್ರಂಥಗಳಲ್ಲಿ ದೊರೆಯದೆ 'ಪೆರುಂಗತೈ'ಯಲ್ಲಿ ಮಾತ್ರ ಸಿಕ್ಕುವ ವಿವರಗಳು.

ಸಂಸ್ಕೃತ ಬೃಹತ್ಕಥೆಗಳಿಗಿಂತ ಪೆರುಂಗತೈಯೇ ಪ್ರತಿಜ್ಞಾಯೌಗಂಧರಾಯಣ ನಾಟಕಕ್ಕೆ ಹೆಚ್ಚು ಸಾಮ್ಯವಿರುವುದರಿಂದ, ಈ ೧೩ ರೂಪಕಗಳ ಗ್ರಂಥಕಾರನು ಪೆರುಂಗತೈ ಅಥವ ಅದರ ಮೂಲವಾದ ದುರ್ವಿನೀತನ ಬೃಹತ್ಕಥೆಯನ್ನು ನೋಡಿದ್ದ ನೆಂದು ಧಾರಾಳವಾಗಿ ಹೇಳಬಹುದಾಗಿದೆ.

IV

ನಾಟಕಗಳು ಮತ್ತು ಚರಿತ್ರೆಯ ಘಟನೆಯ ಸಾದೃಶ್ಯಗಳು :—ಪ್ರತಿಜ್ಞಾ ಮತ್ತು ವಾಸವದತ್ತ ನಾಟಕಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದಲ್ಲಿ, ಇವೆರಡರಲ್ಲಿ ಕಂಡುಬರುವ ಘಟನೆಗಳಿಗೂ, ಪಾತ್ರ ಮತ್ತು ಸ್ಥಳಗಳ ಹೆಸರುಗಳಿಗೂ, ಗಂಗವಂಶದ ದೊರೆಗಳಾದ ಅವಿನೀತ ಮತ್ತು ದುರ್ವಿನೀತರ ಗೊತ್ತಾದ ಚರಿತ್ರೆಯ ಘಟನೆಗಳಿಗೂ ಹೆಸರುಗಳಿಗೂ ಹೆಚ್ಚು ಸಾದೃಶ್ಯಗಳು ಕಂಡುಬರುತ್ತವೆ. ಈ ರಾಜರುಗಳು ಕ್ರಿ.ಶ. ೪೩೦ ರಿಂದ ೫೨೦ ರ ವರೆಗೆ ಒಟ್ಟು ತೊಂಬತ್ತು ವರ್ಷಗಳ ಕಾಲ ಅರಸರಾಗಿದ್ದರು.

(೧) ಪ್ರತಿಜ್ಞಾನಾಟಕವು ಕುಮಾರಸ್ವಾಮಿಯ ಪ್ರಾರ್ಥನೆಯಿಂದ ಆರಂಭ ವಾಗಿದೆಯಷ್ಟೆ. ಈ ರೂಪಕದಲ್ಲಿ ಮಹಾಸೇನ ಎಂಬ ಪ್ರದ್ಯೋತನನ ಬಿರುದು ವಿನಾ ಕುಮಾರಸ್ವಾಮಿಯ ಭಕ್ತರಾದ ಪಾತ್ರಗಳು ಮತ್ತಾರೂ ಇಲ್ಲ. ಆದರೂ ಕುಮಾರ ಸ್ವಾಮಿಯನ್ನು ಧ್ಯಾನಮಾಡಿರುವುದೇಕೆ? ಎಂಬ ಪ್ರಶ್ನೆ ಉದ್ಭವಿಸುವುದು. ಅವಿನೀತನ ತಾಯಿಯ ತವರುಮನೆಯವರಾದ ಕದಂಬರು ಸ್ವಾಮಿ ಮಹಾಸೇನನನ್ನು ಧ್ಯಾನಿಸಿರು ವರು.[10] ಅವಿನೀತನ ಹಿರಿಯ ರಾಣಿಯಾದ ಜ್ಯೇಷ್ಠಾದೇವಿಯ ತವರುಮನೆಯವರಾದ ಪುನ್ನಾಟರಲ್ಲಿ ಶಿವಸ್ಕಂದವರ್ಮರಾಜ ಎಂಬ ಹೆಸರಿರುವುದರಿಂದ ಅವರೂ ಕುಮಾರ ಸ್ವಾಮಿಯ ಭಕ್ತರೆಂದು ನಿರ್ಣಯವಾಗುವುದು. ಗಂಗರಸರಿಗೆ ಆಪ್ತಬಂಧುಗಳಾದ

[10] ಷಿಕಾರಿಪುರ ೧೭೬ ನೆಯ ಶಾಸನದಲ್ಲಿ "ಸ್ವಾಮಿ ಮಹಾಸೇನ ಮಾತೃಗಣಾನು ಧ್ಯಾತಾಭಿಷಿಕ್ತಾನಾಂ" ಎಂದು ಕದಂಬರಾಜರ ವಿಷಯದಲ್ಲಿ ಹೇಳಿದೆ.

ಪಲ್ಲವರೂ ಶಿವಸ್ಕಂದ ಎಂಬ ಹೆಸರನ್ನು ಧರಿಸಿದ್ದಾರೆ. ಹೀಗೆ ಗಂಗರ ಬಳಗದವರೆಲ್ಲಾ ಕುಮಾರಸ್ವಾಮಿಯ ಭಕ್ತರಾದುದರಿಂದ ನಾಟಕದಲ್ಲಿಯೂ ಆ ಕುಮಾರಸ್ವಾಮಿಯನ್ನು ಪ್ರಾರ್ಥಿಸಿದಂತೆ ಕಾಣುತ್ತದೆ.

(೨) ಉದಯನನು ವಿವಾಹಕ್ಕೆ ಮುಂಚೆಯೇ—ಇನ್ನೂ ಬಾಲಕನಾಗಿರುವಾಗಲೇ—ರಾಜ್ಯಾಭಿಷಿಕ್ತನಾದನು. ಅವಿನೀತನು "ಜನನೀದೇವತಾಂಕ-ಪರ್ಯಂಕತಳಸಮಾಧಿಗತರಾಜ್ಯವಿಭವವಿಲಾಸ" ಅಂದರೆ ತಾಯಿಯ ಉಡಿಯಲ್ಲಿದ್ದಾಗಲೇ ರಾಜ್ಯಾಭಿಷಿಕ್ತನಾದನು.

(೩) ಉದಯನನು ಭರತಾದಿ ರಾಜ ಋಷಿಗಳ ವಂಶೀಕ; ವಂಶಾನುಗತವಾಗಿ ಲಭಿಸಿದ ಗಾಂಧರ್ವವಿದ್ಯಾಪರಿಣತ; ರೂಪವಂತ; ಪುರಜನರ ಅನುರಾಗಕ್ಕೆ ಪಾತ್ರ[11] ಮತ್ತು ಕುಂಜರವಿಜ್ಞಾನದೃಪ್ತ. ಈ ಸದ್ಗುಣಗಳು ಅವಿನೀತನಲ್ಲಿಯೂ ಇವೆ. ಅವಿನೀತನು ಭರತಾದಿ ರಾಜಋಷಿಗಳ ವಂಶೀಕ; ಹರಿಶ್ಚಂದ್ರರೋಹಿಣಿಯರ ಮಗ ಭರತ; ಭರತವಿಜಯಮಹಾದೇವಿಯರ ಮಗ ಗಂಗದತ್ತ;[12] ತಲಕಾಡು ಗಂಗರು ಗಂಗದತ್ತನ ವಂಶೀಕರು. ಅಂದಮೇಲೆ ಭರತಾದಿ ರಾಜಋಷಿಗಳ ವಂಶೀಕ ಎಂಬುದು ಸ್ಪಷ್ಟವಾಗಿಯೇ ಇದೆ. ಅವಿನೀತನ ಮಗ ದುರ್ವಿನೀತನು ಗಂಧರ್ವ—ನಾಟ್ಯಶಾಸ್ತ್ರಾದಿಗಳಲ್ಲಿ ತುಂಬುರ, ನಾರದ, ಭರತಾದಿಗಳಂತೆ ಪ್ರಸಿದ್ಧನಾದವನು[13]; ಇದು ಕುಲಕ್ರಮಾನುಗತನಾಗಿ ಬಂದ ವಿದ್ಯೆಯಾಗಿರಬೇಕು. ಅವಿನೀತನು ಗಂಧರ್ವ

---

[11] ಉತ್ಸೇಕಯತ್ಯೇನಂ ಪ್ರಕಾಶ ರಾಜರ್ಷಿ ನಾಮಧೇಯೋ ವೇದಾಕ್ಷರ ಸಮವಾಯ ಪ್ರವಿಷ್ಟೋ ಭಾರತೋವಂಶಃ | ದರ್ಪಯತ್ಯೇನಂ ದಾಯಾದ್ಯಾಗತೋ ಗಾಂಧರ್ವೋವೇದಃ | ವಿಭ್ರಮಯತ್ಯೇನಂ ವಯಸ್ಸಹಜಂ ರೂಪಮ್ | ವಿಸ್ರಂಬಯತ್ಯೇನಂ ಕಥಮಪ್ಯುತ್ಪನ್ನೋಸ್ಯ ಪೌರಾನುರಾಗಃ | ಭಾಸನಾಟಕ ಚಕ್ರಮ್. ಸಂಪಾದಕರು ಶ್ರೀ ದೇವಧರ್, ಪುಟ ೮೦

[12] ಆತನ ಪುತ್ರನಿಂದುಹರನಿಭೋಜ್ವಳಕೀರ್ತಿ ಸದ್ಗುಣೋ ?
ಪೇತನುದಾತ್ತವೈರಿಕುಳಭೇದನಕಾರಿ ಕಲಾಪ್ರವೀಣನು |
ದ್ಧೂತಮಳಂ ಸುರೇಂದ್ರ ಸದೃಶಂ ಭರತಂ ಕವಿರಾಜಪೂಜಿತಂ
ಖ್ಯಾತನತರ್ಕ್ಯಪುಣ್ಯನಿಳಯಂ ಸುಜನಾಗ್ರಣಿ ವಿಶ್ರುತಾನ್ವಯಂ ||

ರಿಜುಶೀಳಯುಕ್ತೆಯೆನಿಸಿದ
ವಿಜಯಮಹಾದೇವಿ ಎನಿಸಿ ವಿಬುಧ |
ವ್ರಜಪೂಜ್ಯಂ ಭರತಂ ಭಾ
ವಜ ಸದೃಶಂ ತಾನೆ ಸಕಳಧಾತ್ರೀತಳದೊಳು ||
(ಶಿವಮೊಗ್ಗ ಶಾಸನಗಳು ೪ ಮತ್ತು ೬೪)

[13] *M. A. R. 1924-Inscription 79.*

ವೇದನಿಪುಣನೆಂಬುದು ಇದರಿಂದ ಸ್ಪಷ್ಟವಾಗುವುದು. ಅವಿನೀತನು 'ವರಾಙ್ಗನಾ ಪಾಙ್ಗ ಶರವಿಕ್ಷೇಪ ಲಕ್ಷ್ಯಾಙ್ಗನು' ಅಂದರೆ ರೂಪವಂತ[14]. ಪ್ರಜೆಗಳ ರಕ್ಷಣೆಯೆಂಬ ದೀಕ್ಷೆಯಿಂದ ಶಾಪ ಪರಿಹಾರಮಾಡಿಕೊಂಡವನು ಅಂದರೆ ಪ್ರಜೆಗಳ ರಕ್ಷಣೆಯಿಂದ ಅವರ ಅನುರಾಗಕ್ಕೆ ಪಾತ್ರನಾಗಿದ್ದವನು;[15] ಆನೆಯನ್ನು ನಡೆಸುವುದರಲ್ಲಿಯೂ ನಿಪುಣ—'ಗಜಧುರಿ—ಚ-ಅದ್ವಿತೀಯೇಣ' ಮತ್ತು 'ಕರಿ-ತುರಗವರಾರೋಹಣಸೌಷ್ಟವಜನಿತ ಗುಣವಿಶೇಷೇಣ' ಎಂದು ಇವನ ಪ್ರಶಸ್ತಿಗಳಲ್ಲಿ ಹೇಳಿದೆ[16]. ಈ ರೀತಿ ಈ ಸದ್ಗುಣಗಳನ್ನು ಉದಯನ ಮತ್ತು ಅವಿನೀತ ಇಬ್ಬರಿಗೂ ಅನ್ವಯಿಸುವಂತೆ ಚಾತುರ್ಯದಿಂದ ಕವಿಯು ಈ ರೂಪಕವನ್ನು ರಚಿಸಿದಂತೆ ವ್ಯಕ್ತವಾಗುವುದು.

(೪) ಅವಿಮಾರಕ ಮತ್ತು ಕುರಂಗಿಯರ ವಿವಾಹವೂ ಉದಯನ ಮತ್ತು ವಾಸವದತ್ತೆಯರ ವಿವಾಹವೂ ಪರಸ್ಪರಾನುರಾಗದಿಂದ ಆದಂತೆಯೇ ಅವಿನೀತ ಮತ್ತು ಜ್ಯೇಷ್ಠಾದೇವಿಯರ ವಿವಾಹವೂ ಸ್ವಯಂವರರೀತ್ಯಾ ನಡೆದಿದೆ. 'ಪುನ್ನಾಟರಾಜ ಸ್ಕಂದವರ್ಮಪ್ರಿಯಪುತ್ರಿಕಾ ಜನ್ಮನಾ ಸ್ವಗುರು ಗುಣಾನುಗಾಮಿನಾ ಪಿತ್ರಾಪ್ರರಸುತಸಮಾವರ್ಜಿತಯಾಪಿ ಲಕ್ಷ್ಮ್ಯಾ ಸ್ವಯಮಪಿ ಪ್ರತ್ಯಾಲಿಂಗಿ ವಿಪುಲ ವಕ್ಷಸ್ಥಲೇನ[17].' ಪುನ್ನಾಟರಾಜ ಸ್ಕಂದವರ್ಮನು ತನ್ನ ಓರ್ವಳೇ ಮಗಳಾದ ಜ್ಯೇಷ್ಠಾಕುಮಾರಿಯನ್ನು ತನ್ನ ಗುರುವಿನ ಆಜ್ಞೆಯಂತೆ ಓರ್ವ ರಾಜಕುಮಾರನಿಗೆ ಕೊಟ್ಟು ವಿವಾಹಮಾಡಲು ನಿರ್ಧರಿಸಿದ್ದನು. ಆದರೆ ರಾಜಕುಮಾರಿಯು ಸ್ವಯಂವರವನ್ನು ಅಪೇಕ್ಷಿಸಿ ತುಂಬಿ ಹರಿಯುತ್ತಿದ್ದ ಕಾವೇರಿಯನ್ನು ಈಜಿಬಂದ ಸಾಹಸವಂತ ಅವಿನೀತನನ್ನು ವರಿಸಿ ವಿವಾಹವಾದಳು.

(೫) ಉದಯನನ ಮಾವನ ಹೆಸರು ಪ್ರದ್ಯೋತ. ಆದರೂ ಸ್ಕಂದಸ್ವಾಮಿಯ ಪರ್ಯಾಯನಾಮವಾದ ಮಹಾಸೇನ ಎಂದು ಕರೆದಿದೆ. ಅವನೀತನ ಮಾವನ ಹೆಸರೂ ಸ್ಕಂದವರ್ಮ. ಇವನ ರಾಜಧಾನಿ ಕೀರ್ತಿಪುರಕ್ಕೆ ಮಹಾಸೇನಪುರ ಎಂದೂ ರಾಜನಿಗೆ ಮಹಾಸೇನಾ ಎಂಬ ಇನ್ನೊಂದು ಹೆಸರಿತ್ತೆಂದೂ ಶಾಸನಗಳಿಂದ ಊಹಿಸಬಹುದಾಗಿದೆ.

(೬) ಕಾತ್ಯಾಯಿನೀ ದೇವತೆಯ ಹೆಸರು ಬೃಹತ್ಕಥೆಯಲ್ಲಿಲ್ಲ. ದುರ್ವಿನೀತನು

---

14 *M. A. R. 1938 Inscription I* ಮತ್ತು ಮಾಲೂರು 72.

15 ಮಾಲೂರು 72.

16 *M. A. R. 1938 Inscription I*

17 ಮದ್ದಗಿರಿ 110

'ಕಾತ್ಯಾಯಿನೀಚರಣಪಂಕೇರುಹಪರಿಚರಣವಿಶುದ್ಧಾನ್ತರಾತ್ಮ'ನಾಗಿದ್ದನು. ಅವಿನೀತ ಮತ್ತು ದುರ್ವಿನೀತನ ಕಾಲದಲ್ಲಿ ಕಾತ್ಯಾಯಿನೀ ಪೂಜೆಗೆ ಪ್ರಾಧಾನ್ಯವಿತ್ತು[18]

(೭) ಉದಯನನಿಗೆ ಈ ರೂಪಕಗಳ ಪ್ರಕಾರ ವಾಸವದತ್ತಾದೇವಿ ಮತ್ತು ಪದ್ಮಾವತಿ ಎಂಬ ಈರ್ವರು ರಾಣಿಯರಷ್ಟೆ. ಅವಿನೀತನಿಗೂ ಜ್ಯೇಷ್ಠಾದೇವಿ ಎಂಬ ಹಿರಿಯ ರಾಣಿಯೂ ಇನ್ನೊಬ್ಬ ಕಿರಿಯ ರಾಣಿಯೂ ಇದ್ದರೆಂದು ಚರಿತ್ರೆಯಿಂದ ಗೊತ್ತಾಗುವುದು.

(೮) ದೈವಜ್ಞರಾದ ಪುಷ್ಪಕ ಭದ್ರಾದಿಗಳು ಪದ್ಮಾವತಿಯು ಉದಯನನ ಸಹ ಧರ್ಮಿಣಿಯಾಗುವಳೆಂದು ಭವಿಷ್ಯ ನುಡಿದರಷ್ಟೆ. ಅವಿನೀತನ ಕಾಲದಲ್ಲಿ ಸಮಂತ ಭದ್ರನೆಂಬ ಜೈನಗುರುವೂ ಜ್ಯೋತಿಷ್ಯಗ್ರಂಥಕಾರನೂ ಇದ್ದನು. ಕವಿಯು ಈ ಸಮಂತಭದ್ರನನ್ನೇ ಭದ್ರ ಎಂದು ಹೇಳಿರಬಹುದೇ ?

(೯) ಭೋ ರಾಜನ್

> ಭಾರತಾನಾಂ ಕುಲೇ ಜಾತೋ **ವಿನೀತೋ** ಜ್ಞಾನವಾನ್ ಶುಚಿಃ |
> ತನ್ನಾರ್ಹಸಿ ಬಲಾದ್ಧರ್ತುಂ ರಾಜಧರ್ಮಸ್ಯ ದೇಶಿಕಃ ||

ಇಲ್ಲಿ ವಿನೀತ ಎಂಬ ಪದವನ್ನು ಉದಯನನಿಗೂ ಅವಿನೀತರಾಜನಿಗೂ ಅನ್ವಯಿಸುವಂತೆ ದ್ವಂದ್ವಾರ್ಥದಲ್ಲಿ ಕವಿಯು ಉಪಯೋಗಿಸಿದಂತೆ ತೋರುವುದು.

ಭಾರತ ಕಥಾರೂಪಕಗಳಾದ ಪಾಂಚರಾತ್ರಾದಿಗಳಲ್ಲಿ ದುರ್ವಿನೀತನ ಜೀವನ ಚರಿತ್ರೆಯ ಘಟನಾಸಾದೃಶ್ಯಗಳೂ ನಾಮಸಾದೃಶ್ಯಗಳೂ ಕಂಡುಬರುವುವು.

> (೧) ದ್ರೋಣಃ ಪೃಥಿವ್ಯರ್ಜುನ ಭೀಮದೂತೋ
> ಯಃ ಕರ್ಣಧಾರಃ ಶಕುನೀಶ್ವರಸ್ಯ |
> ದುರ್ಯೋಧನೋ ಭೀಷ್ಮಯುಧಿಷ್ಠಿರಃ ಸ
> ಪಾಯಾತ್ ವಿರಾಡುತ್ತರ ಗೋಽಭಿಮನ್ಯುಃ ||

ಇಲ್ಲಿ ರೂಪಕದ ಮುಖ್ಯಪಾತ್ರಗಳಂತಿರುವ ಪದಗಳೆಲ್ಲಾ ಶ್ರೀ ಕೃಷ್ಣನಿಗೆ ಅನ್ವಯಿಸು ವಂತೆ ಶ್ಲೋಕರಚನೆ ಮಾಡಿ ಕವಿಯು ತನ್ನ ಪಾಂಡಿತ್ಯವನ್ನು ತೋರ್ಪಡಿಸಿದ್ದಾನೆ. ದುರ್ವಿನೀತನು ಶಾಸನಗಳಲ್ಲಿ ವೃಷ್ಣಿಕುಲಕ್ಕೂ ಯದುವಂಶಕ್ಕೂ ಭೂಷಣನಾದ ಕೃಷ್ಣನಿಗೆ ಸಮಾನನಾದವನು ಎಂದು ಹೊಗಳಲ್ಪಟ್ಟಿದ್ದಾನೆ[19].

---

[18] *M. A. R. 1942-Inscription 31* ಬಾಲಚರಿತದಲ್ಲಿಯೂ ಕಾತ್ಯಾಯಿನಿಯ ಹೆಸರೂ ಉಕ್ತವಾಗಿದೆ.

[19] That he was equal to Krishna, the ornament of the Vrishni race and of his liniage (ಗುಮ್ಮರೆಡ್ಡಿಪುರ ತಾಮ್ರಪಟ *New Mysore gazetteer*, p. 628.

ಈ ಪದ್ಯದ ಅರ್ಥವನ್ನು ಕೃಷ್ಣನಿಗೆ ಸಮಾನನಾದವನೆಂದು ಹೊಗಳಲ್ಪಟ್ಟಿರುವ ದುರ್ವಿನೀತನಿಗೂ ಅನ್ವಯಿಸಬಹುದು.

(೨) 'ಸಾಂ ತ್ವಂ ಹಿ ನಾಮ **ದುರ್ವಿನೀತಾನಾಂ** ಔಷಧಂ' (ಪಂಚರಾತ್ರ) ಇಲ್ಲಿ ದುರ್ವಿನೀತಪದವು ದುರ್ಯೋಧನಾದಿಗಳಿಗೂ ದುರ್ವಿನೀತರಾಜನಿಗೂ ಅನ್ವಯಿಸುವಂತೆ ಕವಿಯು ದ್ವಂದ್ವಾರ್ಥದಿಂದ ಉಪಯೋಗಿಸಿದ್ದಾನೆ.

(೩) "ಜ್ಯೇಷ್ಠೋಭವಾನ್"—ದುರ್ಯೋಧನನು ಜ್ಯೇಷ್ಠನೆಂದು ಈ ರೂಪಕದಲ್ಲಿ ಹೇಳಿದೆ. ಭಾರತದಂತೆ ಧರ್ಮರಾಯನು ಎಲ್ಲರಿಗೂ ಹಿರಿಯನು. ಭೀಮ ದುರ್ಯೋಧನರು ಒಂದೇದಿನ ಜನಿಸಿದವರು. 'ಗಾಂಧಾರಿಮಾತಾ' ಎನ್ನುವಂತೆ ಜ್ಯೇಷ್ಠರಾಣಿಯಾದ ಗಾಂಧಾರಿಯೇ ತಾಯಿಯಾಗಿ ಉಳ್ಳವನು ಎಂದು ತೋರಿಸಲು ಜ್ಯೇಷ್ಠೋಭವಾನ್ ಎಂದು ಚಮತ್ಕಾರದಿಂದ ಹೇಳಿ ಜ್ಯೇಷ್ಠಾದೇವಿಯ ಕುಮಾರನಾದ ದುರ್ವಿನೀತನನ್ನು ಸೂಚಿಸುವಂತೆ ಈ ಪದಗಳು ಉಪಯೋಗಿಸಲ್ಪಟ್ಟಿವೆ.

(೪) ಪಾಂಡವರು ಅಜ್ಞಾತವಾಸದಲ್ಲಿದ್ದಾಗ ಕುರುರಾಜನು ಯಜ್ಞವನ್ನು ಮಾಡಿದನೆಂದು ಭಾರತದಲ್ಲಿಲ್ಲ. ಇದು ಕವಿ ಕಲ್ಪನೆಯಷ್ಟೆ. "ಪ್ರತಿಸಂವತ್ಸರಾನುಕ್ಷೇತ್ರೆ ವಿವಿಧ ವಿಶಿಷ್ಟ ಯಜ್ಞೇನ ಹಿರಣ್ಯಗರ್ಭಸ್ಯ ಮಹಾಯಜ್ಞಸ್ಯ ವಾ ವ್ರತಶಾಲಿ ಧರಾಧಿಪಿಕ್ತೇನ ಶ್ರೀಮತ್ ಕೊಂಗಣಿ ವೃದ್ಧರಾಜೇನ ಅರಿನರಪತಿ ಶ್ರೀ ದುರ್ವಿನೀತನಾಮಧೇಯೇನ"[20] ಎಂದು ಹೇಳಿರುವ ದುರ್ವಿನೀತನ ಯಜ್ಞಯಾಗಾದಿಗಳಲ್ಲಿ ಕಂಡ ವಿಷಯಗಳನ್ನೇ ಪಂಚರಾತ್ರದ ಮೊದಲನೆಯ ಅಂಕದಲ್ಲಿ ವರ್ಣನೆ ಮಾಡಿದಂತಿದೆ. ಅಲ್ಲದೆ ಈ ರೂಪಕಗಳಲ್ಲಿ ಅನೇಕ ಕಡೆ ಯಜ್ಞಗಳ ವಿಷಯ ಪ್ರಸ್ತಾಪಿಸಿರುವುದಕ್ಕೂ ದುರ್ವಿನೀತನು ನಲವತ್ತು ವರ್ಷಗಳ ಕಾಲ ವರ್ಷವರ್ಷವೂ ಮಾಡಿದ ಯಜ್ಞಗಳ ಪ್ರಾದುರ್ಭಾವವೇ ಕಾರಣವಿರಬಹುದು.

(೫) ಈ ನಾಟಕಗಳಲ್ಲಿ ಅವಿನೀತ, ದುರ್ವಿನೀತಾದಿಗಳ ಹೆಸರು ಮತ್ತು ಬಿರುದುಗಳನ್ನು ದ್ವಂದ್ವಾರ್ಥದಲ್ಲಿ ಉಪಯೋಗಿಸಿವೆ. ಅವುಗಳಲ್ಲಿ ಕೆಲವನ್ನು ಪಟ್ಟಿಯ ರೂಪದಲ್ಲಿ ಕೊಟ್ಟಿದೆ.

---

[20] ನಲ್ಲಾಳ ದಾನಪತ್ರ *M. A. R. 1924—Inscription 79.*

ಗ್ರಂಥದ ಆಧಾರ	ಉಪಯೋಗಿಸಿರುವ ಪದಗಳು	ರೂಪಕದ ಪಾತ್ರ	ಚರಿತ್ರೆಯಲ್ಲಿ ಯಾರಿಗೆ ಅನ್ವಯಿಸುವುದು	ವಿವರಣೆ
ದೂತವಾಕ್ಯ ಪದ್ಯ ೧೯	ವಿನೀತಾ	ಯಮಳರು	ಅವಿನೀತ; ವಿನೀತ; ನಿರ್ವಿನೀತಾ; ಕಾಂತಾವನೀತಾ; ಅಹಿತಾವನೀತಾ; ಅರಿನರಪನಿರ್ವಿನೀತಾ.	ದುರ್ವಿನೀತನ ಮಕ್ಕಳಾದ ಮುಷ್ಕರ ಮತ್ತು ಪೊಲವೀರರಿಗೆ ಅನ್ವಯಿಸಬಹುದು.
ದೂತವಾಕ್ಯ ಪದ್ಯ ೧೧	ವಿಪರೀತಮತಿಃ	ಯುಧಿಷ್ಠಿರ	ವಿಪರೀತನಾಮ ದುರ್ವಿನೀತ ಗಾಂಗೇಯಧ್ವಜ (ಅವಂತೀಸುಂದರೀಕತೆಯಲ್ಲಿ ಹೇಳಿದೆ)	ನಲ್ಲಾಳ ಶಾಸನದಲ್ಲಿ ದುರ್ವಿನೀತನಿಗೆ ಮೂರ್ತಿಮತೇವ ಧರ್ಮರಾಜ ಎಂದಿದೆ.
ದೂತವಾಕ್ಯ ೫೪ ನೆಯ ಪದ್ಯದನಂತರ	ವೃದ್ಧರಾಜ	ಧೃತರಾಷ್ಟ್ರ	ದುರ್ವಿನೀತ	ನಲ್ಲಾಳ ಶಾಸನದಲ್ಲಿ ದುರ್ವಿನೀತನಿಗೆ ವೃದ್ಧರಾಜ ಎಂದಿದೆ
ಊರುಭಂಗ ಪದ್ಯ ೧೯	ನರಪತಿ	ದುರ್ಯೋಧನ	ಅರಿ ನರಪತಿ ದುರ್ವಿನೀತ	
ಊರುಭಂಗ ೮೦ ನೆಯ ಪದ್ಯದನಂತರ	(ಪುತ್ರಶತ) ಜ್ಯೇಷ್ಠ	ದುರ್ಯೋಧನ	ಜ್ಯೇಷ್ಠಾದೇವಿಯ ಮಗ ದುರ್ವಿನೀತ	
ಪಂಚರಾತ್ರ ಪದ್ಯ ೩೭	ಜ್ಯೇಷ್ಠೋ (ಭವಾನ್)	ಧುರ್ಯೋಧನ	ಜ್ಯೇಷ್ಠಾದೇವಿಯ ಮಗ ದುರ್ವಿನೀತ	
ಪಂಚರಾತ್ರ ಪದ್ಯ ೩೪ ರನಂತರ	ದುರ್ವಿನೀತಾನಾಂ	ದುರ್ಯೋಧನಾದಿಗಳು	ದುರ್ವಿನೀತಾದಿಗಳು	

(೬) **ದುರ್ಜಯ**—ಭಾರತದಲ್ಲಿ ದುರ್ಯೋಧನನಿಗೆ ಲಕ್ಷ್ಮಣನೆಂಬ ಒಬ್ಬ ಮಗನಿದ್ದು ಅವನು ಯುದ್ಧದಲ್ಲಿ ದುರ್ಯೋಧನನಿಗಿಂತ ಮುಂಚೆ ಮಡಿದನೆಂದಿದೆ. ದ್ವಿತೀಯಪುತ್ರ ದುರ್ಜಯನೆಂಬುದು ಕವಿಕಲ್ಪಿತ. ದುರ್ವಿನೀತನಿಗೆ ಮುಷ್ಕರ ಮತ್ತು ಪೊಲವೀರ ಎಂಬ ಇಬ್ಬರು ಮಕ್ಕಳಿದ್ದರು. ಮುಷ್ಕರನ ವಿಷಯ ಹೆಚ್ಚಾಗಿ ತಿಳಿದುಬಂದಿಲ್ಲ. ಬಹುಶಃ ಅಲ್ಪಾಯುವಾಗಿ ಯುದ್ಧದಲ್ಲಿ ಮಡಿದಿರಬೇಕು. ಪೊಲವೀರನಿಗೆ ಕಾಂತಾವಿನೀತ ಎಂದು ಹೆಸರು. ಬಹುಶಃ ಈ ಸೋದರರನ್ನೇ 'ವಿನೀತೌ' ಎಂದು ಹೇಳಿರಬಹುದೇ? ಈ ಪೊಲವೀರನನ್ನೇ ದುರ್ಜಯನೆಂದೂ ಕಲ್ಪಿಸಿರಬಹುದು.

V

ಭಾರವಿ—ಶ್ರೇಷ್ಠವಾದ ಈ ೧೩ ನಾಟಕಗಳನ್ನು ರಚಿಸಿದ ಕವಿಯು ಕಾಳಿದಾಸನಂತೆ ಶ್ರೇಷ್ಠನಾದ ಕವಿಯಾಗಿರಬೇಕು. ಭಾರವಿಯು ಕಾಳಿದಾಸನಿಗೆ ಸಮನಾದ ಕವಿಯೆಂಬುದು ಐಹೊಳೆಯ ಶಾಸನದಿಂದ ಸ್ಪಷ್ಟವಾಗಿದೆ. ಅವನ ಕಿರಾತಾರ್ಜುನೀಯ ಕಾವ್ಯವು ಅಮರವಾಗಿದೆ. ಅದು ಭಾರತವನ್ನು ಅನುಸರಿಸಿದ ಕಥೆಯಾದರೂ ಕೆಲವು ಮಾರ್ಪಾಡುಗಳೂ ಇವೆ. ಅದರಲ್ಲಿ ರಾಜನೀತಿಯೂ ವೀರರಸ ಪ್ರತಿಪಾದನೆಯೂ ಸ್ಕಂದಸ್ವಾಮಿಯ ಶೌರ್ಯವೂ ವರ್ಣಿತವಾಗಿವೆ. ಚಕ್ರನಾಟಕಗಳ ಭಾರತ ಕಥೆಗಳಲ್ಲಿಯೂ ರಾಜನೀತಿ, ವೀರರಸ ಮತ್ತು ಸ್ಕಂದನ ವಿಷಯಗಳು ಹೇಳಲ್ಪಟ್ಟಿವೆ. ದುರ್ವಿನೀತನು ಅರ್ಥಶಾಸ್ತ್ರನಿಪುಣ. ವಿಷ್ಣುಗುಪ್ತನಿಗೆ ಸಮಾನನಾದನೆಂಬ ಪ್ರಶಸ್ತಿಯನ್ನು ಹೊಂದಿದ್ದನು. ಅನೇಕ ಸಮರಗಳಲ್ಲಿ ಜಯ ಸಂಪಾದಿಸಿದ ವೀರನಾಗಿದ್ದನು.

ಭಾರವಿಯ ಹಿರಿಯರು ಭರತಖಂಡದ ವಾಯುವ್ಯಪ್ರಾಂತದ ನಿವಾಸಿಗಳು. ವಲಸೆ ಹೊರಟು ದಕ್ಷಿಣ ಭರತಖಂಡಕ್ಕೆ ಬಂದರು. ಭಾರವಿಯು ರಾಜಸಿಂಹ—ವಿಷ್ಣುವರ್ಧನನ ಸಂಗಾತಿಯಾಗಿ ಬೇಟೆಗೆ ಹೋಗಿದ್ದಾಗ ತನ್ನ ಧರ್ಮಕ್ಕೆ ವಿರುದ್ಧವಾದ ಆಹಾರಸೇವನೆಯ ಪಾಪಪರಿಹಾರಾರ್ಥವಾಗಿ ತೀರ್ಥಯಾತ್ರೆ ಹೊರಟು ದುರ್ವಿನೀತನ ಆಸ್ಥಾನವನ್ನು ಸೇರಿದನು. ಅನಂತರ ಕಂಚಿಯ ಸಿಂಹವಿಷ್ಣುವಿನಿಂದ ಆಹ್ವಾನಿತನಾಗಿ ಅಲ್ಲಿ ರಾಜಕುಮಾರ ಮಹೇಂದ್ರನ ಸಂಗಾತಿಯಾಗಿದ್ದನು. ದುರ್ವಿನೀತನ ಕಾಲವನ್ನು ಕ್ರಿ.ಶ. ೪೭೨-೫೨೦ ಎಂದು ಶ್ರೀ ಗೋವಿಂದ ಪೈಗಳೂ,[21] ಕ್ರಿ.ಶ. ೪೯೧-೫೩೫ ಎಂದು ಶ್ರೀ ಎಸ್. ಶ್ರೀಕಂಠಶಾಸ್ತ್ರಿಗಳೂ ನಿರ್ಧರಿಸಿರುವರು.[22] ಕ್ರಿ.ಶ. ೪೮೨ ರಿಂದ ೪೦ ವರ್ಷ ಎಂಬುದು ನನ್ನ ಅಭಿಪ್ರಾಯ. ಈ ಮೂರು

21 ಮೂರು ಉಪನ್ಯಾಸಗಳು, ಪುಟ ೧೩೫.

22 *Q.J.M.S.* XXXVII p. 80.

ರಾಜರೂ ಭಾರವಿಯೂ ಸಮಕಾಲೀನರೆಂಬುದು ಅವಂತಿಸುಂದರೀ ಕಥೆಯಿಂದ ಸ್ಪಷ್ಟವಾಗಿದೆ.

ಭಾರವಿಯೇ ಈ ಮೂರು ರಾಜರ ಆಸ್ಥಾನದಲ್ಲಿದ್ದು ಆ ರಾಜರುಗಳಿಂದ ಪೋಷಿತನಾಗಿ ಈ ನಾಟಕಗಳನ್ನು ರಚಿಸಿದನೆಂದು ಊಹಿಸಲು ಸಾಧ್ಯವಿದೆ.

VI

ಫಲಿತಾಂಶ—ಈ ಹದಿಮೂರು ರೂಪಕಗಳು ಭಾಸಕೃತವೇ ಅಲ್ಲವೇ ? ಗ್ರಂಥ ಕರ್ತ ಯಾರು ? ಅವು ಅಷ್ಟು ಪ್ರಾಚೀನವೇ ಮುಂತಾದ ವಿಷಯಗಳು ಖಚಿತ ವಾಗಿ ನಿರ್ಧರವಾಗದೆ ಒಂದು ಒಗಟಿಯಾಗಿಯೇ ಉಳಿದಿದೆ. ಈ ರೂಪಕಗಳಲ್ಲಿ ರಾಜಸಿಂಹ, ಅರಿಸರಪತಿ, ಮತ್ತು ಉಪೇಂದ್ರ (ಸಿಂಹವಿಷ್ಣುವಿನ ಪರ್ಯಾಯನಾಮ) ಎಂಬ ಮೂವರು ರಾಜರ ಹೆಸರು ಉಕ್ತವಾಗಿದೆ. ಈ ಮೂರು ರಾಜರೂ ಸಮಕಾಲೀನರು ಮತ್ತು ಈ ಮೂವರ ಆಸ್ಥಾನದಲ್ಲಿಯೂ ಭಾರವಿ ಕವಿ ವಾಸವಾಗಿದ್ದನು. ದುರ್ವಿನೀತರಚಿತ ಬೃಹತ್ಕಥೆಯನ್ನು ಅನುಸರಿಸಿ ರಚಿತವಾದ ಪೆರುಂಗತೆಗೂ ಪ್ರತಿಜ್ಞಾಯೌಗಂಧರಾಯಣಕ್ಕೂ ಹೆಚ್ಚು ಸಾಮ್ಯವಿದೆ. ಈ ಹದಿಮೂರು ರೂಪಕಗಳಲ್ಲಿ ಉಕ್ತವಾಗಿರುವ ಅನೇಕ ಸಂಗತಿಗಳಿಗೆ ಅವಿನೀತ ಮತ್ತು ಇವನ ಮಗ ದುರ್ವಿನೀತರ ಚರಿತ್ರೆಯಲ್ಲಿ ಸಾದೃಶ್ಯಗಳಿವೆ. ದ್ವಂದ್ವಾರ್ಥದಲ್ಲಿ ಈ ರಾಜರುಗಳ ಹೆಸರುಗಳೂ ರೂಪಕಗಳಲ್ಲಿ ಉಕ್ತವಾಗಿವೆ. ದುರ್ವಿನೀತನ ಕಾಲದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಯಿಂದಲೇ ಈ ಅಂಶಗಳನ್ನೆಲ್ಲಾ ಕವಿಯು ಸಂಗ್ರಹಿಸಿ ಚಿತ್ರಿಸಿರುತ್ತಾನೆ ಎಂದು ನಿರ್ಧರವಾಗಿ ಹೇಳಬಹುದಾಗಿದೆ. ಭಾರವಿಯ ಕಿರಾತಾರ್ಜುನೀಯದಲ್ಲಿಯೂ ಇದರ ಸಾದೃಶ್ಯಗಳಿವೆ. ಭಾರವಿಯೇ ಇವುಗಳ ಗ್ರಂಥಕರ್ತನಾಗಿರಬೇಕು ಎಂಬುದರಲ್ಲಿ ಸಂಶಯವಿಲ್ಲ. ದುರ್ವಿನೀತನ ಕಾಲ ಸುಮಾರು ಕ್ರಿ.ಶ. ೪೮೨ ರಿಂದ ೫೨೨ ರ ವರೆಗೆ.

ಅವಿನೀತ ಮತ್ತು ದುರ್ವಿನೀತರು ಯುಧಿಷ್ಠಿರ ಎಂದು ಹೊಗಳಲ್ಪಟ್ಟಿರುವರು. ಮನುವಿನಂತೆ ಧರ್ಮದಿಂದ ರಾಜ್ಯಭಾರ ಮಾಡಿದವರು; ವರ್ಣಾಶ್ರಮರಕ್ಷಕರು, ಅಪ್ರತಿಮಶೂರರು, ಕೃತಯುಗ ರಾಜಚರಿತ್ರರು ಅಲ್ಲದೆ ಗಜವಿದ್ಯಾಪರಿಣತರು. ಗಾಂಧರ್ವ ವಿದ್ಯಾಪಂಡಿತರು. ದುರ್ವಿನೀತನು ಸ್ವತಃ ಕನ್ನಡ ಮತ್ತು ಸಂಸ್ಕೃತ ಕವಿಯಾಗಿ ಬೃಹತ್ಕಥೆ, ಕಿರಾತಾರ್ಜುನೀಯಟೀಕೆ, ಶಬ್ದಾವತಾರ ಮತ್ತು ಅನೇಕ ಕಾವ್ಯ, ಕಥನ, ನಾಟಕಗಳನ್ನು ರಚಿಸಿದನು. ಪ್ರತಿವರ್ಷವೂ ತಪ್ಪದೆ ೪೦ ವರ್ಷಕಾಲ ಯಜ್ಞಯಾಗಾದಿಗಳನ್ನು ಮಾಡಿದನು. ಭಾರವಿ, ಪೂಜ್ಯಪಾದಾದಿ ಪಂಡಿತರಲ್ಲದೆ ಅನೇಕ ಜೈನ ಮತ್ತು ಬ್ರಾಹ್ಮಣ ವಿದ್ವಾಂಸರು

ದುರ್ವಿನೀತನ ಆಸ್ಥಾನವನ್ನು ಅಲಂಕರಿಸಿದ್ದರು. ಅವಿನೀತ ಮತ್ತು ದುರ್ವಿನೀತರ ಕಾಲವು ದಕ್ಷಿಣ ಭಾರತದ ಸುವರ್ಣಯುಗ ಎಂದು ಕರೆಯಬಹುದಾಗಿದೆ. ಈ ರೂಪಕಗಳು ಆ ಕಾಲದ ರಾಜಕೀಯ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಯನ್ನು ವಿವರಿಸುವುವು. ಕುರುಪಾಂಡವ ಸೋದರರಲ್ಲಿ ರಾಜ್ಯಕ್ಕೆ ಅಂತಃಕಲಹ ನಡೆದಂತೆ ದುರ್ವಿನೀತ ಮತ್ತು ಅವನ ಮಲಸೋದರನಿಗೂ ರಾಜ್ಯದ ವಿಷಯದಲ್ಲಿ ಕಲಹ ನಡೆಯಿತು. ಇಂತಹ ಸಂದರ್ಭಸನ್ನಿವೇಶಗಳನ್ನು ವಿವರಿಸಿ ಈ ರೂಪಕಗಳು ರಚಿತವಾಗಿರಬಹುದೆಂದು ಅನೇಕ ಆಧಾರಗಳಿಂದ ವಿವರಿಸಿದೆ. ಇತಿಹಾಸ ಪಂಡಿತರೂ, ಸಂಸ್ಕೃತ ವಿದ್ವಾಂಸರೂ ಇತ್ತಕಡೆ ಗಮನ ಕೊಡುವರೆಂದು ಆಶಿಸಲಾಗಿದೆ.

ಹುಲ್ಲೂರು ಶ್ರೀನಿವಾಸಜೋಯಿಸ.

ಸಂಪಾದಕೀಯ

ವಿಶ್ವವಿದ್ಯಾನಿಲಯದ ಘಟಿಕೋತ್ಸವಗಳು

ಈ ವರ್ಷದ ಘಟಿಕೋತ್ಸವವು ಕಳೆದ ಫೆಬ್ರವರಿ ೨ ನೆಯ ತಾರೀಖು ನಡೆಯಿತು. ಮದರಾಸಿನ ಶ್ರೇಷ್ಠ ನ್ಯಾಯಸ್ಥಾನದ ಪ್ರಧಾನ ನ್ಯಾಯಾಧೀಶರಾದ ನ್ಯಾಯಮೂರ್ತಿ ಶ್ರೀ ಪಿ. ವಿ. ರಾಜಮನ್ನಾರ್ರವರು ಭಾಷಣಮಾಡಿದರು. ಭಾಷಣಕಾರರು ಇಂದಿನ ನಾಗರೀಕತೆಯಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣದ ಅವಶ್ಯಕತೆಯನ್ನು ವಿಚಾರಮಾಡಿ ವಿಶ್ವವಿದ್ಯಾನಿಲಯದ ಪದವೀಧರರಿಗೆ ಪ್ರಾಚೀನ ಸಂಸ್ಕೃತಿಯ ರಕ್ಷಣದ ಭಾರವೆಷ್ಟಿರುವುದೆಂಬುದನ್ನು ಸ್ಪಷ್ಟಪಡಿಸಿ ಪದವೀಧರರು ಯಾವಾಗಲೂ ಯಾವುದಾದರೂ ಒಂದು ಕಲೆಯನ್ನು ಅಭ್ಯಾಸಿಸಬೇಕೆಂದೂ ಸರ್ವದಾ ಸಂತೋಷದಿಂದ ಹಸನ್ಮುಖಿಗಳಾಗಿ ಹಾಸ್ಯಪ್ರಿಯರಾಗಿ ಭಗವಂತನ ಅಸ್ತಿತ್ವವನ್ನು ಪ್ರಪಂಚದಲ್ಲಿ ಅರಿತುಕೊಂಡು ಸೇವಾಮನೋಧರ್ಮದಿಂದ ಬಾಳಬೇಕೆಂದೂ ಆಶಿಸಿದರು.

ತಾ. ೧೦-೪-೫೧ ರ ದಿನ ನಡೆದ ವಿಶೇಷ ಘಟಿಕೋತ್ಸವದಲ್ಲಿ ವಿಶ್ವವಿದ್ಯಾನಿಲಯವು ಸ್ವತಂತ್ರಭಾರತದ ರಾಷ್ಟ್ರಾಧ್ಯಕ್ಷರಾದ ಡಾ|| ರಾಜೇಂದ್ರಪ್ರಸಾದರನ್ನು 'ಡಾಕ್ಟರ್ ಆಫ್ ಲಾಸ್' ಎಂಬ ಪಶ್ರಸ್ತಿಯಿಂದ ಗೌರವಿಸಿತು. ಇದುವರೆಗೆ ದೇಶದ ನಾಯಕರನೇಕರನ್ನು ಇದೇ ತೆರನಾದ ಗೌರವದಿಂದ ಸತ್ಕರಿಸಿದ್ದ ವಿಶ್ವವಿದ್ಯಾನಿಲಯಕ್ಕೆ ಈ ಅವಕಾಶವು ಪುನಃ ಲಭಿಸಿದುದು ಅದರ ಭಾಗ್ಯೋದಯವೆಂದು ಭಾವಿಸುತ್ತದೆ.

***

ತಿದ್ದುಪಡಿ

ಕಳೆದ ಪುಷ್ಯ ಸಂಚಿಕೆಯಲ್ಲಿ ಪ್ರಕಟವಾಗಿರುವ 'ದವನದ ಹುಣ್ಣಿವೆ' ಎಂಬ ಲೇಖನದಲ್ಲಿ ಲೇಖಕರ ಸೂಚನೆಯ ಪ್ರಕಾರ ಕೆಳಗೆ ಕಂಡ ತಿದ್ದುಪಡಿಯನ್ನು ಮಾಡಿಕೊಳ್ಳಬೇಕಾಗಿ ವಿನಂತಿ.

ಪುಟ	ಪಂಕ್ತಿ	ಈಗಿರುವುದು	ತಿದ್ದುಪಡಿ
೭೫	೨೧	ತರಿ	ಕರಿ
೮೦	೨೧	ಹಿಂದುಳಿದು ವನ	ಹಿಂದುಳಿದು ದವನದ
೮೧	೫	ಬಾದಾಮಿ	ಬಾದಮಿ
,,	೯	ಲಕ್ಕುಂದಿ	ಲಕ್ಕುಂಡಿ
,,	೧೭	ಬಾದುಂಬೆಯ ತಟ್ಟಿ	ಬಾದುಂಬೆಯ ಕಟ್ಟಿ

೮೨	೧೧	ಸಗರ	ನಾಗರ
,,	೨೯	ಸೇಗಿ ಇಲ್ಲವೆ ಬೀಗಿ	ಸೀಗಿ ಇಲ್ಲವೆ ಶೀಗಿ
೮೩	೨೪	ತುಂಬಿದೆ	ಕುಂದಿದೆ

* * *

ದಿವಂಗತ ಸಿ. ಆರ್. ರೆಡ್ಡಿಯವರು

ಕಳೆದ ಫೆಬ್ರುವರಿ ಇಪ್ಪತ್ತುನಾಲ್ಕನೆಯ ತಾರಿಖಿನ ದಿನ ಶ್ರೀ ಸಿ. ಆರ್. ರೆಡ್ಡಿಯವರು ಪರಂಧಾಮವನ್ನೈದಿದುದರಿಂದ ಭಾರತೀಯ ವಿದ್ವತ್ಪ್ರಪಂಚಕ್ಕೆ ಅಪಾರ ನಷ್ಟವಾಗಿದೆ. ಅವರು ತಮ್ಮ ಪ್ರಚಂಡ ಬುದ್ಧಿಶಕ್ತಿಯಿಂದಲೂ ಉದ್ದಾಮವ್ಯಕ್ತಿತ್ವದಿಂದಲೂ ಸುಮಾರು ಕಾಲು ಶತಮಾನಗಳ ಕಾಲ ದಕ್ಷಿಣಭಾರತದ ವಿದ್ಯಾಕ್ಷೇತ್ರದಲ್ಲಿ ಪ್ರಭಾವವನ್ನು ಬೀರಿ ಗಣ್ಯವ್ಯಕ್ತಿಗಳಾಗಿ ಪರಿಗಣಿತರಾಗಿದ್ದರು. ಅವರು ಆಂಧ್ರ ವಿಶ್ವವಿದ್ಯಾನಿಲಯದ ನಿರ್ಮಾಪಕರಲ್ಲಿ ಒಬ್ಬರೂ ಮೈಸೂರು ಮದರಾಸು ವಿದ್ಯಾ ಇಲಾಖೆಗಳ ಪ್ರಧಾನಶಕ್ತಿಯೂ ಆಗಿದ್ದರು. ಮೂಲತಃ ಅವರು ವಿದ್ವಾಂಸರೇ ಆದರೂ ಮಾನವಜೀವನದಲ್ಲಿ ಅವರ ಪ್ರಭಾವಕ್ಕೆ ಒಳಗಾಗದ ಶಾಖೆಗಳು ವಿರಳ. ದೈವದತ್ತವಾದ ಪ್ರತಿಭೆಯೂ ವಿವೇಕಯುತವಾದ ಲೋಕಾನುಭವವೂ ಅವರಲ್ಲಿ ಹಾಸುಹೊಕ್ಕಾಗಿ ಸೇರಿ ಅವರನ್ನು ಅಸಾಧಾರಣ ವ್ಯಕ್ತಿಯನ್ನಾಗಿ ಮಾಡಿದ್ದುವು. ರಾಜಕೀಯ ಕ್ಷೇತ್ರದಲ್ಲಿ ಅವರಿಗಿದ್ದ ವಿಷಯ—ಪರಿಪೂರ್ಣತೆ, ವಾಚಾಳತ್ವ, ತರ್ಕಜ್ಞಾನ, ಸ್ವಪಕ್ಷಪೋಷಣಶಕ್ತಿ ಅದ್ಭುತವಾದುವು. ಅವರು ಹಿಡಿದ ಕಾರ್ಯದಲ್ಲಿ ವಿಮುಖರಾದುದು ಅಪೂರ್ವ. ಸಾಮಾನ್ಯ ಮನುಷ್ಯನಿಗೆ ಅಸಾಮಾನ್ಯವಾದ ತುಂಬು ಜೀವನವನ್ನು ಬಾಳಿ ಕೀರ್ತಿಶೇಷರಾದವರು ಶ್ರೀ ರೆಡ್ಡಿಯವರು.

ಶ್ರೀ ರಾಮಲಿಂಗರೆಡ್ಡಿಯವರು ಉತ್ತರ ಆರ್ಕಾಟು ಜಿಲ್ಲೆಗೆ ಸೇರಿದ ಚಿತ್ತೂರು ಬಳಿ ಇರುವ ಕಟ್ಟಮಂಚಿ ಎಂಬ ಹಳ್ಳಿಯಲ್ಲಿ ೧೮೮೦ ನೆಯ ವರ್ಷದಲ್ಲಿ ಜನಿಸಿದರು. ಇವರು ಬೇಸಾಯಮನೆತನಕ್ಕೆ ಸೇರಿದವರು— ಬೇಸಾಯದ ಮಹತ್ವವನ್ನು ಆಜನ್ಮತಃ ತಿಳಿದವರಾದ್ದರಿಂದ ವಿದ್ಯಾಭ್ಯಾಸದಲ್ಲಿ ಅದರ ಸ್ಥಾನವನ್ನರಿತು ತಾವು ಹೋದೆಡೆಗಳಲ್ಲೆಲ್ಲಾ ಅದಕ್ಕೆ ಯೋಗ್ಯವಾದ ಸ್ಥಾನವನ್ನು ಕಲ್ಪಿಸಿದರು. ಕಳೆದ ಶತಮಾನದ ಇತರ ವಿದ್ವಾಂಸರಂತೆಯೇ ಇವರು ಬಾಲ್ಯದಲ್ಲಿ ಕೂಲಿ ಮಠದಲ್ಲಿ ಶಿಕ್ಷಿತರಾದವರು. ಅಲ್ಲಿ ಅವರಿಗೆ ಪ್ರಾಚೀನ ನೀತಿ ನಿಯಮಗಳೂ, ಸಂಸ್ಕಾರಸಂಯಮಗಳೂ ರಕ್ತಗತವಾದವು. ಅಮರಕೋಶವು ಅವರಿಗೆ ಅಲ್ಲಿ ಬಾಯಿಪಾಠವಾಯಿತು. ಸಂಸ್ಕೃತಭಾಷೆಯಲ್ಲಿ ವಿಶೇಷಾಭಿಮಾನವುಂಟಾಯಿತು. ಅವರ ಮುಂದಿನ ಜೀವನದಲ್ಲೆಲ್ಲಾ ಸಂಸ್ಕೃತ ಭಾಷೆಯು ತನ್ನ ಪ್ರಭಾವವನ್ನು ವಿಶೇಷವಾಗಿ ಬೀರಿದೆ. ಭರತಖಂಡದ ಮತ್ತು ಮಧ್ಯ

ಏಷ್ಯದ ಬಹುಭಾಗದ ಸಂಸ್ಕೃತಿಯ ಪ್ರತೀಕವೆಂದು ಅದರಲ್ಲಿ ಅವರಿಗೆ ಎಂದೆಂದೂ ಪೂಜ್ಯತೆ. ಭಾರತೀಯ ಇತಿಹಾಸಗಳಾದ ರಾಮಾಯಣ, ಮಹಾಭಾರತಗಳು ಅವರನ್ನು ಆಕರ್ಷಿಸಿದುದೂ ಅಲ್ಲಿಯೆ. ಎಲ್ಲ ಶಿಕ್ಷಣಕ್ರಮದಲ್ಲಿಯೂ ಇವುಗಳಿಗೆ ಅಗ್ರಸ್ಥಾನವಿರಬೇಕೆಂಬುದು ಅವರ ಸ್ಥಿರವಾದ ಅಭಿಪ್ರಾಯ. ಆಜೀವಪರ್ಯಂತವೂ ಅವರು ಅವುಗಳನ್ನು ಅನುಸಂಧಾನಮಾಡುತ್ತಿದ್ದು ದಿವಂಗತರಾಗುವುದಕ್ಕೆ ಸ್ವಲ್ಪ ದಿನ ಹಿಂದಿನಿಂದ ವಾಲ್ಮೀಕಿ ರಾಮಾಯಣಕ್ಕೂ ಜೈನ ಬೌದ್ಧ ರಾಮಾಯಣಗಳಿಗೂ ಇರುವ ವ್ಯತ್ಯಾಸ ಮತ್ತು ಸಂಬಂಧಗಳನ್ನೂ ಭಾರತದ ಹೊರಗೆ ವಾಲ್ಮೀಕಿ ರಾಮಾಯಣದ ಪ್ರಭಾವವನ್ನೂ ಕುರಿತು ಸಂಶೋಧನೆ ಮಾಡುತ್ತಿದ್ದರು.

ಚಿತ್ತೂರಿನಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ರೆಡ್ಡಿಯವರು ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿಗೆ ಸೇರಿದರು. ಅಲ್ಲಿ ಅರ್ಥಶಾಸ್ತ್ರ ಮತ್ತು ದರ್ಶನ ಅವರ ಐಚ್ಛಿಕ ವಿಷಯಗಳು. ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿ ಉಪಾಧ್ಯಾಯರ ಮತ್ತು ಸ್ನೇಹಿತರ ಮೆಚ್ಚಿಗೆಗೆ ಪಾತ್ರರಾದರು. ಸ್ವಂತವಾಗಿ ವಿವೇಚಿಸುವುದು, ತನಗೆ ಸರಿಯೆಂದು ತೋರಿದುದನ್ನು ನಿರ್ಭಯವಾಗಿ ನುಡಿಯು ವುದು, ನುಡಿದುದರ ಫಲವನ್ನು ಧೈರ್ಯವಾಗಿ ಅನುಭವಿಸಲು ಸಿದ್ಧವಾಗಿರುವುದು ರೆಡ್ಡಿಯವರಿಗೆ ಬಾಲ್ಯದಿಂದಲೂ ಬೆಳೆದುಬಂದ ಗುಣಗಳು. ಇದಕ್ಕೆ ಇವರ ಜೀವನ ದಲ್ಲಿ ಅನೇಕ ನಿದರ್ಶನಗಳಿವೆ.

ಮುಂದೆ ಅವರು ಪ್ರೌಢವಿದ್ಯಾಭ್ಯಾಸಕ್ಕಾಗಿ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಕ್ಕೆ ಹೋದರು. ಅಲ್ಲಿಯೂ ಅವರಿಗೆ ಸಹಜವಾಗಿಯೇ ಬಹುಮಾನಗಳೂ ಗೌರವವೂ ಕಾದಿದ್ದವು. ಇತಿಹಾಸದಲ್ಲಿ ಪ್ರಥಮ ವರ್ಗದ 'ಟ್ರಿಪಾಸ್' ಪದವಿಯೂ ದೊರೆ ಯಿತು. ಅದಕ್ಕಿಂತಲೂ ಅವರನ್ನು ಪ್ರಸಿದ್ಧಿಗೆ ತಂದುದು ಅವರ ವಾಕ್‌ಶಕ್ತಿ. ಅವರ ಅದ್ಭುತ ವಾಕ್‌ಪಟುತ್ವಕ್ಕೆ ಬೆರಗಾಗಿ ಕೇಂಬ್ರಿಡ್ಜ್ ಸಂಘವು ಅವರನ್ನು ಉಪಾಧ್ಯಕ್ಷ ಸ್ಥಾನಕ್ಕೆ ಆರಿಸಿತು. ಈ ಸ್ಥಾನವು ಆ ವಿಶ್ವವಿದ್ಯಾನಿಲಯದಲ್ಲಿ ಬಹು ಗೌರವವಾ ದುದು. ಹಿಂದೆಂದೂ ಅದು ಭಾರತೀಯರಿಗೆ ದೊರೆತಿರಲಿಲ್ಲ. ಭಾರತೀಯರಲ್ಲಿ ಇವರೇ ಮೊತ್ತಮೊದಲು ಅದನ್ನು ಅಲಂಕರಿಸಿದವರು.

ಇಂಗ್ಲೆಂಡಿನಿಂದ ಹಿಂತಿರುಗಿದ ಮೇಲೆ ರೆಡ್ಡಿಯವರು ಕೆಲವುಕಾಲ ಭಾರತ ದಲ್ಲಿದ್ದು, ಬರೋಡಾ ಮಹಾರಾಜರ ಕೋರಿಕೆಯ ಮೇರೆ ಅಮೇರಿಕಾ ದೇಶದ ಪ್ರವಾಸಕ್ಕೆ ಹೊರಟರು. ಆಧುನಿಕ ಜ್ಞಾನವಿಜ್ಞಾನಗಳಲ್ಲಿ ಮುಂದಾಳಾಗಿದ್ದ ಆ ದೇಶದ ಪರ್ಯಟನದಿಂದ ರೆಡ್ಡಿಯವರ ಜ್ಞಾನ ವಿಕಾಸವಾಯಿತು. ಪರಿಪುಷ್ಟ ವಾಯಿತು. ರೆಡ್ಡಿಯವರು ಅಲ್ಲಿಂದ ಹಿಂತಿರುಗಿ ಬಂದು ಬರೋಡಾ ಕಾಲೇಜಿನ

ಉಪಾಧ್ಯಾಯವರ್ಗದಲ್ಲಿ ಸೇರಿದರು. ಇಲ್ಲಿಯೇ ಅವರಿಗೆ ಶ್ರೀ ಅರವಿಂದ ಘೋಷರ ಪರಿಚಯವಾದುದು. ಶ್ರೀ ಅರವಿಂದೂ ಅವರಲ್ಲಿ ರೆಡ್ಡಿಯವರಿಗೆ ವಿಶೇಷ ಸಲಿಗೆಯಿದ್ದರೂ ಭಾರತಸಂಸ್ಕೃತಿಯ ನಿಜವಾದ ವ್ಯಾಖ್ಯಾನಕಾರರವರೆಂದು ಅವರಲ್ಲಿ ಬಹಳ ಗೌರವ. ಕೊಂಚಕಾಲದಲ್ಲಿಯೇ ವಿದೇಶೀಯ ಆಧಿಪತ್ಯದ ಪ್ರತಿಭಟನೆಗಾಗಿ ಅರವಿಂದರು ರಾಜೀನಾಮೆಯಿತ್ತು ಹೊರಟುಹೋದರೂ ರೆಡ್ಡಿಯವರಿಗೆ ಅವರ ಜೀವಮಾನ ಪರ್ಯಂತವೂ ಅರವಿಂದು ಅವರಲ್ಲಿ ಎಂದೂ ಗೌರವ ಕಡಿಮೆಯಾಗಲಿಲ್ಲ.

ರೆಡ್ಡಿಯವರು ಬರೋಡಾದಲ್ಲಿ ಬಹಳ ಕಾಲವಿರಲಿಲ್ಲ. ೧೯೦೯ ರಲ್ಲಿ ಮೈಸೂರು ವಿದ್ಯಾಇಲಾಖೆಯ ಅಧ್ಯಕ್ಷರ ಸಹಾಯಾಧಿಕಾರಿಯಾಗಿದ್ದು ಸ್ವಲ್ಪಕಾಲದಲ್ಲಿಯೇ ಮೈಸೂರು ಮಹಾರಾಜರವರ ಕಾಲೇಜಿನ ಪ್ರಾಧ್ಯಾಪಕರಾದರು. ಶ್ರೀಮದ್ಯುವರಾಜ ರೊಡನೆ ಯೂರೋಪು ದೇಶದಲ್ಲಿ ಪ್ರವಾಸಮಾಡಿ ಅಪಾರವಾದ ಅನುಭವವನ್ನು ಪಡೆದರು. ಮುಂದೆ ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆಯ ಸಂದರ್ಭದಲ್ಲಿ ಸೂಕ್ತಾನುಭವವನ್ನು ಪಡೆದು ವರದಿಮಾಡುವದಕ್ಕಾಗಿ ಮೈಸೂರು ಸರ್ಕಾರದವರ ಸೂಚನೆಯ ಮೇರೆ ಜಪಾನ್, ಕೆನಡಾ, ಫಿಲಿಫೈನ್ಸ್ ಮೊದಲಾದ ದೇಶಗಳಲ್ಲಿ ಸಂಚಾರಮಾಡಿ ಬಹು ಉಪಯುಕ್ತವಾದ ವರದಿಯನ್ನು ಒಪ್ಪಿಸಿದರು. ಮೈಸೂರ್ ವಿಶ್ವವಿದ್ಯಾನಿಲಯವು ಸ್ಥಾಪಿತವಾದ ಮೇಲೆ ಪುನಃ ಕೆಲವುಕಾಲ ಮಹಾರಾಜರವರ ಕಾಲೇಜಿನ ಪ್ರಾಧ್ಯಾಪಕರಾಗಿದ್ದು ಕಾಲೇಜಿನ ಅಧ್ಯಕ್ಷರಾದರು. ಇಲ್ಲಿ ಇವರು ಸ್ಥಾಪಿಸಿದ ಗುರುಶಿಷ್ಯಸಂಬಂಧವು ಐತಿಹ್ಯವಾಗಿ ಹೋಗಿದೆ. ಅವರ ವಿದ್ಯಾರ್ಥಿಗಳು ಅವರನ್ನು ವಿಶೇಷ ಗೌರವದಿಂದಲೂ ಪ್ರೀತಿಯಿಂದಲೂ ಕಾಣುತ್ತಿದ್ದರು. ಸಂತೋಷ ದಿಂದ ಅವರ ಉಪನ್ಯಾಸಗಳನ್ನು ಕೇಳುತ್ತಿದ್ದರು. ನಿರ್ಭಯವಾಗಿ ತಮ್ಮ ಅಭಿಪ್ರಾಯ ಗಳನ್ನು ಸೂಚಿಸಿ ವಿಮರ್ಶೆಮಾಡುತ್ತಿದ್ದರು. ರೆಡ್ಡಿಯವರಿಗೆ ಶುಕಪಾಠದಲ್ಲಿ ಅಭಿ ಪ್ರಾಯವಿರಲಿಲ್ಲ. ವಿದ್ಯಾರ್ಥಿಗಳಲ್ಲಿ ವಿಚಾರಪರತೆ ಆತ್ಮೋದ್ಯಮಗಳನ್ನು ಕುದುರಿಸ ಬೇಕೆಂಬುದು ಅವರ ಪ್ರಧಾನ ಉದ್ದೇಶವಾಗಿತ್ತು. ಅದೇ ಅವರ ಪ್ರಗತಿಗೆ ಸಾಧಕ ವೆಂಬುದು ಅವರ ದೃಢನಿಶ್ಚಯ. ಆದುದರಿಂದ ಅವರೊಡನೆ ಸರಿಸಮಾನತೆಯಿಂದ ವಿಚಾರ ವಿನಿಮಯ ಮಾಡುತ್ತಿದ್ದರು. ಇಂದಿಗೂ ಅವರ ವಿದ್ಯಾರ್ಥಿಗಳ ಹೃದಯ ಮಂದಿರದಲ್ಲಿ ಅವರಿಗೆ ಭದ್ರಸ್ಥಾನವು ದೊರೆತಿದೆ. ಇದಕ್ಕೆ ಪ್ರತ್ಯಕ್ಷನಿದರ್ಶನ ಮಹಾ ರಾಜರವರ ಕಾಲೇಜಿನ ಶತಮಾನೋತ್ಸವ ಸಂಚಿಕೆಯಲ್ಲಿ ರೆಡ್ಡಿಯವರ ಶಿಷ್ಯರಿಂದಲೂ ಸ್ನೇಹಿತರಿಂದಲೂ ಪ್ರಕಾಶಿತವಾಗಿರುವ ಲೇಖನಗಳು. ಈ ಉತ್ಸವದ ಕೆಲವು ಭಾಗ ರೆಡ್ಡಿಯವರ ಸನ್ಮಾನ ಸಭೆಯಂತೆಯೇ ಕಾಣುತ್ತಿತ್ತು.

ರೆಡ್ಡಿಯವರು ತೆಲುಗಿನಲ್ಲಿ 'ಕವಿತತ್ವ ವಿಚಾರಮು' ಮೊದಲಾದ ಒಂದೆರಡು ವಿಮರ್ಶೆ

ಗ್ರಂಥಗಳ ವಿನಾ ಮತ್ತೇನನ್ನು ಗ್ರಂಥರೂಪವಾಗಿ ರಚಿಸಿಲ್ಲ. ಅವರ ವ್ಯಕ್ತಿತ್ವ ಮೂಲಶಕ್ತಿ, ಪ್ರತಿಭೆ, ಶ್ರೇಷ್ಠತೆ ಅವರ ಉಪನ್ಯಾಸಗಳಲ್ಲಿ ವ್ಯಕ್ತವಾಗಿ ಅವರ ಶಿಷ್ಯರ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿದೆ. ಅವರು ಅನೇಕ ಲೇಖಕರಿಗೆ ಪ್ರೇರಕ ಶಕ್ತಿಯಾಗಿದ್ದಾರೆ.

ಮುಂದೆ ರೆಡ್ಡಿಯವರು ಮೈಸೂರು ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳಾದರು. ಇಲ್ಲಿ ಅವರು ತೋರಿಸಿದ ಉತ್ಸಾಹ, ದಕ್ಷತೆ ಮತ್ತು ದೂರದೃಷ್ಟಿ ಅನ್ಯಾದೃಶವಾದುದು. ಶ್ರೀ ಸರ್ ಎಂ. ವಿಶ್ವೇಶ್ವರಯ್ಯನವರ ಚೈತನ್ಯಪೂರಿತವಾದ ಆಡಳಿತ ಆಗತಾನೆ ಮುಗಿದಿತ್ತು. ಎಲ್ಲೆಲ್ಲಿಯೂ ನವೀನತೆಯೂ ಹೊಸ ಉದ್ಯಮಗಳೂ ತಾಂಡವವಾಡುತ್ತಿದ್ದವು. ಅಂತಹ ಕಾಲದಲ್ಲಿ ರೆಡ್ಡಿಯವರು ವಿದ್ಯಾ ಇಲಾಖೆಯಲ್ಲಿ ಬಹು ದೂರದೃಷ್ಟಿಯಿಂದ ಕೂಡಿದ ಹೊಸ ಯೋಜನೆಯನ್ನು ಮಂಡಿಸಿದರು. ಹಿಂದಿನಿಂದ ಬಂದ ಸಾಂಪ್ರದಾಯಿಕ ಶಿಕ್ಷಣಕ್ಕೆ ಬದಲಾಗಿ ಉಪಯುಕ್ತ ಕಲೆಗಳು ಯೋಜಿತವಾದುವು. ಶಿಕ್ಷಣಕ್ರಮದಲ್ಲಿಯೂ ವಿಷಯದಲ್ಲಿಯೂ ವೈವಿಧ್ಯತೆಯುಂಟಾಯಿತು. ವಿದ್ಯಾರ್ಥಿಗಳ ಯೋಗ್ಯತೆ, ಅಭಿರುಚಿ, ಶಕ್ತಿ, ಆವಶ್ಯಕತೆಗಳಿಗನುಗುಣವಾಗಿ ಜೀವನವನ್ನು ಕಲ್ಪಿಸುವ ವಿಷಯಗಳು ಶಿಕ್ಷಣಕ್ರಮದಲ್ಲಿ ಸ್ಥಾನವನ್ನು ಪಡೆದವು. ವಿದ್ಯಾಭ್ಯಾಸವು ವ್ಯಕ್ತಿಯ ಮಾನಸಿಕ ಮತ್ತು ಸಾಮಾಜಿಕ ಪ್ರಗತಿಯಷ್ಟೇ ಜೀವನ ಸಂಪಾದನೆಗೂ ಸಹಾಯಕವಾಗಬೇಕೆಂಬ ತತ್ವವು ಅಂಗೀಕೃತವಾಯಿತು. ಈ ವಿಷಯದಲ್ಲಿ ರೆಡ್ಡಿಯವರು ಹೊಸ ತತ್ವಗಳನ್ನೇನೂ ಕಂಡುಹಿಡಿಯಲಿಲ್ಲ. ಆದರೆ ಅವರು ಅಧಿಕಾರದಲ್ಲಿದ್ದ ಒಂದೆರಡು ವರ್ಷಗಳಲ್ಲಿ ಇವುಗಳು ಕಾರ್ಯರೂಪಕ್ಕೆ ಬರುವಷ್ಟು ದಕ್ಷತೆಯಿಂದ ನಡಸಿದುದು ಅವರ ಹಿರಿಮೆ. ಮರಗೆಲಸ, ಕಬ್ಬಿಣಗೆಲಸ, ನೆಯ್ಗೆ, ವ್ಯವಸಾಯ ಮೊದಲಾದುವು ಹಿಂದಿನ ಚರಿತ್ರೆ, ಭೂಗೋಳ ವಿಜ್ಞಾನಗಳಷ್ಟೇ ಗೌರವಸ್ಥಾನವನ್ನು ಪಡೆದವು.

ರೆಡ್ಡಿಯವರ ಹೆಸರು ಚಿರಸ್ಥಾಯಿಯಾಗಿರುವುದು ನಿಮ್ನವರ್ಗದವರ ವಿದ್ಯಾಭ್ಯಾಸಕ್ಕೆ ಅವರು ಮಾಡಿದ ಪ್ರಯತ್ನಗಳಿಂದ. ನಿಮ್ನವರ್ಗದವರಿಗಾಗಿ ಶಾಲೆಗಳು ಸ್ಥಾಪಿತವಾದುವು. ವಿದ್ಯಾರ್ಥಿನಿಲಯ, ವಿದ್ಯಾರ್ಥಿವೇತನ, ಉಚಿತವಾದ ಬಟ್ಟೆ, ಪುಸ್ತಕಗಳು ಮೊದಲಾದ ಸೌಕರ್ಯಗಳು ಕಲ್ಪಿತವಾದುವು. ಸಂಪ್ರದಾಯಬದ್ಧವಾಗಿ ಯಾವ ಬದಲಾವಣೆಗೂ ಒಪ್ಪದ ಜನಾಂಗವನ್ನು ರೆಡ್ಡಿಯವರು ಹೊಸ ಮಾರ್ಗದಲ್ಲಿ ಪ್ರವರ್ತಿಸುವಂತೆ ಪ್ರೇರೇಪಿಸಿದರು.

ಇಂತಹ ರಚನಾತ್ಮಕ ಕ್ರಿಯಾಶಕ್ತಿಯಿಂದ ಕೂಡಿದ ರೆಡ್ಡಿಯವರು ಇದ್ದಕ್ಕಿದ್ದ ಹಾಗೆ ತಾವು ಆರಂಭಿಸಿದ ಅನೇಕ ಕಾರ್ಯಗಳು ಇನ್ನೂ ಅಸಮಗ್ರಸ್ಥಿತಿಯಲ್ಲಿರು

ವಾಗಲೇ ತಮ್ಮ ಕೆಲಸಕ್ಕೆ ೧೯೨೦ ರಲ್ಲಿ ರಾಜೀನಾಮೆ ಇತ್ತುದು ಅನೇಕರಿಗೆ ಆಶ್ಚರ್ಯಕರವೂ ಬಿಡಿಸಲಾಗದ ಜಟಿಲಸಮಸ್ಯೆಯಾಗಿಯೂ ಉಳಿಯಿತು.

ಇಲ್ಲಿಂದ ಅವರು ಮದರಾಸಿಗೆ ಹೋಗಿ ರಾಜಕೀಯದಲ್ಲಿ ಪ್ರವೇಶಿಸಿ ವಿಶ್ವವಿದ್ಯಾನಿಲಯದ ಕ್ಷೇತ್ರದಿಂದ ಶಾಸನಸಭೆಗೆ ಚುನಾಯಿತರಾದರು. ಬಹು ಉತ್ಸಾಹದಿಂದ ಕೆಲವುಕಾಲ ಅಲ್ಲಿ ಕೆಲಸಮಾಡಿ ೧೯೨೬ ರಲ್ಲಿ ಆಗತಾನೆ ಸ್ಥಾಪಿತವಾದ ಆಂಧ್ರ ವಿಶ್ವವಿದ್ಯಾನಿಲಯದ ಪ್ರಥಮಸ್ಥಾನಪತಿಗಳಾದರು. ಅಲ್ಲಿ ೧೯೨೬ ರಿಂದ ೩೦ ರ ವರೆಗೂ ಪುನಃ ಕೆಲವುಕಾಲ ರಾಜಕೀಯದಲ್ಲಿ ಭಾಗವಹಿಸಿ ಮತ್ತೆ ೧೯೩೬ ರಿಂದ ೪೯ ರ ವರೆಗೂ ಕೆಲಸಮಾಡಿ ಉದ್ದಾಮಕೀರ್ತಿಯನ್ನು ಗಳಿಸಿದರು. ಆಂಧ್ರ ವಿಶ್ವವಿದ್ಯಾನಿಲಯದಲ್ಲಿ ವೈಜ್ಞಾನಿಕ ಪರಿಶೋಧನೆಗೆ ವಿಶೇಷ ಮನ್ನಣೆಯನ್ನುಂಟು ಮಾಡಿದರು. ಕಲಾವಿಜ್ಞಾನಗಳ ವಿವರಣೆಭಾಗಗಳಿಗಿಂತ ಔಪಯೋಗಿಕ ಭಾಗಗಳಿಗೆ ಪ್ರಾಶಸ್ತ್ಯವನ್ನು ಕಲ್ಪಿಸಿದರು.

೧೯೪೯ ರಲ್ಲಿ ಮೈಸೂರು ಸರ್ಕಾರವು ರೆಡ್ಡಿಯವರವನ್ನು ವಿಶ್ವವಿದ್ಯಾನಿಲಯದ ಪುನರ್ರಚನೆಯ ವಿಷಯವಾಗಿ ಒಂದು ವರದಿಯನ್ನು ತಯಾರಿಸಲು ಆಹ್ವಾನಿಸಿತು. ರೆಡ್ಡಿಯವರು ಸಂಬಂಧಪಟ್ಟ ವಿಷಯಗಳನ್ನೆಲ್ಲಾ ಪರಿಶೀಲಿಸಿ ತಮ್ಮ ಘನವಾದ ವರದಿಯನ್ನು ಸಿದ್ಧಪಡಿಸಿದರು. ‘ ವಿಶ್ವವಿದ್ಯಾನಿಲಯವು ಯಾವ ಬಾಹ್ಯ ಆಡಳಿತಕ್ಕೂ ಅಧೀನವಾಗಿರದೆ ಸ್ವತಂತ್ರವಾಗಿರಬೇಕು. ಶಿಕ್ಷಣ ಮತ್ತು ಆಡಳಿತ ಭಾಗಗಳು ಪ್ರತ್ಯೇಕವಾಗಿರಬೇಕು. ಉಪಾಧ್ಯಾಯರು ತಮ್ಮ ಕಾರ್ಯವನ್ನು ಯಾವ ನಿರ್ಬಂಧವೂ ಇಲ್ಲದೆ ನಡೆಸಲು ಸೌಕರ್ಯವನ್ನು ಹೊಂದಿರಬೇಕು. ವಿಶ್ವವಿದ್ಯಾನಿಲಯದಲ್ಲಿ ಸ್ವಂತ ಪರಿಶೋಧನೆಗೆ ಹೆಚ್ಚು ಪ್ರಾಮುಖ್ಯತೆ ಇರಬೇಕು. ಉಪಾಧ್ಯಾಯರನ್ನು ಆರಿಸುವುದಕ್ಕೆ ನುರಿತ ಉಪಾಧ್ಯಾಯರಲ್ಲಿ ಕೆಲವರೂ ಹೊರಗಿನ ಕೆಲವು ಪ್ರವೀಣರೂ ಸೇರಿದ ಆಯ್ಕೆಯ ಸಮಿತಿ ಇರಬೇಕು. ಇಂಟರ್‌ಮೀಡಿಯೆಟ್ ತರಗತಿ ಪ್ರತ್ಯೇಕವಾಗಿದ್ದು ಎಸ್.ಎಸ್.ಎಲ್‌ಸಿ. ತರಗತಿಗೆ ಸಮೀಪವರ್ತಿಯಾಗಿರಬೇಕು ’—ಇವೇ ಮೊದಲಾದುವು ವರದಿಯ ಕೆಲವಂಶಗಳು.

೧೯೫೦ ರಲ್ಲಿ ಶ್ರೀ ರೆಡ್ಡಿಯವರು ಮೈಸೂರು ವಿಶ್ವವಿದ್ಯಾನಿಲಯದ ಪ್ರೊಛಾನ್ಸಲರಾಗಿ ನೇಮಕವಾದರು. ಈ ಹೊಸ ಅಧಿಕಾರದಲ್ಲಿ ಅವರು ತಮ್ಮ ವರದಿಯಲ್ಲಿ ಉಕ್ತವಾಗಿರುವ ಅನೇಕ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತಂದು ವಿಶ್ವವಿದ್ಯಾನಿಲಯವನ್ನು ಬಹು ಉನ್ನತಸ್ಥಿತಿಗೆ ತರುತ್ತಾರೆಂದು ಅನೇಕರ ನಿರೀಕ್ಷೆಯಿತ್ತು. ಆದರೆ ಭಗವಂತನು ಅವರನ್ನು ಇನ್ನು ಸ್ವಲ್ಪಕಾಲ ಅನುಗ್ರಹಿಸಲಿಲ್ಲ. ಅವರ ಜ್ಞಾನಜ್ಯೋತಿಯು ನಮಗೆ ಹಿರಿಯ ಬೆಳಕಾಗಿ ಎಂದೆಂದಿಗೂ ಸನ್ಮಾರ್ಗದಲ್ಲಿ ಒಯ್ಯುತ್ತಿದೆ. ಅವರ ಆತ್ಮಕ್ಕೆ ಚಿರಶಾಂತಿಯಿರಲಿ.

ಸಾದರ ಸ್ವೀಕಾರ

೧. **ಅಮ್ಮ** (ಕಿರಿಯರ ನಾಟಕ)—ಬರೆದವರು : ಶ್ರೀ ಚಿ. ಸದಾಶಿವಯ್ಯ ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೨೮ ; ಬೆಲೆ, ಆರಾಣೆ.

೨. **ಶಿವಾಜಿಯ ಬಾಲ್ಯ** (ಕಿರಿಯರ ನಾಟಕ)—ಬರೆದವರು : ಶ್ರೀ ಚಿ. ಸದಾಶಿವಯ್ಯ ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೨೪ ; ಬೆಲೆ, ಆರಾಣೆ.

೩. **ಶಾಂತಿ** (ಸಾಮಾಜಿಕ ನಾಟಕ)—ಬರೆದವರು: ಶ್ರೀ ಚಿ. ಸದಾಶಿವಯ್ಯ ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೯೬ ; ಬೆಲೆ, ರೂ. ೧-೪-೦.

೪. **ಸಿಂಹ** (ನಾಟಕ)—ಬರೆದವರು : ಶ್ರೀ ಚಿ. ಸದಾಶಿವಯ್ಯನವರು ; ಪ್ರಕಾಶಕರು : ಆನಂದ್ ಬ್ರದರ್ಸ್. ಬೆಂಗಳೂರು—೨ ; ಕ್ರೌನ್ ಅ. ಪು. ೩೭ ; ಬೆಲೆ, ಎಂಟಾಣೆ.

೫. **ಲೀಲಾಗಂಡ** (ಸಾಮಾಜಿಕ ಚಿತ್ರ)—ಬರೆದವರು : ಶ್ರೀ ಚಿ. ಸದಾಶಿವಯ್ಯ ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೬೨ ; ಬೆಲೆ, ರೂ. ೧-೦-೦.

೬. **ಜಯಶ್ರೀ** (ನಾಟಕ)—ಬರೆದವರು : ಶ್ರೀ ಚಿ. ಸದಾಶಿವಯ್ಯ ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೬೪ ; ಬೆಲೆ, ರೂ. ೧-೪-೦.

೭. **ರಹಸ್ಯ** (ನಾಟಕ)—ಬರೆದವರು : ಶ್ರೀ ಚಿ. ಸದಾಶಿವಯ್ಯ ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೪೬ ; ಬೆಲೆ, ಹನ್ನೆರಡಾಣೆ.

೮. **ಮಾಂಗಲ್ಯ** (ನಾಟಕ)—ಬರೆದವರು : ಶ್ರೀ ಚಿ. ಸದಾಶಿವಯ್ಯ ; ಪ್ರಕಾಶಕರು : ಆನಂದ್ ಬ್ರದರ್ಸ್. ಬೆಂಗಳೂರು—೨ ; ಕ್ರೌನ್ ಅ. ಪು. ೯೦ ; ಬೆಲೆ, ರೂ. ೧-೪-೦.

೯. **ಉದಯರಾಗ**—ಲೇಖಕರು : ಶ್ರೀ ಅ. ನ. ಕೃಷ್ಣರಾಯರು ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೧೩೪ ; ಬೆಲೆ,

೧೦. **ಜೀವನ ಚಿತ್ರ** (ಕಥಾಸಂಗ್ರಹ)—ಬರೆದವರು : ಶ್ರೀ ದ. ಕೃ. ಭಾರದ್ವಾಜ : ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೧೪೪ ; ಬೆಲೆ, ರೂ. ೨-೦-೦.

೧೧. **ದೇಶಾಂತರ ಕಥೆಗಳು**—ಸಂಗ್ರಾಹಕರು : ಶ್ರೀ ದೇವುಡು ; ಪ್ರಕಾಶಕರು ; ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೧೧೭ ; ಬೆಲೆ, ರೂ. ೧-೮-೦.

೧೨. **ಅಂತರಂಗ**—ಬರೆದವರು : ಶ್ರೀ ದೇವುಡು ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೧೭೦ ; ಬೆಲೆ, ರೂ. ೨-೦-೦.

೧೩. **ಪುರುಷಾವತಾರ**—ಬರೆದವರು : ಶ್ರೀ ತ. ರಾ. ಸು. ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌನ್ ಅ. ಪು. ೧೬೭ ; ಬೆಲೆ, ರೂ. ೧-೧೫-೦.

೧೪. ತೊರಿಬಂದ ತಾರೆ (ಪ್ರಣಯಕಥೆ)—ಬರೆದವರು : ಶ್ರೀನಿವಾಸರಾವ್ ಕೊರಟಿ ; ಪ್ರಕಾಶಕರು : ಆನಂದ್ ಬ್ರದರ್ಸ್, ಬೆಂಗಳೂರು—೨ ; ಕ್ರೌ. ಅ. ಪು. ೧೮೯ ; ಬೆಲೆ, ರೂ. ೨-೦-೦

೧೫. ಹಾಸುಹೊಕ್ಕು—ಬರೆದವರು : ಶ್ರೀ ದತ್ತಾತ್ರೇಯ ಕುಲಕರ್ಣಿ ; ಪ್ರಕಾಶಕರು : ಚುಳಕಿ ಗೋವಿಂದರಾಯರು ; ಲಲಿತ ಸಾಹಿತ್ಯಮಾಲಾ, ಧಾರವಾಡ ; ಕ್ರೌ. ಅ. ಪು. ೧೦೦ ; ಬೆಲೆ, ರೂ. ೧-೪-೦.

೧೬. ಮುಳ್ಳುಬೇಲಿ—ಬರೆದವರು : ಶ್ರೀ ಚಾಲುಕ್ಯ ; ಪ್ರಕಾಶಕರು : ಚುಳಕಿ ಗೋವಿಂದರಾಯರು ; ಲಲಿತ ಸಾಹಿತ್ಯಮಾಲಾ , ಧಾರವಾಡ ; ಕ್ರೌ. ಅ. ಪು. ೧೪೫ ; ಬೆಲೆ, ರೂ. ೨-೦-೦.

೧೭. ಉಪಾಯ ವೇದಾಂತ—ಬರೆದವರು : ಶ್ರೀ ನಾ. ಕಸ್ತೂರಿ ; ಪ್ರಕಾಶಕರು : ಚುಳಕಿ ಗೋವಿಂದರಾಯರು ; ಲಲಿತ ಸಾಹಿತ್ಯಮಾಲಾ, ಧಾರವಾಡ ; ಕ್ರೌ. ಅ. ಪು. ೧೨೬ ; ಬೆಲೆ, ಸಾದಾ ರೂ. ೧-೧೨-೦ ; ಉತ್ತಮ ರೂ. ೨-೮-೦.

೧೮. ಬೆಳಕುಕಾಣದ ಬಾಳು—ಬರೆದವರು ಮತ್ತು ಪ್ರಕಾಶಕರು : ಶ್ರೀ ಎಂ. ಎಸ್ ಶೆಟ್ಟಿ, ನವೋದಯ ಸಾಹಿತ್ಯ, ಸಾಧನ ಮುದ್ರಣಾಲಯ, ಧಾರವಾಡ ; ಕ್ರೌ. ಅ. ಪು. ೧೦೮ ; ಬೆಲೆ, ರೂ. ೧-೦-೦.

೧೯. ಕವನಸಂಗ್ರಹ—ಶ್ರೀ ದಿನಕರ ದೇಸಾಯಿ ; ಪ್ರಕಾಶಕರು : ಶೇ. ಗೋ. ಕುಲಕರ್ಣಿ, ಸಾಧನ ಮುದ್ರಣಾಲಯ, ಧಾರವಾಡ ; ಕ್ರೌ. ಅ. ಪು. ೧೩೬ ; ಬೆಲೆ, ರೂ. ೨-೮-೦.

೨೦. ಮಕ್ಕಳ ಗೀತೆಗಳು—ಬರೆದವರು : ಶ್ರೀ ದಿನಕರ ದೇಸಾಯಿ ; ಪ್ರಕಾಶಕರು : ಶೇ. ಗೋ. ಕುಲಕರ್ಣಿ ; ಸಾಧನ ಮುದ್ರಣಾಲಯ, ಧಾರವಾಡ ; ಕ್ರೌ. ಅ. ಪು. ೫೨ ; ಸಾದಾ, ಹನ್ನೆರಡಾಣೆ ; ಕ್ಯಾಲಿಕೋ, ರೂ. ೧-೮-೦.

೨೧. ಜೀವನಕ್ಕೆ ಬೆಳಕು—ಬರೆದವರು : ಶ್ರೀ ಸುಬೋಧ ಎಂ. ರಾಮರಾವ್ ; ಪ್ರಕಾಶಕರು : ಸುಬೋಧ ಪ್ರಕಟನಾಲಯ, ಚಾಮರಾಜಪೇಟೆ, ಬೆಂಗಳೂರು ; ಕ್ರೌ. ಅ. ಪು. ೧೧೭ ; ಬೆಲೆ,

೨೨. ಕೇಡಿಗನ ಕಿಡಿಗಳು—ಬರೆದವರು : ಶ್ರೀ ನಾಡಿಗೇರ್ ಕೃಷ್ಣರಾಯರು ; ಪ್ರಕಾಶಕರು : ಶಾರದಾ ಪ್ರಕಟನಾಲಯ, ಅರಳಪೇಟೆ, ಬೆಂಗಳೂರು—೨ ; ಕ್ರೌ. ಅ. ಪು. ೯೦ ; ಬೆಲೆ, ರೂ. ೧-೦-೦.

೨೩. ದೇವತೆಗಳು ನಕ್ಕಾಗ—ಲೇಖಕರು : ಶ್ರೀ ವೈ. ಎಂ. ಷಣ್ಮುಖಯ್ಯನವರು ; ಪ್ರಕಾಶಕರು : ಶಾರದಾ ಪ್ರಕಟನಾಲಯ, ಅರಳೇಪೇಟೆ, ಬೆಂಗಳೂರು—೨ ; ಕ್ರೌ. ಅ. ಪು. ೯೮ ; ಬೆಲೆ, ರೂ. ೧-೪-೦.

೨೪. ಕಾರವಾನ್—ಬರೆದವರು : ಶ್ರೀ ಬಸವರಾಜ ಕಟ್ಟೀಮನಿ ; ಪ್ರಕಾಶಕರು : ಶಾರದಾ ಪ್ರಕಟನಾಲಯ, ಅರಳೇಪೇಟೆ, ಬೆಂಗಳೂರು—೨ ; ಕ್ರೌ. ಅ. ಪು. ೧೨೩ ; ಬೆಲೆ, ರೂ. ೧-೪-೦.

೨೫. ಗಾಳಿಗುದರಿ—ಬರೆದವರು : ಶ್ರೀ ವಿ. ಆರ್. ವಾಡಪ್ಪಿ ; ಪ್ರಕಾಶಕರು : ದ. ಬಾ. ಕುಲಕರ್ಣಿ, ಮನೋಹರಗ್ರಂಥ ಭಾಂಡಾರ, ಧಾರವಾಡ ; ಕ್ರೌನ್ ಅ. ಪು. ೮೨ ; ಬೆಲೆ, ರೂ. ೧-೪-೦.

೨೬. ಸುಪಂಥಾ—ಬರೆದವರು ಮತ್ತು ಪ್ರಕಾಶಕರು ; ಶ್ರೀ ಗಣಪತಿರಾವ್ ಪಾಂಡೇಶ್ವರ, ಹುಬ್ಬಳ್ಳಿ ; ಕ್ರೌನ್ ಅ. ಪು. ೭೬ ; ಬೆಲೆ, ಸಾದಾ ಒಂದೂಕಾಲು ; ಉತ್ತಮ ರೂ. ೧-೧೨-೦.

೨೭. ಕಟ್ಟಿಗೆಯ ಕೆಲಸ—ಬರೆದವರು ಮತ್ತು ಪ್ರಕಾಶಕರು : ಶ್ರೀ ವೆಂ. ಗೋ. ತೊರಗಲ್ಲ, ಬಿ.ಎ. (ಆನರ್ಸ), ಬಿ. ಟಿ.ಟಿ. ಡಿ. ಮತ್ತು ಶ್ರೀ ರಾ. ಶಿಂದಿಗಿ, ಬೆಳಗಾವಿ : ಕ್ರೌನ್ ಅ. ಪು. ೧೫೨ ; ಬೆಲೆ, ರೂ. ೨-೧೨-೦.

Edited by N. Anantharangachar, M.A., B.T. and T. S. Shama Rao, M .A.
Published by The University of Mysore, Mysore. Printed by J. Brown
at the Wesley Press and Publishing House, Mysore City.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧. *ಖಗೋಳಶಾಸ್ತ್ರಪ್ರವೇಶ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್, ಎಂ.ಎ.
೩. *ತೆರಿಗೆ—ಬಿ. ಆರ್. ಸುಬ್ಬರಾವ್, ಎಂ.ಎ.
೪. *ನವರತ್ನಗಳು—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫. *ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ, ಎಂ.ಎ.
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್, ಎಂ.ಎ.
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ, ಎಂ.ಎ.
೯. *ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦. ಪಂಪ—ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧. *ಪ್ರಾಣಿಜೀವನ—ಎ. ನಾರಾಯಣರಾವ್, ಎಂ.ಎಸ್‌ಸಿ.
೧೨. *ಕನಸುಗಳು—ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ.
೧೩. ಮದುವೆ—ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪. *ನಮ್ಮ ಆರ್ಥಿಕ ದೃಷ್ಟಿ—ಎಸ್. ಗೋಪಾಲಸ್ವಾಮಿ, ಎಂ.ಎ.
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬. ಬೆಳಕು—ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ, ಎಂ.ಎ.
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್, ಎಂ.ಎ.
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ—ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧. *ಸಾರ್ವಜನಿಕ ವೆಚ್ಚ—ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨. *ಶಿಶುವಿಹಾರಗಳು—ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪. ವಿಡಂಬನ—ಎಸ್. ವಿ. ರಂಗಣ್ಣ, ಎಂ.ಎ.
೨೫. *ಎಲ್ಲೋರ ಮತ್ತು ಅಜಂತಾ—ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬. *ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭. ಭಾಸ—ಎಚ್. ಎಲ್. ಹರಿಯಪ್ಪ, ಎಂ.ಎ.
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ, ಎಂ.ಎ.
೨೯. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.
೩೦. *ರಕ್ತ—ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜನಾಥ್, ಎಂ.ಎ.
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩. ಗಣಿತಶಾಸ್ತ್ರದ ಸ್ವರೂಪ—ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.

೩೪.*ಋಗ್ವೇದ—ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ, ಎಂ.ಎ.
೩೬.*ಆಳ್ವಾರುಗಳು—ಎಂ. ಯಾಮುನಾಚಾರ್ಯ, ಎಂ.ಎ.
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು—
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯. ಮಕ್ಕಳ ಭಾವಜೀವನ—ಬಿ. ಕುಪ್ಪುಸ್ವಾಮಿ ನಾಯಿಡು, ಎಂ.ಎ.
೪೦. ಸಹಕಾರ—ಎಸ್. ಗೋಪಾಲಸ್ವಾಮಿ, ಎಂ.ಎ.
೪೧.*ನಯಸೇನ—ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨.*ಕೌಟಿಲ್ಯ—ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ.
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ, ಎಂ.ಎ.
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್, ಎಂ.ಎ.
೪೫.*ಲಕ್ಷ್ಮೀಶ—ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬.*ರುಚಿ—ಎಸ್. ವಿ. ರಂಗಣ್ಣ, ಎಂ.ಎ.
೪೭.*ಕೀಟಗಳು—ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮.*ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯. ಮುದ್ದಣ—ತ. ಸು. ಶಾಮರಾವ್, ಬಿ.ಎ. (ಆನರ್ಸ್).
೫೦.*ಐವರು ಭೌತವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧.*ಕೃತಕ ರೇಷ್ಮೆ—ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨.*ಚೀನರ ಇತಿಹಾಸ ಮತ್ತು ನಾಗರಿಕತೆ—ಎಸ್. ವೆಂಕಟದೇಶಿಕಾಚಾರ್, ಎಂ.ಎ
೫೩.*ಯುದ್ಧಕಾಲದ ಆರ್ಥಿಕ ಸಮಸ್ಯೆಗಳು—ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪.*ಆಹಾರ—ಜೆ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫.*ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜನಾಥ್, ಎಂ.ಎ.
೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.

ಸಾಧಾರಣ ಪ್ರತಿ ೩ ಆಣೆ.
ಉತ್ತಮ ಪ್ರತಿ ೪ ಆಣೆ

ಕಾರ್ಯದರ್ಶಿ,
ಪ್ರಚಾರ ಮತ್ತು ಪ್ರಕಾಶನಕಾರ್ಯ,
ಯೂನಿವರ್ಸಿಟಿ ಆಫೀಸ್ ಕಟ್ಟಡ, ಮೈಸೂರು.

* ಈ ಪುಸ್ತಕಗಳು ಮುಗಿದುಹೋಗಿವೆ.

ಪ್ರಬುದ್ಧ ಕರ್ಣಾಟಕ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

ಇನ್ನುಮುಂದೆ 'ಪ್ರಬುದ್ಧ ಕರ್ಣಾಟಕ'ವು ಚೈತ್ರ, ಆಷಾಢ, ಆಶ್ವಯುಜ, ಪುಷ್ಯ ಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) :

ಚಂದಾದಾರರಿಗೆ	ರೂ.	೩	೮	೦
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	ರೂ.	೪	೮	೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	ರೂ.	೨	೮	೦

ಚಂದಾಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ ಕಾರ್ಯದರ್ಶಿ, ಪ್ರಚಾರ ಮತ್ತು ಪ್ರಕಾಶನ ಕಾರ್ಯ, ಯೂನಿವರ್ಸಿಟಿ ಆಫೀಸು, ಮೈಸೂರು, ಎಂಬ ವಿಳಾಸಕ್ಕೆ ಕಳಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕ ವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು ಅದನ್ನು ಚಂದಾ ಹಣದೊಡನೆ ಕಳಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು (ಸರ್ಕಾರಿ ಖಜಾನೆಯಲ್ಲಿ 'ಯೂನಿವರ್ಸಿಟಿ ಫಂಡ್'ಗೆ ಕಟ್ಟಿ ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಪ್ರಬುದ್ಧ ಕರ್ಣಾಟಕದ ಆಫೀಸಿಗೆ ಕಳಿಹಿಸಬಹುದು.)

ಪ್ರಬುದ್ಧ ಕರ್ಣಾಟಕಕ್ಕೆ ಚಂದಾದಾರರನ್ನು ಒದಗಿಸಿಕೊಡುವ ಪುಸ್ತಕ ವ್ಯಾಪಾರಿಗಳಿಗೂ ವೃತ್ತಪತ್ರಿಕೆಗಳ ಮಾರಾಟಗಾರರಿಗೂ ಶೇಕಡ ೧೨½ ಯಂತೆ ಕಮಿಷನ್ ಕೊಡಲಾಗುವುದು. ಪಾಠಶಾಲಾ ಸಂಸ್ಥೆಗಳಿಗೆ ಪ್ರಚಾರ ಶಾಖೆಯ ಕಾರ್ಯದರ್ಶಿಗಳೇ ನೇರವಾಗಿ ಗಮನಕೊಡುವರು.

'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗೆ ಲೇಖನಗಳನ್ನೂ ವಿಮರ್ಶೆಗೆ ಗ್ರಂಥಗಳನ್ನೂ ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಫಸ್ಟ್‌ಗ್ರೇಡ್ ಕಾಲೇಜು, ಮೈಸೂರು) ರಿಗೆ ಕಳಿಸಬೇಕು.

ಕಾರ್ಯದರ್ಶಿ
ವಿಶ್ವವಿದ್ಯಾನಿಲಯದ ಪ್ರಕಟನ ಮತ್ತು
ಪ್ರಚಾರೋಪನ್ಯಾಸ ಶಾಖೆ, ಮೈಸೂರು.

ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿರ ಪುದುವಟ್ಟಿನ ಪ್ರಕಟನಮಾಲೆ

೧. *ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.

೨. *ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩. *ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪. *ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫. *ಆಕಾಶಯಾನ—ಬಿ. ಕೆ. ಎಣ್. ರಾವ್.

೬. *ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್

೭. *ಹೆರಿಗೆ ಮತ್ತು ಶಿಶುಪೋಷಣೆ—ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮. ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ.ಬಿ.ಎಸ್., ಎಂ.ಪಿ.ಎಚ್.

೯. *ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ.ಬಿ.ಎಸ್., ಡಿ.ಪಿ.ಎಚ್.

೧೦. ಪಶುಪಾಲನೆ—ಎಂ. ಕೃಷ್ಣಶಾಸ್ತ್ರಿ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ.

೧೧. ವಿದ್ಯುಚ್ಛಕ್ತಿಯ ಉಪಯೋಗ—ಮ. ಭೀ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್) ಸಿ.ಪಿ., ಇ.ಟಿ. (ಐ.ಐ.ಎಸ್.)

೧೨. ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

೧೩. ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ.

೧೪. ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣ ರಾವ್, ಡಿ.ಎಸ್‌ಸಿ.

ಸಾಧಾರಣ ಪ್ರತಿ ೨ ಆಣೆ; ಉತ್ತಮ ಪ್ರತಿ ೩ ಆಣೆ.

ಕಾರ್ಯದರ್ಶಿ,

ಪ್ರಕಟನಶಾಖೆ ಮತ್ತು ವಿಶೇಷೋಪನ್ಯಾಸಗಳು,
ಯೂನಿವರ್ಸಿಟಿ ಆಫೀಸ್, ಮೈಸೂರು.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಬೆಲೆ: ಕ್ಯಾಲಿಕೊ ರೂ. ೧—೪—೦ ; ಸಾದಾ ೧೨ ಆಣೆ.

ಪ್ರಧಾನಸಂಪಾದಕರು :
- **ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೩ ರ ವರೆಗೆ**
- **ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೩ರಿಂದ ೧೯೪೭ರ ವರೆಗೆ**
- **ಕೆ. ವಿ. ಪುಟ್ಟಪ್ಪ, ಎಂ.ಎ., ೧೯೪೭ ರಿಂದ**

೧. **ಹರಿಶ್ಚಂದ್ರಕಾವ್ಯ ಸಂಗ್ರಹ** (ತೃತೀಯ ಮುದ್ರಣ)—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೨. ***ಕರ್ಣಾಟಕ ಕಾದಂಬರೀ ಸಂಗ್ರಹ**—ಸಂಪಾದಕರು : ಟಿ. ಎಸ್. ವೆಂಕಣ್ಣಯ್ಯ, ಎಂ.ಎ.

೩. ***ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು : ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ.ಎ.

೪. ***ಸಾಕ್ರೆಟೀಸನ ಕೊನೆಯ ದಿನಗಳು**(ಸಚಿತ್ರ)—ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ.

೫. ***ಶ್ರೀರಾಮಕೃಷ್ಣ ಪರಮಹಂಸ**—ಲೇಖಕರು : ಕೆ. ವಿ. ಪುಟ್ಟಪ್ಪ, ಎಂ.ಎ.

೬. **ರವೀಂದ್ರನಾಥ ಠಾಕೂರರು** (ಸಚಿತ್ರ)—ಲೇಖಕರು : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭. **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)—ಲೇಖಕರು : ಜೆ. ಎ. ಈಶ್ವರ ಮೂರ್ತಿ, ಬಿ.ಎ., ಎಲ್.ಎಂ.ಎಸ್., ಬಿ.ಎಸ್‌ಸಿ.

೮. **ಪಂಪರಾಮಾಯಣ ಸಂಗ್ರಹ**—ಸಂಪಾದಕರು : ಆಸ್ಥಾನ ಮಹಾ ವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ.

೯. **ಹಣ ಪ್ರಪಂಚ**—ಲೇಖಕರು : ವಿ. ಸೀತಾರಾಮಯ್ಯ, ಎಂ.ಎ.

೧೦. ***ಸಂಸ್ಕೃತ ನಾಟಕ**—ಲೇಖಕರು : ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೧೧. **ಜೀವವಿಜ್ಞಾನ**—ಲೇಖಕರು : ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨. **ಹಿಂದೂದರ್ಶನಸಾರ**—ಲೇಖಕರು : ಮಹಾಮಹೋಪಾಧ್ಯಾಯ ಪಂಡಿತ ರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ.

೧೩. **ರಾಜನೀತಿ**—ಲೇಖಕರು : ಎಚ್. ಕೃಷ್ಣರಾವ್, ಎಂ.ಎ.

೧೪. **ಹದಿಬದೆಯ ಧರ್ಮ**—ಸಂಪಾದಕಿಯರು: ಡಿ. ಚಂಪಾಬಾಯಿ, ಎಂ.ಎ.

೧೫. ***ಪುರಾಣನಾಮಚೂಡಾಮಣಿ**—ಲೇಖಕರು : ಬೆನಗಲ್ ರಾಮರಾವ್, ಎಂ.ಎ., ಎಲ್ ಎಲ್.ಬಿ., ಮತ್ತು ಪಾನ್ಯಂ ಸುಂದರಶಾಸ್ತ್ರಿ; ಬೆಲೆ, ರೂ.೩-೪-೦

೧೬. **ಯಶೋಧರ ಚರಿತೆಯ ಸಂಗ್ರಹ**—ಸಂಪಾದಕರು : ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭. ***ಗ್ರೀಕರ ತತ್ತ್ವಶಾಸ್ತ್ರಸಾರ ಸಂಗ್ರಹ**—ಲೇಖಕರು : ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ. ; ಬೆಲೆ, ಸಾದಾ ರೂ. ೧-೦-೦.

೧೮. **ಹಿಂದೂ ದೇಶದ ಭೂಚರಿತ್ರೆ**—ಲೇಖಕರು : ವೈ. ನಾಗಪ್ಪ, ಎಂ.ಎಸ್‌ಸಿ.

೧೯. **ವಚನಧರ್ಮಸಾರ**—ಲೇಖಕರು: ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.

೨೦. **ಪ್ರಾಣಿಶಾಸ್ತ್ರ**—ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ., ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ. ; ಬೆಲೆ, ಸಾದಾ ರೂ. ೧-೪-೦ ; ಕ್ಯಾಲಿಕೊ ರೂ. ೧-೮-೦.

೨೧. ***ಆಧುನಿಕ ತತ್ತ್ವಶಾಸ್ತ್ರ ಸಮಸ್ಯೆಗಳು**—ಜಿ. ಹನುಮಂತರಾವ್, ಎಂ.ಎ. ; ಬೆಲೆ, ಸಾದಾ ರೂ. ೧-೦-೦.

೨೨. **ಕನ್ನಡ ಕೈಪಿಡಿ** (ಭಾಗ ೫, ಸಾಹಿತ್ಯ ಚರಿತ್ರೆ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ಸಾದಾ ರೂ. ೧-೪-೦ ; ಕ್ಯಾಲಿಕೊ ರೂ. ೨-೪-೦.

೨೩. **ಇಸ್ಲಾಂ ಸಂಸ್ಕೃತಿ**—ಮೂಲಲೇಖಕರು : ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ ; ಅನುವಾದಕರು : ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ, ರೂ. ೨-೦-೦.

ಸೂಪರಿಂಟೆಂಡೆಂಟ್,
ಓರಿಯೆಂಟಲ್ ರಿಸರ್ಚ್ ಇನಸ್ಟಿಟ್ಯೂಟ್, ಮೈಸೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of the Oriental Research Institute, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian* P.E.N., Bombay; *Annals of the Venkateswara Oriental Institute*, Tirupati; *The Jaina Siddhanta Bhaskara* and *The Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *The Journal of the Literary Committee of the L.E. Association*, Dharwar; *Annals of Bhandarkar Oriental Research Institute*, Poona.

ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕನ್ನಡ ನುಡಿ', ಬೆಂಗಳೂರು; 'ಕಂಠೀರವ', ಮಂಗಳೂರು; 'ತಾಯಿನಾಡು', ಬೆಂಗಳೂರು; 'ನವಸಂದೇಶ', ಬಳ್ಳಾರಿ; 'ವಿಶ್ವಕರ್ಣಾಟಕ' ಬೆಂಗಳೂರು; 'ಸ್ವದೇಶಾಭಿಮಾನಿ' ಮಂಗಳೂರು; 'ಕರ್ಣಾಟಕ ವೈಭವ', ಬಿಜಾಪುರ; 'ಜನಶಕ್ತಿ', ಹುಬ್ಬಳ್ಳಿ; 'ವಾಹಿನಿ', ಬೆಂಗಳೂರು; 'ಪ್ರಭಾತ', ಮಂಗಳೂರು.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ,' ಧಾರವಾಡ; 'ಜಯಂತಿ', ಧಾರವಾಡ; 'ಭಾರತಿ' (ತೆಲುಗು), ಮದರಾಸು; 'ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿದ್ಯಾದಾಯಿನಿ', ಮೈಸೂರು; 'ವಿಮಾ ವಾಣಿಜ್ಯ', ಬೆಂಗಳೂರು; 'ವಿವೇಕಾಭ್ಯುದಯ', ಮೈಸೂರು; 'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ; 'ಸರಸ್ವತಿ', ಬೆಂಗಳೂರು; 'ಸುಬೋಧ', ಬೆಂಗಳೂರು; 'ಜೀವನ', ಬೆಂಗಳೂರು; 'ಕಥಾವಳಿ', ಬೆಂಗಳೂರು; 'ಪುಸ್ತಕ ಪ್ರಪಂಚ', ಮೈಸೂರು; 'ವಾಣಿ', ಬೆಂಗಳೂರು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ' (ಮರಾಠಿ), ಪೂನಾ; 'ಶ್ರೀಮನ್ ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲಾ ಪತ್ರಿಕಾ,' ಮೈಸೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ,' ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ